ಶುಕ್ರವಾರ, ಜೂನ್ 6, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯಶಸ್ಸಿನ ಸವಿ....

ಇಟಲಿಯ ಸಾರಾ ಇರ್ರಾನಿ – ಆಂಡ್ರೆ ವಾವಸೋರಿ ಜೋಡಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡ ನಂತರ ಸಂಭ್ರಮಿಸಿದ್ದು ಹೀಗೆ....

SHOWROOMS: KARNATAKA: BENGALURU: RENAULT **BANNERGHATTA ROAD** Ph: 8546820204, RENAULT **MYSORE ROAD** Ph: 8527240549 & 7026666922, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626 & 7353760555, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, 9071767600 & 8884498993, RENAULT **YESWANTHPUR** Ph: 9311832962 & 9311832968. RENAULT **TUMKUR** Ph: 7353764337.

ಪದ್ಮಾ ಶೇಖರ್

ರವೀಂದ್ರನಾಥ

ಪದ್ಮಾಶೇಖರ್, ರವೀಂದ್ರನಾಥಗೆ ಪ್ರಶಸ್ತಿ

ಮಂಡ್ಯ: ಇಲ್ಲಿನ ಕರ್ನಾಟಕ ಸಂಘದ 'ಡಾ.ರಾಗೌ ಸಾಹಿತ್ಯ ಪ್ರಶಸ್ತಿ'ಗೆ ಮೈಸೂರಿನ ವಿಶ್ರಾಂತ ಕುಲಪತಿ ಪದ್ಮಾಶೇಖರ್ ಮತ್ತು ಕೆ.ಸಿಂಗಾರಿಗೌಡ ಪುಸ್ತಕ ಪ್ರಶಸ್ತಿಗೆ ವಿಜಯನಗರ ಜಿಲ್ಲೆಯ ಪ್ರೊ.ಕೆ.ರವೀಂದ್ರನಾಥ ಆಯ್ಕೆ ಆಗಿದ್ದಾರೆ.

'ಪ್ರಶಸ್ತಿಯು ₹15 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಕರ್ನಾಟಕ ಸಂಘ, ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಜೂನ್ 8ರಂದು ಸಂಜೆ 5 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭವು ನಗರದ ಕೆ.ವಿ. ಎಸ್ ಭವನದಲ್ಲಿ ನಡೆಯಲಿದೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರೊ. ಜಯಪ್ರಕಾಶಗೌಡ ತಿಳಿಸಿದರು.

'ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು.

ಶೇ 50ರ ಮಿತಿ ದಾಟಿದ ಮೀಸಲಾತಿ: ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಆದೇಶ

384 ಹುದ್ದೆಗಳ ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೇಮಕಾತಿಗಳಲ್ಲಿ ಮೀಸಲು ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶದ ಆಧಾರದಲ್ಲಿ, ಕರ್ನಾಟಕ ಲೋಕಸೇವಾ ಆಯೋಗವು 2024ರ ಫೆಬ್ರುವರಿ 26ರಂದು ಹೊರಡಿಸಿದ್ದ 384 ಗೆಜೆಟೆಡ್ ಪ್ರೊಬೇಷನರ್ ನೇಮಕ ಅಧಿಸೂಚನೆಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ರದ್ದುಪಡಿಸಿದೆ.

ಅಧಿಸೂಚನೆಯನ್ನು ಪ್ರಶ್ನಿಸಿ 3 ಎ ಕೆಟಗರಿಗೆ ಸೇರಿದ ಚನ್ನಪಟ್ಟಣದ ಎಂ.ಟೆಕ್ ಪದವೀಧರ ಬಿ.ಎನ್. ಮಧು ಸಲ್ಲಿಸಿದ್ದ ಅರ್ಜಿಯನ್ನು ಕೆಎಟಿ ಅಧ್ಯಕ್ಷ ಆರ್.ಬಿ.ಬೂದಿಹಾಳ್ ಮತ್ತು ಆಡಳಿತಾತ್ಮಕ ಸದಸ್ಯ ರಾಘವೇಂದ್ರ ಔರಾದ್‌ಕರ್ ಅವರಿದ್ದ ಪೀಠವು ವಿಚಾರಣೆ ನಡೆಸಿ ಕಳೆದ ಮೇ 28ರಂದು ಈ ಕುರಿತಂತೆ ಆದೇಶ ಹೊರಡಿಸಿದೆ.

ಕೆಎಎಸ್ ಹುದ್ದೆಗಳ ಭರ್ತಿ ಜತೆಗೆ 2022ರ ಡಿಸೆಂಬರ್ 12ರಂದು ಸರ್ಕಾರ ಮೀಸಲು ಹೆಚ್ಚಳಕ್ಕೆ ಹೊರಡಿಸಿದ್ದ ಆದೇಶವನ್ನೂ ರದ್ದುಗೊಳಿಸಿರುವ ಪೀಠವು, 'ಕಾನೂನು ಪ್ರಕಾರ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಕೆಪಿಎಸ್‌ಸಿ ಸ್ವತಂತ್ರವಿದೆ' ಎಂದು ಸ್ಪಷ್ಟಪಡಿಸಿದೆ.

'ಅಂದಿನ ರಾಜ್ಯ ಸರ್ಕಾರ 2022ರ ಅಕ್ಟೋಬರ್ 23ರಂದು ಹೊರಡಿಸಿದ್ದ ಸುಗ್ರೀವಾಜ್ಞೆಯು ಮೀಸಲು ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಿಸಿದೆ. ಇದನ್ನು ಆಧರಿಸಿ 2022ರ ಡಿಸೆಂಬರ್ 28ರಂದು ಅಧಿಸೂಚನೆ ಪ್ರಕಟಿಸಿ ರೋಸ್ಟರ್ ಅಂಕಗಳನ್ನು ನಿಗದಿಪಡಿಸಲಾಗಿದೆ. ಆದರೆ, ಈ ಪ್ರಕ್ರಿಯೆಯಲ್ಲಿ ಶಾಸನಸಭೆಯ ಅನುಮತಿ ಪಡೆದಿರಲಿಲ್ಲ ಎಂಬುದು ಗಮನಾರ್ಹ. ಹಾಗಾಗಿ, ಇದರ ಆಧಾರದಡಿ ರಚಿಸಲಾದ 2023ರ ನಿಯಮಾವಳಿ ಊರ್ಜಿತವಲ್ಲ' ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಮುಖ್ಯಾಂಶಗಳು

- ಚನ್ನಪಟ್ಟಣದ ಬಿ.ಎನ್. ಮಧು ಸಲ್ಲಿಸಿದ್ದ ಅರ್ಜಿ
- ಕೆಎಟಿ ಅಧ್ಯಕ್ಷ–ಸದಸ್ಯರಿದ್ದ ಪೀಠದ ಮಹತ್ವದ ಆದೇಶ

ಶೇ 50ರ ಮಿತಿ ದಾಟುವಂತೆ ಸುಪ್ರಿಂ ಕೋರ್ಟ್ ಎಲ್ಲೂ ಹೇಳಿಲ್ಲ. ಕೆಲವು ರಾಜ್ಯಗಳು ಮಾಡಿವೆ ಎಂಬುದನ್ನೇ ಮುಂದಿರಿಸಿಕೊಂಡು ಮಾಡಲಾಗುವ ಮೀಸಲು ಮಿತಿ ಹೆಚ್ಚಳಕ್ಕೆ ಯಾವುದೇ ಶಾಸನಾತ್ಮಕ ಬೆಂಬಲ ಇಲ್ಲ

ಪೀಠದ ಅಭಿಪ್ರಾಯ

ವಾದ–ಪ್ರತಿವಾದ ಏನಿತ್ತು?

'ಸರ್ಕಾರ ರಾಜಕೀಯ ಕಾರಣಕ್ಕಾಗಿ ಮೀಸಲು ಪ್ರಮಾಣವನ್ನು ಶೇ 56ಕ್ಕೆ ಹೆಚ್ಚಳ ಮಾಡಿದೆ. ಇದರಿಂದ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕೇವಲ ಶೇ 44ರಷ್ಟು ಮಾತ್ರವೇ ಅವಕಾಶ ಲಭಿಸುತ್ತದೆ. ಸಂವಿಧಾನಬದ್ಧವಾಗಿ ಅವರಿಗೆ ಸಿಗಬೇಕಾದ ಅವಕಾಶವನ್ನು ಈ ಮೂಲಕ ಕಸಿದುಕೊಳ್ಳಲಾಗಿದೆ. ಇದು ಸುಪ್ರಿಂ ಕೋರ್ಟ್‌ನ ಸಂವಿಧಾನ ಪೀಠದ ಆದೇಶದ ಸ್ಪಷ್ಟ ಉಲ್ಲಂಘನೆ' ಎಂದು ಅರ್ಜಿದಾರರ ಪರ ವಕೀಲರು ಪ್ರತಿಪಾದಿಸಿದ್ದರು.

ಸರ್ಕಾರದ ಪರ ವಕೀಲರು, 'ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಖಚಿತಪಡಿಸಿಕೊಂಡು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಆಯೋಗದ ಶಿಫಾರಸಿನಂತೆ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿದೆ. ಆಯೋಗವು ವೈಜ್ಞಾನಿಕ ವರದಿ ನೀಡಿದ್ದು, ಹಲವಾರು ರಾಜ್ಯಗಳು ಈಗಾಗಲೇ ಜಾರಿಗೊಳಿಸಿದ ಮಾದರಿಯಲ್ಲಿ ಜನಸಂಖ್ಯೆಯನ್ನು ಆಧರಿಸಿ ಮೀಸಲಾತಿ ಪ್ರಮಾಣ ವಿಸ್ತರಿಸಲಾಗಿದೆ. ಆದ್ದರಿಂದ, ರಾಜ್ಯ ಶಾಸನಸಭೆ ರೂಪಿಸಿದ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಈ ಅರ್ಜಿಗೆ ಮಾನ್ಯತೆ ಇಲ್ಲ' ಎಂಬ ಸಮರ್ಥನೆ ನೀಡಿದ್ದರು.

ಏನಿದು ಪ್ರಕರಣ?

ಬಿಜೆಪಿ ಸರ್ಕಾರದ ಆಡಳಿತಾವಧಿಯ 2022ರಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೈಕ್ಷಣಿಕ ಸಂಸ್ಥೆಗಳಲ್ಲಿ ಸೀಟು ಹಂಚಿಕೆ, ಮೀಸಲು ಮತ್ತು ರಾಜ್ಯ ಸೇವೆಯಲ್ಲಿ ನೇಮಕ ಹುದ್ದೆಗಳಿಗೆ ಮೀಸಲು) ಸುಗ್ರೀವಾಜ್ಞೆ ಜಾರಿಗೊಳಿಸಿತ್ತು. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿ ಪ್ರಮಾಣವನ್ನು ಶೇ 18ರಿಂದ ಶೇ 24ಕ್ಕೆ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಇದರ ಆಧಾರದಡಿ ಕರ್ನಾಟಕ ಸರ್ಕಾರಿ ಸೇವೆಯಲ್ಲಿ ರೋಸ್ಟರ್ ಮೀಸಲು ನಿಗದಿಪಡಿಸಲಾಗಿತ್ತು. ಇದನ್ನು ಆಧರಿಸಿ ಕೆಪಿಎಸ್‌ಸಿ 384 ಗ್ರೂಪ್ 'ಎ' ಮತ್ತು 'ಬಿ' ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿತ್ತು. ಅರ್ಜಿದಾರರು ಇದನ್ನು ಕೆಎಟಿಯಲ್ಲಿ ಪ್ರಶ್ನಿಸಿದ್ದರು.

ಸುದ್ದಿ 2 ನಿಮಿಷ

ವಿಮೆ: ನೂರಾರು ಕೋಟಿ ವಂಚನೆ

ಸಂಭಲ್ (ಉತ್ತರ ಪ್ರದೇಶ): ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯಲ್ಲಿ ವಿಮೆಯ ನಕಲಿ ಪಾಲಿಸಿ, ನಕಲಿ ದಾಖಲೆಗಳು ಮತ್ತು ವಿಮೆ ಹಣ ಪಡೆಯಲು ಕೊಲೆ ನಡೆಸಿರುವುದೂ ಒಳಗೊಂಡ ಬೃಹತ್ ಹಗರಣ ಬೆಳಕಿಗೆ ಬಂದಿದೆ. ವಂಚನೆಯ ಅಂದಾಜು ಮೊತ್ತ ₹ 100 ಕೋಟಿ ದಾಟಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಸಂಬಂಧಿತ ದಾಖಲೆಗಳು ಮತ್ತು ಎಫ್‌ಐಆರ್ ಪ್ರತಿಗಳನ್ನು ನೀಡುವಂತೆ ಸ್ಥಳೀಯ ಪೊಲೀಸರನ್ನು ಕೋರಿದೆ ಎಂದು ಹೇಳಿದ್ದಾರೆ.

ಹಗರಣದಲ್ಲಿ ಭಾಗಿಯಾಗಿರುವ ಜಾಲದ ಮೇಲೆ ಜನವರಿಯಿಂದಲೇ ನಿಗಾ ಇಡಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 52 ಮಂದಿಯನ್ನು ಬಂಧಿಸಲಾಗಿದೆ ಎಂದು ಎಎಸ್‌ಪಿ (ದಕ್ಷಿಣ) ಅನುಕೃತಿ ಶರ್ಮಾ ಸುದ್ದಿಗಾರರಿಗೆ ತಿಳಿಸಿದರು. ಸುಮಾರು 50 ಆರೋಪಿಗಳು ತಲೆಮರೆಸಿಕೊಂಡಿದ್ದು, ಮೂವರು ನ್ಯಾಯಾಲಯದ ಮುಂದೆ ಶರಣಾಗಿದ್ದಾರೆ ಎಂದು ಮಾಹಿತಿ ನೀಡಿದರು. ವಂಚನೆ ಬಗ್ಗೆ ವಿವರ ನೀಡಿದ ಶರ್ಮಾ, 'ವಂಚನೆ ಜಾಲದ ಸದಸ್ಯರು ಜೀವ ವಿಮೆ ಹಣ ಪಡೆಯಲು ಯುವಕರನ್ನು ಗುರಿಯಾಗಿಸಿದ್ದಾರೆ.ಕೆಲವು ಸಂದರ್ಭಗಳಲ್ಲಿ ವಿಮೆ ಹಣಕ್ಕಾಗಿ ಕೊಲೆಯನ್ನೂ ಮಾಡಿದ್ದಾರೆ' ಎಂದಿದ್ದಾರೆ.

ಶಿಲಾಯುಗದ ಪಳಿಯುಳಿಕೆ ಪತ್ತೆ

ಹಿರೇಕೆರೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಬಾಳಬಿಂಡ ಗ್ರಾಮದ ರೈತ ಮಲ್ಲಿಕಾರ್ಜುನ ಜೋಗಿಹಳ್ಳಿ ಎಂಬುವರ ಜಮೀನಿನಲ್ಲಿ ಶಿಲಾಯುಗದ ಪಳಿಯುಳಿಕೆಗಳು ಪತ್ತೆಯಾಗಿವೆ.

'ಇದೊಂದು ಪ್ರಾಚೀನ ಕಾಲದ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ' ಎಂದು ಇತಿಹಾಸತಜ್ಞ ಆರ್.ಎಂ. ಷಡಾಕ್ಷರಯ್ಯ ತಿಳಿಸಿದ್ದಾರೆ. ಈ ನೆಲೆಯನ್ನು ಹಂಸಭಾವಿ ಮಹಾಂತಸ್ವಾಮಿ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಎಂ.ಎಂ.ಅಕ್ಕಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಾಗರಾಜಪ್ಪ ಎಂ.ಎಸ್. ಅವರು ಈಚೆಗೆ ಪತ್ತೆ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಸಂಶೋಧಕ ಈರಣ್ಣ ಪತ್ತಾರ ಕೂಡ ಅಧ್ಯಯನ ಮಾಡಿದ್ದರು.

'ಅರ್ಧ ಹೆಕ್ಟೇರ್ ವಿಸ್ತಾರದ ಜಮೀನಿನಲ್ಲಿ ಅರ್ಧ ಅಡಿ ಗುಂಡಿ ತೋಡಿದಾಗ, ಅಲ್ಲಿ ಕೆಂಪು ಬಣ್ಣದ ಮಡಿಕೆ ಚೂರುಗಳು ಸಿಕ್ಕಿವೆ. ಮಡಿಕೆಗಳ ಬಣ್ಣ, ರಚನೆ, ವಿನ್ಯಾಸ ಗಮನಿಸಿದರೆ, ಹಳ್ಳೂರು ಹಾಗೂ ರಾಯಚೂರು ಜಿಲ್ಲೆಯ ಮಸ್ಕಿ, ಹರಪನಹಳ್ಳಿ ತಾಲ್ಲೂಕಿನ ಮರಬಳ್ಳಿ ನೆಲೆಗಳಿಗೆ ಹೋಲಿಕೆಯಾಗುತ್ತಿವೆ' ಎಂದು ಸಂಶೋಧಕರು ತಿಳಿಸಿದ್ದಾರೆ.

ಕೋಮು ಸಾಮರಸ್ಯ: ಸಮಾಲೋಚನೆ

ದಕ್ಷಿಣ ಕನ್ನಡ ಪ್ರವಾಸ ಕೈಗೊಂಡ ಕೆಪಿಸಿಸಿ ನಿಯೋಗ, ಶಾಂತಿ ಮರುಸ್ಥಾಪನೆ ಕ್ರಮಗಳ ಬಗ್ಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸಾಮರಸ್ಯ ಮತ್ತು ಶಾಂತಿ ಮರುಸ್ಥಾಪನೆ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವ ಸಲುವಾಗಿ ಇಲ್ಲಿಗೆ ಭೇಟಿ ನೀಡಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನಿಯೋಗ, ಜಿಲ್ಲೆಯ ಪ್ರಮುಖರನ್ನು, ಪಕ್ಷದ ಮುಖಂಡರನ್ನು ಅಧಿಕಾರಿಗಳನ್ನು ಗುರುವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿತು.

ಕೋಮು ಘರ್ಷಣೆಗಳಿಂದ ಜಿಲ್ಲೆಯ ಅಭಿವೃದ್ಧಿ ಮೇಲಾಗಿರುವ ಪರಿಣಾಮ, ಜಿಲ್ಲೆಯಲ್ಲಿ ಈಚೆಗೆ ನಡೆದ ಅಹಿತಕರ ಘಟನೆಗಳಿಂದಾಗಿ ಹದಗೆಟ್ಟ ಶಾಂತಿ ಮರು ಸ್ಥಾಪನೆಗೆ ವಹಿಸಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಯ್ಯದ್ ನಾಸಿರ್ ಹುಸೇನ್, ಎಐಸಿಸಿ ಕಾರ್ಯದರ್ಶಿ ರೋಜಿ ಜಾನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಶಾಸಕ ಎನ್.ಎ. ಹ್ಯಾರಿಸ್, ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್, ಮುಖಂಡರಾದ ಕಿಮ್ಮನೆ ರತ್ನಾಕರ್, ಜಯಪ್ರಕಾಶ್ ಹೆಗ್ಡೆ ನಿಯೋಗದಲ್ಲಿದ್ದರು.

ಪ್ರಭಾರ ಜಿಲ್ಲಾಧಿಕಾರಿ ಆನಂದ್ ಕೆ., ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್‌ಕೆ ಅವರನ್ನುನಿಯೋಗವು ಭೇಟಿ ಮಾಡಿ, ಜಿಲ್ಲಾಡಳಿತದ ಕುರಿತು ಸಾರ್ವಜನಿಕರಿಂದ ವ್ಯಕ್ತವಾದ ಅಹವಾಲುಗಳ ಬಗ್ಗೆ ಚರ್ಚೆ ನಡೆಸಿತು. ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಮತ್ತು ಪದಾಧಿಕಾರಿಗಳು, ಜಿಲ್ಲೆಯ ವಿವಿಧ ಧಾರ್ಮಿಕ ಮುಖಂಡರು, ಹಿರಿಯ ನಾಯಕರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿತು.

'ಜಿಲ್ಲೆಯಲ್ಲಿ ಧರ್ಮದ ಆಧಾರದಲ್ಲಿ ನಡೆದ ಹತ್ಯೆಗಳಿಂದ ಸೌಹಾರ್ದಕ್ಕೆ ಭಂಗ ಉಂಟಾಗಿರುವುದು, ಕೋಮು ದ್ವೇಷವನ್ನುಂಟು ಮಾಡುವ ಹೇಳಿಕೆಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಕೋಮು ಪ್ರಚೋದಕ ಸಂದೇಶಗಳಿಂದ ಸೃಷ್ಟಿಯಾಗಿರುವ ಆತಂಕಗಳ ಕುರಿತು ಹಲವರು ನಿಯೋಗದ ಗಮನಕ್ಕೆ ತಂದಿದ್ದಾರೆ. ಕೋಮು ಸಾಮರಸ್ಯಕ್ಕೆ ಧಕ್ಕೆ ತರುವ ಪ್ರಕರಣಗಳು ಮರುಕಳಿಸದಂತೆ ತಡೆಯಲು ಕೆಲ ಕಾನೂನು ತಿದ್ದುಪಡಿ ಆಗಬೇಕಾದ ಕುರಿತೂ ಸಲಹೆ ಬಂದಿವೆ' ಎಂದು ನಿಯೋಗದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮಂಗಳೂರಿಗೆ ಗುರುವಾರ ಭೇಟಿ ನೀಡಿದ್ದ ಕೆಪಿಸಿಸಿ ನಿಯೋಗದ ಅಧ್ಯಕ್ಷ ಸಯ್ಯದ್ ನಾಸಿರ್ ಹುಸೇನ್ (ಎಡತುದಿ) ಅವರು ನಿಯೋಗದ ಸದಸ್ಯರಾದ ಮಂಜುನಾಥ ಭಂಡಾರಿ, ಜಯಪ್ರಕಾಶ್ ಹೆಗ್ಡೆ ಜೊತೆ ಚರ್ಚಿಸಿದರು. ಕಿಮ್ಮನೆ ರತ್ನಾಕರ್, ಪದ್ಮರಾಜ ಪೂಜಾರಿ ಮತ್ತಿತರರು ಜೊತೆಯಲ್ಲಿದ್ದರು

ಮುಸ್ಲಿಂ ಮುಖಂಡರ ಜೊತೆ ಹರಿಪ್ರಸಾದ್ ಸಭೆ

ಮಂಗಳೂರು: ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಜಿಲ್ಲೆಯಲ್ಲಿ ಈಚೆಗೆ ನಡೆದ ಅಹಿತಕರ ಘಟನೆಗಳ ಬಗ್ಗೆ ಮುಸ್ಲಿಂ ಧರ್ಮಗುರುಗಳು ಹಾಗೂ ಮುಖಂಡರ ಜೊತೆ ಗುರುವಾರ ಸಮಾಲೋಚನೆ ನಡೆಸಿದರು.

ಉಲೇಮಾ ಕೋ ಆರ್ಡಿನೇಷನ್ ಕರ್ನಾಟಕ ಸಂಘಟನೆಯ ಮುಖಂಡರು, ಖಾಝಿಗಳು, ಧರ್ಮಗುರುಗಳು, ರಾಜ್ಯ ವಕ್ಫ್ ಪರಿಷತ್ತಿನ ಉಪಾಧ್ಯಕ್ಷ ಎನ್. ಕೆ.ಮೊಹಮ್ಮದ್ ಶಾಫಿ ಸಾದಿ, ದ.ಕ. ಜಿಲ್ಲಾ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಘಟಕಕ್ಕೆ ರಾಜೀನಾಮೆ ನೀಡಿರುವ ಮುಖಂಡರಾದ ಶಾಹುಲ್ ಹಮೀದ್, ಎಂ.ಎಸ್.ಮೊಹಮ್ಮದ್ ಸೇರಿದಂತೆ ಸಮುದಾಯದ ಪ್ರಮುಖ ನಾಯಕರು ಭಾಗಿಯಾಗಿದ್ದರು. 'ದ್ವೇಷ ಭಾಷಣ ಮಾಡುವವರು ವರ್ಷಗಟ್ಟಲೆ ಜೈಲಿನಲ್ಲೇ ಇರುವಂತೆ ಮಾಡಬೇಕು. ಇದಕ್ಕಾಗಿ ಕಾನೂನು ರೂಪಿಸಬೇಕು. ಕೋಮು ವಿಷ ಹರಡುವ ಜನಪ್ರತಿನಿಧಿಗಳ ವಿರುದ್ಧವೂ ಕ್ರಮವಾಗಬೇಕು. ಹತ್ಯೆಗೊಳಗಾದ ಕೊಳತ್ತಮಜಲಿನ ಅಬ್ದುಲ್ ರಹಿಮಾನ್, ಗುಂಪು ಹತ್ಯೆಯಿಂದಾಗಿ ಮೃತಪಟ್ಟ ಕೇರಳದ ವಯನಾಡಿನ ಅಶ್ರಫ್ ಹಂತಕರನ್ನು ಮತ್ತು ಅವರಿಗೆ ನೆರವಾದ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಕುಟುಂಬಕ್ಕೆ ಸರ್ಕಾರದ ₹ 50 ಲಕ್ಷ ಪರಿಹಾರ ನೀಡಬೇಕು' ಎಂದು ಈ ಮುಖಂಡರು ಆಗ್ರಹಿಸಿದರು.

ಈ ವಿಚಾರಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವುದಾಗಿ ಹರಿಪ್ರಸಾದ್ ಭರವಸೆ ನೀಡಿದರು.

'ಅಮಾಯಕರ ಕೊಲ್ಲಲು ಕರಾವಳಿಯು ಉತ್ತರ ಪ್ರದೇಶ, ಮಣಿಪುರ ಅಲ್ಲ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಜ್ಯದಲ್ಲಿ ಶಾಂತಿ ನೆಲೆಸಿದ್ದರೂ ಕರಾವಳಿಯಲ್ಲಿ ಮಾತ್ರ ಏಕೆ ಹೀಗಾಗುತ್ತಿದೆ ಎಂದು ಆಲೋಚಿಸಬೇಕು. ಅಮಾಯಕರನ್ನು ಸಾಯಿಸುವುದಕ್ಕೆ ಇದು ಉತ್ತರಪ್ರದೇಶ, ಮಣಿಪುರ ಅಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಮಂಗಳೂರಿಗೆ ಒಳ್ಳೆಯ ಹೆಸರಿದೆ. ಈ ಪ್ರದೇಶವನ್ನು ಮತ್ತೊಂದು ಮಣಿಪುರದಂತೆ ಮಾಡುವುದು ಬೇಡ. ಕಾನೂನು ಸುವ್ಯವಸ್ಥೆ ಹದಗೆಟ್ಟಾಗ ಮುಖ್ಯಮಂತ್ರಿ ಮತ್ತು ಗೃಹಸಚಿವರು ಸೇರಿಕೊಂಡು ಕ್ರಮ ಜರುಗಿಸಬೇಕಾಗುತ್ತದೆ. ಇದು ಸೂಕ್ಷ್ಮ ಪ್ರದೇಶ. ಹಾಗಾಗಿ ಬಹಳ ಯೋಚನೆ ಮಾಡಿ ಅವರು ಹೆಜ್ಜೆ ಇಟ್ಟಿದ್ದಾರೆ. ನಾನೂ ಅವರ ಪರ ನಿಲ್ಲುತ್ತೇನೆ. ಎಲ್ಲವೂ ಸರಿಯಾಗಲಿದೆ' ಎಂದರು. 'ಈ ಗಲಭೆಗಳ ಸೂತ್ರಧಾರಿಗಳು ಯಾರು ಎಂಬುದನ್ನು ಸ್ವಲ್ಪ ದಿವಸದಲ್ಲೇ ಹೇಳುತ್ತೇವೆ. ದಕ್ಷ ಪೊಲೀಸ್ ಅಧಿಕಾರಿಗಳು ಇಲ್ಲಿದ್ದು, ಅವರು ಕ್ರಮ ಜರುಗಿಸುತ್ತಾರೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಚೆಗೆ ಭೇಟಿ ಮಾಡಿದ್ದು ಸೌಜನ್ಯಕ್ಕಾಗಿ. ಅದನ್ನೇ ಮುಂದಿಟ್ಟು ನನ್ನನ್ನೇ ಈ ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ಮಾಡುತ್ತಾರೆ ಎಂಬ ಊಹಾಪೋಹಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಕರಾವಳಿಯಲ್ಲಿನ ಅಹಿತಕರ ಬೆಳವಣಿಗೆ ಬಗ್ಗೆ ಕ್ರಮ ವಹಿಸುವಂತೆ ಮುಖ್ಯಮಂತ್ರಿಯವರನ್ನು ಕೋರಿದ್ದೆ. ಇಲ್ಲಿನ ಪರಿಸ್ಥಿತಿ ಸ್ವಲ್ಪ ಹದಗೆಟ್ಟಿರುವುದನ್ನು ಒಪ್ಪಿಕೊಂಡ ಅವರು, ಎಲ್ಲವನ್ನೂ ಸರಿಪಡಿಸುವ ಭರವಸೆ ನೀಡಿದ್ದಾರೆ. ಪಕ್ಷದ ಕಾರ್ಯಕರ್ತರ ಜೊತೆ ಮಾತುಕತೆ ನಡೆಸುವಂತೆ ನಿರ್ದೇಶನ ನೀಡಿದ್ದಾರೆ' ಎಂದರು.


ಹರಿಪ್ರಸಾದ್

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನ ಅಲ್ಪಸಂಖ್ಯಾತರ ಘಟಕದ ಮುಖಂಡರ ಸಾಮೂಹಿಕ ರಾಜೀನಾಮೆ ಕುರಿತು ಪ್ರತಿಕ್ರಿಯಿಸಿದ ಅವರು, 'ಇಲ್ಲಿ ನಡೆಯಬಾರದ ಕೆಲ ಘಟನೆಗಳು ನಡೆದಿವೆ. ಇದರಿಂದ ಭಾವನಾತ್ಮಕವಾಗಿ ನೋವಾಗಿ ರಾಜೀನಾಮೆ ಕೊಟ್ಟಿದ್ದಾರೆ. ರಾಜೀನಾಮೆ ವಾಪಾಸ್ ಪಡೆಯುವಂತೆ ಮುಸ್ಲಿಂ ಮುಖಂಡರಲ್ಲಿ ಮನವಿ ಮಾಡುತ್ತೇನೆ. ಕಾಂಗ್ರೆಸ್ ಪಕ್ಷವು ಯಾರನ್ನೂ ಕಳೆದುಕೊಳ್ಳಲು ಸಿದ್ಧವಿಲ್ಲ. ಇದಕ್ಕೆಲ್ಲ ರಾಜೀನಾಮೆ ನೀಡಬೇಕಾಗಿಲ್ಲ' ಎಂದರು.

'ಈ ಘಟನೆಗಳಿಂದ ಯಾರೂ ಧೃತಿಗೆಡುವುದು ಬೇಡ. ಯಾರೂ ಉಗ್ರ ಯೋಚನೆ ಮಾಡುವ ಅಗತ್ಯವಿಲ್ಲ. ಸರ್ಕಾರ ಜೊತೆಗಿದ್ದೂ ನಾವೆಲ್ಲ ಕೆಲಸ ಮಾಡಿಲ್ಲ ಎಂದಾದರೆ ಮಾತ್ರ ರಾಜೀನಾಮೆ ಕೊಡಬೇಕು. ನಾವು ಸಂವಿಧಾನ ಮತ್ತು ನ್ಯಾಯದ ಪರ ಇದ್ದೇವೆ. ಸೈದ್ಧಾಂತಿಕವಾಗಿ ಬಹಳ ದೃಢವಾಗಿ ಇರುವವರು ನಾವು. ಈ ವಿಚಾರವಾಗಿ ಕಾರ್ಯಕರ್ತರ ಜೊತೆ ಮಾತನಾಡುತ್ತೇನೆ' ಎಂದರು.

'ಸಮೃದ್ಧಿ ಎಕ್ಸ್‌ಪ್ರೆಸ್‌ವೇ' ಸಂಚಾರಕ್ಕೆ ಮುಕ್ತ

ಮುಂಬೈ(ಪಿಟಿಐ): ಮುಂಬೈ-ನಾಗ್ಪುರ ಎಕ್ಸ್‌ಪ್ರೆಸ್‌ವೇನ ಅಂತಿಮ 76 ಕಿ.ಮೀ ಮಾರ್ಗವನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಗುರುವಾರ ಉದ್ಘಾಟಿಸಿದರು.

ಈ ಮೂಲಕ ಒಟ್ಟು 701 ಕಿ.ಮೀ ಮಾರ್ಗದ 'ಸಮೃದ್ಧಿ ಮಹಾಮಾರ್ಗವು' ಸಂಚಾರಕ್ಕೆ ಮುಕ್ತಗೊಂಡಿದೆ. ಅಂದಾಜು 17ರಿಂದ 18 ಗಂಟೆ ತೆಗೆದುಕೊಳ್ಳುತ್ತಿದ್ದ ಮುಂಬೈ-ನಾಗ್ಪುರ ನಗರಗಳ ನಡುವಿನ ಪ್ರಯಾಣದ ಅವಧಿಯು ಎಕ್ಸ್‌ಪ್ರೆಸ್‌ವೇನಿಂದಾಗಿ 8 ಗಂಟೆಗೆ ಇಳಿದಿದೆ.

ಆರು ಪಥಗಳ ಈ ಹೆದ್ದಾರಿಗೆ 'ಹಿಂದೂ ಹೃದಯ ಸಾಮ್ರಾಟ್ ಬಾಳಾಸಾಹೇಬ್ ಠಾಕ್ರೆ ಮಹಾರಾಷ್ಟ್ರ ಸಮೃದ್ಧಿ ಮಹಾಮಾರ್ಗ್' ಎಂದು ಹೆಸರಿಡಲಾಗಿದೆ. ಶೀಘ್ರದಲ್ಲೇ ಈ ಮಾರ್ಗವನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಮಹಾರಾಷ್ಟ್ರ ರಸ್ತೆ ಸಾರಿಗೆ ನಿಗಮ ತಿಳಿಸಿದೆ.

ಪರಿಸರ ಪಾಠ...

ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಬಳಿ ಶರಣಬಸವೇಶ್ವರ ವಸತಿ ಪಬ್ಲಿಕ್ ಶಾಲೆಯ ಸಾವಿರಾರು ವಿದ್ಯಾರ್ಥಿಗಳು ಗುರುವಾರ ವಿಶ್ವ ಪರಿಸರ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮದ್ರಾಸ್ ವಿವಿ ಪ್ರಾಧ್ಯಾಪಕಿ ತಮಿಳ್ ಸೆಲ್ವಿ ಅಭಿಮತ

'ಕನ್ನಡದ ಸತ್ವ ತಮಿಳು ಭಾಷೆಯಲ್ಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಪ್ರಕಟಗೊಂಡ ಅನೇಕ ಕೃತಿಗಳನ್ನು ಓದಿದ್ದೇನೆ. ಕನ್ನಡ ಭಾಷೆಯಲ್ಲಿರುವ ಸತ್ವ ತಮಿಳು ಭಾಷೆಯಲ್ಲಿಲ್ಲ' ಎಂದು ಚೆನ್ನೈನ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ತಮಿಳ್ ಸೆಲ್ವಿ ಅಭಿಪ್ರಾಯಪಟ್ಟರು.

ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಮತ್ತು ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಂಪಾದಿಸಿರುವ 'ದೇವುಡು ಹೇಳಿದ ಮಕ್ಕಳ ಕಥೆಗಳು' ಶೀರ್ಷಿಕೆಯಡಿ ಐದು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಇದೇ ವೇಳೆ ತಮಿಳ್ ಸೆಲ್ವಿ ಅವರು 'ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ಸ್ವೀಕರಿಸಿ, ಮಾತನಾಡಿದರು.

'ಕಮಲ್ ಹಾಸನ್ ಅವರು ಅವಿವೇಕಿತನದ ಹೇಳಿಕೆ ನೀಡಿದ್ದಾರೆ. ಒಂದು ಭಾಷೆ ಇನ್ನೊಂದು ಭಾಷೆಯಿಂದ ಹೇಗೆ ಹುಟ್ಟುತ್ತದೆ ಎಂಬ ಕಲ್ಪನೆಯೂ ಅವರಿಗಿಲ್ಲ. ಭಾಷೆಯ ಬಗ್ಗೆ ಸಂಶೋಧನೆ ನಡೆಸದೆ ಹೇಳಿಕೆ ನೀಡಿದ್ದಾರೆ. ಯಾರೋ ಬ್ರಿಟಿಷ್ ವಿದ್ವಾಂಸರು ಅರಿವಿಲ್ಲದೆ ಕೆಲ ತಪ್ಪುಗಳನ್ನು ಬರೆದಿದ್ದಾರೆ. ಅದನ್ನು ವಿಮರ್ಶಿಸಿಲ್ಲ. ಅದೇ ವಿದ್ವಾಂಸರು ಸಂಸ್ಕೃತದಿಂದ ತಮಿಳು ಭಾಷೆ ಹುಟ್ಟಿದೆ ಎಂದಿದ್ದಾರೆ. ಆದರೆ, ಅದನ್ನು ಒಪ್ಪಿಕೊಳ್ಳಲು ಅವರು ಸಿದ್ಧವಿಲ್ಲ. ಭಾಷಾ ಅಭಿಮಾನದಿಂದ ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ' ಎಂದರು.

'ಅನುವಾದದ ಮೂಲಕ ಭಾರತೀಯ ಭಾಷೆಗಳ ಎಲ್ಲ ಸಾಹಿತ್ಯವನ್ನು ಓದಿಕೊಂಡಿದ್ದೇನೆ. ಕನ್ನಡದಷ್ಟೇ ತಮಿಳು ಸಾಹಿತ್ಯವನ್ನೂ ತಿಳಿದುಕೊಂಡಿದ್ದೇನೆ. ಕನ್ನಡ ಭಾಷೆಯಲ್ಲಿರುವ ವೈವಿಧ್ಯಮಯ ಸಾಹಿತ್ಯ ಆ ಭಾಷೆಯಲ್ಲಿಲ್ಲ. ಪಂಪ, ರನ್ನ, ಕುಮಾರವ್ಯಾಸರು ರಚಿಸಿದ ಕಾವ್ಯಗಳನ್ನು ಆ ಭಾಷೆಯಲ್ಲಿ ನೋಡಲು ಸಾಧ್ಯವಿಲ್ಲ' ಎಂದು ಹೇಳಿದರು.

ಸಾಹಿತಿ ಕುಂ. ವೀರಭದ್ರಪ್ಪ, 'ವಿವಿಧ ಕಾರಣಗಳಿಂದಾಗಿ ನಾನು ಏಳು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿರಲಿಲ್ಲ. ಹಿಂದೆ ಅಧ್ಯಕ್ಷರನ್ನು ಭೇಟಿ ಮಾಡಲಾದರೂ ಬರುತ್ತಿದ್ದೆ. ಈಗ ಅಧ್ಯಕ್ಷರೇ ಬಾಸ್‌ಗಳಾಗುತ್ತಿದ್ದಾರೆ. ಮಲ್ಲೇಪುರಂ ಅವರ ಮೇಲಿನ ಅಭಿಮಾನದಿಂದ ನಾನು ಹಾಕಿಕೊಂಡ ಲಕ್ಷ್ಮಣ ರೇಖೆಯನ್ನು ದಾಟಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಬರಬೇಕಾಯಿತು. ಒಂದು ಹೊತ್ತಿನ ಊಟಕ್ಕೂ ಪರದಾಡಿದ್ದ ಮಲ್ಲೇಪುರಂ ಅವರು, ಮುಂದೆ ಸಂಸ್ಕೃತ ವಿಶ್ವವಿದ್ಯಾಲದ ಕುಲಪತಿಯಾದದ್ದು ಪವಾಡದಂತೆ ಭಾಸವಾಗಲಿದೆ' ಎಂದು ಹೇಳಿದರು.

ಕವಯಿತ್ರಿ ಪ್ರತಿಭಾ ನಂದಕುಮಾರ್, 'ದೇವುಡು ಹೇಳಿದ ಮಕ್ಕಳ ಕಥೆಗಳು ಬೆರಗು ಹುಟ್ಟಿಸಲಿವೆ. ಅವನ್ನು ಮಕ್ಕಳಿಗೆ ತಲುಪಿಸುವುದು ನಮ್ಮ ಕರ್ತವ್ಯ' ಎಂದರು.

ಕಾರ್ಯಕ್ರಮದಲ್ಲಿ ತಮಿಳ್ ಸೆಲ್ವಿ ಅವರಿಗೆ 'ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರತಿಭಾ ನಂದಕುಮಾರ್, ಮಲ್ಲೇಪುರಂ ಜಿ. ವೆಂಕಟೇಶ್, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ವ್ಯವಸ್ಥಾಪಕ ಬಿ.ಕೆ. ಸುರೇಶ್, ಕುಂ. ವೀರಭದ್ರಪ್ಪ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಪ್ರದಾನ
- 7 ವರ್ಷಗಳ ಬಳಿಕ ಕಸಾಪಗೆ ಕುಂ.ವೀರಭದ್ರಪ್ಪ ಭೇಟಿ

ಕಮಲ್ ಹಾಸನ್ ಅವರ ಅವಿವೇಕತನದ ಹೇಳಿಕೆ ಕರ್ನಾಟಕವನ್ನು ಕಾದ ಕಾವಲಿ ಮೇಲೆ ಇರಿಸಿದೆ. ಅವರಿಗೆ ನ್ಯಾಯಾಲಯವೇ ಛೀಮಾರಿ ಹಾಕಿದೆ. ಆದ್ದರಿಂದ ನಾವು ಛೀಮಾರಿ ಹಾಕುವ ಅಗತ್ಯವಿಲ್ಲ

ಕುಂ. ವೀರಭದ್ರಪ್ಪ, ಸಾಹಿತಿ

ಕೈಗಾರಿಕಾ ಪ್ರದೇಶ: ಮಹಿಳಾ ಕಾರ್ಮಿಕರಿಗೆ ವಸತಿ ನಿಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲೆಯ ನರಸಾಪುರ ಮತ್ತು ತುಮಕೂರು ಜಿಲ್ಲೆ ವಸಂತ ನರಸಾಪುರ ಕೈಗಾರಿಕಾ ಪ್ರದೇಶಗಳಲ್ಲಿ ಮಹಿಳಾ ಕಾರ್ಮಿಕರಿಗೆ ವಸತಿ ನಿಲಯಗಳನ್ನು ಸ್ಥಾಪಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 18 ಸಾವಿರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಇವರಲ್ಲಿ ಶೇ 80ರಷ್ಟು ಮಹಿಳೆಯರಿದ್ದಾರೆ. ತುಮಕೂರು ಜಿಲ್ಲೆ ವಸಂತ ನರಸಾಪುರದಲ್ಲೂ ಗಣನೀಯ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರಿದ್ದಾರೆ. ಕೇಂದ್ರ ಸರ್ಕಾರದ ರಾಜ್ಯಗಳ ಬಂಡವಾಳ ಹೂಡಿಕೆ ಮೇಲಿನ ವಿಶೇಷ ನೆರವು ಯೋಜನೆ ಅಡಿ ಈ ವಸತಿ ನಿಲಯಗಳನ್ನು ಸ್ಥಾಪಿಸಲಾಗುವುದು. ಒಟ್ಟು ₹193 ಕೋಟಿ ವೆಚ್ಚದಲ್ಲಿ ಕೆಐಎಡಿಬಿ ಮೂಲಕ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ಅವರು ತಿಳಿಸಿದರು. ಈ ಯೋಜನೆಗೆ ಬೇಕಾಗಿರುವ ಜಮೀನನ್ನು ಕೆಐಎಡಿಬಿಯು ಉಚಿತವಾಗಿ ನೀಡಲಿದೆ. ವಸತಿ ನಿಲಯ ನಿರ್ಮಾಣವಾದ ನಂತರ ಕಾರ್ಯಾಚರಣೆ ಮತ್ತು ನಿರ್ವಹಣೆ ಅನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವಕ್ಕೆ ವಹಿಸಲಾಗುವುದು ಎಂದರು.

ವಿಶೇಷ ನಿಯಮ: ಒಲಂಪಿಕ್ಸ್, ಪ್ಯಾರಾ ಒಲಂಪಿಕ್ಸ್, ಏಷಿಯನ್ ಕ್ರೀಡೆಗಳು, ಪ್ಯಾರಾ ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳ ಪದಕ ವಿಜೇತರಿಗೆ ನೇರ ನೇಮಕಾತಿಯಲ್ಲಿ ಶೇ 2ರಷ್ಟು ಮೀಸಲಾತಿ ಅವಕಾಶ ಕಲ್ಪಿಸಿರುವುದರಿಂದ ಮುಂಬಡ್ತಿಯಿಂದ ನೇಮಕ ಮಾಡಿಕೊಳ್ಳುವ ಹುದ್ದೆಗಳನ್ನು ಕೈಬಿಡಲು ಕಾಯ್ದೆಗೆ ಮಾಡಿರುವ ತಿದ್ದುಪಡಿಗೆ ಒಪ್ಪಿಗೆ ನೀಡಲಾಗಿದೆ.

ಚಿಕ್ಕಮಗಳೂರಿಗೆ ಏರ್ ಸ್ಟ್ರಿಪ್: ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್ ಅಭಿವೃದ್ಧಿಪಡಿಸಲು ಅಗತ್ಯವಿರುವ 17.01 ಎಕರೆ ಖಾಸಗಿ ಜಮೀನನ್ನು ಜಿಲ್ಲಾಧಿಕಾರಿಗಳ ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ಹೆಚ್ಚುವರಿ ಅನುದಾನ ₹17.05 ಕೋಟಿ ಬಿಡುಗಡೆಗೆ ಅನುಮೋದನೆ.

ಟೆಂಡರ್ ಅವಧಿ 3 ವರ್ಷ ವಿಸ್ತರಣೆ: ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ಸಿಬ್ಬಂದಿ ಸೇವೆ ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಲು ಮೂರು ವರ್ಷಗಳ ಅವಧಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲು ಸಂಪುಟ ಒಪ್ಪಿಗೆ ನೀಡಿದೆ.

ಮುಂಬಡ್ತಿಗೆ ನಿಯಮ ಸಡಿಲ: ಮುದ್ರಣ–ಲೇಖನ ಸಾಮಗ್ರಿ ಇಲಾಖೆಯಲ್ಲಿ ಜಂಟಿ ನಿರ್ದೇಶಕರ ಹುದ್ದೆಯಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ಮಾತ್ರ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಪಡೆಯಲು ಅವಕಾಶವಿದೆ.

ದುಡಿದು ಸಲುಹಿದ ಕಾರನ್ನು ದೇವರಂತೆ ಪೂಜಿಸುವ ನಾರೆ ಕುಟುಂಬ

ಮನೆ ಮೇಲೆ ನೆಚ್ಚಿನ ಕಾರು ಇಟ್ಟ ಮೆಕ್ಯಾನಿಕ್!

● ಚಂದ್ರಶೇಖರ ಎಸ್. ಚಿನಕೇಕರ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ನಿಪ್ಪಾಣಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದ ಮೆಕ್ಯಾನಿಕ್ ಸೂರಜ್ ನಾರೆ ಅವರು ನೆಚ್ಚಿನ ಕಾರನ್ನು ತಮ್ಮ ಮೂರು ಅಂತಸ್ತಿನ ಮನೆಯ ತಾರಸಿ ಮೇಲೆ ಇಟ್ಟಿದ್ದಾರೆ. ಕ್ರೇನ್ ನೆರವಿನಿಂದ ಮೇಲೆ ಇಡಲಾಗಿರುವ ಕಾರು ಸುಲಭವಾಗಿ ಕಾಣುವಂತೆ ಇಳಿಜಾರಿನಲ್ಲಿ ಇರಿಸಲಾಗಿದೆ.

ಬೇಡಕಿಹಾಳದ ಕಡುಬಡ ಕುಟುಂಬದಲ್ಲಿ ಜನಿಸಿದ ಸೂರಜ್ ಐಟಿಐ ಓದಿ, ಮಹಾರಾಷ್ಟ್ರದ ಪುಣೆಯಲ್ಲಿ ಗ್ಯಾರೇಜ್‌ನಲ್ಲಿ ಮೆಕ್ಯಾನಿಕ್ ಆಗಿ 4 ವರ್ಷ ದುಡಿದರು. 12 ವರ್ಷಗಳ ಹಿಂದೆ ಸ್ವಗ್ರಾಮಕ್ಕೆ ಬಂದು, ತಮ್ಮದೇ ಚಿಕ್ಕ ಗ್ಯಾರೇಜ್ ತೆರೆದರು. ಜೊತೆಗೆ ಕಾರು ಚಾಲನಾ ತರಬೇತಿ ಕೇಂದ್ರ ಆರಂಭಿಸಿದರು. ಕೆಂಪು ಬಣ್ಣದ ಕಾರು ಖರೀದಿಸಿ ಚಾಲನಾ ತರಬೇತಿ ನೀಡಲು ಶುರು ಮಾಡಿದರು. ವರ್ಷದಿಂದ ವರ್ಷಕ್ಕೆ ಅವರು ಆರ್ಥಿಕವಾಗಿ ಸಬಲರಾದರು. ಸದ್ಯ ಅವರ ಬಳಿ ಐದು ಕಾರುಗಳಿವೆ. ಮೂರು ಅಂತಸ್ತಿನ ಸ್ವಂತ ಮನೆಯನ್ನೂ ಕಟ್ಟಿಸಿಕೊಂಡಿದ್ದಾರೆ.

'ನಮ್ಮ ಪಾಲಿಗೆ ದೇವರು ಆಗಿರುವ ಈ ಕಾರು ನಮ್ಮ ಕುಟುಂಬವನ್ನು ಸಲಹಿ, ಸುಸ್ಥಿತಿಗೆ ಬರುವಂತೆ ಮಾಡಿದೆ. ಅದಕ್ಕೆ ಅಭಿಮಾನದಿಂದ ಮನೆಯ ಮೇಲೆ ಇರಿಸಿದ್ದೇನೆ. ಸುಸ್ಥಿತಿಯಲ್ಲಿದ್ದ ಕಾರನ್ನೇ 2022ರ ಜನವರಿಯಲ್ಲಿ ಮನೆಯ ತಾರಸಿ ಮೇಲೆ ಇರಿಸಿದೆ. ಪ್ರತಿ ಹುಣ್ಣಿಮೆ, ಅಮಾವಾಸ್ಯೆ ಮತ್ತು ಹಬ್ಬದ ಸಂದರ್ಭದಲ್ಲಿ ಕಾರನ್ನು ಪೂಜಿಸುತ್ತೇನೆ' ಎಂದು ಸೂರಜ್ ನಾರೆ 'ಪ್ರಜಾವಾಣಿ'ಗೆ ತಿಳಿಸಿದರು. 'ಮುಂಭಾಗದ ಚಕ್ರಗಳು ಹೊರಗೆ ಕಾಣುವಂತೆ, ಕೆಳಕ್ಕೆ ಮುಖ ಮಾಡಿ ಕಾರನ್ನು ನಿಲ್ಲಿಸಿರುವೆ. ನಮ್ಮ ಮನೆಯೂ ಈಗ ಸೆಲ್ಫಿ ಸ್ಪಾಟ್ ಆಗಿದೆ. ಊರಿಗೆ ಬಂದವರು ತಾರಸಿ ಮೇಲಿನ ಕಾರನ್ನೊಮ್ಮೆ ನೋಡಿಕೊಂಡೇ ಹೋಗುವುದು ರೂಢಿಯಾಗಿದೆ' ಎಂದು ಅವರು ತಿಳಿಸಿದರು.

ನಿಪ್ಪಾಣಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದಲ್ಲಿ ಸೂರಜ್ ನಾರೆ ತಮ್ಮ ಮನೆಯ ತಾರಸಿ ಮೇಲೆ ಮೇಲೆ ಕಾರು ಇಟ್ಟಿರುವುದು

ನಮ್ಮದು ಬಡ ಕುಟುಂಬ. ಸರಿಯಾಗಿ ಊಟ, ಬಟ್ಟೆಯೂ ಇಲ್ಲದ ಸ್ಥಿತಿ ಇತ್ತು. ಈ ಕೆಂಪು ಕಾರು ಖರೀದಿಸಿದ ಬಳಿಕ ನಾನು ಸಾಕಷ್ಟು ದುಡಿದೆ, ಗಳಿಸಿದೆ. ಈ ಕಾರೇ ನನ್ನ ದೇವರು

ಸೂರಜ್ ನಾರೆ, ಮೆಕ್ಯಾನಿಕ್

ದುಡಿಮೆಯೇ ದೇವರು ಎನ್ನುವುದು ನಮ್ಮ ಭಾವನೆ. ನಾವೂ ವಾಹನವನ್ನು ಪೂಜಿಸುತ್ತೇವೆ. ಆದರೆ, ನಾರೆ ಕುಟುಂಬದವರು ಕಾರಿಗೇ ದೇವರ ರೂಪ ಕೊಟ್ಟಿದ್ದಾರೆ

ಮುನ್ನೋಳಿಕರ, ಬೇಡಕಿಹಾಳ ನಿವಾಸಿ

ಶುಕ್ರವಾರ, ಜೂನ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 156 | ಪುಟ 18

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪರಿಸರ ಜಾಗೃತಿ

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹೈದರಾಬಾದ್‌ನಲ್ಲಿಗುರುವಾರ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು

ಆಳ-ಅಗಲ

ಭೂ ಗ್ಯಾರಂಟಿ ಆಸ್ತಿ ಸಮಸ್ಯೆಗೆ ಪರಿಹಾರ

'ಈಶಾನ್ಯ'ದಲ್ಲಿ ತಗ್ಗದ ಪ್ರವಾಹ 11

ಅಯೋಧ್ಯೆ: 'ರಾಜಾ ರಾಮ' ಮೂರ್ತಿ ಪ್ರತಿಷ್ಠಾಪನೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,442	24,750	₹1.02ಲಕ್ಷ (ಬೆಂಗಳೂರು)	₹1.07ಲಕ್ಷ (ಬೆಂಗಳೂರು)	85.79

ಆರ್‌ಸಿಬಿ, ಕೆಎಸ್‌ಸಿಎ, ಡಿಎನ್‌ಎ ಸಂಸ್ಥೆಗಳ ವಿರುದ್ಧ ಸಿಐಡಿ ತನಿಖೆ • ನೂತನ ಕಮಿಷನರ್ ಆಗಿ ಸೀಮಂತ್ ಕುಮಾರ್ ಸಿಂಗ್

ಕಾಲ್ತುಳಿತ: ಕಮಿಷನರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು–ನೋವಿನ ಪ್ರಕರಣ ನಡೆದ ಒಂದು ದಿನದ ನಂತರ ರಾಜ್ಯ ಸರ್ಕಾರ ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದ್ದು, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಮಾನತು ಮಾಡಿದೆ.

ನೂತನ ಕಮಿಷನರ್ ಆಗಿ ಸೀಮಂತ್‌ಕುಮಾರ್ ಸಿಂಗ್ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ತಂಡದ ಆಟಗಾರರಿಗೆ ಸನ್ಮಾನ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಬುಧವಾರ ನಡೆದಿದ್ದು, ಇದಕ್ಕೆ ಲಕ್ಷಾಂತರ ಜನ ಬಂದಿದ್ದರು. ಇದರಿಂದಾಗಿ ಭಾರಿ ಪ್ರಮಾಣದ ದುರಂತ ಸಂಭವಿಸಿ, 11 ಜನ ಮೃತಪಟ್ಟಿದ್ದರು. ಪೂರ್ವ ತಯಾರಿ ಇಲ್ಲದೇ ಕಾರ್ಯಕ್ರಮ ಹಮ್ಮಿಕೊಂಡಿದ್ದೇ ಈ ಅನಾಹುತಕ್ಕೆ ಕಾರಣ ಎಂದು ವಿರೋಧ ಪಕ್ಷಗಳು ದೂರಿದ್ದವು.

ದಾರುಣ ಘಟನೆ ನಡೆದ ಬೆನ್ನಲ್ಲೇ, ಮ್ಯಾಜಿಸ್ಟೀರಿಯಲ್ ವಿಚಾರಣೆಗೆ ಆದೇಶಿಸಲಾಗಿತ್ತು. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯದ ಬಗ್ಗೆ ಗಂಭೀರ ಚರ್ಚೆ ನಡೆಯಿತು.

ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ, ಕೆ. ಗೋವಿಂದರಾಜು, ಜಿ. ಪರಮೇಶ್ವರ, ಸಿದ್ದರಾಮಯ್ಯ , ಡಿ.ಕೆ. ಶಿವಕುಮಾರ್

> **ಕಾಲ್ತುಳಿತ ಘಟನೆ ನಮ್ಮನ್ನು ಗಾಸಿಗೊಳಿಸಿದೆ. ಮೃತಪಟ್ಟವರಿಗೆ ಸಂತಾಪ ಸೂಚಿಸಲಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಈ ವಿಷಯದ ಕುರಿತು ಗಂಭೀರ ಚರ್ಚೆ ನಡೆಸಿ, ಕೆಲ ತೀರ್ಮಾನ ಕೈಗೊಂಡಿದ್ದೇವೆ**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸಭೆಯ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ, ಕಾನೂನು ಸಚಿವ ಎಚ್‌.ಕೆ. ಪಾಟೀಲ ಹಾಗೂ ಹಿರಿಯ ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾತ್ರಿ 9ಕ್ಕೆ ಸುದ್ದಿಗೋಷ್ಠಿ ನಡೆಸಿ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರ ನೀಡಿದರು.

'ದಯಾನಂದ್ ಜತೆಗೆ ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಎಚ್‌. ಟಿ. ಶೇಖರ್, ಕಬ್ಬನ್ ಪಾರ್ಕ್ ಎಸಿಪಿ ಸಿ. ಬಾಲಕೃಷ್ಣ, ಪೊಲೀಸ್ ಇನ್‌ಸ್ಪೆಕ್ಟರ್ ಎ.ಕೆ. ಗಿರೀಶ್ ಹಾಗೂ ಅಲ್ಲಿನ ಎಲ್ಲ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಘಟನೆ ಬಳಿಕ ಪಡೆದ ಪ್ರಾಥಮಿಕ ಮಾಹಿತಿಯಂತೆ ಮೇಲ್ನೋಟಕ್ಕೆ ಈ ಅಧಿಕಾರಿಗಳ ಬೇಜವಾಬ್ದಾರಿತನ, ಅಲಕ್ಷ್ಯ ಕಂಡು ಬಂದಿದೆ. ವಿಸ್ತೃತ ಚರ್ಚೆಯ ನಂತರ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ' ಎಂದು ಮುಖ್ಯಮಂತ್ರಿ ಹೇಳಿದರು.

7ನೇ ಪುಟ ನೋಡಿ

ಸ್ವಯಂಪ್ರೇರಿತ ಪಿಐಎಲ್: ನೋಟಿಸ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಎದುರು ಕಾಲ್ತುಳಿತಕ್ಕೆ ಸಿಲುಕಿ 11 ಜನ ಸಾವಿಗೀಡಾದ ಘಟನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಮಾಧ್ಯಮಗಳ ವರದಿ ಹಾಗೂ ಹಲವು ವಕೀಲರ ಮನವಿಗಳನ್ನು ಪರಿಗಣಿಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಗುರುವಾರ ದಾಖಲಿಸಿಕೊಂಡಿತು.

'ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ನಾವು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲು ಮಾಡಿಕೊಳ್ಳುವುದನ್ನು ಪ್ರತಿರೋಧಿಸುವುದಿಲ್ಲ. ಹೈಕೋರ್ಟ್ ನೀಡುವ ಎಲ್ಲಾ ಸಲಹೆಗಳನ್ನು ಪಾಲಿಸಲು ಸರ್ಕಾರ ಬದ್ಧವಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

7ನೇ ಪುಟ ನೋಡಿ

ಕಾರ್ಯಕ್ರಮದಲ್ಲಿ ಸಿ.ಎಂ ಮೊಮ್ಮಗ, ಸಚಿವರ ಪುತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಮ್ಮಗ ಧವನ್ ರಾಕೇಶ್ ಹಾಗೂ ವಸತಿ ಸಚಿವ ಜಮೀರ್ ಅಹಮದ್ ಪುತ್ರ ಜೈದ್ ಖಾನ್ ಸೇರಿದಂತೆ ರಾಜಕಾರಣಿಗಳ ಕುಟುಂಬಸ್ಥರು ಆರ್‌ಸಿಬಿ ಕ್ರಿಕೆಟರ್‌ಗಳಿಗೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನ ನಡೆದ ಕಾರ್ಯಕ್ರಮದಲ್ಲಿ ಹಾಜರಿದ್ದ ಫೋಟೊಗಳು ಹಾಗೂ ವಿಡಿಯೊಗಳು ಹರಿದಾಡಿವೆ.

ಜೆಡಿಎಸ್ ಶಾಸಕ ಜಿ.ಡಿ. ಹರೀಶ್ ಜೊತೆಯಲ್ಲಿ ಧವನ್ ರಾಕೇಶ್ ಅವರು ವಿರಾಟ್ ಕೊಹ್ಲಿ ಒಟ್ಟಿಗೆ ನಿಂತು ಪೊಲೀಸರಿಂದ ಫೋಟೊ ತೆಗೆಸಿಕೊಂಡಿದ್ದರು. ಕಾಂಗ್ರೆಸ್ ನಾಯಕರ ಕುಟುಂಬದವರು ದುರಂತ ನಡೆದ ಸಂದರ್ಭದಲ್ಲೂ ಸಂಭ್ರಮದಿಂದ ಫೋಟೊಗಳನ್ನು ತೆಗೆಸಿಕೊಂಡಿದ್ದು, ಅವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿವೆ. ಕಾರ್ಯಕ್ರಮದಲ್ಲಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಸೌಮ್ಯಾ ರೆಡ್ಡಿ ಅವರು ಹಾಜರಿದ್ದರು. ಈ ಕುರಿತು ಜನರಿಂದ ಟೀಕೆಗಳು ವ್ಯಕ್ತವಾಗಿವೆ.

ನ್ಯಾ. ಡಿಕುನ್ಹಾ ನೇತೃತ್ವದಲ್ಲಿ ತನಿಖೆ

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತ ಪ್ರಕರಣದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ಅವರ ನೇತೃತ್ವದಲ್ಲಿ ಏಕಸದಸ್ಯ ಆಯೋಗ ರಚಿಸಲಾಗಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನ್ಯಾಯಾಂಗ ತನಿಖೆಯ ಜತೆಗೆ ಸಿಐಡಿ ಅಧಿಕಾರಿಗಳೂ ತನಿಖೆ ನಡೆಸುವರು. ಬುಧವಾರ ಹೊರಡಿಸಿದ್ದ ಆದೇಶದಂತೆ ಮ್ಯಾಜಿಸ್ಟೀರಿಯಲ್ ತನಿಖೆ ಪ್ರಾರಂಭವಾಗಿದೆ ಎಂದು ಮಾಹಿತಿ ನೀಡಿದರು.

ಆತುರದ ಹಟವೇ ದುರಂತಕ್ಕೆ ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಕಡೆ ಏಕಕಾಲದಲ್ಲಿ ಕಾರ್ಯಕ್ರಮ ಆಯೋಜಿಸಿದರೆ ಭದ್ರತೆ ಹಾಗೂ ಜನದಟ್ಟಣೆ ನಿಯಂತ್ರಣ ಕಷ್ಟ ಎಂದು ಪೊಲೀಸರ ಎಚ್ಚರಿಕೆಯ ಮಾತುಗಳನ್ನು ಪಕ್ಕಕ್ಕಿಟ್ಟು, ಹಟಕ್ಕೆ ಬಿದ್ದು ಸಮಾರಂಭ ನಡೆಸಿದ್ದೇ ಬುಧವಾರದ 'ಮಹಾದುರಂತ'ಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ಆಟಗಾರರಿಗೆ ಸನ್ಮಾನ, ವಿಧಾನ ಸೌಧದಿಂದ ಕ್ರೀಡಾಂಗಣದವರೆಗೆ ತೆರೆದ ವಾಹನದಲ್ಲಿ ಮೆರವಣಿಗೆ ಹಾಗೂ ಕ್ರೀಡಾಂಗಣದಲ್ಲಿ ಸಂಭ್ರಮಾಚರಣೆ ನಡೆಸುವುದಾಗಿ ಬುಧವಾರ 9 ಗಂಟೆಯ ಸುಮಾರಿಗೆ ನಗರ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು. ತರಾತುರಿಯಲ್ಲಿ ಕಾರ್ಯಕ್ರಮ ನಡೆಸಿದರೆ ಭದ್ರತೆ ಒದಗಿಸುವುದು ಕಷ್ಟ ಎಂದು ರಾಜ್ಯ ಸರ್ಕಾರ, ಆರ್‌ಸಿಬಿ ಫ್ರಾಂಚೈಸಿ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಸಂಸ್ಥೆ (ಈವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಪೊಲೀಸರು ಸ್ಪಷ್ಟವಾಗಿ ತಿಳಿಸಿದ್ದರು. ಆದರೆ, ಹಟಕ್ಕೆ ಬಿದ್ದು ತರಾತುರಿಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇ ದುರ್ಘಟನೆಗೆ ಕಾರಣವಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

6ನೇ ಪುಟ ನೋಡಿ

'ಮೆರವಣಿಗೆಗೆ ಅವಕಾಶ ನೀಡಲು ಅಸಾಧ್ಯ ಎಂದಿದ್ದ ಪೊಲೀಸರು'



ಬೆಂಗಳೂರು: 'ಮೆರವಣಿಗೆಗೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದರು. ಹೀಗಾಗಿ, ಕನಕಪುರದಲ್ಲಿದ್ದ ನಾನು ತಕ್ಷಣ ಬೆಂಗಳೂರಿಗೆ ಧಾವಿಸಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಕೆಎಸ್‌ಸಿಎ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹೋಗಲು ಸಾಧ್ಯವಾಗದ ಕಾರಣ ನನ್ನ ಕಾರಿನಲ್ಲೇ ಕರೆದುಕೊಂಡು ಹೋಗಬೇಕಾಯಿತು. ಕ್ರೀಡಾಂಗಣಕ್ಕೆ ಹೋಗುತ್ತಿದ್ದಾಗ ಕಾಲ್ತುಳಿತ ನಡೆದಿದೆ ಎಂದು ಮಾಧ್ಯಮ ಸ್ನೇಹಿತರು ಮಾಹಿತಿ ನೀಡಿದರು. ಆ ಬಳಿಕ ಪೊಲೀಸ್ ಕಮಿಷನರ್ ಮಾಹಿತಿ ನೀಡಿದರು' ಎಂದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಫ್ಲಿಪ್‌ಕಾರ್ಟ್: ಸಾಲ ನೀಡಲು ಅಸ್ತು

ರಾಯಿಟರ್ಸ್: ಇ–ಕಾಮರ್ಸ್ ವೇದಿಕೆ ಫ್ಲಿಪ್‌ಕಾರ್ಟ್‌ಗೆ ಆರ್‌ಬಿಐನಿಂದ ಬ್ಯಾಂಕೇತರ ಹಣಕಾಸು ಕಂಪನಿ ಪರವಾನಗಿ ದೊರೆತಿದೆ. ಅಮೆರಿಕದ ವಾಲ್‌ಮಾರ್ಟ್ ಕಂಪನಿ ಫ್ಲಿಪ್‌ಕಾರ್ಟ್‌ನಲ್ಲಿ ಶೇ80ರಷ್ಟು ಪಾಲು ಹೊಂದಿದೆ. 10

ನಮ್ಮ ದೇಶಕ್ಕೆ ಅವರ ಅಗತ್ಯವಿಲ್ಲ: ಡೊನಾಲ್ಡ್ ಟ್ರಂಪ್ ಹೇಳಿಕೆ

ಪ್ರಯಾಣ ನಿಷೇಧ; 12 ದೇಶ ಸೇರ್ಪಡೆ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಯಾಣ ನಿಷೇಧಕ್ಕೆ ಸಂಬಂಧಿಸಿದ ಹೊಸ ನಿಯಮಕ್ಕೆ ಬುಧವಾರ ಸಹಿ ಹಾಕಿದ್ದಾರೆ. ಅಫ್ಗಾನಿಸ್ತಾನ, ಇರಾನ್ ಮತ್ತು ಯೆಮನ್ ಸೇರಿದಂತೆ 12 ದೇಶಗಳ ನಾಗರಿಕರು ಅಮೆರಿಕ ಪ್ರವೇಶಿಸದಂತೆ ಅವರು ನಿರ್ಬಂಧ ಹೇರಿದ್ದಾರೆ.

ಟ್ರಂಪ್ ಅವರು ತಮ್ಮ ಮೊದಲ ಅವಧಿಯ ಆಡಳಿತದಲ್ಲಿ ಕೆಲವು ದೇಶಗಳ ನಾಗರಿಕರಿಗೆ ಅಮೆರಿಕ ಪ್ರವೇಶಿಸುವುದಕ್ಕೆ ನಿರ್ಬಂಧ ಹೇರಿದ್ದರು. ಇದೀಗ ಆ ಪಟ್ಟಿಯನ್ನು ಪರಿಷ್ಕರಿಸಿದ್ದಾರೆ.

ಈಚೆಗೆ ಕೊಲರಾಡೊ ವಿಶ್ವವಿದ್ಯಾಲಯದ ಸಮೀಪ ಇಸ್ರೇಲ್ ಪರ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ವ್ಯಕ್ತಿಯೊಬ್ಬ ಬೆಂಕಿಯುಗುಳುತ್ತಿದ್ದ ತೈಲ ಬಾಂಬ್ ಎಸೆದ ಘಟನೆ ನಡೆದಿತ್ತು. ದೇಶದಲ್ಲಿ ಅಕ್ರಮವಾಗಿ ನೆಲಸಿದ್ದ ವ್ಯಕ್ತಿಯ ವಿರುದ್ಧ ಅಮೆರಿಕದ ಅಧಿಕಾರಿಗಳು ಆರೋಪ ಹೊರಿಸಿದ್ದರು. ಪ್ರಯಾಣ ನಿಷೇಧ ಪಟ್ಟಿಯನ್ನು ಪರಿಷ್ಕರಿಸಲು ಈ ಘಟನೆಯೇ ಕಾರಣ ಎಂದು ಟ್ರಂಪ್ ಹೇಳಿದ್ದಾರೆ.

ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ಇಲ್ಲ

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯಲು ಬಯಸುವ ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ನಿಷೇಧಿಸುವುದಾಗಿ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಮೂಲಕ ಉನ್ನತ ಶಿಕ್ಷಣದ ಮೇಲೆ ಆಡಳಿತದ ಹಿಡಿತವನ್ನು ಬಿಗಿಗೊಳಿಸಿದ್ದಾರೆ.



'ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಹೊಸದಾಗಿ ಸೇರಲು ಅಥವಾ ಹಾರ್ವರ್ಡ್ ವಿಶ್ವವಿದ್ಯಾಲಯ ಆಯೋಜಿಸುವ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಮೆರಿಕಕ್ಕೆ ಬರಲು ಬಯಸುವ ವಿದೇಶಿ ಪ್ರಜೆಗಳ ಪ್ರವೇಶವನ್ನು ನಿರ್ಬಂಧಿಸಲು ನಿರ್ಧರಿಸಿದ್ದೇನೆ' ಎಂದು ಬುಧವಾರ ತಡರಾತ್ರಿ ಘೋಷಿಸಿದ್ದಾರೆ.

ಅಫ್ಗಾನಿಸ್ತಾನ, ಮ್ಯಾನ್ಮಾರ್, ಚಾಡ್, ಕಾಂಗೊ ಗಣರಾಜ್ಯ, ಈಕ್ವಟೋರಿಯಲ್ ಗಿನಿ, ಎರಿಟ್ರಿಯಾ, ಹೈಟಿ, ಇರಾನ್, ಲಿಬಿಯಾ, ಸೊಮಾಲಿಯಾ, ಸುಡಾನ್ ಮತ್ತು ಯೆಮನ್ ದೇಶಗಳ ನಾಗರಿಕರು ಅಮೆರಿಕ ಪ್ರವೇಶಿಸುವುದರ ಮೇಲೆ ಸಂಪೂರ್ಣ ನಿರ್ಬಂಧ ಹೇರಲಾಗಿದೆ.

ಇತರ ಏಳು ದೇಶಗಳಾದ ಬುರುಂಡಿ, ಕ್ಯೂಬಾ, ಲಾವೋಸ್, ಸಿಯೆರಾ ಲಿಯೋನ್, ಟೋಗೊ, ತುರ್ಕಮೆನಿಸ್ತಾನ್ ಹಾಗೂ ವೆನಿಜುವೆಲಾ ನಾಗರಿಕರ ಮೇಲೆ ಭಾಗಶಃ ನಿರ್ಬಂಧ ವಿಧಿಸಲಾಗಿದೆ. ಈ ನಿರ್ಬಂಧವು ಸೋಮವಾರದಿಂದ ಜಾರಿಗೆ ಬರಲಿದೆ ಎಂದು ಶ್ವೇತಭವನ ತಿಳಿಸಿದೆ.

'ನಮ್ಮ ದೇಶಕ್ಕೆ ಅವರ ಅಗತ್ಯವಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ. 'ಕೊಲರಾಡೊದ ಬೌಲ್ಡರ್‌ನಲ್ಲಿ ಇತ್ತೀಚೆಗೆ ಭಯೋತ್ಪಾದಕ ದಾಳಿ ನಡೆದಿದೆ. ವಿದೇಶಿ ಪ್ರಜೆಗಳನ್ನು ಸರಿಯಾಗಿ ಪರಿಶೀಲಿಸದೆಯೇ ನಮ್ಮ ದೇಶ ಪ್ರವೇಶಿಸಲು ಅವಕಾಶ ನೀಡಿದರೆ ಉಂಟಾಗುವ ಅಪಾಯ ಏನೆಂಬುದನ್ನು ಈ ಘಟನೆ ತೋರಿಸಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

700 ಕಿ.ಮೀ ಉದ್ದದ ಪರ್ವತ ಶ್ರೇಣಿಗೆ ನವಚೈತನ್ಯಕ್ಕಾಗಿ ಯೋಜನೆ

ಅರಾವಳಿ ಮರು ಅರಣ್ಯೀಕರಣಕ್ಕೆ ಚಾಲನೆ

ನವದೆಹಲಿ (ಪಿಟಿಐ): ದೆಹಲಿಯಿಂದ ಗುಜರಾತ್‌ವರೆಗೆ ಸುಮಾರು 700 ಕಿ.ಮೀ ಉದ್ದ ಹರಡಿಕೊಂಡಿರುವ ಅರಾವಳಿ ಪರ್ವತ ಶ್ರೇಣಿಯ ಮರು ಅರಣ್ಯೀಕರಣ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಪರಿಸರ ದಿನವಾದ ಗುರುವಾರ ಚಾಲನೆ ನೀಡಿದರು.

'ಭೂಮಿಯ ಅತ್ಯಂತ ಹಳೆಯ ಪರ್ವತ-ಶ್ರೇಣಿಗಳಲ್ಲಿ ಒಂದಾಗಿರುವ ಅರಾವಳಿಯು ಗುಜರಾತ್, ರಾಜಸ್ಥಾನ, ಹರಿಯಾಣ ಮತ್ತು ದೆಹಲಿಯಲ್ಲಿ ಹರಡಿಕೊಂಡಿದೆ. ಈ ಭಾಗವು ಹಲವು ವರ್ಷಗಳಿಂದ ನಾನಾ ಬಗೆಯ ಪರಿಸರ ಸವಾಲುಗಳನ್ನು ಎದುರಿಸುತ್ತಿದೆ. ಅವುಗಳನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ಪರ್ವತ ಶ್ರೇಣಿಯ ಜತೆಗೆ ಹೊಂದಿಕೊಂಡಿರುವ ಪ್ರದೇಶವನ್ನು ಪುನಶ್ಚೇತನಗೊಳಿಸುವುದಕ್ಕೆ ಆದ್ಯತೆ ನೀಡಲಿದ್ದೇವೆ. ಸ್ಥಳಿಯ ಆಡಳಿತದ ಜತೆಗೂಡಿ ಜಲ ವ್ಯವಸ್ಥೆ ಸುಧಾರಿಸುವ, ದೂಳಿನ ಬಿರುಗಾಳಿಯನ್ನು ಕಡಿಮೆಗೊಳಿಸುವ, ಪೂರ್ವ ಭಾಗದಲ್ಲಿ ಥಾರ್ ಮರುಭೂಮಿಯ ವಿಸ್ತರಣೆಯನ್ನು ತಡೆಯಯುವ ಹಲವು ಮಹತ್ವದ ಕ್ರಮಗಳನ್ನು ಈ ಯೋಜನೆ ಮೂಲಕ ಕೈಗೊಳ್ಳಲಿದ್ದೇವೆ. ದೇಶದ ಯುವ ಜನರು ಈ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು' ಎಂದು ಅವರು ಕರೆ ನೀಡಿದರು.

ಯೋಜನೆ ಪ್ರಮುಖಾಂಶ

- ದೆಹಲಿ, ಹರಿಯಾಣ, ರಾಜಸ್ಥಾನ ಮತ್ತು ಗುಜರಾತಿನ 29 ಜಿಲ್ಲೆಗಳಲ್ಲಿ ವ್ಯಾಪಿಸಿರುವ ಅರಾವಳಿ ಪರ್ವತ ಶ್ರೇಣಿಯ ಸುತ್ತಲಿನ ಐದು ಕಿ.ಮೀ ಬಫರ್ ಪ್ರದೇಶದಲ್ಲಿ ಹಸಿರು ಹೊದಿಕೆಯ ವಿಸ್ತರಣೆ
- ಈ ರಾಜ್ಯಗಳಲ್ಲಿ ವಾಯು ಮಾಲಿನ್ಯ ತಗ್ಗಿಸಲು ನೆರವಾಗುವುದರ ಜತೆಗೆ, ಸಾರ ಕಳೆದುಕೊಂಡಿರುವ 2.60 ಕೋಟಿ ಹೆಕ್ಟೇರ್ ಪ್ರದೇಶವನ್ನು 2030ರ ವೇಳೆಗೆ ಪುನಶ್ಚೇತನಗೊಳಿಸುವ ಗುರಿ
- ಅರಾವಳಿ ಪ್ರದೇಶದಲ್ಲಿ ಅರಣ್ಯೀಕರಣ, ಜಲ ಮೂಲಗಳ ಪುನಶ್ಚೇತನದ ಮೂಲಕ ಜೀವವೈವಿಧ್ಯದ ಸಂರಕ್ಷಣೆ ಮತ್ತು ವೃದ್ಧಿಗೆ ಕ್ರಮ
- ಸ್ಥಳೀಯ ಸಮುದಾಯಗಳಿಗೆ ಉದ್ಯೋಗಾವಕಾಶ ಸೃಷ್ಟಿಯ ಜತೆಗೆ, ಅವರ ಆದಾಯ ಹೆಚ್ಚಿಸಲು ನೆರವು
- ಈ 29 ಜಿಲ್ಲೆಗಳಲ್ಲಿ ಸುಮಾರು 1,000 ನರ್ಸರಿಗಳ ಅಭಿವೃದ್ಧಿಗೆ ಒತ್ತು
- ಥಾರ್ ಮರುಭೂಮಿಯ ವಿಸ್ತರಣೆ ತಡೆಯುವ ಮೂಲಕ ದಹೆಲಿ, ಜೈಪುರ, ಗುರುಗ್ರಾಮ ಸೇರಿ ಹಲವು ನಗರಗಳನ್ನು ಅಪಾಯದಿಂದ ತಪ್ಪಿಸುವ ಗುರಿ

ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿನ ತಮ್ಮ ನಿವಾಸದಲ್ಲಿ ಗುರುವಾರ 'ಸಿಂಧೂರ' ಸಸಿ ನೆಟ್ಟು, ನೀರೆರೆದರು —ಪಿಟಿಐ ಚಿತ್ರ

ಅಪಾಯಕ್ಕೆ ಸಿಲುಕಿರುವ ಅರಾವಳಿ

ಚಂಬಲ್, ಸಬರಮತಿ ಮತ್ತು ಲುನಿಯಂಥ ಪ್ರಮುಖ ನದಿಗಳು ಅರಾವಳಿ ಪರ್ವತ ಶ್ರೇಣಿಯಲ್ಲಿ ಹರಿಯುತ್ತವೆ. ಅರಣ್ಯ ಪ್ರದೇಶ, ಹುಲ್ಲುಗಾವಲು ಮತ್ತು ಜೌಗು ಪ್ರದೇಶಗಳಿಂದ ಕೂಡಿರುವ ಈ ಶ್ರೇಣಿಯಲ್ಲಿ ಹಲವು ಬಗೆಯ ಪ್ರಾಣಿ, ಪಕ್ಷಿ ಜೀವಸಂಕುಲ ಆಶ್ರಯ ಪಡೆದಿವೆ. ಅಲ್ಲದೆ ಅಳಿವಿನಂಚಿನಲ್ಲಿ ಇರುವ ಹಲವು ಪ್ರಭೇದದ ಸಸ್ಯ ಮತ್ತು ಪ್ರಾಣಿಗಳೂ ಇಲ್ಲಿ ನೆಲೆ ಕಂಡುಕೊಂಡಿವೆ. ಈ ಶ್ರೇಣಿಯಲ್ಲಿ ಅರಣ್ಯ ನಾಶ, ಗಣಿಗಾರಿಕೆ, ಜಾನುವಾರುಗಳ ಮೇಯಿಸುವಿಕೆ, ಅರಣ್ಯ ಒತ್ತುವರಿ, ನದಿಗಳ ಬತ್ತುವಿಕೆಯಿಂದ ಮರುಭೂಮಿ ಪ್ರದೇಶ ವಿಸ್ತರಿಸುತ್ತಿದೆ. ಇದರಿಂದ ಇಲ್ಲಿನ ವನ್ಯ ಜೀವಿ ಸಂಕುಲ ಅಪಾಯಕ್ಕೆ ಸಿಲುಕುತ್ತಿವೆ. ಸಾರ ಕಳೆದುಕೊಂಡಿರುವ ಈ ಭಾಗದ ಭೂ ಪ್ರದೇಶದ ಪೈಕಿ ರಾಜಸ್ಥಾನದಲ್ಲಿ ಶೇ 81, ಗುಜರಾತಿನಲ್ಲಿ ಶೇ 15.8, ಹರಿಯಾಣದಲ್ಲಿ ಶೇ 1.7 ಹಾಗೂ ದೆಹಲಿಯಲ್ಲಿ ಶೇ 1.6ರಷ್ಟು ಪಾಲನ್ನು ಹೊಂದಿವೆ.



ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಕಾಲ್ತುಳಿತ: ಎಫ್‌ಐಆರ್‌ನಲ್ಲಿ ಏನಿದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಕಾರ್ಯಕ್ರಮ ನಡೆಸಲು ಆರ್‌ಸಿಬಿ ಫ್ರಾಂಚೈಸಿ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಸಂಸ್ಥೆ (ಈವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಅನುಮತಿ ನೀಡಲು ನಿರಾಕರಿಸಿದ್ದರೂ ಕಾರ್ಯಕ್ರಮ ನಡೆಸಲಾಗಿದೆ ಎಂದು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ.

ಠಾಣೆಯ ಇನ್‌ಸ್ಪೆಕ್ಟರ್ ಎ.ಕೆ.ಗಿರೀಶ್ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

'ಕೆಎಸ್‌ಸಿಎ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶುಭೇಂದ್ ಘೋಷ್ ಅವರು ಮಂಗಳವಾರ ಸಂಜೆ 6 ಗಂಟೆಗೆ ಬಂದು, ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಆರ್‌ಸಿಬಿ ವಿಜಯೋತ್ಸವ ಆಚರಣೆಗೆ ಬಂದೋಬಸ್ತ್ ಕಲ್ಪಿಸುವಂತೆ ಮನವಿ ಸಲ್ಲಿಸಿದ್ದರು. ಬಂದೋಬಸ್ತ್ ಕಲ್ಪಿಸಲು ಸಮಯ ಬೇಕಿದೆ ಎಂದು ಹೇಳಿ ಮನವಿಯನ್ನು ನಿರಾಕರಿಸ-ಲಾಗಿತ್ತು. ಆದರೂ, ಸಲಹೆಯನ್ನು ಒಪ್ಪದೇ ಕೆಎಸ್‌ಸಿಎ, ಡಿಎನ್‌ಎ ಹಾಗೂ ಆರ್‌ಸಿಬಿ ಫ್ರಾಂಚೈಸಿಯವರು ಸಮಾನ ಉದ್ದೇಶದಿಂದ ಬುಧವಾರ ಸಂಜೆ ಕಾರ್ಯಕ್ರಮ ನಡೆಸಲೇಬೇಕೆಂದು ಒತ್ತಾಯ ಮಾಡಿದ್ದರು' ಎಂಬುದನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಬುಧವಾರ ಬೆಳಿಗ್ಗೆಯಿಂದಲೇ ಆರ್‌ಸಿಬಿ ಫ್ರಾಂಚೈಸಿಯವರು ಅಧಿಕೃತ 'ಎಕ್ಸ್' ಖಾತೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆಯದೇ ನಗರದಲ್ಲಿ ವಿಜಯೋತ್ಸವ ಹಾಗೂ ವಿಕ್ಟರಿ ಪರೇಡ್‌ಗೆ ಸಾರ್ವಜನಿಕರು ಹಾಗೂ ಅಭಿಮಾನಿಗಳು ಸೇರಬೇಕೆಂದು ಏಕಪಕ್ಷೀಯ ನಿರ್ಧಾರ ಕೈಗೊಂಡು 'ಎಕ್ಸ್' ಮಾಡಿದ್ದರು. ಮಾಧ್ಯಮಗಳಲ್ಲಿ ಈ ವಿಚಾರವು ವ್ಯಾಪಕವಾಗಿ ಪ್ರಚಾರ ಆಗಿ, ಲಕ್ಷಾಂತರ ಜನರು ಸೇರುವ ಸಂಭವ ಇತ್ತು. ಆಗ ಬಂದೋಬಸ್ತ್ ಮಾಡಿಕೊಳ್ಳಲಾಯಿತು' ಎಂಬ ಅಂಶ ಎಫ್‌ಐಆರ್‌ನಲ್ಲಿದೆ.

'ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ, ಥಣಿಸಂದ್ರದಲ್ಲಿ ತರಬೇತಿಯಲ್ಲಿದ್ದ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ಕರೆಸಿಕೊಳ್ಳಲಾಯಿತು. ಕ್ರೀಡಾಂಗಣದ ಬಳಿ ಏಕಾಏಕಿ ಲಕ್ಷಾಂತರ ಜನರು ಜಮಾವಣೆಗೊಂಡರು. ಕ್ರೀಡಾಂಗಣದ ಒಳಕ್ಕೆ ತೆರಳಲು ಆಯೋಜಕರು ಸೂಕ್ತ ವ್ಯವಸ್ಥೆ ಮಾಡಿರಲಿಲ್ಲ. ಇದೇ ದುರಂತಕ್ಕೆ ಕಾರಣವಾಗಿದೆ' ಎಂದು ವಿವರಿಸಲಾಗಿದೆ.

'ಕರ್ತವ್ಯದಲ್ಲಿದ್ದ ಪೊಲೀಸರು ಮೈಕ್‌ನಲ್ಲಿ ಮನವಿ ಮಾಡಿದ್ದರೂ ಅದನ್ನು ಧಿಕ್ಕರಿಸಿ ಬ್ಯಾರಿಕೇಡ್ ತಳ್ಳಿ ಒಳಕ್ಕೆ ನುಗ್ಗಲು ಯತ್ನಿಸಿದರು. ಆಗ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, 64 ಮಂದಿ ಗಾಯಗೊಂಡಿದ್ದಾರೆ. ಘಟನೆಯಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯೂ ಗಾಯಗೊಂಡಿದ್ದಾರೆ' ಎಂದು ಉಲ್ಲೇಖಿಸಲಾಗಿದೆ.

ಆರ್‌ಸಿಬಿ ಗೆಲುವಿನ ಸಂಭ್ರಮದಲ್ಲಿ ಪಾಲ್ಗೊಳ್ಳಲು ಬುಧವಾರ ಜನರು ಸಾಗರೋಪಾದಿಯಲ್ಲಿ ಬಂದಿದ್ದರಿಂದ ವಿಧಾನಸೌಧದ ಉದ್ಯಾನದಲ್ಲಿ ಗ್ರಿಲ್‌ಗಳು ಮುರಿದು ಬಿದ್ದಿವೆ ಪ್ರಜಾವಾಣಿ ಚಿತ್ರ

ಅಭಿಪ್ರಾಯ ಕೇಳಿದ್ದ ಸಿಬ್ಬಂದಿ ಇಲಾಖೆ

ಬೆಂಗಳೂರು: ಆರ್‌ಸಿಬಿ ತಂಡ ಐಪಿಎಲ್ ಟ್ರೋಫಿ ಗೆದ್ದರೆ ವಿಧಾನಸೌಧ ಭವ್ಯ ಮೆಟ್ಟಿಲುಗಳ ಮುಂಭಾಗ ಕಾರ್ಯಕ್ರಮ ಏರ್ಪಡಿಸುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಯೊಬ್ಬರು ಜೂನ್ 3ರಂದು ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿಗೆ ಅಭಿಪ್ರಾಯ ಕೇಳಿರುವ ಪತ್ರವು ಜಾಲತಾಣದಲ್ಲಿ ಹರಿದಾಡುತ್ತಿದೆ.

ಆಟಗಾರರನ್ನು ಮುಖ್ಯಮಂತ್ರಿಯವರು ಸನ್ಮಾನಿಸುವ ಕಾರ್ಯಕ್ರಮವನ್ನು ಏರ್ಪಡಿಸಲು ಅನುಮತಿ ನೀಡುವ ಕೋರಿಕೆಯ ಕುರಿತು ಅಭಿಪ್ರಾಯ ನೀಡುವಂತೆ ಪತ್ರದಲ್ಲಿ ಉಲ್ಲೇಖವಾಗಿದೆ. ಆದರೆ ಈ ಪತ್ರವನ್ನು ಅಧಿಕೃತವಾಗಿ ದೃಢಪಡಿಸಿಲ್ಲ.

'ಬೃಹತ್ ಸಮಾರಂಭಗಳಿಗೆ ಹೊಸ ಎಸ್‌ಒಪಿ'

ಬೆಂಗಳೂರು: 'ದೊಡ್ಡ ಮಟ್ಟದ ಸಭೆ, ಸಮಾರಂಭ ಮತ್ತು ವಿಜಯೋತ್ಸವ ಕಾರ್ಯಕ್ರಮಗಳಿಗೆ ಹೊಸ ಎಸ್‌ಒಪಿ (ಪ್ರಮಾಣೀಕೃತ ಕಾರ್ಯಾಚರಣೆ ನಿಯಮಗಳು) ರೂಪಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

> **ವಿಧಾನಸೌಧದ ಎದುರು ಒಂದು ಲಕ್ಷ ಜನ ಸೇರುತ್ತಾರೆ ಎಂದು ಅಂದಾಜಿಸಲಾಗಿತ್ತು. ಕ್ರೀಡಾಂಗಣದಲ್ಲಿ ಒಳಗೆ ಮತ್ತು ಹೊರಗೆ 3 ಲಕ್ಷ ಜನ ಸೇರಿದ್ದರು. ಇದು ದುರಂತಕ್ಕೆ ಕಾರಣ**
> **ಜಿ.ಪರಮೇಶ್ವರ,** ಗೃಹ ಸಚಿವ

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, 'ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತದಂತಹ ಘಟನೆಗಳು ಮತ್ತೆ ನಡೆಯಬಾರದೆಂಬ ಕಾರಣಕ್ಕೆ ಗೃಹ ಇಲಾಖೆಯಿಂದ ಒಂದು ಹೊಸ ಎಸ್‌ಒಪಿ ಮಾಡುತ್ತೇವೆ. ಕೆಲವು ಸೂಚನೆಗಳನ್ನೂ ಕೊಡುತ್ತೇವೆ' ಎಂದರು.

'ಇನ್ನು ಮುಂದೆ ಯಾವುದೇ ದೊಡ್ಡ ಸಮಾರಂಭ, ಸಭೆ, ವಿಜಯೋತ್ಸವ ಆಯೋಜಿಸುವ ಕುರಿತಂತೆ ಪೊಲೀಸ್ ಇಲಾಖೆಯಿಂದ ಏನು ನಿರ್ದೇಶನ ಬರುತ್ತದೊ ಅದರ ಚೌಕಟ್ಟಿನಲ್ಲಿ ಕಾರ್ಯ ಕ್ರಮಗಳನ್ನು ಮಾಡಬೇಕು' ಎಂದರು.

'ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಎಲ್ಲಿ ಮತ್ತು ಏನು ಲೋಪ ಆಗಿದೆ ಎನ್ನುವುದು ಗೊತ್ತಾದ ಬಳಿಕ ಯಾರಿಂದ ತಪ್ಪು ಆಗಿದೆ ಎಂಬುದು ಗೊತ್ತಾಗಲಿದೆ. ಘಟನೆಗೆ ಸಂಬಂಧಿಸಿದಂತೆ ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಿ ಲೋಪವಾಗಿದೆ ಎಂಬುದನ್ನೂ ಪರಿಶೀಲಿಸುತ್ತೇವೆ' ಎಂದರು.

'ಪರಮೇಶ್ವರ ಮೆರವಣಿಗೆ ಬೇಡ ಎಂದಿದ್ದರು'

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವ ಮೆರವಣಿಗೆ ಬೇಡ ಎಂದು ಗೃಹ ಸಚಿವ ಪರಮೇಶ್ವರ ಹೇಳಿದ್ದರು. ತನಿಖಾ ವರದಿಯಲ್ಲಿ ಸತ್ಯಾಂಶ ಬಹಿರಂಗ ಆಗಲಿದೆ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಜಯೋತ್ಸವದಲ್ಲಿ ಅಷ್ಟೊಂದು ಸಂಖ್ಯೆಯಲ್ಲಿ ಜನ ಸೇರುವ ನಿರೀಕ್ಷೆ ಯಾರಿಗೂ ಇರಲಿಲ್ಲ' ಎಂದರು.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಬುಧವಾರ ಸಂಭವಿಸಿದ ಕಾಲ್ತುಳಿತದಲ್ಲಿ ಗಾಯಗೊಂಡು, ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಭೇಟಿಯಾಗಿ ಆರೋಗ್ಯ ವಿಚಾರಿಸಿದರು

ನೂತನ ಪೊಲೀಸ್ ಕಮಿಷನರ್ ಆಗಿ ಸೀಮಂತ್ ಕುಮಾರ್ ಸಿಂಗ್

ಬೆಂಗಳೂರು: ಬೆಂಗಳೂರು ನಗರದ ನೂತನ ಪೊಲೀಸ್ ಕಮಿಷನರ್ ಆಗಿ ಸೀಮಂತ್ ಕುಮಾರ್ ಸಿಂಗ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಗುರುವಾರ ರಾತ್ರಿ ಆದೇಶ ಹೊರಡಿಸಿದೆ.

ಪೊಲೀಸ್ ಕಮಿಷನರ್ ಆಗಿದ್ದ ಬಿ.ದಯಾನಂದ ಅವರನ್ನು ಅಮಾನತು ಮಾಡಲಾಗಿದ್ದು, ಆ ಸ್ಥಾನಕ್ಕೆ ಹೊಸಬರನ್ನು ನೇಮಕ ಮಾಡಲಾಗಿದೆ.

ಸೀಮಂತ್ ಕುಮಾರ್ ಸಿಂಗ್ ಅವರು ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್)ನ ಎಡಿಜಿಪಿ ಆಗಿದ್ದರು. ಡಿಸಿಆರ್‌ಇ ಎಡಿಜಿಪಿ ಅರುಣ್ ಚಕ್ರವರ್ತಿ, ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್, ಗುಪ್ತದಳದ ಎಡಿಜಿಪಿ ಹಾಗೂ ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಕಾನೂನು ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ, ಸೀಮಂತ್ ಕುಮಾರ್ ಸಿಂಗ್ ಮಧ್ಯೆ ಪೊಲೀಸ್ ಕಮಿಷನರ್ ಹುದ್ದೆಗೆ ಪೈಪೋಟಿ ಇತ್ತು.

ವಕೀಲರು, ಸಾಮಾಜಿಕ ಕಾರ್ಯಕರ್ತ ದೂರು

ಸಿ.ಎಂ, ಡಿ.ಸಿ.ಎಂ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್, ಕೆಎಸ್‌ಸಿಎ ಹಾಗೂ ಆರ್‌ಸಿಬಿ ಫ್ರಾಂಚೈಸಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ವಕೀಲ ನಟರಾಜ್ ಶರ್ಮಾ ಎಂಬುವರು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ವಕೀಲರಾದ ರಾಜವರ್ಧನ್ ರೆಡ್ಡಿ, ಆರ್.ಎಲ್.ಎನ್. ಮೂರ್ತಿ ಹಾಗೂ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಪ್ರತ್ಯೇಕವಾಗಿ ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದಾರೆ.

'ಅಜಾಗರೂಕತೆ, ನಿರ್ಲಕ್ಷ್ಯದಿಂದ ವಿಜಯೋತ್ಸವದ ವೇಳೆ ಉಂಟಾದ ದುರಂತದಿಂದ 11 ಮಂದಿ ಮೃತಪಟ್ಟಿದ್ದಾರೆ. ಮುಂಜಾಗ್ರತಾ ಕ್ರಮ ಕೈಗೊಳ್ಳದ ಪರಿಣಾಮ ದುರಂತ ಸಂಭವಿಸಿದೆ. ಇದಕ್ಕೆ ನೇರ ಹೊಣೆಯನ್ನು ರಾಜ್ಯ ಸರ್ಕಾರ ಹೊರಬೇಕು. ಹೀಗಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆಎಸ್‌ಸಿಎ ಹಾಗೂ ಆರ್‌ಸಿಬಿ ಫ್ರಾಂಚೈಸಿ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು' ಎಂದು ದೂರಿನಲ್ಲಿ ವಕೀಲರು ತಿಳಿಸಿದ್ದಾರೆ.

'ವಿಜಯೋತ್ಸವದ ಸಂಬಂಧ ಬುಧವಾರ ಮಧ್ಯಾಹ್ನದಿಂದಲೇ ಕಾರ್ಯಕ್ರಮ ಪಟ್ಟಿ ಹರಿದಾಡುತ್ತಿತ್ತು. ಶಿವಕುಮಾರ್ ಅವರೇ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತೆರಳಿ ಆರ್‌ಸಿಬಿ ಆಟಗಾರರನ್ನು ಬರಮಾಡಿಕೊಂಡು ವಿಧಾನಸೌಧಕ್ಕೆ ಕರೆತಂದಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾವಣೆಯಾಗುತ್ತಿದ್ದರೂ ಅಧಿಕ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಿರಲಿಲ್ಲ. ಅಗತ್ಯಕ್ಕೆ ಅನುಗುಣವಾಗಿ ಬ್ಯಾರಿಕೇಡ್ ಹಾಕಿರಲಿಲ್ಲ. ಆಂಬುಲೆನ್ಸ್‌ಗಳ ಸಂಖ್ಯೆ ಹೆಚ್ಚಿರಲಿಲ್ಲ' ಎಂದು ದೂರಿನಲ್ಲಿ ಅವರು ಆರೋಪಿಸಿದ್ದಾರೆ.

ದುರಂತಕ್ಕೆ ಕಾರಣರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿಯ ಪದಾಧಿಕಾರಿಗಳು ಹಾಗೂ ಇತರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 106 ರ ಪ್ರಕಾರ ಮೊಕದ್ದಮೆ ದಾಖಲಿಸಿ, ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರಿನಲ್ಲಿ ಮನವಿ ಮಾಡಿದ್ದಾರೆ.

'ನಮ್ಮ ಮೆಟ್ರೊ'ದಲ್ಲಿ ಪ್ರಯಾಣ: ಸಾರ್ವಕಾಲಿಕ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ಬುಧವಾರ 9.66 ಲಕ್ಷ ಪ್ರಯಾಣಿಕರು ಸಂಚರಿಸಿದ್ದಾರೆ. ಇದು ಒಂದು ದಿನದ ಪ್ರಯಾಣಿಕರ ಸಂಖ್ಯೆಯಲ್ಲಿನ ಸಾರ್ವಕಾಲಿಕ ದಾಖಲೆಯಾಗಿದೆ.

ಐಪಿಎಲ್ ವಿಜೇತರಾದ ಆರ್‌ಸಿಬಿ ತಂಡಕ್ಕೆ ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮಕ್ಕೆ ಜನಸಾಗರವೇ ಹರಿದುಬಂದಿತ್ತು. ನಾಲ್ಕೂ ದಿಕ್ಕುಗಳಿಂದ ಜನರು ಮೆಟ್ರೊದಲ್ಲಿ ಬಂದಿದ್ದರು.

9,66,732 ಪ್ರಯಾಣಿಕರು ಮೆಟ್ರೊದಲ್ಲಿ ಪ್ರಯಾಣಿಸಿದ್ದರು. ಮಾರ್ಗ 1ರಲ್ಲಿ (ನೇರಳೆ) 4,78,334 ಪ್ರಯಾಣಿಕರು ಮತ್ತು ಮಾರ್ಗ 2ರಲ್ಲಿ (ಹಸಿರು) 2,84,674 ಜನರು ಪ್ರಯಾಣಿಸಿದ್ದರು. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಇಂಟರ್‌ಚೇಂಜ್ ನಿಲ್ದಾಣದಲ್ಲಿ 2,03,724 ಪ್ರಯಾಣಿಕರು ಪ್ರಯಾಣಿಸಿದ್ದಾರೆ ಎಂದು ಬೆಂಗಳೂರು ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಅಧಿಕಾರಿಗಳು ತಿಳಿಸಿದ್ದಾರೆ.

2024ರ ಡಿಸೆಂಬರ್ 7ರಂದು 9.20 ಲಕ್ಷ ಪ್ರಯಾಣಿಕರು ಸಂಚರಿಸಿರುವುದು ಇದುವರೆಗಿನ ದಾಖಲೆಯಾಗಿತ್ತು. ಅದಕ್ಕಿಂತ ಹಿಂದೆ ಆಗಸ್ಟ್ 14ರಂದು 9.17 ಲಕ್ಷ ಜನರು ಪ್ರಯಾಣಿಸುವ ಮೂಲಕ ಮೊದಲ ಬಾರಿಗೆ 9 ಲಕ್ಷ ದಾಟಿತ್ತು. 2025ರ ಏಪ್ರಿಲ್ 17ರಂದು 9.08 ಲಕ್ಷ ಜನ ಸಂಚರಿಸಿರುವುದು ಈ ವರ್ಷದ ದಾಖಲೆಯಾಗಿತ್ತು. ಏಪ್ರಿಲ್‌ನಲ್ಲಿ ದಿನಕ್ಕೆ ಸರಾಸರಿ 7.27 ಲಕ್ಷ, ಮೇ ತಿಂಗಳಲ್ಲಿ ಸರಾಸರಿ 7.30 ಲಕ್ಷ ಜನರು ಸಂಚರಿಸಿದ್ದರು.

ಐಪಿಎಲ್ 18ನೇ ಆವೃತ್ತಿಯ ಫೈನಲ್ ಪಂದ್ಯ ಮಂಗಳವಾರ ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದಿದ್ದರೂ ಬೆಂಗಳೂರಿನ ವಿವಿಧೆಡೆ ಪ್ರದರ್ಶನ ವೀಕ್ಷಣೆಗೆ ಬೃಹತ್ ಎಲ್‌ಇಡಿ ಸ್ಕ್ರೀನ್‌ಗಳನ್ನು ಹಾಕಿದ್ದರಿಂದ ಮಂಗಳವಾರವೂ ಜನಸಂಚಾರ ಹೆಚ್ಚಾಗಿತ್ತು. ಅಂದು ಮೆಟ್ರೊದಲ್ಲಿ 8.37 ಲಕ್ಷ ಮಂದಿ ಸಂಚರಿಸಿದ್ದರು.

ಪ್ರಾಣ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸರ್ವಜ್ಞನಗರ ಕ್ಷೇತ್ರದ ಲಿಂಗರಾಜಪುರ ಗ್ರಾಮದ ಶ್ರೀಸಂತಾನ ವೇಣುಗೋಪಾಲಸ್ವಾಮಿ ಹಾಗೂ ಶ್ರೀ ಮುತ್ಯಾಲಮ್ಮದೇವಿಯ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಗುರುವಾರ ನಡೆಯಿತು.

ಲಿಂಗರಾಜಪುರ ಗ್ರಾಮದ ಶ್ರೀ ಸಂತಾನ ವೇಣುಗೋಪಾಲಸ್ವಾಮಿ ದೇವಸ್ಥಾನ

ಶ್ರೀಸಂತಾನವೇಣುಗೋಪಾಲಸ್ವಾಮಿ ಹಾಗೂ ಶ್ರೀಮುತ್ಯಾಲಮ್ಮದೇವಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವು ನೇತ್ರೋನ್ಮಿಲನ, ಕಲಾವೃದ್ಧಿ ಹೋಮ, ಮಹಾ ಪೂರ್ಣಾಹುತಿ, ಮಹಾಕುಂಭಾಭಿಷೇಕದೊಂದಿಗೆ ನಡೆಯಿತು.

ದೇವಸ್ಥಾನದ ಟ್ರಸ್ಟಿ ಪಟೇಲ್ ರವಿ ಮಾತನಾಡಿ, 'ಪ್ರಾಣ ಪ್ರತಿಷ್ಠಾಪನೆ ಕಾರ್ಯದಲ್ಲಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು. ಅನ್ನದಾನ ಏರ್ಪಡಿಸಲಾಗಿತ್ತು' ಎಂದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ, ಇಂಧನ ಸಚಿವ ಕೆ.ಜೆ.ಜಾರ್ಜ್, ಸರ್ವಜ್ಞನಗರ ಸಾಂಸ್ಕೃತಿಕ ಹಾಗೂ ಕ್ರೀಡಾ ಅಸೋಸಿಯೇಷನ್ ಅಧ್ಯಕ್ಷ ರಾಣಾ ಜಾರ್ಜ್, ಆರ್. ಶ್ರೀಧರ್, ಪಟೇಲ್ ರವಿ, ಕನ್ನಡ ರಾಮು ಪಾಲ್ಗೊಂಡಿದ್ದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಬೆಂಗಳೂರು ಹವಾಮಾನ ಕ್ರಿಯಾ ಹಾಗೂ ಮರುಚೇತರಿಕೆ ಯೋಜನೆ | ಹವಾಮಾನ ಕ್ರಿಯಾ ಕೋಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ವಿಶ್ವ ಪರಿಸರ ದಿನಾಚರಣೆ 2025
ಅಂಗವಾಗಿ
ಬೆಂಗಳೂರು ಹವಾಮಾನ ಕ್ರಿಯಾ ಕೋಶದ ವತಿಯಿಂದ ಮಹತ್ವಪೂರ್ಣ ಕಾರ್ಯಕ್ರಮಕ್ಕೆ ಚಾಲನೆ

ದಿನಾಂಕ : 6ನೇ ಜೂನ್ 2025, ಶುಕ್ರವಾರ, ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ
ಸ್ಥಳ: ಯು.ಆರ್. ರಾವ್ ಭವನ, ಜವಾಹರಲಾಲ್ ನೆಹರು ತಾರಾಲಯ, ಬೆಂಗಳೂರು

YouTube Live link

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಸಂರಕ್ಷಿಸಿ"

- ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವವರಿಗೆ 'ಬ್ಲೂ ಗ್ರೀನ್' ಪ್ರಶಸ್ತಿ ಪ್ರದಾನ
- ಶಾಲಾ-ಕಾಲೇಜುಗಳಲ್ಲಿ ಹವಾಮಾನ ಕ್ರಿಯಾ ಬಳಗದ ಉಪ ಕ್ರಮಗಳ 'ವೆಬ್ ಸೈಟ್' ಅನಾವರಣ
- ಕೈಪಿಡಿ: ಹವಾಮಾನ ಕ್ರಿಯಾ ಕೋಶದ ಚಟುವಟಿಕೆಗಳ ಕೈಪಿಡಿ ಬಿಡುಗಡೆ
- ಪ್ರದರ್ಶನ: 60 ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪರಿಸರ ಸಂರಕ್ಷಣೆ ಕುರಿತ ಪ್ರದರ್ಶನ ಆಯೋಜನೆ

"ಸ್ವಚ್ಛ ಬೆಂಗಳೂರು ಹಸಿರು ಬೆಂಗಳೂರು"
ನಿರ್ಮಾಣಕ್ಕೆ ಮಹತ್ವದ ಹೆಜ್ಜೆ

ಬೃಹತ್ ಸ್ವಚ್ಛತಾ ಅಭಿಯಾನ
9448197197
ನಗರದ ಸ್ವಚ್ಛತೆಯ ದೃಷ್ಟಿಯಿಂದ ಪ್ರತ್ಯೇಕ ದೂರು ಕೇಂದ್ರ ಸ್ಥಾಪನೆ, ಮೇಲ್ಕಂಡ ವ್ಯಾಟ್ಸಪ್ ಸಂಖ್ಯೆಗೆ ದೂರು ದಾಖಲಿಸಿ. ನಿಗದಿತ ಅವಧಿಯದಲ್ಲಿ ತ್ಯಾಜ್ಯ / ಕಸ ವಿಲೇವಾರಿ ಮಾಡಲಾಗುವುದು.

ವ್ಯಾಟ್ಸಪ್ ಮೂಲಕ ದೂರು ದಾಖಲಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಸಹಾಯವಾಣಿ ಸಂಖ್ಯೆ 1533 ಗೆ ಕರೆ ಮಾಡುವ ಮೂಲಕ ಸಂಪರ್ಕಿಸಿ | ಪಾಲಿಕೆ ಜಾಲತಾಣದ www.bbmp.gov.in ಮುಖಾಂತರ ಸಹಾಯ ಪಡೆದುಕೊಳ್ಳಿ | ನಮ್ಮ ಬೆಂಗಳೂರು ಮೊಬೈಲ್ ಅಪ್ಲಿಕೇಷನ್ (ಸಹಾಯ ಆಪ್) https://play.google.com/store/apps/details?id=com.benscl.onecityoneapp ಮೂಲಕ ದೂರು ನೀಡಿ

ಸ್ವಚ್ಛತಾ ಜಾಗೃತಿ ಅಭಿಯಾನ ಕಾರ್ಯಕ್ರಮ ನಗರದ ಎಲ್ಲಾ ವಾರ್ಡ್‌ಗಳಲ್ಲಿ ಆಯೋಜನೆ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ

ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿ ನಗರದ ಸೌಂದರ್ಯವನ್ನು ಕಾಪಾಡಲು ಕೈ ಜೋಡಿಸಿ

ಬೆಂಗಳೂರು ಹವಾಮಾನ ಕ್ರಿಯಾ ಕೋಶ
:ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
bbmpclimateactioncell@gmail.com https://apps.bbmpgov.in/bcap

ಸರ್ವರಿಗೂ ಆದರದ ಸುಸ್ವಾಗತ

ಪ್ರಕಟಣೆ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್. ಆರ್. ಚೌಕ, ಬೆಂಗಳೂರು - 560002

‘ಪರಿಸರಕ್ಕಾಗಿ ನಾವು’ ಸಂಘಟನೆ ಸದಸ್ಯರಿಂದ ಮರಗಳ ರಕ್ಷಣೆಗೆ ಪಣ

368 ಮರಗಳಿಗೆ ‘ವೃಕ್ಷ ರಕ್ಷಾ ಬಂಧನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ 368 ಮರಗಳನ್ನು ಕಡಿಯುವುದನ್ನು ವಿರೋಧಿಸಿ ಪರಿಸರ ಕಾರ್ಯಕರ್ತರು, ಮರಗಳಿಗೆ ‘ವೃಕ್ಷ ರಕ್ಷಾ ಬಂಧನ’ವಾಗಿ ಕೆಂಪು ಪಟ್ಟಿಯನ್ನು ಕಟ್ಟಿದರು.

ವಿಶ್ವ ಪರಿಸರ ದಿನದ ಅಂಗವಾಗಿ ‘ಪರಿಸರಕ್ಕಾಗಿ ನಾವು’ ಸಂಘಟನೆ ಆಯೋಜಿಸಿದ್ದ ‘ವೃಕ್ಷ ರಕ್ಷಾ ಬಂಧನ‘ ಕಾರ್ಯಕ್ರಮದಲ್ಲಿ 368 ಮರಗಳಿಗೆ ರಕ್ಷೆಯ ಪಟ್ಟಿ ಕಟ್ಟಿ, ಸಹಿ ಮಾಡಿ, ಅವುಗಳನ್ನು ಸಂರಕ್ಷಿಸಲು ಆಗ್ರಹಿಸಿದರು.

ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿ, ‘ಹಿಂದಿನ ದಿನಗಳಲ್ಲಿ ಯಾವುದೇ ಮನೆಗಳಲ್ಲಿ ಫ್ಯಾನ್ ಇರುತ್ತಿರಲಿಲ್ಲ. ಇಂದು ಶೌಚಾಲಯದಲ್ಲೂ ಎ.ಸಿ. ಅಳವಡಿಸಿ ಕೊಳ್ಳುತ್ತಿದ್ದಾರೆ. ನಗರದಲ್ಲಿದ್ದ ಕೆರೆಗಳನ್ನು ಹಾಳು ಮಾಡಿದ್ದರಿಂದ ಪರಿಸರ ಹಾಳಾಗಿದೆ. ಅಧಿಕಾರದಲ್ಲಿ ಇರುವವರೇ ರಾಜಕಾಲುವೆಗಳ ಒತ್ತುವರಿ ಮಾಡಲು ಬಿಟ್ಟಿದ್ದಾರೆ’ ಎಂದು ಹೇಳಿದರು.

‘ಪರಿಸರವನ್ನು ರಕ್ಷಿಸಬೇಕಾದ ಕೆಲಸ ಶಾಲಾ–ಕಾಲೇಜಿನಿಂದ ಆರಂಭವಾಗಬೇಕು. ಮಕ್ಕಳಿಗೆ ಪೋಷಕರು, ಶಿಕ್ಷಕರು ಪರಿಸರ ಬಗ್ಗೆ ಹೇಳಿಕೊಡಬೇಕು. ಮರಗಳನ್ನು ಉಳಿಸಬೇಕು’ ಎಂದು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಮಾತನಾಡಿ, ‘ಸಾರ್ವಜನಿಕ ಸ್ವತ್ತನ್ನು ರಕ್ಷಿಸ ಬೇಕಾದ್ದು ಸರ್ಕಾರದ ಇಲಾಖೆಗಳ ಕರ್ತವ್ಯ. ಪಾರಂಪರಿಕವಾದ 368 ಮರಗಳನ್ನು ಕಡಿದು, ಆ ಭೂಮಿಯನ್ನು ಖಾಸಗಿ ಸಂಸ್ಥೆಗೆ ನೀಡುತ್ತಿರುವುದು ಸುಪ್ರೀಂ ಕೋರ್ಟ್ ಆದೇಶಗಳು ಹಾಗೂ ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ಭೂಮಿ ನೀಡಬೇಕಾದರೆ ಕಾನೂನಿಗೆ ತಿದ್ದುಪಡಿಯಾಗಬೇಕು. ಯಾವುದೇ ಮಂತ್ರಿ ಅಥವಾ ಉದ್ಯಮಿ ಹೇಳುತ್ತಾರೆ ಎಂದು ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ಅನುಮತಿ ನೀಡಬಾರದು. ಒಂದು ಮರವನ್ನು ಕಡಿಯಲೂ ನಾವು ಬಿಡುವುದಿಲ್ಲ’ ಎಂದರು.

ಸಾಮಾಜಿಕ ಹೋರಾಟಗಾರ ಎಸ್. ಆರ್.ಹಿರೇಮಠ, ‘ಸಂಸ್ಕೃತಿ, ಸಮಾಜ ಮತ್ತು ಪ್ರಕೃತಿ ನಡುವೆ ಸುಮಧುರ ಸಂಬಂಧವಿರುವ ಅಭಿವೃದ್ಧಿ ನೀತಿಯಿಂದ ಪರಿಸರ ಉಳಿಸಲು ಸಾಧ್ಯವಿದೆ. ಇದಕ್ಕೆ ನೈತಿಕ ನೆಲೆಗಟ್ಟಿನ ಅಗತ್ಯವಿದೆ’ ಎಂದರು.

‘ಆಡಳಿತ ನಡೆಸುವವರು ದುಡ್ಡಿನ ದುರಾಸೆಯಿಂದ 368 ಮರಗಳನ್ನು ಕೊಲೆ ಮಾಡಲು ಹೊರಟಿದ್ದಾರೆ. ವಿಶ್ವ ಪರಿಸರ ದಿನಾಚರಣೆ ಇಂದು ಸಂಕಟದ ದಿನವಾಗಿದೆ. ತಾಪಮಾನ ಹೆಚ್ಚಾಗಿ, ಭೂಮಿ ಬಿಸಿಯಾಗಿದ್ದು, ಬರ, ನೆರೆ, ಭೂಕಂಪಗಳು ಹೆಚ್ಚಾಗುತ್ತಿವೆ. ಮೇ ತಿಂಗಳಲ್ಲಿ ದೊಡ್ಡ ಮಳೆಯ ನಿರೀಕ್ಷೆ ಯಾರಿಗೂ ಇರಲಿಲ್ಲ. ಹವಾಮಾನ ವೈಪರೀತ್ಯದಿಂದ ಹೀಗೆಲ್ಲ ಆಗುತ್ತಿದೆ. ಪರಿಸರವನ್ನು ಉಳಿಸಿಕೊಂಡು, ಸಂರಕ್ಷಿಸಿದರೆ ಮುಂದಿನ ಪೀಳಿಗೆಗೆ ಹಸಿರಿನ ಸಂಪತ್ತು ನೀಡಬಹುದಾಗಿದೆ’ ಎಂದು ‘ಪರಿಸರಕ್ಕಾಗಿ ನಾವು’ ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಹೇಳಿದರು.

ಬೆಂಗಳೂರಿನ ಬೇಲಿಮಠದ ಶಿವರುದ್ರ ಸ್ವಾಮೀಜಿ, ಕಪ್ಪತ್ತಗುಡ್ಡ ನಂದಿವೇರಿ ಮಠದ ಶಿವಕುಮಾರ್ ಸ್ವಾಮೀಜಿ, ಸಾಣೇಹಳ್ಳಿ ಸಿರಿಗೆರೆ ಮಠದ ಪಂಡಿತಾರಾಧ್ಯ ಸ್ವಾಮೀಜಿ, ನಿಡಸೋಸಿ ದುರದುಂಡೇಶ್ವರ ಮಠದ ನಿಜಲಿಂಗೇಶ್ವರ ಸ್ವಾಮೀಜಿ, ಪಾಂಡೋಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ, ಸಾಹಿತಿ ಹಂಪ ನಾಗರಾಜಯ್ಯ, ವಿಜ್ಞಾನ ಲೇಖಕ ನಾಗೇಶ ಹೆಗಡೆ, ಪರಿಸರಕ್ಕಾಗಿ ನಾವು ಸಂಘಟನೆಯ ಗೌರವ ಅಧ್ಯಕ್ಷ ಎಸ್. ಮರಿಸ್ವಾಮಿ, ಕಾರ್ಯಾಧ್ಯಕ್ಷ ಆಂಜನೇಯ ರೆಡ್ಡಿ ಭಾಗವಹಿಸಿದ್ದರು.

‘ಪರಿಸರಕ್ಕಾಗಿ ನಾವು’ ಸಂಘಟನೆ ವತಿಯಿಂದ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ ಮರಕ್ಕೆ ‘ವೃಕ್ಷ ರಕ್ಷಾ ಬಂಧನ’ ಕಟ್ಟಲಾಯಿತು

‘ಕಣ್ಣಿನ ಪೊರೆ ಸಮಸ್ಯೆ ವಯಸ್ಕರಲ್ಲಿ ಹೆಚ್ಚಳ’

ಬೆಂಗಳೂರು: ‘ಅರಿವಿನ ಕೊರತೆ ಯಿಂದಾಗಿ ಕಣ್ಣಿನ ಪೊರೆ ಸಮಸ್ಯೆಯು 50 ವರ್ಷಕ್ಕೂ ಅಧಿಕ ವಯಸ್ಸಿನ ಜನರಲ್ಲಿ ಹೆಚ್ಚುತ್ತಿದೆ’ ಎಂದು ಡಾ. ಅಗರ್‌ವಾಲ್ಸ್ ಐ ಆಸ್ಪತ್ರೆಯ ವೈದ್ಯರು ಕಳವಳ ವ್ಯಕ್ತಪಡಿಸಿದರು.

ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಸದ ಅಂಗವಾಗಿ ಆಸ್ಪತ್ರೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯ ಕ್ರಮದಲ್ಲಿ ‘ರೊಬೊಟಿಕ್ ಕ್ಯಾಟಲಿಸ್’ ಚಿಕಿತ್ಸೆಗೆ ಚಾಲನೆ ನೀಡಲಾಯಿತು. ಈ ವೇಳೆ ಮಾತನಾಡಿದ ಆಸ್ಪತ್ರೆಯ ಪ್ರಾದೇಶಿಕ ಮುಖ್ಯಸ್ಥೆ ಡಾ. ಅರ್ಚನಾ ಎಸ್., ‘ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಸದ ಅಂಗವಾಗಿ ನಗರದ ಡಾ. ಅಗರ್‌ವಾಲ್ಸ್ ಐ ಆಸ್ಪತ್ರೆಗಳಲ್ಲಿ ಉಚಿತವಾಗಿ ಈ ತಿಂಗಳು ಪೂರ್ತಿ ಕಣ್ಣಿನ ಪೊರೆ ತಪಾಸಣೆ ಶಿಬಿರ ನಡೆಸಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕಣ್ಣಿನ ಪೊರೆ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ವಯೋ ಸಹಜ ಸಮಸ್ಯೆಯಾದ ಇದನ್ನು ನಿರ್ಲಕ್ಷಿಸಿ ದರೆ ದೃಷ್ಟಿ ನಷ್ಟವಾಗಬಹುದು’ ಎಂದು ಹೇಳಿದರು.

‘40 ವರ್ಷಕ್ಕೂ ಹೆಚ್ಚು ವಯಸ್ಸಿ ನವರು ಕಾಲಕಾಲಕ್ಕೆ ಕಣ್ಣಿನ ತಪಾಸಣೆ ಮಾಡಿಸಿಕೊಂಡು, ಚಿಕಿತ್ಸೆ ಪಡೆದುಕೊಳ್ಳ ಬೇಕು. 2022–23ನೇ ಸಾಲಿನಲ್ಲಿ ರಾಜ್ಯದಲ್ಲಿ 4.2 ಲಕ್ಷ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಇದು ಸಮಸ್ಯೆಯ ತೀವ್ರತೆಯನ್ನು ಬಿಂಬಿಸುತ್ತದೆ’ ಎಂದರು.

ಆಸ್ಪತ್ರೆಯ ಬೆಂಗಳೂರಿನ ಕ್ಲಿನಿಕಲ್ ಸೇವೆಗಳ ವಿಭಾಗದ ಪ್ರಾದೇಶಿಕ ಮುಖ್ಯಸ್ಥ ಡಾ. ಶ್ರೀಪತಿ, ‘ಕಣ್ಣಿನ ಪೊರೆ ಸಮಸ್ಯೆಗೆ ಶಸ್ತ್ರಚಿಕಿತ್ಸೆಯೇ ಪರಿಹಾರ. ಇತ್ತೀಚಿನ ವರ್ಷಗಳಲ್ಲಿ ರೊಬೊಟಿಕ್ ಹಾಗೂ ಲೇಸರ್ ಆಧಾರಿತ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ’ ಎಂದರು.

‘ಸಂಸ್ಕರಿಸಿದ ನೀರಿನ ಬಳಕೆ ಕಡ್ಡಾಯ’

ಕಾನೂನು ಜಾರಿ ಅಗತ್ಯ: ಅ.ನ. ಯಲ್ಲಪ್ಪರೆಡ್ಡಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಮುಚ್ಚಯಗಳು, ಬೃಹತ್ ವಾಣಿಜ್ಯ ಕಟ್ಟಡಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರು ಬಳಕೆ ಮಾಡುವುದನ್ನು ಕಡ್ಡಾಯಗೊಳಿಸುವ ಕಾನೂನು ಜಾರಿಯಾಗಬೇಕು ಎಂದು ಪರಿಸರ ತಜ್ಞ ಅ.ನ. ಯಲ್ಲಪ್ಪರೆಡ್ಡಿ ಅಭಿಪ್ರಾಯಪಟ್ಟರು.

ಬೆಂಗಳೂರು ಜಲಮಂಡಳಿ ಎಂಜಿನಿಯರ್ ಸಂಘದಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ‘ಪ್ಲಾಸ್ಟಿಕ್ ತ್ಯಾಜ್ಯ ಕೊನೆಗಾಣಿಸಿ’ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸಂಸ್ಕರಿಸಿದ ತ್ಯಾಜ್ಯ ನೀರು ಬಳಕೆಯಿಂದ ಕಾವೇರಿ ನೀರಿನ ಅವಲಂಬನೆ ತಪ್ಪಲಿದೆ. ಜೊತೆಗೆ ಬೆಂಗಳೂರಿನ ರಾಜಕಾಲುವೆಗಳಲ್ಲಿ ಮಳೆ ನೀರು ಇಂಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. ಇದರಿಂದ ಅಂತರ್ಜಲ ಮರುಪೂರಣಕ್ಕೆ ಅನುಕೂಲವಾಗಲಿದೆ’ ಎಂದರು.

ಬ್ರಿಗೇಡಿಯರ್ ಡಿ.ಎಂ. ಪೂರ್ವಿಮಠ್, ಜಲಮಂಡಳಿಯ ಆಡಳಿತಾಧಿಕಾರಿ ಮದನ್ ಮೋಹನ್, ಪ್ರಧಾನ ಎಂಜಿನಿಯರ್ ಬಿ. ಸುರೇಶ್, ಬೆಂಗಳೂರು ಜಲಮಂಡಳಿ ಎಂಜಿನಿಯರ್‌ಗಳ ಸಂಘದ ಅಧ್ಯಕ್ಷ ಬಿ.ಸಿ. ಗಂಗಾಧರ್, ಉಪಾಧ್ಯಕ್ಷ ರಮಾನಂದ, ಕಾರ್ಯದರ್ಶಿ ಎ. ರಾಜಶೇಖರ, ಖಜಾಂಚಿ ಎಸ್. ಚಂದ್ರಶೇಖರ್ ಉಪಸ್ಥಿ-ತರಿದ್ದರು.

ಗಿಡ ನೆಟ್ಟರು: ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್‌ನಲ್ಲಿ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಸದಸ್ಯರು ನೂರಾರು ಗಿಡಗಳನ್ನು ನೆಟ್ಟರು.

ಟ್ರಸ್ಟ್‌ನ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್, ಸಂತೋಷ್ ಹಿಂಬಾಳೆ, ಮಲ್ಲೇಶ್, ಶರಣ್ ಸಿ. ಪಾಟೀಲ್, ಮಂಜು, ವಿನಾಯಕ, ನಿತಿನ್, ಚರಣ್, ವೇದಾಂತ್, ಸೋಮಶೇಖರ, ಚೇತನ್, ಮೂರ್ತಿ, ಸುನಿಲ್ ಹಾಗೂ ತಂಡದ ಪ್ರಚಾರ ಸಮಿತಿ ಅಧ್ಯಕ್ಷ ಶ್ರೀಕಾಂತ್ ಕನ್ನಡಿಗ ಮತ್ತು ಪರಿಸರ ಕಾರ್ಯಕರ್ತ ರೇಣುಕಾ ಪ್ರಸಾದ್ ಭಾಗವಹಿಸಿದ್ದರು.

ಅಮ್ಮನ ಹೆಸರಿನಲ್ಲಿ ಗಿಡ: ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಉಪಕ್ರಮ ‘ಏಕ್ ಪೇಡ್ ಮಾ ಕೆ ನಾಮ್’ನ ಭಾಗವಾಗಿ, ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ವಿದ್ಯಾರ್ಥಿಗಳು ಎಂಇಜಿ ಕೇಂದ್ರದಲ್ಲಿ ಗಿಡ ನೆಟ್ಟರು.

ಶಾಲೆಗೆ ರಜೆಯಿದ್ದರೂ ಹಲವು ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗವಹಿಸಿದ್ದರು. ಸೆಪ್ಟೆಂಬರ್ 30 ರವರೆಗೆ ಅಭಿಯಾನ ಮುಂದುರಿಯಲಿದ್ದು, ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಗಿಡ ನೆಡಲಿದ್ದಾರೆ. ಈ ಅಭಿಯಾನಡಿ ನಡೆಸಲಾದ ಎಲ್ಲಾ ನೆಡುತೋಪುಗಳ ಡಿಜಿಟಲ್ ದಾಖಲೆಯನ್ನು ಶಾಲೆಯು ನಿರ್ವಹಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

‘ಪ್ಲಾಸ್ಟಿಕ್ ತ್ಯಾಜ್ಯ ಕೊನೆಗಾಣಿಸಿ’ ಅಭಿಯಾನಕ್ಕೆ ಯಲ್ಲಪ್ಪರೆಡ್ಡಿ ಚಾಲನೆ ನೀಡಿದರು

ವಿವಿಧೆಡೆ ವಿಶ್ವ ಪರಿಸರ ದಿನ ಆಚರಣೆ

ಹೆಸರಘಟ್ಟ ಮುಖ್ಯರಸ್ತೆಯ ಅಸೆಂಟ್ ಪಿಯು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರದ ದಿನದ ಅಂಗವಾಗಿ ಜಾಗೃತಿ ನಡಿಗೆಗೆ ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ಚಾಲನೆ ನೀಡಿದರು

ಪರಿಸರಕ್ಕೆ ಜಡಿದ ಮೊಳೆ...

ಮರಗಳಿಗೆ ಪೋಸ್ಟರ್ ಅಂಟಿಸಲು ಹಾಕಲಾಗಿದ್ದ ಮೊಳೆಗಳನ್ನು ಪರಿಸರ ದಿನಾಚರಣೆಯ ಅಂಗವಾಗಿ ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿಗಳು ಕಿತ್ತುಹಾಕಿದರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಶೈಲ ಭೀಮಸೇನ್ ಬಗಾಡೆ ಅವರು ಗಿಡ ನೆಟ್ಟರು. ಪೂರ್ವ ತಾಲ್ಲೂಕು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ವಿಶ್ವನಾಥ್ ಸವದಿ, ಎಂ.ಮುನಿಯಪ್ಪ ಇದ್ದರು

ಸಿಡೇದಹಳ್ಳಿಯ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸ್ ಮಹಾವಿದ್ಯಾಲಯದಲ್ಲಿ ಗುರುವಾರ ರಾಷ್ಟ್ರೀಯ ಸೇವಾ ಯೋಜನಾ ಘಟಕ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಸಿಗಳನ್ನು ನೆಟ್ಟರು

FARNAZ



ಕೋವಿಡ್: ಮೃತರ ಸಂಖ್ಯೆ 7ಕ್ಕೆ ಏರಿಕೆ

ಬೆಂಗಳೂರು: ದಾವಣಗೆರೆಯಲ್ಲಿ ಮೇ 31 ರಂದು ಮೃತಪಟ್ಟಿದ್ದ 65 ವರ್ಷದ ವ್ಯಕ್ತಿ ಕೊರೊನಾ ಸೋಂಕಿತರಾಗಿದ್ದರು ಎನ್ನುವುದು ಪ್ರಯೋಗಾಲಯದ ಪರೀಕ್ಷೆಯಿಂದ ದೃಢಪಟ್ಟಿದೆ.

ಅವರು ಅಧಿಕ ರಕ್ತದೊತ್ತಡ, ಮಧುಮೇಹ ಸಮಸ್ಯೆ ಎದುರಿಸುತ್ತಿದ್ದರು. ಅನಾರೋಗ್ಯದ ಕಾರಣ ಮೇ 24ರಂದು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಜ್ವರ, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಕೋವಿಡ್ ಪರೀಕ್ಷೆಗೆ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಹೃದಯಾಘಾತದಿಂದ ಅವರು ಮೃತಪಟ್ಟಿದ್ದು, ಅವರು ಕೊರೊನಾ ಸೋಂಕಿತರಾಗಿದ್ದರು ಎನ್ನುವುದು ಗುರುವಾರ ಬಂದ ಪರೀಕ್ಷಾ ವರದಿಯಿಂದ ಖಚಿತಪಟ್ಟಿದೆ.

ಇದರಿಂದಾಗಿ ರಾಜ್ಯದಲ್ಲಿ ಈ ವರ್ಷ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ 24 ಗಂಟೆಗಳಲ್ಲಿ 664 ಗಂಟಲ ದ್ರವದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, 61 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಈವರೆಗೆ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 796ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 451ಕ್ಕೆ ತಲುಪಿದೆ. 446 ಮಂದಿ ಮನೆ ಆರೈಕೆಗೆ ಒಳಗಾದರೆ, ಐವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-64/1191/2025–26 ದಿನಾಂಕ: 05–06–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ–2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಟಿ. ಮುನಿಯಪ್ಪ	ಆನೇಕಲ್	ಸರ್ಜಾಪುರ	ಸಿಂಗೇನ ಅಗ್ರಹಾರ	228	1–20	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಈ ಜಮೀನುಗಳಲ್ಲಿ ಕಟ್ಟಡ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ದಿನೋಪಯೋಗಿ ವಸ್ತುಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ ಮತ್ತು ವಾಣಿಜ್ಯ ಮಳಿಗೆಗಳು ದೊರಕುತ್ತದೆ. ಈ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ, ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತವೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ. ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ

ಸಂ: ಕಾ.ಇಂ/ಲೋ.ಇ/ಮಂವಿ/ಕೊಟೇಷನ್ ಪ್ರಕಟಣೆ ಸಂಖ್ಯೆ: 01/2025–2026 ದಿನಾಂಕ: 05–06–2025

ಕೊಟೇಷನ್ ಪ್ರಕಟಣೆ

ವಿಷಯ : ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯದಲ್ಲಿ ಕಾವೇರಿ ಆರತಿಯ ಅಂಗವಾಗಿ ತಾಯಿ ಕಾವೇರಿಯ ಪ್ರತಿಮೆ ನಿರ್ಮಾಣಕ್ಕಾಗಿ ಕೋಟೇಷನ್ ಕರೆಯುವ ಬಗ್ಗೆ.

ಉಲ್ಲೇಖ : ದಿನಾಂಕ: 03.05.2025 ರಂದು ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿತ ಸಭೆಯ ನಡವಳಿಗಳು.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಡ್ಯ ವಿಭಾಗ, ಮಂಡ್ಯ ಇವರ ಪರವಾಗಿ ಅಧಿಕೃತ ಡೀಲರ್‌ಗಳು/ ಪೂರೈಕೆದಾರರಿಂದ ಮಂಡ್ಯ ಜಿಲೆಯ ಕೃಷ್ಣರಾಜಸಾಗರ ಜಲಾಶಯದ ಆವರಣದಲ್ಲಿ ಸಮಿತಿಯು ಅನುಮೋದಿಸಿರುವ ಕಾವೇರಿ ಮಾತೆಯ ಅಧಿಕೃತ ಕಂಚಿನ ಪ್ರತಿಮೆ ಪ್ರತಿಷ್ಠಾನೆಗೆ ಸಂಬಂಧಿಸಿದಂತೆ ದರಗಳನ್ನು ಒದಗಿಸಲು ಕೊಟೇಷನ್ ಅನ್ನು ಕರೆಯಲಾಗಿದೆ. ಸದರಿ ಕೊಡೇಶನ್ ಅನ್ನು ಅರ್ಹ ಅಧಿಕೃತ ಡೀಲರ್‌ಗಳು/ ಪೂರೈಕೆದಾರರು ದಿ: 05.06.2025 ರಿಂದ 12.06.2025 ಸಂಜೆ 4.00 ಗಂಟೆಯವರೆಗೆ ಈ ಕೆಳಕಂಡ ಐಟಂಗೆ ತಮ್ಮ ದರ ನಮೂಸಿದ ದರಪಟ್ಟಿಯನ್ನು ಈ ಕೆಳಕಂಡ ನಿಬಂಧನೆಗೆ ಒಳಪಟ್ಟು, ಈ ಕಛೇರಿಗೆ ನೇರವಾಗಿ ಅಥವಾ ಅಂಚೆ (Speed Post) ಮೂಲಕ ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿದೆ. ಸದರಿ ದರಗಳು ಅಂದಾಜು ಪಟ್ಟಿ ತಯಾರಿಕೆಗೆ ಮಾತ್ರ ಬಳಸಲಾಗುವುದು. ◆ ಈ ಕೆಳಗೆ ನಮೂದಿಸಿರುವ ಕಾವೇರಿ ಆರತಿಯ ಅಂಗವಾಗಿ ತಾಯಿ ಕಾವೇರಿಯ ಪ್ರತಿಮೆ ಸರಬರಾಜು ಮಾಡಲು ತಮ್ಮ ಕನಿಷ್ಠ ದರಗಳನ್ನು ನಮೂದಿಸುವುದು. ◆ ದರ ನಮೂದಿಸಿರುವ ನಿಮ್ಮ ಕೋಟೇಷನ್‌ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ದಿ: 12.06.2025 ಒಳಗಾಗಿ ಈ ಕಛೇರಿಗೆ ನೇರವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವುದು. ◆ ಲಕೋಟೆ ಮೇಲೆ ಸರಬರಾಜು ಮಾಡುವ ಸಾಮಾಗ್ರಿಗಳಿಗೆ ಕೋಟೇಷನ್ ಎಂದು ನಮೂದಿಸುವುದು. ◆ ನೀವು ನಮೂದಿಸುವ ದರಗಳು ವಿತರಣೆ ಸರಬರಾಜು ಮಾಡುವ ವೆಚ್ಚವನ್ನು ಒಳಗೊಂಡಿರಬೇಕಾಗುತ್ತದೆ. ಅಲ್ಲದೇ ಬೇರೆ ಯಾವುದೇ ಸ್ಥಳಗಳಿಗೆ ಸರಬರಾಜು ಮಾಡುವ ದರವನ್ನು ಅಳವಡಿಸಿದಲ್ಲಿ ಆ ದರವನ್ನು ಪರಿಗಣಿಸಲಾಗುವುದಿಲ್ಲ. ◆ ಸಾಮಾಗ್ರಿಗಳ ದರವು ಎಲ್ಲಾ ರೀತಿಯ ತೆರಿಗೆಗಳನ್ನು ಹಾಗೂ ಸಾಗಾಣಿಕಾ ವೆಚ್ಚವನ್ನು ಒಳಗೊಂಡಿರಬೇಕಾಗುತ್ತದೆ. ◆ ಮುಂಗಡ ಹಣ ಪಾವತಿಸಲಾಗುವುದಿಲ್ಲ. ◆ ನಿಗಧಿತ ಅವಧಿ ಮೀರಿ ಬಂದ ಕೋಟೇಷನ್‌ಗಳನ್ನು ಪರಿಗಣಿಸಲಾಗುವುದಿಲ್ಲ. ◆ ಕೋಟೇಷನ್‌ಗಳನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ ರವರು ಹೊಂದಿರುತ್ತಾರೆ

Sl.No.	Description of the Item
1	**Bronze Statue of Sri Kaveri Mathe 33ft Tall:** Casting, Supplying, Erecting and Fixing of Sri Kaveri Mathe Bronze statue of size 33ft Height and Weighing Approximately about 30tonnes as per Approved Drawing. The outer side of Bronze statue shall be made with the assembling of smaller elements of required size which will be mounting on stainless steel support system (Grade 304) from the central MS Core structure (ASTM A36). Along with the statue, a human statue of size 6ft and 2 Karnataka logo with embossed type with the same material shall be provided. The material composition for the manufacturing of statue will be Cu:79-81%, Sn- 3-3.5%, Zn-8-10%, Pb-6-8% which confirms to GRADE C 84400. The exposed surface of the statue and other bronze elements shall be oxidized to the required extent. The external surface of the statue will be further treated with Poly-urethane, Lacquer coating. The base of the statue shall be supported on a pre-embedded MS base plate of required thickness with suitable Bolt and Anchoring system which is at a level 11ft from the ground level including welding of Bronze statue, casting, welding of Bronze statue with stainless steel angles, flats with nuts and bolts, hoisting parts on to pedestal, welding bronze parts together, final finishing, painting, installation of statue at downstream of Krishnaraja Sagara Dam, Srirangapattana Taluk, Mandya District i.e., the work spot including labour, hiring of machineries and all other incidental charges for successful erection and completion of work in coordination with civil works, including certificates to be obtained from the concerned quality assurance authorities and prototype to be got approved and finalised by the monitoring committee of Sri Kaveri Mathe Statue including cost of all materials, all lead and lifts, loading and unloading, transportation used for erection and all other incidental charges for successful completion of the work as per the directions of the Engineer in charge of the work. Note: The quotation of rates is including the cost of Materials, Manufacturing, Transportation, Handling, Erection at the defined location and Finishing as mentioned in the job description including Profit of the supplier. These rates are Inclusive of all taxes and levy charges. No extra charges will be paid. Location Details: The intended statue to be installed at downstream of Krishnaraja Sagara Dam, SrirangapattanaTaluk, Mandya District, Karnataka. Latitude: 12° 25’ 31" N, Longitude: 76° 34’ 20" E

Reference Images:

1. Proposed Sri Kaveri Mathe Statue (4 Views)

2. Karnataka Logo.



3. Human Statue.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಕೊಟೇಶನ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಕೊಟೇಶನ್ ರದ್ದುಗೊಳಿಸುವ/ಕೊಟೇಶನ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ

ವಾರಾಂತ್ಯದ ಪ್ರವಾಸಕ್ಕೆ ಉತ್ಸಾಹ ತೋರಿಸುತ್ತಿರುವ ಪ್ರವಾಸಿಗರು

'ಬೆಂಗಳೂರು ದಿವ್ಯ ದರ್ಶನ'ಕ್ಕೆ ಉತ್ತಮ ಸ್ಪಂದನ

• ಬಾಲಕೃಷ್ಣ ಪಿ.ಎಚ್.

119
ಮೇ 31ರಂದು ಪ್ರಯಾಣಿಸಿದವರು

235
ಜೂನ್ 1ರಿಂದ 4ರವರೆಗೆ ಪ್ರಯಾಣಿಸಿದವರು

₹1.63 ಲಕ್ಷ
ಮೇ 31ರಿಂದ ಜೂನ್ 4ರವರೆಗೆ ಸಂಗ್ರಹವಾದ ವರಮಾನ

ಬೆಂಗಳೂರು: ನಗರದ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗಾಗಿ ಬಿಎಂಟಿಸಿ ಆರಂಭಿಸಿರುವ 'ಬೆಂಗಳೂರು ದಿವ್ಯ ದರ್ಶನ' ಯೋಜನೆಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನ ದೊರೆತಿದೆ. ಶನಿವಾರ (ಜೂನ್ 7) ಒಂದೇ ದಿನಕ್ಕೆ 5 ಬಸ್‌ಗಳ ಆಸನಗಳು ಮುಂಗಡ ಬುಕ್ ಆಗಿವೆ.

ಮೇ 31ಕ್ಕೆ 'ದಿವ್ಯ ದರ್ಶನ' ಆರಂಭವಾಗಿತ್ತು. ಮೆಜೆಸ್ಟಿಕ್‌ನ ಕೆಂಪೇಗೌಡ ನಿಲ್ದಾಣದಿಂದ ಹೊರಡುವ ಬಸ್ ಗಾಳಿ ಆಂಜನೇಯ ಸ್ವಾಮಿ, ರಾಜರಾಜೇಶ್ವರಿ ದೇವಸ್ಥಾನ, ಶೃಂಗಗಿರಿ ಷಣ್ಮುಖ ದೇವಸ್ಥಾನ, ಶ್ರೀದೇವಿ ಕರುಮಾರಿ ಅಮ್ಮನವರ ದೇಗುಲ, ಓಂಕಾರ ಹಿಲ್ಸ್, ವಸಂತಪುರ ಇಸ್ಕಾನ್ ದೇವಸ್ಥಾನ, ಆರ್ಟ್ ಆಫ್ ಲಿವಿಂಗ್, ಬನಶಂಕರಿ ದೇವಸ್ಥಾನಗಳಿಗೆ ಭೇಟಿ ನೀಡಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ವಾಪಸಾಗಲಿದೆ.

ಬೆಳಿಗ್ಗೆ 8.30ಕ್ಕೆ ಹೊರಟು ಸಂಜೆ 6.05ಕ್ಕೆ ವಾಪಸ್ ಆಗುವುದರಿಂದ ಜನರು 'ದಿವ್ಯ ದರ್ಶನ'ಕ್ಕೆ ಒಲವು ತೋರಿಸಿದ್ದರು. ಮೊದಲ ದಿನವೇ ನಾಲ್ಕು ಬಸ್, ಎರಡನೇ ದಿನವಾದ ಭಾನುವಾರ ನಾಲ್ಕು ಬಸ್‌ಗಳಲ್ಲಿ ಜನರು ಸಂಚರಿಸಿದ್ದರು.

ಜನರ ಸ್ಪಂದನ ಗಮನಿಸಿದ ಬಿಎಂಟಿಸಿ ಅಧಿಕಾರಿಗಳು ವಾರಾಂತ್ಯ ಮತ್ತು ರಜಾದಿನಗಳಲ್ಲಿ ಮಾತ್ರವಲ್ಲದೆ, ವಾರದ ಎಲ್ಲ ದಿನಗಳಲ್ಲಿ 'ಬೆಂಗಳೂರು ದಿವ್ಯ ದರ್ಶನ' ನಡೆಸಲು ನಿರ್ಧರಿಸಿದರು.

'ವಾರದ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಕಡಿಮೆ ಇದ್ದು, ಒಂದು ಬಸ್ ಸಂಚರಿಸಿದೆ. ವಾರಾಂತ್ಯದಲ್ಲಿ 'ದಿವ್ಯ ದರ್ಶನ'ಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತಿದ್ದು, ಜೂನ್ 7ರಂದು ಪ್ರಯಾಣಿಸಲು ಈಗಾಗಲೇ ಐದು ಬಸ್‌ಗಳು ಬುಕ್ ಆಗಿವೆ. ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

'ನಾವು ಅಪಾರ್ಟ್‌ಮೆಂಟ್‌ನಲ್ಲಿ ವಾಸ ಮಾಡುವವರು. ಬೆಂಗಳೂರಿನಲ್ಲಿ ನೋಡಲು ಏನಿದೆ ಎಂದು ಎಲ್ಲರೂ ಹೇಳುವರು. ನಾವೂ ಹಾಗೇ ಭಾವಿಸಿದ್ದೆವು. ಕಬ್ಬನ್ ಪಾರ್ಕ್, ಬನ್ನೇರುಘಟ್ಟ ಸಹಿತ ಒಂದೆರಡು ಪ್ರದೇಶ ಬಿಟ್ಟರೆ ನೋಡುವಂಥದ್ದೇನಿದೆ ಎಂಬುದು ನಮಗೂ ಗೊತ್ತಿರಲಿಲ್ಲ.

ಈಶಾ ಫೌಂಡೇಷನ್ ಪ್ಯಾಕೇಜ್‌ನಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದೇವೆ. 'ಬೆಂಗಳೂರು ದಿವ್ಯ ದರ್ಶನ'ಕ್ಕೂ ತೆರಳುವ ಯೋಜನೆ ಹಾಕಿಕೊಂಡಿದ್ದೇವೆ' ಎಂದು ರಾಜಾಜಿನಗರದ ನಿವಾಸಿ ಸುಗುಣ ತಿಳಿಸಿದರು.

'ಸೋಮವಾರದಿಂದ ಶುಕ್ರವಾರದವರೆಗೆ ಕೆಲಸ ಇರುತ್ತದೆ. ಶನಿವಾರ, ಭಾನುವಾರ ಬೈಕ್‌ನಲ್ಲಿ ಸುತ್ತಾಡುತ್ತಿದ್ದೆವು. ಬಿಎಂಟಿಸಿಯವರು ವಿವಿಧ ಪ್ಯಾಕೇಜ್‌ಗಳನ್ನು ಮಾಡಿರುವುದು ನಮಗೆ ಅನುಕೂಲವಾಗಿದೆ' ಎಂದು ಟೆಕಿ ಮಹೇಶ್ ತಿಳಿಸಿದರು.

'ಬೆಂಗಳೂರು ದಿವ್ಯ ದರ್ಶನ ಯೋಜನೆ' ಅಡಿಯಲ್ಲಿ ದೇವಸ್ಥಾನಗಳ ದರ್ಶನಕ್ಕೆ ಹೊರಟಿರುವ ಪ್ರಯಾಣಿಕರು

ಮೂರು ಪ್ಯಾಕೇಜ್

ನಗರದಲ್ಲಿ ಬಿಎಂಟಿಸಿ ಮೂರು ಪ್ಯಾಕೇಜ್‌ಗಳನ್ನು ಮಾಡಿದೆ. ಅದರಲ್ಲಿ 'ಬೆಂಗಳೂರು ದರ್ಶಿನಿ' ಹಳೇ ಯೋಜನೆಯಾಗಿದೆ.

ನಗರದ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಈ ಯೋಜನೆಯಡಿ ಪ್ರತಿ ತಿಂಗಳು ಸುಮಾರು 1,000 ಜನರು ಪ್ರಯಾಣಿಸುತ್ತಿದ್ದಾರೆ.

ಚಿಕ್ಕಬಳ್ಳಾಪುರದ ಭೋಗ ನಂದೀಶ್ವರ ದೇವಸ್ಥಾನ, ಕಣಿವೆ ಬಸವಣ್ಣ ದೇವಸ್ಥಾನ, ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ಮತ್ತು ಸಮಾಧಿ, ರಂಗಸ್ಥಳ ರಂಗನಾಥ ಸ್ವಾಮಿ ದೇವಸ್ಥಾನ ಮತ್ತು ಈಶಾ ಫೌಂಡೇಷನ್‌ಗೆ ಭೇಟಿ ನೀಡುವ 'ಈಶಾ ಫೌಂಡೇಷನ್' ಪ್ಯಾಕೇಜ್‌ನಲ್ಲಿ ಪ್ರತಿ ತಿಂಗಳು ಸರಾಸರಿ 5000 ಜನರು ಪ್ರವಾಸ ಮಾಡುತ್ತಿದ್ದಾರೆ.

'ಬೆಂಗಳೂರು ದಿವ್ಯ ದರ್ಶನ' ಹೊಸ ಯೋಜನೆಯಾಗಿದೆ. ಪ್ಯಾಕೇಜ್‌ಗಳ ಮಾಹಿತಿಗಾಗಿ ಮತ್ತು ಮುಂಗಡವಾಗಿ ಕಾಯ್ದಿರಿಸಲು www.mybmtc.com ಮತ್ತು www.ksrtc.in ಸಂಪರ್ಕಿಸಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಕಡಿಮೆ ವೆಚ್ಚದಲ್ಲಿ ಸಂಚಾರ ನಮ್ಮ ಗುರಿ'

ರಾಮಚಂದ್ರನ್

ಕಡಿಮೆ ವೆಚ್ಚದಲ್ಲಿ ನಗರದ ಒಳಗಿನ ಮತ್ತು ನಗರಕ್ಕೆ ಸಮೀಪದ ಪ್ರವಾಸಿತಾಣಗಳಿಗೆ ಆಸಕ್ತರನ್ನು ಕರೆದೊಯ್ಯುವುದು ನಮ್ಮ ಉದ್ದೇಶ. ಅದಕ್ಕಾಗಿ ವಿವಿಧ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ.

ಈಶಾ ಫೌಂಡೇಷನ್ ಪ್ಯಾಕೇಜ್, ದಿವ್ಯದರ್ಶನಗಳಿಗೆ ಉತ್ತಮ ಸ್ಪಂದನೆ ದೊರಕಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಅವರು ತಿಳಿಸಿದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/26/2025–26 ದಿನಾಂಕ: 04–06–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೈರಶೆಟ್ಟಿಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ಶ್ರೀ ಡಿ.ಸಿ. ನವೀನ್ ಬಿನ್ ಚಿಕ್ಕೇಗೌಡ, 2) ಶ್ರೀ ಅನಂತ ಕುಮಾರ್. ಕೆ ಬಿನ್ ಲೇಟ್ ಎನ್.ಸಿ. ಕೆಂಪೇಗೌಡ	ನೆಲಮಂಗಲ / ಕಸಬಾ / ಬೈರಶೆಟ್ಟಿಹಳ್ಳಿ	28/6	01-13	ವ್ಯವಸಾಯ	ವಸತಿ
		28/16	02-00		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1092/ಅಡ್ವರ್ಟೋ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹ ರಾಜ ಚೌಕ–1, ಬೆಂಗಳೂರು–560 002.

ಸಂಖ್ಯೆ: ಬೃಬೆಂಮಪಾ/ಮು ಆಯುಕ್ತರು/ಪಿಎಸ್‌ಆರ್(ಜಿ)/561/2025–26 ದಿನಾಂಕ: 04.06.2025

ಸಾರ್ವಜನಿಕ ಪ್ರಕಟಣೆ

***ನಮೂನೆ*-III ನಿಯಮ–3ರ ಉಪ ನಿಯಮ (3) ಗಮನಿಸಿ**

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಯಿಂದ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **18.00 ಮೀಟರ್ ಅಗಲಕ್ಕೆ ಅನುಮೋದಿತ ಮಾಸ್ಟರ್ ಪ್ಲಾನ್–2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಪಣತ್ತೂರು ಬಳಗೆರೆ ರಸ್ತೆಯನ್ನು ಪಣತ್ತೂರು ಆರ್‌ಯುಬಿಯಿಂದ ವರ್ತೂರು ಗುಂಜೂರು ರಸ್ತೆಯವರೆಗೆ ವಿಸ್ತರಿಸುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳ ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ **ದಿನಾಂಕದಿಂದ 30 ದಿನಗಳೊಳಗಾಗಿ** ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ ಗ್ರಾಮದ ಹೆಸರು: ಬಳಗೆರೆ

Sy.No/ Khatha No.	Type of Land		Nature of Land			Dimension of the land/ plot and Extent in Sq.m		Boundaries of the Land/ Plot				Building Details			Present Activity on Land/ Building (Specify Specific activity such as Shop, Office, Factory, Apartment, Individual house etc.,	Market (guidel-ines) value of the land per Sq.m.	Name and address of the owner of the plot/Land for which DRC is to be issued
	Vacant	Built up	Agriculture	Converted undeveloped	Approved Layout/ Developed Land Building Site	Dimension	Extent	East	West	North	South	Extent in Sq.m	Type of Construction and No. of Floors	Floor Area Ratio			
Sy No.17/4, Khatha Sl No.40, Municipal No.40	Vacant Land		Converted Land			161.51		Varthuru Village Boundary	Sy No.17/2	Remaining Portion of Sy No.17/4 & 17/5	Road	None	None	None	Vacant	45,000/-	1. B. N. Sathya Kumar S/o B. V. Nanjareddy 2. S. Sunil Kumar S/o B. N. Sathyakumar Both are residing at 493, Balagere Road, Near Subbaiah Garden, Varthur, Bangalore-560087. 3. B. N. Venkatesh Kumar S/o B. V. Nanjareddy 4. V. Yashas S/o B. N. Venkatesh Kumar, Both are residing at No.493, Varthur, Bangalore South, Bangalore-560087.
Sy No.17/5						159.26										45,000/-	

Note: Market guideline value of this property is considered subject to conditions of payment of fee as per Government Order No.ಸರ್ಕಾರದ ಆದೇಶ ಸಂಖ್ಯೆ:ನಅಇ 137 ಎಂಎನ್‌ಯು 2024 (ಇ), ದಿನಾಂಕ: 09.09.2024 and as per the Circular No:ಆಯುಕ್ತರು/ ಪಿ.ಎಸ್.ಆರ್/ಜಿ/1802/2024–25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ-ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ–3, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನಗರದಲ್ಲಿ ಇಂದು

'ಅಪ್ಪು ಕಪ್' ಕ್ರಿಕೆಟ್ ಪಂದ್ಯಾವಳಿ: ಉದ್ಘಾಟನೆ: ಜಿ. ಶಿವಕುಮಾರನ್, ರಮೇಶ್‌ಪಾಳ್ಯ, ಅತಿಥಿಗಳು: ಕೆ. ಸಂತೋಷ್‌ಬಾಬು, ಎಸ್.ಎಸ್. ಮಿಟ್ಟಲಕೋಡ, ಸೌಮ್ಯ ಎಂ.ಯು., ಆಯೋಜನೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ವೈಎಂಸಿಎ ಕ್ರೀಡಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 8ರಿಂದ

ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಕೃಷ್ಣಪ್ರಸಾದ್ ಚಿತ್ರಾಪುರ, ಎಂ.ಆರ್. ಸೀತಾರಾಮ್, ಎಂ.ಆರ್. ಜಾನಕಿರಾಮ್, ಎಂ.ಆರ್. ಸಂಪಂಗಿರಾಮಯ್ಯ, ಎಂ.ಆರ್. ಆನಂದರಾಮ್, ಎಂ.ಆರ್. ಕೋದಂಡ ರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11

ಶಿವಾಜಿ ಮಹಾರಾಜರ ಪಟ್ಟಾಭಿಷೇಕ, ಜಿ.ವಿ. ಶಿವಾಜಿರಾವ್ ಚೌಹಾಣ್ ಅವರು ಅನುವಾದಿಸಿದ 'ವಿಶ್ವದ ಮಹಾನಾಯಕ ಛತ್ರಪತಿ ಶಿವಾಜಿ ಮಹಾರಾಜರು' ಪುಸ್ತಕ ಬಿಡುಗಡೆ: ಶ್ರೀಮಂತ ಶಿವಾಜಿರಾಜೆ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಅತಿಥಿ: ರಾಜಾ ಕೃಷ್ಣದೇವರಾಯ, ಆಯೋಜನೆ: ಮಾವಳಾ ಜವಾನ್ ಸಂಸ್ಥೆ ಪುಣೆ, ಕರ್ನಾಟಕ ಮರಾಠ ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಪರಾಮರ್ಶನ ಗ್ರಂಥಾಲಯದ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಮ. 12.30

'ಪ್ರೊ. ಜಗದಾಂಬ ಮತ್ತು ಡಾ.ಎಚ್. ಪಿ. ಮಲ್ಲೇದೇವರು' ದತ್ತಿ ಉಪನ್ಯಾಸ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, 'ವಚನಗಳಲ್ಲಿ ಗಾದೆಗಳ ಬಳಕೆ' ಉಪನ್ಯಾಸ: ವಿಜಯಾ ಜಗದೀಶ್, ಉಪಸ್ಥಿತಿ: ಪ್ರಮೀಳಾ ಗರಡಿ, ರವಿ ಶಂಕರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಎಂಟನೇ ವಿಭಾಗ, ಜಯನಗರ, ಸಂಜೆ 5.30

ಸರ್ವದೇವ ಪರಂಜ್ಯೋತಿ ಧ್ಯಾನವಿಹಾರದ ಉದ್ಘಾಟನೆ: ಅತಿಥಿಗಳು: ಎಚ್. ಡಿ. ದೇವೇಗೌಡ, ಮಂಥರ್ ಗೌಡ, ರೇವತಿ ಕಾಮತ್, ರಮೇಶ್ ಮಾನಂದಿ, ಸ್ಥಳ:ಸರ್ವದೇವ ಪರಂಜ್ಯೋತಿ ಧ್ಯಾನ ವಿಹಾರ, ಕನಕಪುರ ಮುಖ್ಯರಸ್ತೆ, ಸಂಜೆ 6

ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಎಚ್. ನರಸಿಂಹಯ್ಯ ಅವರ ಜನ್ಮದಿನ: ಉಪಸ್ಥಿತಿ: ಎಸ್.ಎಲ್. ಶ್ರೀನಿವಾಸಮೂರ್ತಿ, ವಿ. ರಾಜಾ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

'ದೊಡ್ಡಾಟ' ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಅಬ್ದುಲ್ ರಹಿಮಾನ್ ಹತ್ಯೆ: ಮತ್ತೊಬ್ಬ ಸೆರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಕುರಿಯಾಳ ಗ್ರಾಮದ ಇರಾಕೋಡಿಯಲ್ಲಿ ಈಚೆಗೆ ನಡೆದ ಅಬ್ದುಲ್ ರಹಿಮಾನ್ ಹತ್ಯೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಎಂಟಕ್ಕೆ ಏರಿದೆ.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಬೆಟ್ಟಗೆರೆ ಗ್ರಾಮದ ನಿವಾಸಿ ರವಿ ಸಂಜಯ್ (29) ಬಂಧಿತ ಆರೋಪಿ. ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಪ್ರಕರಣದ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಳತ್ತಮಜಲು ನಿವಾಸಿ ಅಬ್ದುಲ್ ರಹಿಮಾನ್ ಅವರನ್ನು ಇರಾಕೋಡಿಯಲ್ಲಿ ಮೇ 27ರಂದು ಹತ್ಯೆ ಮಾಡಲಾಗಿತ್ತು. ಅವರ ಜೊತೆಗಿದ್ದ ಕಲಂದರ್ ಶಾಫಿ ಎಂಬುವರ ಮೇಲೆ ಹಲ್ಲೆ ನಡೆಸಲಾಗಿತ್ತು.

ಭರತ್ ಕುಮ್ಡೇಲು ಮನೆ ಶೋಧ: ಈ ಹತ್ಯೆ ಪ್ರಕರಣದ ಆರೋಪಿಯಾಗಿರುವ ಬಂಟ್ವಾಳ ಪುದು ಗ್ರಾಮದ ಭರತ್ ಕುಮ್ಡೇಲು ಎಂಬಾತನ ಮನೆಯನ್ನು ಪೊಲೀಸರು ನ್ಯಾಯಾಲಯದಿಂದ ವಾರಂಟ್ ಪಡೆದು ಶೋಧ ನಡೆಸಿದ್ದಾರೆ.

ಈ ಘಟನೆ ನಡೆದಂದಿನಿಂದ ಆರೋಪಿ ಭರತ್ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಭರತ್ ಕುಮ್ಡೇಲು ಬಜರಂಗ ದಳದ 'ಪುತ್ತೂರು ಜಿಲ್ಲಾ ಘಟಕ'ದ ಸಂಚಾಲಕರಾಗಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ
ಪ್ರಗತಿಯ ನವಯುಗ

ಸುಮಾರು ರೂ.44,000 ಕೋಟಿ ಮೌಲ್ಯದ ರೈಲ್ವೆ ಯೋಜನೆಗಳ ಉಡುಗೊರೆ

ಉದ್ಘಾಟನೆ

ಚೆನಾಬ್ ಸೇತುವೆ

(ವಿಶ್ವದ ಅತಿ ಎತ್ತರದ ರೈಲ್ವೆ ಕಮಾನು ಸೇತುವೆ)

- 359 ಮೀಟರ್ ಎತ್ತರ, 1,315 ಮೀಟರ್ ಉದ್ದ ಮತ್ತು 467 ಮೀಟರ್ ಅಗಲದ ಕಮಾನು
- ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಕೌರಿ ಮತ್ತು ಬಕ್ಕಾಲ್ ಪ್ರದೇಶಗಳನ್ನು ಸಂಪರ್ಕಿಸುವ ಸೇತುವೆ

ಅಂಜಿ ಸೇತುವೆ

(ಭಾರತದ ಪ್ರಥಮ ಕೇಬಲ್ ಸ್ಟೇಯ್ಡ್ ರೈಲ್ವೆ ಸೇತುವೆ)

- 725 ಮೀಟರ್ ಉದ್ದ, 290 ಮೀಟರ್ ಪ್ರಮುಖ ಗಾತ್ರ
- ಜಮ್ಮು ಮತ್ತು ಕಾಶ್ಮೀರದ ಕತ್ರಾ ಮತ್ತು ರಿಯಾಸಿ ಜಿಲ್ಲೆಗಳ ಸಂಪರ್ಕ ಸೇತುವೆ
- 96 ಕೇಬಲ್‌ಗಳಿಗೆ ಸಂಪರ್ಕ ಕೊಂಡಿಯಾಗಿರುವ, 193 ಮೀಟರ್ ಎತ್ತರದ ಏಕಮಾತ್ರ ಬೃಹತ್ ಮಹಾದ್ವಾರ

ಲೋಕಾರ್ಪಣೆ

ಉಧಮ್‌ಪುರ-ಶ್ರೀನಗರ-ಬಾರಾಮುಲ್ಲಾ

ರೈಲ್ ಲಿಂಕ್ ಪ್ರಾಜೆಕ್ಟ್ (ಯುಎಸ್‌ಬಿಆರ್‌ಎಲ್)

- ಭಾರತದ ಇನ್ನಿತರ ಪ್ರದೇಶಗಳೊಂದಿಗೆ ಸಂಪರ್ಕ ಬೆಸೆಯುವ ಆಧುನಿಕ ಎಲ್ಲಾ ಹವಾಮಾನ ಆಧರಿತ ರೈಲ್ವೆ ಸಂಪರ್ಕ
- ಒಟ್ಟು ಉದ್ದ 272 ಕಿ.ಮೀ. ಜೊತೆಗೆ 36 ಟಿ-50 ಟನಲ್‌ಗಳು (ಭಾರತದಲ್ಲಿನ ಅತಿ ಉದ್ದದ ಕಾರ್ಯನಿರತ ಟನಲ್) ಮತ್ತು 943 ಸೇತುವೆಗಳು

ಶುಭಾರಂಭ

2 ವಂದೇ ಭಾರತ ರೈಲುಗಳು

ಶ್ರೀ ಮಾತಾ ವೈಷ್ಣೋ ದೇವಿ ಕತ್ರಾ – ಶ್ರೀನಗರ ಮತ್ತು ಶ್ರೀನಗರ – ಶ್ರೀ ಮಾತಾ ವೈಷ್ಣೋ ದೇವಿ ಕತ್ರಾ

- ಶ್ರೀನಗರಕ್ಕೆ ಮೊದಲ ಸೆಮಿ-ಹೈ-ಸ್ಪೀಡ್ ರೈಲು
- ಪ್ರವಾಸೋದ್ಯಮಕ್ಕೆ ಹಾಗೂ ಪ್ರಾದೇಶಿಕ ಸಂಪರ್ಕಕ್ಕೆ ಉತ್ತೇಜನ
- ಕತ್ರಾ ದಿಂದ ಶ್ರೀನಗರ ಪ್ರಯಾಣ ಸಮಯ ಸುಮಾರು 3 ಗಂಟೆ

ಉದ್ಘಾಟಕರು

ನರೇಂದ್ರ ಮೋದಿ

ಪ್ರಧಾನಮಂತ್ರಿ

ಗಣ್ಯ ಉಪಸ್ಥಿತರು

ನಿತಿನ್ ಜೈರಾಮ್ ಗಡ್ಕರಿ
ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಖಾತೆ ಸಚಿವ

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ, ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ಸಚಿವ

ಡಾ. ಜಿತೇಂದ್ರ ಸಿಂಗ್
ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭೂ ವಿಜ್ಞಾನಗಳ ರಾಜ್ಯ ಪ್ರಭಾರಿ ಸಚಿವ ಮತ್ತು ಪ್ರಧಾನ ಮಂತ್ರಿ ಕಚೇರಿ, ಪರ್ಸನಲ್, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ, ಅಣುಶಕ್ತಿ ಇಲಾಖೆ ಹಾಗೂ ಬಾಹ್ಯಾಕಾಶ ಇಲಾಖೆ ರಾಜ್ಯ ಸಚಿವ

ವಿ. ಸೋಮಣ್ಣ
ಕೇಂದ್ರ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಸಚಿವ

ರಣ್ವೀತ್ ಸಿಂಗ್
ಕೇಂದ್ರ ರೈಲ್ವೆ ಮತ್ತು ಆಹಾರ ಸಂಸ್ಕರಣಾ ಉದ್ಯಮಗಳ ರಾಜ್ಯ ಸಚಿವ

ಮನೋಜ್ ಸಿನ್ಹಾ
ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ರಾಜ್ಯಪಾಲ ಮತ್ತು ಚೇರ್ಮನ್, ಶ್ರೀ ಮಾತಾ ವೈಷ್ಣೋ ದೇವಿ ಮಂದಿರ ಮಂಡಳಿ, ಜಮ್ಮು ಮತ್ತು ಕಾಶ್ಮೀರ

ಒಮರ್ ಅಬ್ದುಲ್ಲಾ
ಮುಖ್ಯಮಂತ್ರಿ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ

ಸುರಿಂದರ್ ಕುಮಾರ್ ಚೌಧರಿ
ಉಪ ಮುಖ್ಯಮಂತ್ರಿ
ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ

ಜುಗಲ್ ಕಿಶೋರ್
ಸಂಸದ (ಲೋಕಸಭೆ), ಜಮ್ಮು

ಆಗಾ ಸೈಯದ್ ರುಹುಲ್ಲಾ ಮೆಹದಿ
ಸಂಸದ (ಲೋಕಸಭೆ), ಶ್ರೀನಗರ

ಗುಲಾಂ ಅಲಿ
ಸಂಸದ ರಾಜ್ಯಸಭೆ

ಶುಕ್ರವಾರ 6ನೇ, ಜೂನ್ 2025 | ಬೆಳಿಗ್ಗೆ 11.00ಕ್ಕೆ | ಶ್ರೀ ಮಾತಾ ವೈಷ್ಣೋ ದೇವಿ ಮಂದಿರ ಮಂಡಳಿ ಕ್ರೀಡಾ ಸಮುಚ್ಚಯ ಕತ್ರಾ (ಸ್ಟೇಡಿಯಂ)

ಭಾರತೀಯ ರೈಲ್ವೆ

DD NEWS ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ

www.indianrailways.gov.in

ನಮ್ಮನ್ನು ಅನುಸರಿಸಿ /RailMinIndia

ಸಹಕಾರನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸಚಿವ ಕೃಷ್ಣ ಬೈರೇಗೌಡ, 'ನಮ್ಮೂರ ಹೆಮ್ಮೆ' ಕಾರ್ಯಕ್ರಮದಡಿಯಲ್ಲಿ ಪ್ರಶಸ್ತಿಪತ್ರ ನೀಡಿ ಸನ್ಮಾನಿಸಿದರು.

'ನಮ್ಮೂರ ಹೆಮ್ಮೆ': ಸಾಧಕರಿಗೆ ಸನ್ಮಾನ

ಯಲಹಂಕ: ಮಕ್ಕಳ ಭವಿಷ್ಯ ಉತ್ತಮವಾಗಿರಬೇಕು; ಅವರಿಗೆ ಯಶಸ್ಸು ಸಿಗಲು ಶಿಕ್ಷಣವೊಂದೇ ಸೂತ್ರ, ಪೋಷಕರು ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಒತ್ತಾಯಿಸಿದರು.

ಕೆಬಿಜಿ ಸ್ವಯಂಸೇವಕರು ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಆಶ್ರಯದಲ್ಲಿ ಸಹಕಾರನಗರದಲ್ಲಿ ಆಯೋಜಿಸಿದ್ದ ನಮ್ಮೂರ ಹೆಮ್ಮೆ ಕಾರ್ಯಕ್ರಮದಡಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರನೀಡಿ ಸನ್ಮಾನಿಸಿ ಅವರು ಮಾತನಾಡಿದರು.

ಮಕ್ಕಳ ಭವಿಷ್ಯ ಉತ್ತಮವಾಗಿ ರೂಪುಗೊಳ್ಳಲು ಹಾಗೂ ಅವರು ದೊಡ್ಡಮಟ್ಟದ ಯಶಸ್ಸನ್ನು ಸಾಧಿಸಲು ಶಿಕ್ಷಣವೊಂದೇ ಏಕೈಕ ಮಾರ್ಗವಾಗಿದೆ. ಶಿಕ್ಷಣವಿದ್ದರೆ ಮಕ್ಕಳು ಗೆಲುವು ಸಾಧಿಸುವುದು ನಿಶ್ಚಿತ ಎಂದು ಅವರು ಅಭಿಪ್ರಾಯಪಟ್ಟರು.

ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ವಿದ್ಯಾರ್ಥಿಗಳು ಸಾಕಷ್ಟು ಶ್ರಮಿಸುತ್ತಾರೆ. ಹೀಗಾಗಿ ಅವರ ಭವಿಷ್ಯ ಉತ್ತಮವಾಗಿರಲಿ ಎಂದು ಅವರ ಶ್ರಮವನ್ನು ಗೌರವಿಸುವ ನಿಟ್ಟಿನಲ್ಲಿ ಸನ್ಮಾನಿಸಲಾಗುತ್ತಿದೆ. ಈ ವರ್ಷ ಕನಿಷ್ಠ 4000 ವಿದ್ಯಾರ್ಥಿಗಳನ್ನು ಗುರುತಿಸಿ, ಸನ್ಮಾನಿಸಲಾಗುವುದು ಎಂದರು.

ಸಾಮಾಜಿಕ ಕಾರ್ಯಕರ್ತ ಮೀನಾಕ್ಷಿ ಕೆಂಪಾಡಿ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಟಿ.ಜಿ.ಚಂದ್ರು, ಎಚ್.ಎ.ಶಿವಕುಮಾರ್, ಹನುಮಂತಿ, ವೆಂಕಟಸ್ವಾಮಿ, ಕೆ.ಆರ್.ರಾಜು, ಗೋಪಾಲ್ ರೆಡ್ಡಿ, ಕೆ.ಎ.ನಾಗೇಂದ್ರಕುಮಾರ್, ಕೆ.ದಿಲೀಪ್‌ಕುಮಾರ್, ತಿಂಡ್ಲು ಸತೀಶ್, ಕೆ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮಣಿವಣ್ಣನ್ ಬಿಡಿಎ ಆಯುಕ್ತ

ಪ್ರಜಾವಾಣಿ ವಾರ್ತೆ

ಪಿ. ಮಣಿವಣ್ಣನ್

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ.

ಎನ್. ಜಯರಾಂ ಅವರು ಮೇ 31ರಂದು ನಿವೃತ್ತರಾದಾಗ, ಮಣಿವಣ್ಣನ್ ಅವರಿಗೆ ಬಿಡಿಎ ಆಯುಕ್ತರ ಹುದ್ದೆಯ ಹೆಚ್ಚುವರಿಯಾಗಿ ನೀಡಲಾಗಿತ್ತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶದ ಪ್ರಕಾರ, ಬಿಡಿಎ ಆಯುಕ್ತರ ಹುದ್ದೆ ಜೊತೆಗೆ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಮಣಿವಣ್ಣನ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಸ್ಥಳ ಗುರುತಿಸಿ ಸ್ಥಾಪಿಸಲು ಕ್ರಮ

ವರ್ಷಾಂತ್ಯಕ್ಕೆ ರಕ್ತನಿಧಿ ಕೇಂದ್ರ

• ವರುಣ ಹೆಗಡೆ

ಬೆಂಗಳೂರು: ತಾಯಂದಿರು, ಮಕ್ಕಳ ಚಿಕಿತ್ಸೆಗೆ ಅಗತ್ಯವಿರುವ ರಕ್ತ ಸಂಗ್ರಹಿಸಲು ವಾಣಿವಿಲಾಸ ಆಸ್ಪತ್ರೆಯಲ್ಲಿ ರಕ್ತನಿಧಿ ಕೇಂದ್ರವನ್ನು ನಿರ್ಮಿಸಲಾಗುತ್ತಿದ್ದು, ವರ್ಷಾಂತ್ಯದೊಳಗೆ ಕಾರ್ಯಾರಂಭ ಮಾಡಲಿದೆ.

ನಗರದ ಪ್ರಮುಖ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಇದಾಗಿದ್ದು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತಿ ದೊಡ್ಡ ತಾಯಿ–ಮಗುವಿನ ಆಸ್ಪತ್ರೆ ಇದಾಗಿದೆ. ತೃತೀಯ ಹಂತದ ಸರ್ಕಾರಿ ಪ್ರಕರಣಗಳು ಹೆಚ್ಚಾಗಿ ಇಲ್ಲಿಗೆ ಶಿಫಾರಸು ಆಧಾರದಲ್ಲಿ ಬರುತ್ತಿವೆ. ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ನಿತ್ಯ ಸರಾಸರಿ 250ರಿಂದ 300 ಮಂದಿ ಭೇಟಿ ನೀಡುತ್ತಿದ್ದಾರೆ. ಆಸ್ಪತ್ರೆಗೆ ವಾರ್ಷಿಕ 3,600 ಯುನಿಟ್ ರಕ್ತದ ಬೇಡಿಕೆಯಿದ್ದು, ಪ್ರತ್ಯೇಕ ರಕ್ತನಿಧಿ ಕೇಂದ್ರ ನಿರ್ಮಿಸಲಾಗುತ್ತಿದೆ.

ಸದ್ಯ ಆಸ್ಪತ್ರೆಯಲ್ಲಿ ರಕ್ತ ಶೇಖರಣಾ ಘಟಕ ಮಾತ್ರವಿದೆ. ತುರ್ತುಸಂದರ್ಭದಲ್ಲಿ ರಕ್ತದ ಅಗತ್ಯವಿರುವ ತಾಯಂದಿರು ವಿಕ್ಟೋರಿಯಾ ಆಸ್ಪತ್ರೆ ರಕ್ತನಿಧಿ ಕೇಂದ್ರದ ಮೇಲೆ ಅವಲಂಬಿತರಾಗುತ್ತಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಕೇಂದ್ರದಲ್ಲಿ ವಾರ್ಷಿಕ 8 ಸಾವಿರ ಯುನಿಟ್ ರಕ್ತಕ್ಕೆ ಬೇಡಿಕೆಯಿದೆ. ಆ ಕೇಂದ್ರ ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲ ಸರ್ಕಾರಿ ರಕ್ತನಿಧಿ ಕೇಂದ್ರ ಹಾಗೂ ರಕ್ತ ಶೇಖರಣಾ ಘಟಕಗಳಿಗೆ ಮಾತೃ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

ಸ್ಥಳ ಗುರುತು: ರಕ್ತನಿಧಿ ಕೇಂದ್ರ ನಿರ್ಮಾಣಕ್ಕೆ ಆಸ್ಪತ್ರೆ ಕಟ್ಟಡದಲ್ಲಿ ಸ್ಥಳ ಗುರುತಿಸಲಾಗಿದೆ. 3 ಸಾವಿರ ಚದರ ಅಡಿ ಸ್ಥಳದಲ್ಲಿ ಕೇಂದ್ರ ಸಜ್ಜುಗೊಳಿಸಲಾಗುತ್ತದೆ. ಯಂತ್ರೋಪಕರಣಗಳ ಅಳವಡಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಔಷಧ ನಿಯಂತ್ರಣ ಇಲಾಖೆ ಅನುಮೋದನೆ ಪಡೆಯಬೇಕಿದೆ. ಸಿಬ್ಬಂದಿ ನೇಮಕಾತಿ ಸೇರಿ ವಿವಿಧ ಪ್ರಕ್ರಿಯೆ ಪೂರ್ಣಗೊಳ್ಳಲು ಐದಾರು ತಿಂಗಳಾಗುವ ಸಾಧ್ಯತೆಯಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ರಕ್ತನಿಧಿ ಕೇಂದ್ರ ಆರಂಭದ ಬಳಿಕ ನಿಗದಿತ ಸಮಯದಲ್ಲಿ ತಾಯಂದಿರಿಗೆ ರಕ್ತ ಒದಗಿಸಲು ಸಾಧ್ಯ. ಸದ್ಯ ಆಸ್ಪತ್ರೆಯಲ್ಲಿರುವ ಶೇಖರಣಾ ಘಟಕದಿಂದ ರಕ್ತ ನಿರ್ವಹಣೆ ಮಾಡುತ್ತಿದ್ದು, ಪ್ಲಾಸ್ಮಾ ಅಗತ್ಯವಿದ್ದರೆ ವಿಕ್ಟೋರಿಯಾ ಆಸ್ಪತ್ರೆಯ ರಕ್ತನಿಧಿ ಕೇಂದ್ರವನ್ನು ಸಂಪರ್ಕಿಸಲಾಗುತ್ತದೆ' ಎಂದು ವೈದ್ಯರೊಬ್ಬರು ತಿಳಿಸಿದರು.

ರಕ್ತನಿಧಿ ಕೇಂದ್ರ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದ್ದು, ವರ್ಷಾಂತ್ಯದೊಳಗೆ ಕೇಂದ್ರ ಕಾರ್ಯಾರಂಭಿಸಲಿದೆ. ರಕ್ತದ ಅಭಾವ ನೀಗಿಸಲು ಕೇಂದ್ರ ಸಹಕಾರಿಯಾಗಲಿದೆ

ಡಾ. ಸವಿತಾ ಸಿ., ವಾಣಿವಿಲಾಸ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ

ಶಿಫಾರಸು ಆಧಾರದಲ್ಲಿ ದಾಖಲು

ವಾಣಿವಿಲಾಸ ಆಸ್ಪತ್ರೆಗೆ ದಾಖಲಾಗುತ್ತಿರುವ ಒಳರೋಗಿಗಳಲ್ಲಿ ಶೇ 60ರಷ್ಟು ಮಂದಿ ಶಿಫಾರಸು ಆಧಾರದಲ್ಲಿಯೇ ಬರುತ್ತಿದ್ದಾರೆ. ಅಧಿಕ ರಕ್ತದೊತ್ತಡ, ಹೃದಯ ಸಮಸ್ಯೆ, ರಕ್ತಸ್ರಾವ, ಗರ್ಭಕಂಠದಲ್ಲಿ ತೊಂದರೆ, 'ಪ್ರೆಸೆಂಟಾ ಪ್ರಿವಿಯಾ' (ಸಂಪೂರ್ಣವಾಗಿ ಗರ್ಭಕಂಠವನ್ನು ನಿರ್ಬಂಧಿಸುವ ಸ್ಥಿತಿ) ಸೇರಿ ವಿವಿಧ ಸಮಸ್ಯೆ ಎದುರಿಸುತ್ತಿರುವ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದ್ದಾರೆ.

ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿ ನಗರದ ವಿವಿಧ ಆಸ್ಪತ್ರೆಗಳಿಂದಲೂ ಸರ್ಕಾರಿ ಪ್ರಕರಣಗಳನ್ನು ಇಲ್ಲಿಗೆ ಶಿಫಾರಸು ಮಾಡಲಾಗುತ್ತಿದೆ. ಕೋಲಾರ, ರಾಮನಗರ, ಚಿಕ್ಕಮಗಳೂರು ಸೇರಿ ವಿವಿಧ ಜಿಲ್ಲೆಗಳಿಂದಲೂ ಪ್ರಕರಣಗಳು ಬರುತ್ತಿವೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

8-9 ಸಾವಿರ ವಾಣಿವಿಲಾಸ ಆಸ್ಪತ್ರೆಗೆ ತಿಂಗಳಿಗೆ ಭೇಟಿ ನೀಡುವ ಹೊರರೋಗಿಗಳು

703 ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳು

1,300-1,500 ಆಸ್ಪತ್ರೆಯಲ್ಲಿ ತಿಂಗಳಿಗೆ ನಡೆಯುವ ಹೆರಿಗೆಗಳು

500 ತಾಯಂದಿರ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು

ವಿದ್ಯಾರ್ಥಿ ನಿಧಿ ಸಹಾಯಕ್ಕೆ ಆಹ್ವಾನ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಜೆ.ಪಿ. ನಗರ ಬ್ರಾಹ್ಮಣ ಸಭಾ ವತಿಯಿಂದ ವಿದ್ಯಾರ್ಥಿ ನಿಧಿ ಸಹಾಯ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಶೇ 90ಕ್ಕಿಂತ ಅಧಿಕ ಅಂಕ ಗಳಿಸಿರುವ ಬೆಂಗಳೂರು ನಗರ ಜಿಲ್ಲೆಯ ವಿದ್ಯಾರ್ಥಿಗಳು ಜೂನ್ 21ರ ಒಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ಎಂ.ಎಸ್. ರಾಮಪ್ರಸಾದ್, ಜೆ.ಪಿ.ನಗರ ಬ್ರಾಹ್ಮಣ ಮಹಾಸಭಾ, 1298, 20ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು. ಮೊಬೈಲ್: 9448617964 ಸಂಪರ್ಕಿಸಿ.

ವಿಜಯಲಕ್ಷ್ಮಿ, ಸುರೇಶ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ವಿಜಯಲಕ್ಷ್ಮಿ ದೇಶಮಾನೆ

ಸುರೇಶ್ ಕೆ.

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 2025ನೇ ಸಾಲಿನ 'ಡಾ. ಅನುಪಮಾ ನಿರಂಜನ ಪ್ರಶಸ್ತಿ'ಗೆ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಹಾಗೂ 'ಡಾ.ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ'ಗೆ ಕನ್ನಡ ಪರ ಕಾರ್ಯಕರ್ತ ಸುರೇಶ್ ಕೆ. ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹5 ಸಾವಿರ ನಗದು ಒಳಗೊಂಡಿದೆ. ಇದೇ 15ರಂದು ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಲೇಖಕಿ ಡಾ. ವಸುಂಧರಾ ಭೂಪತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ಅಧ್ಯಕ್ಷತೆ ವಹಿಸುತ್ತಾರೆ. ವಿಮರ್ಶಕ ಎಚ್. ದಂಡಪ್ಪ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ ಎಂದು ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ವಿದ್ಯಾಲಯ ಭಾ.ವಿ.ಸಂ, ಬೆಂಗಳೂರು–560012
केंद्रीय विद्यालय भा.वि.सं. बेंगलूरु- 560012
PM SHRI
KENDRIYA VIDYALAYA INDIAN INSTITUTE OF SCIENCE BENGALURU - 560012
E-mail: principal.kviisc@gmail.com
Website: https://iiscbangalore.kvs.ac.in Ph: 080-23371316

ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇರ ಸಂದರ್ಶನ

ದಿನಾಂಕ 10.06.2025 ರಂದು (ಮಂಗಳವಾರ) ಬೆಳಿಗ್ಗೆ 9.00 ರಿಂದ ಬೆಳಿಗ್ಗೆ 11.00 ರವರೆಗೆ ಟಿಜಿಟಿ–ವಿಜ್ಞಾನ ಮತ್ತು ಪಿಜಿಟಿ–ಭೌತಶಾಸ್ತ್ರದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನೇರ ಸಂದರ್ಶನ ನಡೆಯಲಿದೆ.

ಗಮನಿಸಿ:
ಅರ್ಹತೆ, ಶೈಕ್ಷಣಿಕ ಅರ್ಹತೆ, ಸಂಭಾವನೆ ಮತ್ತು ಸಂದರ್ಶನ ದಿನಾಂಕ ಮತ್ತು ಸಮಯದ ವಿವರಗಳನ್ನು ಶಾಲಾ ವೆಬ್‌ಸೈಟ್: https://iiscbangalore.kvs.ac.in ನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ವೇಳಾಪಟ್ಟಿಯ ಪ್ರಕಾರ ಸರಿಯಾಗಿ ಭರ್ತಿ ಮಾಡಿದ ಬಯೋಡೇಟಾ ಫಾರ್ಮ್ ಜೊತೆಗೆ ಎಲ್ಲಾ ಮೂಲ ದಾಖಲೆಗಳು / ಪ್ರಮಾಣಪತ್ರಗಳು ಮತ್ತು ಎಲ್ಲಾ ದಾಖಲೆಗಳ ಸ್ವಯಂ–ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ವಿದ್ಯಾಲಯದಲ್ಲಿ ವರದಿ ಮಾಡಿಕೊಳ್ಳಿ.
ಸಂದರ್ಶನಕ್ಕೆ ಹಾಜರಾಗಲು ಯಾವುದೇ ಟಿಎ/ಡಿಎ ಪಾವತಿಸಲಾಗುವುದಿಲ್ಲ.

ಸಹಿ/- ಪ್ರಾಂಶುಪಾಲರು

ಕೇಂದ್ರೀಯ ವಿದ್ಯಾಲಯ ಭಾ.ವಿ.ಸಂ. ಬೆಂಗಳೂರು–560012
KENDRIYA VIDYALAYA INDIAN INSTITUTE OF SCIENCE BENGALURU - 560012
E-mail: principal.kviisc@gmail.com
website: https://iiscbangalore.kvs.ac.in Ph: 080-23371316

XI & XII ADMISSION 2025 - 26

There are some seats vacant for classes **XI & XII.** Students from other **Kendriya Vidyalayas and Non-KVs (incl. Pvt. Schools)** may submit registration form along with the documents mentioned on or before **10.06.2025** (Friday).

Documents to be submitted:
1. Registration form – download from website/ get it from the office
2. Marksheet-Digilockerself-attested
3. TC/Study Certificate

Admission is granted as per admission guidelines of KVS 2025-2

You may contact Mr. Shravan.N (Contact No. 8461094149) for any information

Admission I/C — Principal

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This Notice is hereby given to the public whomsoever that my client intends to purchase the Schedule Property mentioned herein below from (1) M/s PRAKRUTI NEST represented by its Proprietor Mr. N.BALAKRISHNA and (2) SRI. ANIL KAPUR, residents at BANGALORE.

Any person or persons having objections, claims, or interest in the Schedule Property/transactions may lodge the same to the undersigned with valid documents/proof within Ten (10) days from the date of this publication, failing which it shall be presumed that the Schedule Property is free from any acts of encumbrances or claims.

SCHEDULE

ITEM NO.1 All that piece and parcel of converted land bearing Sy.No.59 (Portion of Old Sy.No.42), converted vide Conversion Order No.ALN (De.Ku)/SR 39/2011-12 dated 14-09-2012 issued by the Deputy Commissioner, Bangalore Rural District, the land situated at Indarsanahalli Village, Kundana Hobli, Devanahalli Taluk, measuring Four (4) Acres and bounded on the East by: Sy No.42, West by: Sy No.56 and 61, North by: Sy No.56 and 60 and South by:Road.

ITEM NO.2 All that piece and parcel of converted land bearing in Sy.No.56 (Portion of Old Sy.No.42), converted vide Conversion Order No.ALN (De.Ku)/SR 38/2011-12 dated 25-07-2012 issued by the Deputy Commissioner, Bangalore Rural District, the land situated at Indarsanahalli Village, Kundana Hobli, Devanahalli Taluk, measuring Two (2) Acres and bounded on the East by: Sy No.59 and 60, West by: Sy No.61, North by: Sy No.60 and 61 and South by: Sy No.58.

B. Janardhana, B.Sc., LL.B., – ADVOCATE,
No. 892/C, 1st Floor, 6th Main, WCR 2nd Stage,
Mahalakshmipuram,
BANGALORE – 560 086.
MBL No. 98454 48285
E-mail: janardhana_b16@rediffmail.com
Date : 06-06-2025
Place : Bengaluru

KAIRALEE NIKETHAN EDUCATION TRUST
5th Main, 9th Cross, Indiranagar, 1st Stage, Bangalore-560038
Ph: 080-25256754, 9535800165

TENDER NOTIFICATION

Sealed Tenders on a lumpsum basis are invited from reputed and experienced contractors for a G+4 school building at Marappa Road, Halasuru, Bengaluru-560008.

The project involves complete civil, MEP and finishing works.

Tender form will be issued from today (6/6/25) between 10 am to 4 pm at the KNE Trust office, Indiranagar, Bengaluru-560038. The cost of the tender form is Rs.5000/-. The last date for submission of the filled tender form is on or before 16/6/25, 5 pm.

For any further details contact, The Secretary KNE Trust, Indiranagar.

Kairalee Nikethan Education Trust
(Jaijo Joseph)
Hon. Secretary

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

General

South

5 BHK Bungalow @ BSK 2nd Stage, 30x40 Independent House @ ISRO Layout. Luxury 2, 3 & 4 BHK Apartments for SALE @ BSK. Mob: 9741445209/ 9739150900.

House

Vijayanagar

FOR SALE- House on 30 by 40 at attiguppe Vijaynagar 3 cr negotiable contact 7204915742

Sites

Magadi Road

3000 SFT East Facing site for sale at Syndicate Bank Layout Govindarajnagar Magadi Road. Contact Rajendra:- 9449604358.

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

General

WANTED
HOUSEWIVES and Retired people for part time job opportunity in MNC company. Manager: 8217042937.

Hotel

WANTED IMMEDIATELY MANAGERS, COOKS, ASSISTANTS, CLEANERS, WAITERS, CASHIERS Very Good Salary. Gents/Ladies Walkin: UNCLE'S KITCHEN RESTAURANTS, UNCLE'S STAY HOMES Call: 99000-54462

PERSONAL

Change of Name

I, SHAKUNTHALA DOB:12.07.1962 W/o.Prabhakar Vagle R/a.No.3455 3rd`Cross, C Block Gayathrinagar Sriramuram, Bangalore 560021 have changed my`Name to SHAKUNTALA P VAGLE Vide`affidavit dated:4.6.2025 before`Notary Vanajakshi.R. Bangalore.

PROPERTY CORNER

Commercial Property for RENT
READY TO OCCUPY

PRIME LOCATION
North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
+91 97310 07191
OPENING A GATEWAY TO VARIOUS BUSINESS OPPORTUNITIES

ನಿವೇಶನಗಳು ಮಾರಾಟಕ್ಕಿವೆ
LAND OWNER SHARE
ಕೆಹೆಚ್‌ಬಿ ಸೂರ್ಯ ಸಿಟಿ
ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಮತ್ತು ಬನ್ನೇರುಘಟ್ಟ ರಸ್ತೆ
ನೋಂದಣಿ ಮತ್ತು ನಿರ್ಮಾಣಕ್ಕೆ ಸಿದ್ಧವಾಗಿದೆ
ಎಸ್‌ಬಿಐ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ
ಸಂಪರ್ಕಿಸಿ: 7411554412



SALE
CHAMRAJPET
COMMERCIAL BUILDING
18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-07557

CHANGE OF NAME
I, **SOMA SUNDARA SRIRAMULU** Residing at No.2139, 2nd Block, 5th Main, Royal County, J.P. Nagar, 8th Phase, Bengaluru-560078 have changed my name to **SOMA SUNDAR SRIRAMULU** vide affidavit dated 05.06.2025 before notary Gangaraju.B.N, Bengaluru. Henceforth I shall be known as **SOMA SUNDAR SRIRAMULU** only.

I SNAGEETA R/0 #6, 3rd main, Kattigenahalli, Yelhanka, Bangalore, changed the name to SANGEETA PARAMESHWAR SANGANI as per the document affidavit dated 4/06/2025 before Shamaraya Doddamani.

I ASHAPAUL P. residing at No. 12, End of Dasappa Layout, Yerranapalaya Extension, Ramamurthy Nagar, Dooravaninagar, Bengaluru- 560016, have changed my name to ASHA PAUL. Hereafter I shall be known as ASHA PAUL for all purposes including official documents vide affidavit dated 26-5-25, before Notary G. Rajendra, Bengaluru.

DH Classifieds More value, more impact — ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

ರಾಷ್ಟ್ರೀಯ ವಿನ್ಯಾಸ ಸಂಸ್ಥೆ
ಅಹಮದಾಬಾದ್. ಗಾಂಧಿನಗರ. ಬೆಂಗಳೂರು
ಡಿಪಿಐಐಟಿ ಅಡಿಯಲ್ಲಿನ ಶಾಸನಬದ್ಧ ಸಂಸ್ಥೆ
ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ,
ಭಾರತ ಸರ್ಕಾರ.
ಪಾಲದಿ, ಅಹಮದಾಬಾದ್–380007.
ಫೋನ್: 079–26629500/600
ವೆಬ್: www.nid.edu

ರಾಷ್ಟ್ರೀಯ ವಿನ್ಯಾಸ ಸಂಸ್ಥೆ, ಅಹಮದಾಬಾದ್ ಇವರು ಫಾಕಲ್ಟಿ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ

ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಅಡಿಯಲ್ಲಿರುವ 'ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ'ಯಾಗಿರುವ ರಾಷ್ಟ್ರೀಯ ವಿನ್ಯಾಸ ಸಂಸ್ಥೆ (ಎನ್‌ಐಡಿ), ಅಹಮದಾಬಾದ್ ಇವರು, ಅಹಮದಾಬಾದ್, ಗಾಂಧಿನಗರ ಮತ್ತು ಬೆಂಗಳೂರು ನಗರಗಳಲ್ಲಿರುವ ತನ್ನ ಕ್ಯಾಂಪಸ್‌ಗಳಲ್ಲಿ ಬ್ಯಾಚಲರ್ಸ್, ಮಾಸ್ಟರ್ಸ್ ಮತ್ತು ಡಾಕ್ಟೋರಲ್ ಪದವಿಗಳನ್ನು ನೀಡುತ್ತಿದ್ದು, ಸದರಿ ಸಂಸ್ಥೆಯ ಫಾಕಲ್ಟಿ ತಂಡಕ್ಕೆ ಸೃಜನಶೀಲ ಮತ್ತು ಸಕ್ಷಮ ವಿನ್ಯಾಸ ವೃತ್ತಿನಿಪುಣರು ಬೇಕಾಗಿದ್ದಾರೆ.

ಸಂಸ್ಥೆಯ ಐದು ಫಾಕಲ್ಟಿ ವಿಭಾಗಗಳ ಅಡಿಯಲ್ಲಿನ ವಿವಿಧ ವಿಭಾಗಗಳಲ್ಲಿನ ಸೀನಿಯರ್ ಫಾಕಲ್ಟಿ, ಅಸೋಸಿಯೇಟ್ ಸೀನಿಯರ್ ಫಾಕಲ್ಟಿ ಮತ್ತು ಫಾಕಲ್ಟಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿಗಳ ಸ್ವೀಕೃತಿ ಆರಂಭವಾಗಿದೆ.

ಅರ್ಜಿ ಸಂಸ್ಕರಣೆ ಮತ್ತು ಪ್ರಕ್ರಿಯೆ ಕುರಿತಾದ ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು www.nid.edu ವೆಬ್‌ಸೈಟ್‌ನಲ್ಲಿ "ಕರಿಯರ್ಸ್@ ಎನ್‌ಐಡಿ" ವಿಭಾಗವನ್ನು ಪರಿಶೀಲಿಸಿರಿ.

ಆಸಕ್ತಿಯುಳ್ಳ ಅಭ್ಯರ್ಥಿಗಳು www.nid.edu ವೆಬ್‌ಸೈಟ್ ಮೂಲಕ ಮಾತ್ರ, ನಿಗದಿತ ದಿನಾಂಕದೊಳಗೆ ನಿರ್ದಿಷ್ಟ ನಮೂನೆಯಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸತಕ್ಕದ್ದು. ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಮಾರ್ಪಾಡು, ದಿನಾಂಕ ವಿಸ್ತರಣೆ ಇತ್ಯಾದಿಗಳು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **17ನೇ ಜೂನ್ 2025 (ಭಾರತೀಯ ಕಾಲಮಾನ ಸಂಜೆ 05:00 ಗಂಟೆಯೊಳಗೆ)**

CBC 05216/12/0001/2526

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಜಿಲ್ಲಾ ಅಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ : 215, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.
ದೂ.: 080–2244 9999, ಇ–ಮೇಲ್: dobcmbengalurururaral@gmail.com

ಸಂಖ್ಯೆ : ಡಿ.ಬಿ.ಸಿ./ಬೆಂ.ಗ್ರಾ./ಹೊ.ಸ.ಟೆ./ಸಿಆರ್–09/2025–26
ದಿನಾಂಕ : 03–06–2025

ಪತ್ರಿಕಾ ಪ್ರಕಟಣೆ

2025–26 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಜಿಲ್ಲಾ ಕಛೇರಿ ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು, ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹಾಗೂ ಜವಾನರ ಹುದ್ದೆಗಳಿಗೆ ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಅರ್ಹ ಹಾಗೂ ವಿವಿಧ ಕಾಯ್ದೆಗಳ ಕಾನೂನಿನಡಿಯಲ್ಲಿ ನೊಂದಣಿ ಮಾಡಿಕೊಂಡಿರುವ ವ್ಯಕ್ತಿಗಳು / ಸಂಸ್ಥೆಗಳಿಂದ ಆನ್‌ಲೈನ್ ಮುಖಾಂತರ ಟೆಂಡರ್ ಕರೆಯಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ www.kppp.karnataka.gov.in (ಟೆಂಡರ್ ಸಂಖ್ಯೆ : BCWD/2025-26/SE0081) ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ : 03–06–2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17–06–2025 ರ ಸಂಜೆ 5.29 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ (ಟೆಂಡರ್ ಸಂಖ್ಯೆ : BCWD/2025-26/SE0081) ಇ–ಪ್ರೊಕ್ಯೂರ್‌ಮೆಂಟ್ www.kppp.karnataka.gov.in ನ ಮೂಲಕ ಮಾಹಿತಿ ಪಡೆಯಬಹುದು ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1078/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರ ಕಚೇರಿ, ಅನೆಕ್ಸ್ ಕಟ್ಟಡ–1, ಎನ್.ಆರ್. ಚೌಕ , ಬೆಂಗಳೂರು–560002.

No: BBMP/C.Comm/PSR(G)/558 /2025-26 FORM – III (See Sub-rule (3) of rule-3) Date: 04.06.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ **ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಮಾಸ್ಟರ್ ಪ್ಲಾನ್ 2015ರ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಗೇರ್ ಸ್ಕೂಲ್ ರಸ್ತೆಯಿಂದ ಗುಂಜೂರು ಪಾಳ್ಯ, ವರ್ತೂರು ಮೂಲಕ ಪೆರಿಫೆರಲ್ ರಿಂಗ್ ರಸ್ತೆಗೆ ರಸ್ತೆ ರಚನೆ ಮತ್ತು 45.00 ಮೀಟರ್ ಅಗಲದ ರಸ್ತೆಯ ಅಗಲೀಕರಣ** ರಚನೆಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳ ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು, ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರ: ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಪಣತ್ತೂರು**

Sy. No / Khatha no.	Type of land		Nature of Land	Dimension of the land / plot and extent in Sq.m	Boundaries of the land / plot				Building details			Present activity on land/ Building (Specify Specific activity such as shop, office, factory, apartment, Individual house etc.,	Market (guidelines) value of the land per Sq.m	Name and address of the owner of the plot/ land for which DRC is to be issued
	Vacant	Built up	Agriculture Converted Undeveloped Approved layout / developed land Building Site	Dimension Extent	East	West	North	South	Extent in Sq.m	Type of Construction and No. of floors	Floor Area Ratio			
Sy No.59/14	Vacant land		Agriculture Land	455.26	Sy No.59/15	Sy No.59/13	Sy No.59/1	Sy No.59/23	None	None	None	Vacant	60,000/-	Sri.Aswathanarayana P.K S/o Krishnappa R, R/at No.64, BBMP Office Road, Panathuru, Bangalore-560103.

Note: Market guideline value of this property is considered subject to conditions of payment of fee as per Government Order No:ನಅಇ 137 ಎಂಎನ್‌ಯು 2024 (E), ದಿನಾಂಕ:09.09.2024 and as per the Circular No:ಆಯುಕ್ತರು/ಪಿ.ಎಸ್.ಆರ್/ಜಿ/1802/2024-25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ ವಿಭಾಗ / ಶಾಖಾ ಕಚೇರಿಯ ಹೆಸರು ಮತ್ತು ವಿಳಾಸ
ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು–560002.

ಸಹಿ/– ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಮೀನಗಡ ಕುರಿಗಳಿಗೆ ₹1.50 ಲಕ್ಷದವರೆಗೆ ಬೆಲೆ, ನಾಟಿ ಟಗರುಗಳಿಗೆ ಹೆಚ್ಚಿದ ಬೇಡಿಕೆ

ಬಕ್ರೀದ್: ಕುರಿ, ಮೇಕೆ ವ್ಯಾಪಾರ ಜೋರು

● ಖಲೀಲ ಅಹ್ಮದ ಶೇಖ

ಚಾಮರಾಜಪೇಟೆಯ ಮುಖ್ಯರಸ್ತೆಯಲ್ಲಿ ಹೋತವೊಂದು ಎರಡು ಕಾಲುಗಳ ಮೇಲೆ ನಿಂತಿತ್ತು (ಎಡಚಿತ್ರ) ಈದ್ಗಾ ಮೈದಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮುಸ್ಲಿಂ ಸಮುದಾಯದವರು ಕುರಿಗಳ ಖರೀದಿಯಲ್ಲಿ ತೊಡಗಿದ್ದರು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಬಕ್ರೀದ್ ಹಬ್ಬದ ಅಂಗವಾಗಿ ನಗರದ ಚಾಮರಾಜಪೇಟೆಯ ಈದ್ಗಾ ಮೈದಾನ ಹಾಗೂ ಆರ್‌.ಟಿ. ನಗರದ ಮುಖ್ಯರಸ್ತೆಯಲ್ಲಿ ಟಗರು, ಕುರಿ ಹಾಗೂ ಮೇಕೆಗಳ ಮಾರಾಟ ಜೋರಾಗಿದೆ. ಈ ಬಾರಿ ನಾಟಿ ಮತ್ತು ಬಾಗಲಕೋಟೆ ಜಿಲ್ಲೆಯ ಅಮೀನಗಡ ತಳಿಯ ಕುರಿಗಳಿಗೆ ಬೇಡಿಕೆ ಹೆಚ್ಚಿದೆ.

ಬಕ್ರೀದ್ ಹಬ್ಬಕ್ಕೆ ಒಂದು ದಿನ ಬಾಕಿ ಇದ್ದು, ಕುರಿ ವ್ಯಾಪಾರ ಜೋರಾಗಿದೆ. ರಾಜ್ಯದ ನಾನಾ ಜಿಲ್ಲೆಗಳಿಂದ ವಿವಿಧ ತಳಿಯ ಕುರಿ ಹಾಗೂ ಮೇಕೆಗಳ ಹಿಂಡು ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಬೀಡುಬಿಟ್ಟಿದೆ. ಶನಿವಾರ ನಡೆಯುವ ಬಕ್ರೀದ್ ಹಬ್ಬಕ್ಕೂ ಮುನ್ನವೇ ಮುಸ್ಲಿಂ ಸಮುದಾಯದವರು ಕುರಿಗಳನ್ನು ಖರೀದಿಸುತ್ತಾರೆ. ಹಾಗಾಗಿ ಸಂತೆಯಲ್ಲಿ ವಿವಿಧ ತಳಿಯ ಸಾವಿರಾರು ಕುರಿಗಳು ಮಾರಾಟಕ್ಕಿವೆ. ಕುರಿಗಳನ್ನು ಖರೀದಿಸಲು ಗ್ರಾಹಕರು ಗುಂಪು ಗುಂಪಾಗಿ ಬರುತ್ತಿದ್ದಾರೆ.

ಆರ್‌.ಟಿ. ನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ನೂರಾರು ಜನ ವ್ಯಾಪಾರಿಗಳು ಕುರಿ, ಮೇಕೆ ಹಿಂಡುಗಳ ಜೊತೆಗೆ ಒಂದು ವಾರದಿಂದ ಠಿಕಾಣಿ ಹೂಡಿದ್ದಾರೆ. ಇಲ್ಲಿ ಮಧ್ಯಾಹ್ನ 1ಕ್ಕೆ ಪ್ರಾರಂಭವಾಗುವ ವ್ಯಾಪಾರ ಮಧ್ಯರಾತ್ರಿಯವರೆಗೆ ನಡೆಯುತ್ತದೆ.

'ಬಂಡೂರು, ಮೌಳಿ, ಶಿರೋಹಿ, ಬಾಗಲಕೋಟೆ, ಅಮೀನಗಡ, ಗೆಣಸಿ, ಶಿರಾ, ತುಮಕೂರು, ತಮಿಳುನಾಡು ಸೇರಿದಂತೆ ವಿವಿಧ ತಳಿಯ ಕುರಿಗಳು ಇಲ್ಲಿವೆ. ಬಂಡೂರು ಕುರಿಗಳು ಕನಿಷ್ಠ ₹15 ಸಾವಿರದಿಂದ ಗರಿಷ್ಠ ₹50 ಸಾವಿರದವರೆಗೆ ಮಾರಾಟವಾದರೆ, ಅಮೀನಗಡ ತಳಿಯ ಟಗರುಗಳು ಕನಿಷ್ಠ ₹20 ಸಾವಿರದಿಂದ ಗರಿಷ್ಠ ₹1.50 ಲಕ್ಷದವರೆಗೂ ಬಿಕರಿಯಾಗಿವೆ' ಎಂದು ದಾವಣಗೆರೆಯ ವ್ಯಾಪಾರಿ ನಿಸಾರ್ ಅಹ್ಮದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅಮೀನಗಡ ತಳಿಗೆ ಸೇರಿದ 25ಕ್ಕೂ ಹೆಚ್ಚು ಟಗರುಗಳನ್ನು ದಾವಣಗೆರೆಯಿಂದ ತಂದಿದ್ದೇನೆ. ಈಗಾಗಲೇ 15 ಟಗರುಗಳು ಮಾರಾಟವಾಗಿವೆ. ರಂಜಾನ್, ಬಕ್ರೀದ್ ಸಂದರ್ಭದಲ್ಲಿ ಮಾತ್ರ ಕುರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಗಾತ್ರ, ತೂಕದ ಆಧಾರದಲ್ಲಿ ಕುರಿಗಳ ಖರೀದಿ ನಡೆಯುತ್ತದೆ. ಹೋದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ವ್ಯಾಪಾರ ಚೆನ್ನಾಗಿದೆ. ಕುರಿ, ಮೇಕೆಗೆ ಹೆಚ್ಚು ಬೇಡಿಕೆ ಇದ್ದು, ಉತ್ತಮ ಬೆಲೆಗೆ ಮಾರಾಟವಾಗುತ್ತಿವೆ' ಎಂದರು.

ಉದ್ದ ಕಿವಿಯ ಹೋತಕ್ಕೆ ₹65 ಸಾವಿರ!: ಆರ್‌.ಟಿ. ನಗರದ ಮುಖ್ಯರಸ್ತೆಯಲ್ಲಿ ಮಾರಾಟಕ್ಕೆ ತಂದಿದ್ದ ಉದ್ದ ಕಿವಿ ಇರುವ ಹೋತವೊಂದು ನೋಡಗರನ್ನು ಸೆಳೆಯಿತು. 'ಇದರ ಬೆಲೆ ₹65 ಸಾವಿರ ಇದೆ. ಈ ಹೋತ 60 ಕೆ.ಜಿ. ತೂಕ ಇದೆ. ಅದಕ್ಕೆ ಇದರ ಬೆಲೆಯೂ ಹೆಚ್ಚು. ಎರಡು ವರ್ಷಗಳಿಂದ ಇದನ್ನು ಸಾಕುತ್ತಿದ್ದೇನೆ. ನಾನು ನಿಗದಿಪಡಿಸಿರುವ ಬೆಲೆ ಬಂದರೆ ಮಾತ್ರ ಮಾರಾಟ ಮಾಡುತ್ತೇನೆ' ಎಂದು ದೇವನಹಳ್ಳಿ ಗೋವಿಂದರಾಜು ಹೇಳಿದರು.

'ನಾಟಿ ಕುರಿಗೆ ಭಾರಿ ಬೇಡಿಕೆ'

'ಅಮೀನಗಡದ ಟಗರುಗಳ ಜತೆಗೆ ಗ್ರಾಮೀಣ ಭಾಗದಲ್ಲಿ ಸಾಕಿರುವ ನಾಟಿ ಟಗರುಗಳಿಗೆ ಭಾರಿ ಬೇಡಿಕೆ ಇದೆ. ಹೀಗಾಗಿ ಸಂತೆಯಲ್ಲಿ ಎಲ್ಲಿ ನೋಡಿದರೂ ಗ್ರಾಮೀಣ ಭಾಗದ ನಾಟಿ ಟಗರು, ಕುರಿ, ಮೇಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು. ಮಂಡ್ಯ ಜಿಲ್ಲೆಯ ಮಳವಳ್ಳಿಯ ಬಣ್ಣೂರು, ಬಂಡೂರು ಕುರಿಗಳು ಹೆಚ್ಚಾಗಿ ಮಾರಾಟವಾಗುತ್ತಿವೆ' ಎನ್ನುತ್ತಾರೆ ಶಿರಾದಿಂದ ಬಂದಿರುವ ವ್ಯಾಪಾರಿ ಸುಹೇಲ್.

ಐಐಎಸ್‌ಸಿಯಲ್ಲಿ 'ಕ್ವಾಂಟಮ್ ಪಾರ್ಕ್'ಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸಹಯೋಗದೊಂದಿಗೆ 'ಕ್ವಾಂಟಮ್ ಸಂಶೋಧನಾ ಪಾರ್ಕ್' ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಸಚಿವ ಸಂಪುಟ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಈ ವಿಷಯ ತಿಳಿಸಿದರು.

'₹48 ಕೋಟಿ ಅನುದಾನದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಈ ಪಾರ್ಕ್ ಸ್ಥಾಪನೆ ಆಗಲಿದೆ. ಜಾಗತಿಕ ಮಟ್ಟದ ಪ್ರಯೋಗಾಲಯಗಳು ಮತ್ತು ಸಂಶೋಧನಾ ಉಪಕರಣಗಳನ್ನು ಹೊಂದಿರಲಿದೆ' ಎಂದು ಅವರು ಹೇಳಿದರು.

'ಕ್ವಾಂಟಮ್ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಸಾಮರ್ಥ್ಯ ಹಾಗೂ ಅವಕಾಶಗಳನ್ನು ವೃದ್ಧಿಸಲು ಈ ಪಾರ್ಕ್ ನೆರವಾಗಲಿದೆ. ವಿದ್ಯಾರ್ಥಿಗಳು, ಸಂಶೋಧಕರು, ನವೋದ್ಯಮಗಳು ಈ ಪಾರ್ಕ್‌ನ ಸವಲತ್ತುಗಳನ್ನು ಬಳಸಿಕೊಳ್ಳಲು ಅವಕಾಶ ಒದಗಿಸಲಾಗುತ್ತದೆ' ಎಂದರು.

ಮರು ಟೆಂಡರ್: ಬಿಬಿಎಂಪಿಯ ವ್ಯಾಪ್ತಿಯ ಸಮಗ್ರ ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಕರೆದ ಸಂದರ್ಭದಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸದ ಕಾರಣ, ನಾಲ್ಕರ ಬದಲಿಗೆ ಎರಡು ಪ್ಯಾಕೇಜ್‌ಗಳಲ್ಲಿ ಮರು ಟೆಂಡರ್ ಕರೆಯಲು ಸಚಿವ ಸಂಪುಟ ನಿರ್ಣಯಿಸಿದೆ ಎಂದರು.

ಶೇ 5 ಬಡ್ಡಿ ಸಹಾಯ ಧನ: ನಗರದ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಸಾಲ ಪಡೆದು ಮನೆ ಖರೀದಿಸುವ ಫಲಾನುಭವಿಗಳಿಗೆ ಶೇ 5 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು ಎಂದರು.

'ಬಡ್ಡಿ ಸಹಾಯಧನ ಯೋಜನೆ'ಯಡಿ ಫಲಾನುಭವಿಗಳ ಸಾಲದ ಮಾಸಿಕ ಕಂತಿನ ಬಡ್ಡಿ ಭಾಗದಲ್ಲಿ ₹3000 ಮಿತಿಗೆ ಒಳಪಟ್ಟು ಸರ್ಕಾರದಿಂದ ಶೇ 3 ರಿಂದ ಶೇ 5 ರ ಸಹಾಯಧನ ನೀಡಲಾಗುವುದು. ಸಹಾಯಧನವನ್ನು ಸರ್ಕಾರವೇ ಭರಿಸಲಿದೆ. ಈ ಸೌಲಭ್ಯವನ್ನು ಫಲಾನುಭವಿಯ ಸಾಲದ ಅವಧಿಯ 10 ವರ್ಷಗಳ ಅವಧಿಗೆ ಮಾತ್ರ ನೀಡಲಾಗುವುದು' ಎಂದು ಅವರು ಹೇಳಿದರು.

ಚರ್ಚೆಗೆ ಬಾರದ ಸಮೀಕ್ಷೆ ದತ್ತಾಂಶ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ದತ್ತಾಂಶಗಳ ಅಧ್ಯಯನ ವರದಿಯ ವಿಷಯ ಚರ್ಚೆಗೆ ಬರಲಿಲ್ಲ ಎಂದು ಪಾಟೀಲ ತಿಳಿಸಿದರು.

'ಬೂಟ್ ಆಧಾರದಲ್ಲಿ ಸುರಂಗ ರಸ್ತೆ'

ಹೆಬ್ಬಾಳ ಜಂಕ್ಷನ್‌ನಿಂದ ಎಚ್‌ಎಸ್‌ಆರ್ ಲೇಔಟ್‌ನ ಸಿಲ್ಕ್‌ಬೋರ್ಡ್‌ವರೆಗೆ ಉತ್ತರ–ದಕ್ಷಿಣ ಕಾರಿಡಾರ್ (ಸುರಂಗ ರಸ್ತೆ) ಅನ್ನು ಬೂಟ್ (ಬಿಲ್ಟ್ ಓನ್ ಆಪರೇಟ್–ಟ್ರಾನ್ಸ್‌ಫರ್) ಆಧಾರದಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ಸದ್ಯದಲ್ಲೇ ಜಾಗತಿಕ ಟೆಂಡರ್ ಕರೆಯಲಾಗುವುದು ಎಂದು ಎಚ್‌.ಕೆ.ಪಾಟೀಲ ತಿಳಿಸಿದರು. ಅವಳಿ ಭೂಗತ ಸುರಂಗ ರಸ್ತೆಯ ಉದ್ದ 33.49 ಕಿ.ಮೀ. ಅನ್ನು 26 ತಿಂಗಳಲ್ಲಿ ಕೊರೆಯಲಾಗುತ್ತದೆ ಹಾಗೂ ನಂತರದ 12 ತಿಂಗಳಲ್ಲಿ ನಿರ್ಮಾಣ ಕಾಮಗಾರಿ ನಡೆಯಲಿದೆ. ಇದು ಟೋಲ್ ರಸ್ತೆ ಆಗಿರುತ್ತದೆ ಎಂದರು.

'ಮೇಕ್‌ಮೈಟ್ರಿಪ್'ನಲ್ಲಿ ಸೀಟ್ ಲಭ್ಯತೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ಪ್ರಯಾಣಿಕರು ಸೀಟು ಲಭ್ಯತೆ ಬಗ್ಗೆ ಖಾತರಿ ಮಾಡಿಕೊಳ್ಳಲು 'ಮೇಕ್‌ಮೈಟ್ರಿಪ್' ಮುಂಚಿತವಾಗಿಯೇ ಮಾಹಿತಿ ಪಡೆಯುವ ಆಯ್ಕೆಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪರಿಚಯಿಸಿದೆ.

ರೈಲು ಟಿಕೆಟ್ ಕಾಯ್ದಿರಿಸಲು 60 ದಿನ ಮುಂಚಿತವಾಗಿಯೇ ಅವಕಾಶ ನೀಡಲಾಗಿರುತ್ತದೆ. ಆದರೆ, ಬಹಳಷ್ಟು ಜನರು ಕೊನೆಯ ಕ್ಷಣದಲ್ಲಿ ಟಿಕೆಟ್ ಕಾಯ್ದಿರಿಸಲು ಮುಂದಾಗುತ್ತಿದ್ದಾರೆ. ಇನ್ನು ಹಲವರು ಟಿಕೆಟ್ ಬುಕ್ ಮಾಡದೇ ಕೇವಲ ಸೀಟ್ ಬ್ಲಾಕಿಂಗ್ ಮಾಡಿರುತ್ತಾರೆ. ಇದರಿಂದ ನಿಖರವಾಗಿ ಎಷ್ಟು ಸೀಟು ಲಭ್ಯವಿದೆ, ಎಷ್ಟು ಬುಕ್ಕಿಂಗ್ ಆಗಿದೆ ಎಂಬುದು ತಿಳಿಯುತ್ತಿರಲಿಲ್ಲ.

ಯಾವ ತಿಂಗಳಲ್ಲಿ ಹೆಚ್ಚು ಬೇಡಿಕೆ ಇರುತ್ತದೆ. ಎಷ್ಟು ದಿನದ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸಬಹುದು ಎಂಬಿತ್ಯಾದಿ ಮಾಹಿತಿಯನ್ನು 'ಮೇಕ್‌ಮೈಟ್ರಿಪ್' ವೆಬ್‌ಸೈಟ್ ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಸಕ ಸೇರಿ ಹಲವರು ಪೊಲೀಸ್ ವಶಕ್ಕೆ

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮಾಗಡಿ ತಾಲ್ಲೂಕಿನ ಮರೂರು ಹ್ಯಾಂಡ್ ಪೋಸ್ಟ್ ಬಳಿ ಹೇಮಾವತಿ ನೀರಿಗಾಗಿ ಹೆದ್ದಾರಿ ತಡೆ ನಡೆಸಿದ ಶಾಸಕ ಎಚ್‌.ಸಿ. ಬಾಲಕೃಷ್ಣ ಸೇರಿದಂತೆ ಹಲವು ಮುಖಂಡರು ಪೊಲೀಸರು ವಶಕ್ಕೆ ಪಡೆದು ವಾಹನದಲ್ಲಿ ಕರೆದೊಯ್ದರು

ಮಾಗಡಿ: ತಾಲ್ಲೂಕಿಗೆ ನೀರು ಹರಿಸುವ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಪರವಾಗಿ ತಾಲ್ಲೂಕಿನ ಮರೂರು ಹ್ಯಾಂಡ್ ಪೋಸ್ಟ್ ಬಳಿ ಗುರುವಾರ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ–75 ತಡೆದು ಪಾದಯಾತ್ರೆ ನಡೆಸಿದ ಶಾಸಕ ಎಚ್‌.ಸಿ.ಬಾಲಕೃಷ್ಣ ಸೇರಿದಂತೆ ರೈತಪರ ಮತ್ತು ಕನ್ನಡಪರ ಸಂಘಟನೆಗಳ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಟ್ಟರು.

ಯೋಜನೆ ವಿರೋಧಿಸಿ ತುಮಕೂರಿನಲ್ಲಿ ಕಾಮಗಾರಿಗೆ ಅಡ್ಡಿಪಡಿಸಿ ಪ್ರತಿಭಟಿಸಿದ್ದನ್ನು ಖಂಡಿಸಿ, 'ನಮ್ಮ ನೀರು, ನಮ್ಮ ಹಕ್ಕು' ಘೋಷವಾಕ್ಯದೊಂದಿಗೆ ಬಾಲಕೃಷ್ಣ ನೇತೃತ್ವದಲ್ಲಿ ಪಕ್ಷಾತೀತವಾಗಿ ಹೆದ್ದಾರಿ ತಡೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಕಾರರು ತುಮಕೂರಿನ ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿದರು.

10 ನಿಮಿಷ ಅವಕಾಶ: ಈ ವೇಳೆ ಪೊಲೀಸರು, 'ಹತ್ತು ನಿಮಿಷದಲ್ಲಿ ರಸ್ತೆ ತಡೆ ಮುಗಿಸಿ' ಎಂದು ಬಾಲಕೃಷ್ಣ ಅವರಿಗೆ ಕೋರಿ ಹೆದ್ದಾರಿ ಮತ್ತೊಂದು ಕಡೆ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಇದರಿಂದ ಕೆರಳಿದ ಬಾಲಕೃಷ್ಣ, 'ಈ ರೀತಿ ಪ್ರತಿಭಟಿಸಿದರೆ ಪ್ರಯೋಜನವಾಗದು. ನಾವು ತಾಳೆಕೆರೆ ಹ್ಯಾಂಡ್ ಪೋಸ್ಟ್‌ವರೆಗೆ ಪಾದಯಾತ್ರೆ ಮಾಡುತ್ತೇವೆ' ಎಂದು ಬೆಂಬಲಿಗರೊಂದಿಗೆ ಹೆದ್ದಾರಿ ಮುಂದಕ್ಕೆ ಹೆಜ್ಜೆ ಹಾಕಿದರು.

ಸ್ಥಳದಲ್ಲಿದ್ದ ಡಿವೈಎಸ್ಪಿ ಕೆ.ಎಂ. ಪ್ರವೀಣ್ ಕುಮಾರ್, ಇನ್‌ಸ್ಪೆಕ್ಟರ್‌ಗಳ ಮನವೊಲಿಕೆಗೂ ಜಗ್ಗದೆ ಬಾಲಕೃಷ್ಣ ಪಾದಯಾತ್ರೆ ಮುಂದುವರಿಸಿದರು. ವಾಹನಗಳ ಸಂಚಾರ ಅಸ್ತವ್ಯಸ್ಥವಾಗಿದ್ದನ್ನು ಗಮನಿಸಿದ ಪೊಲೀಸರು, ಮುಂಜಾಗ್ರತಾ ಕ್ರಮವಾಗಿ ಶಾಸಕರು ಸೇರಿದಂತೆ ಜೊತೆಗಿದ್ದವರನ್ನು ವಶಕ್ಕೆ ಪಡೆದರು. ವಿಷಯ ತಿಳಿದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್‌.ಎಂ. ರೇವಣ್ಣ ಠಾಣೆಗೆ ಬಂದರು. ಡಿವೈಎಸ್ಪಿ ಪ್ರವೀಣ್ ಅವರು ಠಾಣೆಯಲ್ಲೇ ಬಾಲಕೃಷ್ಣ, ರೇವಣ್ಣ ಸೇರಿದಂತೆ ವಿವಿಧ ಮುಖಂಡರೊಂದಿಗೆ ಮಾತನಾಡಿ ಮನವೊಲಿಸಿದರು. ವಶಕ್ಕೆ ಪಡೆದಿದ್ದ ಎಲ್ಲರನ್ನೂ ಬಿಟ್ಟು ಕಳುಹಿಸಿದರು.

ವಾರದ ಗಡುವು: ಠಾಣೆ ಬಳಿ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಬಾಲಕೃಷ್ಣ, 'ನಮ್ಮ ಪಾಲಿನ ಮುಕ್ಕಾಲು ಟಿಎಂಸಿ ನೀರನ್ನು ನಾವು ಕೇಳುತ್ತಿದ್ದೇವೆಯೇ ಹೊರತು ತುಮಕೂರು ಪಾಲಿನ ನೀರನ್ನಲ್ಲ. ಪ್ರಾಣ ಕೊಟ್ಟಾದರೂ ಹೇಮಾವತಿ ನೀರು ಪಡೆದೇ ತೀರುತ್ತೇವೆ. ಅದನ್ನು ತುಮಕೂರಿನ ಜನಪ್ರತಿನಿಧಿಗಳು ತಡೆಯಲು ಸಾಧ್ಯವಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಳೆಮತ್ತಿ ನೇಚರ್ ಫೌಂಡೇಷನ್ ಅಧ್ಯಯನದಲ್ಲಿ ಉಲ್ಲೇಖ

ಬೆಂಗಳೂರು ಸುತ್ತ 85 ಚಿರತೆಗಳ ವಾಸ

ಪ್ರಜಾವಾಣಿ ವಾರ್ತೆ

ತುರಹಳ್ಳಿಗುಡ್ಡದಲ್ಲಿ ಕ್ಯಾಮೆರಾದಲ್ಲಿ ಸೆರೆಯಾದ ಚಿರತೆ ಮರಿಗಳು

ಬೆಂಗಳೂರು: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯೂ ಸೇರಿದಂತೆ ನಗರದ ಸುತ್ತಮುತ್ತಲಲ್ಲಿ 80ರಿಂದ 85 ಚಿರತೆಗಳು ಇವೆ ಎಂದು ಹೊಳೆಮತ್ತಿ ನೇಚರ್ ಫೌಂಡೇಷನ್ ಅಂದಾಜು ಮಾಡಿದೆ.

ಫೌಂಡೇಷನ್‌ನ ಸಂಜಯ್ ಗುಬ್ಬಿ ಮತ್ತು ತಂಡದವರು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಬಳಸಿ ಒಂದು ವರ್ಷ ಅಧ್ಯಯನ ನಡೆಸಿದ್ದರು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ 54 ಚಿರತೆಗಳು ಮತ್ತು ಬೆಂಗಳೂರಿನ ಸುತ್ತಮುತ್ತಲಿನ ಕಾಯ್ದಿಟ್ಟ ಮತ್ತು ಪರಿಭಾವಿತ ಅರಣ್ಯ ಪ್ರದೇಶಗಳಲ್ಲಿ 30 ಚಿರತೆಗಳಿವೆ ಎಂದು ಅಂದಾಜಿಸಿದ್ದಾರೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಸೇರಿ, ಬಿ.ಎಂ.ಕಾವಲ್, ಯು.ಎಂ. ಕಾವಲ್, ತುರಹಳ್ಳಿ, ತುರಹಳ್ಳಿಗುಡ್ಡ, ಸೂಳಿಕೆರೆ, ಹೆಸರಘಟ್ಟ, ಮಾರಸಂದ್ರ, ಮಂಡೂರು, ಸರ್ಕಾರಿ ಇಲಾಖೆಗಳ ಜಾಗಗಳು ಮತ್ತು ಹಲವು ಖಾಸಗಿ ಜಮೀನುಗಳನ್ನು ಒಳಗೊಂಡು ಸುಮಾರು 282 ಚದರ ಕಿ.ಮೀ. ಪ್ರದೇಶದಲ್ಲಿ ಅಧ್ಯಯನ ಕೈಗೊಂಡಿದ್ದರು.

ಚಿರತೆಗಳಲ್ಲದೆ ಇತರ 34 ಪ್ರಭೇದದ ಸ್ತನಿಗಳು ಪತ್ತೆಯಾಗಿವೆ. ಇವುಗಳಲ್ಲಿ ನಶಿಸುತ್ತಿರುವ ನಾಲ್ಕು ಪ್ರಭೇದಗಳು, ಅಪಾಯದ ಅಂಚಿನಲ್ಲಿರುವ ನಾಲ್ಕು ಪ್ರಭೇದಗಳೂ ಸೇರಿವೆ. 34 ಪ್ರಭೇದಗಳಲ್ಲಿ 22 ಪ್ರಭೇದದ ಸ್ತನಿಗಳು ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಪರಿಚ್ಛೇದ -1, ಮತ್ತು ಐದು ಪ್ರಭೇದಗಳನ್ನು ಪರಿಚ್ಛೇದ-2ರ ಅಡಿಯಲ್ಲಿ ಸಂರಕ್ಷಿಸಲಾಗಿದೆ.

ಮುಂಬೈ ನಗರಕ್ಕಿಂತ ಬೆಂಗಳೂರು ನಗರದಲ್ಲಿ ಹೆಚ್ಚು ಚಿರತೆಗಳಿರುವುದು ಈ ಅಧ್ಯಯನದಿಂದ ಸಾಬೀತಾಗಿದೆ. ಮುಂಬೈ ಆಸುಪಾಸಿನಲ್ಲಿ 54 ಚಿರತೆಗಳಿರುವುದು ದಾಖಲಾಗಿದೆ.

ಮಾಂಸಾಹಾರಿ ವನ್ಯಜೀವಿಗಳಾದ ಹುಲಿ, ಚಿರತೆ, ಸೀಳು ನಾಯಿ ಮತ್ತು ಸಸ್ಯಾಹಾರಿ ವನ್ಯಜೀವಿಗಳಾದ ಆನೆ, ಕಾಟಿ, ಕಡವೆಯಂತಹ ದೊಡ್ಡ ಕಶೇರುಕಗಳು ಮಹಾನಗರದ ಪಕ್ಕದಲ್ಲೇ ಇರುವ ಹೆಗ್ಗಳಿಕೆಗೆ ಬೆಂಗಳೂರು ಪಾತ್ರವಾಗಿದೆ. ಬನ್ನೇರುಘಟ್ಟ ಉದ್ಯಾನದಲ್ಲಿ 2019ರಲ್ಲಿ 40, 2020ರಲ್ಲಿ 47 ಚಿರತೆಗಳಿದ್ದವು. ಈಗ 54 ಚಿರತೆಗಳಿರುವುದು ಇವುಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಅಧ್ಯಯನ ತಂಡ ತಿಳಿಸಿದೆ.

ಅಧ್ಯಯನ ತಂಡದಲ್ಲಿ ಶ್ರವಣ್ ಸುಥಾರ್, ಸಂದೇಶ್ ಅಪ್ಪು ನಾಯ್ಕ್, ಪೂರ್ಣೇಶ ಎಚ್‌.ಸಿ., ಮಯೂರ್ ಮಿರಾಶಿ, ಐಶ್ವರ್ಯ ಕಾರಂತ್ ಮತ್ತಿತರರು ಇದ್ದರು.

ಶಿಫಾರಸುಗಳು

ಅಧ್ಯಯನದ ಆಧಾರದಲ್ಲಿ ಹೊಳೆಮತ್ತಿ ನೇಚರ್ ಫೌಂಡೇಷನ್ ಕೆಲವು ಶಿಫಾರಸುಗಳನ್ನು ಮಾಡಿದೆ.

ಬಿ.ಎಂ.ಕಾವಲ್, ಯು.ಎಂ. ಕಾವಲ್, ರೋರಿಚ್ ಎಸ್ಟೇಟ್ ಮತ್ತು ಗುಲ್ಲಹಳ್ಳಿಗುಡ್ಡ ಕಾಡುಗಳನ್ನು ಸಂರಕ್ಷಣಾ ಮೀಸಲು ಪ್ರದೇಶ ಎಂದು ಘೋಷಿಸಬೇಕು. ದುರ್ಗದಕಲ್, ಬೆಟ್ಟಹಳ್ಳಿವಾಡೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳು, ಮತ್ತು ಜೆ.ಐ.ಬಾಚಹಳ್ಳಿ ಮತ್ತು ಎಂ.ಮಣಿಯಂಬಳ್ ಪ್ರದೇಶಗಳ ಪರಿಭಾವಿತ ಅರಣ್ಯ ಪ್ರದೇಶಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸೇರಿಸಬೇಕು. ಮಾನವ-ಚಿರತೆ ಸಹಬಾಳ್ವೆಗೆ ಒತ್ತುಕೊಡಬೇಕು. ಮುನೇಶ್ವರಬೆಟ್ಟ-ಬನ್ನೇರುಘಟ್ಟ ವನ್ಯಜೀವಿ ಕಾರಿಡಾರ್ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಇತರ ಪ್ರದೇಶಗಳಲ್ಲಿ ಹಿಡಿದ ಚಿರತೆಗಳನ್ನು ಬನ್ನೇರುಘಟ್ಟಕ್ಕೆ ಸ್ಥಳಾಂತರಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಜಿಬಿಎ ವ್ಯಾಪ್ತಿಯಲ್ಲಿರುವ ಶಾಲೆಗಳ ಸಹಯೋಗ

'ಬೆಂಗಳೂರು ಹವಾಮಾನ ಕಾರ್ಯಯೋಜನೆ ಕ್ಲಬ್' ರಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮರಗಣತಿ: ಮಹದೇವಪುರ ಹಾಗೂ ಬೊಮ್ಮನಹಳ್ಳಿಯಲ್ಲಿ ಪ್ರಾಯೋಗಿಕ ಯೋಜನೆ
- ಗ್ರೀನ್‌ವಾರ್ಡ್ ಮಾಡಲು ವಾರ್ಡ್‌ಗೆ ತಲಾ ₹1 ಕೋಟಿ

ಬೆಂಗಳೂರು: 'ಮಕ್ಕಳಲ್ಲಿ ಪರಿಸರ, ಹಸಿರು ಇಂಧನ, ಸ್ವಚ್ಛತೆ, ನೀರಿನ ಸಂರಕ್ಷಣೆ, ಗುಣಮಟ್ಟದ ಗಾಳಿ ಬಗ್ಗೆ ಅರಿವು ಮೂಡಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಶಾಲೆಗಳ ಸಹಯೋಗದಲ್ಲಿ 'ಬೆಂಗಳೂರು ಹವಾಮಾನ ಕಾರ್ಯಯೋಜನೆ ಕ್ಲಬ್' ರಚಿಸಲಾಗುವುದು' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ವಿಶ್ವ ಪರಿಸರ ದಿನದಂದು (ಜೂನ್ 5) 'ಬೆಂಗಳೂರು ಹವಾಮಾನ ಕಾರ್ಯಯೋಜನೆ' ಕ್ಲಬ್ ಸ್ಥಾಪಿಸಲಾಗುತ್ತಿದೆ. ಇದರಲ್ಲಿ ಒಬ್ಬ ಶಿಕ್ಷಕ ಹಾಗೂ ಕನಿಷ್ಠ 25 ವಿದ್ಯಾರ್ಥಿಗಳು ಇರಲಿದ್ದಾರೆ. ಅವರಿಗೆ ಅಗತ್ಯವಾದ ಪ್ರಮಾಣಪತ್ರ, ಗುರುತುಪತ್ರ ನೀಡಲಾಗುವುದು' ಎಂದರು.

'ಈ ಕ್ಲಬ್‌ಗಳ ಮೇಲ್ವಿಚಾರಣೆಗೆ ಅಧಿಕಾರಿಗಳ ತಂಡ ನೇಮಿಸಲಾಗಿದೆ. ವಿಶೇಷ ಆಯುಕ್ತರು ಇದರ ಭಾಗವಾಗಿರುತ್ತಾರೆ. ಐಎಎಸ್ ಅಧಿಕಾರಿ ಪ್ರೀತಿ ಗೆಹಲೋತ್ ಅವರ ತಂಡ ಕೂಡ ಇದರಲ್ಲಿ ಕಾರ್ಯನಿರ್ವಹಿಸುತ್ತಿದೆ. ಈಗಾಗಲೇ ನೂರಾರು ಶಾಲೆಗಳನ್ನು ನೋಂದಣಿ ಮಾಡಲಾಗಿದೆ' ಎಂದರು.

'ದೇಶದಲ್ಲಿ ಮುಂಬೈ, ಚೆನ್ನೈ ಮತ್ತು ಬೆಂಗಳೂರು ಈ ಮೂರು ನಗರಗಳು ಹವಾಮಾನ ಕಾರ್ಯಯೋಜನೆಯಲ್ಲಿ ತೊಡಗಿಸಿಕೊಂಡಿವೆ. ಇದರ ಭಾಗವಾಗಿ ಹೊಸ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಜಿಬಿಎ ವ್ಯಾಪ್ತಿಯಲ್ಲಿ ಆರು ಸಾವಿರ ಶಾಲೆಗಳಿದ್ದು, ಅದರಲ್ಲಿ 4,500 ಖಾಸಗಿ, 1,500 ಸರ್ಕಾರಿ ಶಾಲೆಗಳಿವೆ. ಎಲ್ಲ ಶಾಲೆಗಳು ಈ ಯೋಜನೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ. ಇದಕ್ಕೆ ಈಗಾಗಲೇ 650 ಶಾಲೆಗಳು ಹಾಗೂ ಪಿಯು ಕಾಲೇಜುಗಳು ಒಪ್ಪಿಗೆ ನೀಡಿವೆ. ಈಗಾಗಲೇ 18 ಕ್ಲಬ್‌ಗಳು ರಚನೆಯಾಗಿ ಕಾರ್ಯ ನಿರ್ವಹಿಸುತ್ತಿವೆ' ಎಂದು ತಿಳಿಸಿದರು.

'ಈ ಕ್ಲಬ್‌ಗಳನ್ನು ರಚಿಸಲು ಸಾರ್ವಜನಿಕ ಸಂಘ–ಸಂಸ್ಥೆಗಳಿಗೂ ಅವಕಾಶ ನೀಡಲಾಗುವುದು. ಅವುಗಳ ನೋಂದಣಿಗೆ 6ರಂದು ವೆಬ್‌ಸೈಟ್ ಅನಾವರಣಗೊಳಿಸಲಾಗುವುದು. ಅಂದು ಸಂಜೆ ನೆಹರೂ ತಾರಾಲಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ವಸ್ತುಪ್ರದರ್ಶನ ಕೂಡ ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಕ್ಲಬ್ ಮೂಲಕ ರಸಪ್ರಶ್ನೆ, ಚರ್ಚಾ ಸ್ಪರ್ಧೆ ಆಯೋಜಿಸಲಾಗುವುದು' ಎಂದು ಹೇಳಿದರು.

'ಕ್ಲಬ್‌ಗಳಲ್ಲಿ ಭಾಗವಹಿಸುವವರಿಗೆ ಹಸಿರು ಇಂಧನ, ಘನತ್ಯಾಜ್ಯ ನಿರ್ವಹಣೆ, ಗಾಳಿ ಗುಣಮಟ್ಟ, ತ್ಯಾಜ್ಯ ನೀರು, ಮಳೆನೀರು, ನಗರ ಯೋಜನೆ, ವಿಪತ್ತು ನಿರ್ವಹಣೆ ವಿಚಾರಗಳನ್ನು ಪರಿಗಣಿಸಿ ಬ್ಲೂ, ಗ್ರೀನ್ ಪ್ರಶಸ್ತಿ ನೀಡಲಾಗುತ್ತದೆ. 175 ಮಂದಿ, ಸಂಘ ಸಂಸ್ಥೆಗಳು ಈ ಪ್ರಶಸ್ತಿಗೆ ಆಯ್ಕೆಯಾಗಿವೆ' ಎಂದರು.

'ನ್ಯಾಯಾಲಯದ ನಿರ್ದೇಶನದ ಮೇರೆಗೆ ನಗರದಲ್ಲಿ ಮರಗಣತಿ ಮಾಡಲು ತೀರ್ಮಾನಿಸಿದ್ದು, ಮಹದೇವಪುರ ಹಾಗೂ ಬೊಮ್ಮನಹಳ್ಳಿಯಲ್ಲಿ ಪ್ರಾಯೋಗಿಕ ಯೋಜನೆ ಮಾಡಲಾಗಿದೆ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಒಂದೊಂದು ವಾರ್ಡಿಗೆ ₹1 ಕೋಟಿ ಮೀಸಲಿಟ್ಟು ಬೆಂಗಳೂರು ಗ್ರೀನ್ ವಾರ್ಡ್ ಆಗಿ ಮಾಡಲಾಗುವುದು' ಎಂದು ಹೇಳಿದರು.

ಜಿಬಿಎ ಗಡಿ ನಿಗದಿ: 'ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 2–3 ದಿನಗಳಲ್ಲಿ ಎಷ್ಟು ಪಾಲಿಕೆ ಮಾಡಬೇಕು ಎಂದು ತೀರ್ಮಾನಿಸಿ, ಅಂತಿಮ ರೂಪ ನೀಡಲಾಗುವುದು. ಈ ಪಾಲಿಕೆಗಳ ಚುನಾವಣೆ ನಡೆಸಬೇಕು. ನಂತರ ಯಾವ ಯಾವ ಪ್ರದೇಶಗಳನ್ನು ಸೇರಿಸಿಕೊಳ್ಳಬೇಕು ಎಂದು ತೀರ್ಮಾನಿಸಲಾಗುವುದು' ಎಂದು ಶಿವಕುಮಾರ್ ತಿಳಿಸಿದರು.

ಅನಧಿಕೃತ ಸಂಚಾರ: 68 ಟ್ರ್ಯಾಕ್ಟರ್ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಅನಧಿಕೃತವಾಗಿ ಸಂಚರಿಸುತ್ತಿದ್ದ 68 ಟ್ರ್ಯಾಕ್ಟರ್‌ಗಳನ್ನು ಸಾರಿಗೆ ಇಲಾಖೆ ಮುಟ್ಟಗೋಲು ಹಾಕಿಕೊಂಡಿದೆ.

ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆಯು ಜಂಟಿಯಾಗಿ ಕಾರ್ಯಾಚರಣೆ ನಡೆಸಿತ್ತು. 250ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳನ್ನು ತಪಾಸಣೆ ನಡೆಸಿತ್ತು. ಕಾನೂನು ಬಾಹಿರವಾಗಿ ಸಂಚರಿಸುತ್ತಿದ್ದ 119 ಟ್ರ್ಯಾಕ್ಟರ್‌ಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 68 ಟ್ರ್ಯಾಕ್ಟರ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಸಾರಿ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

'ಅನ್ಯ ಭಾಷಿಕರು ಕನ್ನಡ ಕಲಿಯಲಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕನ್ನಡ ಭಾಷೆ, ಸಂಸ್ಕೃತಿ, ನೆಲ–ಜಲದ ವಿಚಾರವಾಗಿ ಯಾರೇ ಲಘುವಾಗಿ ಮಾತನಾಡಿದರೂ ಸುಮ್ಮನಿರಲು ಸಾಧ್ಯವಿಲ್ಲ. ಅಂಥವರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್ ಅವರು ಎಚ್ಚರಿಸಿದರು.

ನಾಗರಬಾವಿಯ ಜ್ಞಾನಸೌಧದಲ್ಲಿ ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿಯ 10ನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡ ವಿಷಯದಲ್ಲಿ 95ಕ್ಕಿಂತಲೂ ಹೆಚ್ಚು ಅಂಕಗಳಿಸಿರುವ 15ಕ್ಕೂ ಹೆಚ್ಚು ಶಾಲೆಗಳ ನೂರಾರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

'ರಾಜ್ಯದಲ್ಲಿ ವಾಸಿಸುವ ಪ್ರತಿಯೊಬ್ಬ ಅನ್ಯ ಭಾಷಿಕರು ಕನ್ನಡವನ್ನು ಕಲಿಯಬೇಕು. ಭಾಷೆಯನ್ನು ಪ್ರೀತಿಸಿ ಗೌರವಿಸುವ ಗುಣವನ್ನು ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, 'ಪ್ರತಿಭಾ ಪುರಸ್ಕಾರಕ್ಕೆ ಭಾಜನರಾಗಿರುವ ವಿದ್ಯಾರ್ಥಿಗಳು, ಮುಂದೆ ಉನ್ನತ ಶಿಕ್ಷಣ ಪಡೆದು ಸಮಾಜಕ್ಕೆ ಸೇವೆ ಸಲ್ಲಿಸಬೇಕು. ತಂದೆ-ತಾಯಂದಿಯರಿಗೆ, ಪೋಷಕರಿಗೆ, ಶಿಕ್ಷಕ ವರ್ಗದವರಿಗೆ ಹೆಸರು ಮತ್ತು ಕೀರ್ತಿ ತರಬೇಕು' ಎಂದು ಕಿವಿಮಾತು ಹೇಳಿದರು.

ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಡಿ.ಎಂ. ಗೋಪಾಲಕೃಷ್ಣ, ಸೊಸೈಟಿ ಅಧ್ಯಕ್ಷೆ ವೀಣಾ ಗೋಪಾಲಕೃಷ್ಣ, ಕಾಂಗ್ರೆಸ್ ಮುಖಂಡ ಕೃಷ್ಣಮೂರ್ತಿ, ಪದಾಧಿಕಾರಿಗಳಾದ ಶಶಿಕುಮಾರ್ ಮತ್ತಿತರರು ಹಾಜರಿದ್ದರು.

ಚಿತ್ರಾವಳಿ

ಐಸಿಐಸಿಐ ಫೌಂಡೇಷನ್ ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ದಾನವಾಗಿ ನೀಡಿದ ₹7 ಕೋಟಿ ಮೌಲ್ಯದ ಅತ್ಯಾಧುನಿಕ ಕ್ಯಾಥ್ ಲ್ಯಾಬ್ ಅನ್ನು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಉದ್ಘಾಟಿಸಿದರು. ಐಸಿಐಸಿಐ ಫೌಂಡೇಷನ್ ಕಾರ್ಯಾಚರಣೆ ಮುಖ್ಯಸ್ಥ ವೆಂಕಟೇಶ್ ಬಿ.ಕೆ., ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್‌. ರವೀಂದ್ರನಾಥ್, ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಚ್‌. ಶ್ರೀನಿವಾಸ್ ಉಪಸ್ಥಿತರಿದ್ದರು.

ನಗರದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಯೋಜಿಸಿದ್ದ 'ಪ್ರಾಜೆಕ್ಟ್ ಪ್ರದರ್ಶನ'ವನ್ನು ಅಕಾಲ್ವಿಯೋ ಟೆಕ್ನಾಲಜೀಸ್ ಕಂಪನಿಯ ಸಹ ಸಂಸ್ಥಾಪಕ ರಾಜ್ ಗೋಪಾಲಕೃಷ್ಣ ಉದ್ಘಾಟಿಸಿದರು. ಗೋಕುಲ ಎಜುಕೇಷನ್ ಫೌಂಡೇಷನ್ ಉಪಾಧ್ಯಕ್ಷ ಎಂ.ಆರ್‌.ಜಾನಕಿರಾಮ್, ಆರ್‌ಐಟಿ ನಿರ್ದೇಶಕ ಎ.ಆರ್‌.ಸಂಪಂಗಿ ರಾಮಯ್ಯ, ಕೋದಂಡರಾಮ್, ಪ್ರಾಂಶುಪಾಲ ಎನ್‌.ವಿ.ಆರ್‌.ನಾಯ್ಡು ಇದ್ದಾರೆ.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ 1ರ ವತಿಯಿಂದ ಗುರುವಾರ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವುದರ ಮೂಲಕ ಆಚರಿಸಲಾಯಿತು. ಪ್ರಾಂಶುಪಾಲರಾದ ಶುಭ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಎಸ್‌.ಜಿ. ರಾಘವೇಂದ್ರ, ಆರ್‌. ಪದ್ಮನಾಭ್, ಪ್ರೊ. ವಾಸುದೇವ ರೆಡ್ಡಿ ಹಾಗೂ ಇತರರು ಉಪಸ್ಥಿತರಿದ್ದರು

ವಿಶ್ವಪರಿಸರ ದಿನಾಚರಣೆ ಅಂಗವಾಗಿ ಜಯನಗರದ ಬಾಂಧವ ಸಂಸ್ಥೆ ಸಂಸ್ಥಾಪಕ ಎನ್‌.ನಾಗರಾಜು ಅವರು ಶಾಲಾ ಮಕ್ಕಳೊಂದಿಗೆ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು – 560 010.

Re-TENDER FOR THE SUPPLY AND INSTALLATION OF ICU UNITS UNDER TURNKEY BASIS AT ESI HOSPITALS, INDIRANAGAR, MYSURU AND HUBBALLI

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಇಎಸ್‌ಐಎಸ್/ಇಜಿಎಸ್/02/2025–26 ದಿನಾಂಕ: 05.06.2025 ESISMS/2025-26/IND0012/CALL-2
ವಿವರಗಳು	Re-TENDER FOR THE SUPPLY AND INSTALLATION OF ICU UNITS UNDER TURNKEY BASIS AT ESI HOSPITALS, INDIRANAGAR, MYSURU AND HUBBALLI
ಟೆಂಡರ್ ನಮೂನೆಗಳ ವಿವರಗಳು ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ಜಾಲತಾಣ	https://kppp.karnataka.gov.in and Department website https://esisms.karnataka.gov.in
ಮುಂಗಡ ಠೇವಣಿ	ರೂ. 12,76,240/–
ಪೂರ್ವಭಾವಿ ಸಭೆ	09.06.2025, ಬೆಳಿಗ್ಗೆ 11.30 ಗಂಟೆಗೆ ಕಾ.ರಾ.ವಿ.ಯೋ.ವೈ ಸೇವೆಗಳ ನಿರ್ದೇಶನಾಲಯ ಕಚೇರಿ, ರಾಜಾಜಿನಗರ, ಬೆಂಗಳೂರು
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ	ದಿನಾಂಕ: 07.07.2025 ಸಂಜೆ 5.30 ಗಂಟೆಯೊಳಗೆ
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 09.07.2025 ಬೆಳಿಗ್ಗೆ 11:30 ಗಂಟೆಗೆ

ಡಿಐಪಿಆರ್/ಸಿಪಿ/1096/ಸಿಸಿಎಲ್/2025–26
ಸಹಿ/– ನಿರ್ದೇಶಕರು
ಕಾ.ರಾ.ವಿ.ಯೋ.ವೈ, ಸೇವೆಗಳು

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು – 560 010.

Re-TENDER FOR THE SUPPLY AND INSTALLATION OF DIALYSIS UNITS UNDER TURNKEY BASIS AT ESI HOSPITALS INDIRANAGAR, MYSURU AND HUBBALLI

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಇಎಸ್‌ಐಎಸ್/ಇಜಿಎಸ್/03/2025–26 ದಿನಾಂಕ: 05.06.2025 ESISMS/2025-26/IND0013 CALL-2
ವಿವರಗಳು	Re-TENDER FOR THE SUPPLY AND INSTALLATION OF DIALYSIS UNITS UNDER TURNKEY BASIS AT ESI HOSPITALS INDIRANAGAR, MYSURU AND HUBBALLI
ಟೆಂಡರ್ ನಮೂನೆಗಳ ವಿವರಗಳು ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ಜಾಲತಾಣ	https://.kppp.karnataka.gov.in and Department website https://esisms.karnataka.gov.in
ಮೂಗಡ ಠೇವಣಿ	ರೂ. 7,36,800/–
ಪೂರ್ವಭಾವಿ ಸಭೆ	09.06.2025, ಮಧ್ಯಾಹ್ನ 12:00 ಗಂಟೆಗೆ ಕಾ.ರಾ.ವಿ.ಯೋ.ವೈ ಸೇವೆಗಳ ನಿರ್ದೇಶನಾಲಯ ಕಚೇರಿ, ರಾಜಾಜಿನಗರ, ಬೆಂಗಳೂರು
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ	ದಿನಾಂಕ: 08.07.2025 ಸಮಜೆ 5:30 ಗಂಟೆಯೊಳಗೆ
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 10.07.2025 ಬೆಳಿಗ್ಗೆ: 11:30 ಗಂಟೆಗೆ

ಡಿಐಪಿಆರ್/ಸಿಪಿ/1098/ಸಿಸಿಎಲ್/2025–26
ಸಹಿ/– ನಿರ್ದೇಶಕರು
ಕಾ.ರಾ.ವಿ.ಯೋ.ವೈ, ಸೇವೆಗಳು

ಸಿನಿಮಾ ಪುರವಣಿ

ನಿಧಿ ಸುಬ್ಬಯ್ಯ

‘ಸಿನಿಮಾ ಹಿಟ್ ಆದರೂ ಅವಕಾಶ ಸಿಗಲಿಲ್ಲ’

ದಿಗಂತ್, ನಿಧಿ ಸುಬ್ಬಯ್ಯ ಜೋಡಿಯಾಗಿ ನಟಿಸಿರುವ ‘ಎಡಗೈ ಅಪಘಾತಕ್ಕೆ ಕಾರಣ’ ಚಿತ್ರ ಜೂ.13ರಂದು ತೆರೆಗೆ ಬರಲಿದೆ. ಚಿತ್ರದಲ್ಲಿ ತಮ್ಮ ಪಾತ್ರ ಹಾಗೂ ಸಿನಿಪಯಣದ ಕುರಿತು ನಿಧಿ ಮಾತನಾಡಿದ್ದಾರೆ...

ವಿನಾಯಕ ಕೆ.ಎಸ್

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಇದೊಂದು ಮಿಸ್ಟ್ರಿ, ಥ್ರಿಲ್ಲರ್ ಸಿನಿಮಾ. ಐಟಿ ಕಂಪನಿಯಲ್ಲಿ ನಾನು, ದಿಗಂತ್ ಜೊತೆಯಲ್ಲಿ ಕೆಲಸ ಮಾಡುತ್ತಿರುತ್ತೇವೆ. ಇಬ್ಬರ ನಡುವೆ ಪ್ರೇಮಾಂಕುರವಾಗುತ್ತದೆ. ಅಲ್ಲಿಂದ ನಂತರ ಏನೆಲ್ಲ ಅಗುತ್ತದೆ ಎನ್ನುವುದೇ ಸ್ವಾರಸ್ಯ. ಇದೊಂದು ಹಾಸ್ಯಮಯ ಕಥೆ ಹೊಂದಿರುವ ಚಿತ್ರ. ಎಲ್ಲ ಕೆಲಸಗಳಿಗೂ ಎಡಗೈಯನ್ನು ಬಳಸುವವರ ಕಷ್ಟವನ್ನು ಹೇಳಲಾಗಿದೆ. ಆದರೆ ನಾನು ಚಿತ್ರದಲ್ಲಿ ಎಡಚಿ ಅಲ್ಲ.

- **‘ಪಂಚರಂಗಿ’ ಜೋಡಿ ಮೇಲೆ ನಿರೀಕ್ಷೆ ಹೆಚ್ಚಿದೆಯಲ್ಲ?**

ಹೌದು ‘ಪಂಚರಂಗಿ’ಯಲ್ಲಿ ನಾವಿಬ್ಬರು ಒಟ್ಟಿಗೆ ನಟಿಸಿದ್ದೆವು. ನಮ್ಮದು ಮೋಡಿ ಮಾಡಿದ ಜೋಡಿ. 14 ವರ್ಷಗಳ ನಂತರ ಮತ್ತೆ ಜತೆಯಾಗಿದ್ದೇವೆ. ಹಾಗಂತ ಆ ಕಥೆಗೆ ಇದನ್ನು ಹೋಲಿಸಲು ಸಾಧ್ಯವಿಲ್ಲ. ಯೋಗರಾಜ್ ಭಟ್ಟರ ಸಿನಿಮಾ ಶಾಲೆಯೇ ಒಂದು ಭಿನ್ನ ಅನುಭವ. ಆಗೆಲ್ಲ ಮೊದಲೇ ಸ್ಕ್ರಿಪ್ಟ್ ಕೊಡುತ್ತಿರಲಿಲ್ಲ. ಯೋಗರಾಜ್ ಭಟ್ಟರು ನಮ್ಮನ್ನು ಮರದ ಮೇಲೆ ಕೂರಿಸಿ, ಅಲ್ಲೇ ಸ್ಕ್ರಿಪ್ಟ್ ಬರೆದು ಓದುತ್ತಿದ್ದರು. ಅದನ್ನು ಕಲಿತು ನಟಿಸಬೇಕಿತ್ತು. ಈಗೆಲ್ಲ ಕಥೆ, ಸ್ಕ್ರಿಪ್ಟ್ ಮುಂಚಿತವಾಗಿಯೇ ಕೊಡುತ್ತಾರೆ. ಆದರೂ ಹೆಚ್ಚು ಸಿದ್ಧತೆಯೊಂದಿಗೆ ಹೋದರೆ ನಟನೆ ಸಹಜ ಎನ್ನಿಸುವುದಿಲ್ಲವೇನೋ ಅನ್ನಿಸುತ್ತದೆ.

- **ಕನ್ನಡ ಚಿತ್ರರಂಗದಿಂದ ನೀವು ವಿರಾಮ ತೆಗೆದುಕೊಂಡಿದ್ದು ಏಕೆ?**

‘ಶೆಫ್ ಚಿದಂಬರ’ ಹಾಗೂ ಈ ಸಿನಿಮಾ ಎರಡೂ ಒಟ್ಟಿಗೆ ಶುರುವಾಗಿದ್ದವು. ಆ ಸಿನಿಮಾ ಕಳೆದ ವರ್ಷ ಬಿಡುಗಡೆಯಾಯಿತು. ‘ಯುಐ’ನಲ್ಲಿ ಕೂಡ ಒಂದು ಪಾತ್ರದಲ್ಲಿ ಕಾಣಿಸಿಕೊಂಡೆ. ಆದರೆ ಅಷ್ಟಾಗಿ ಜನರಿಗೆ ಗೊತ್ತಾಗಲಿಲ್ಲ. ನಾನು ಬೇಕಂತಲೆ ಇಂಡಸ್ಟ್ರಿಯಲ್ಲಿ ಗ್ಯಾಪ್ ತೆಗೆದುಕೊಂಡಿಲ್ಲ. ಯಾವುದೇ ಅವಕಾಶಗಳು ಬರಲಿಲ್ಲ. ನನಗೆ ನಟನೆ ಬಿಟ್ಟು ಬೇರೆ ಕೆಲಸ ಬರುವುದಿಲ್ಲ ಅನ್ನಿಸುತ್ತದೆ. ಹೀಗಾಗಿ ಗ್ಯಾಪ್‌ನಲ್ಲಿಯೂ ಬೇರೆ ಕೆಲಸ ಮಾಡಲು ಯತ್ನಿಸಲಿಲ್ಲ. ನಟನೆಯಾಚೆಗೆ ನಾನು ಬರಹಗಾರ್ತಿ. ಕಥೆ, ಕಾದಂಬರಿ ಬರೆಯುತ್ತೇನೆ. ನನ್ನದೇ ಬ್ಲಾಗ್ ಇದೆ. ಈಗ ಒಂದು ಕಥೆ ಬರೆಯುತ್ತಿದ್ದೇನೆ. ಅದು ಕಾದಂಬರಿಯಾಗುತ್ತದೆಯಾ ಅಥವಾ ಸಿನಿಮಾ ಸ್ಕ್ರಿಪ್ಟ್ ಆಗುತ್ತದೆಯಾ? ಗೊತ್ತಿಲ್ಲ.

- **ಇಲ್ಲಿಯವರೆಗಿನ ಸಿನಿಪಯಣ ಹೇಗಿತ್ತು?**

ಮೂಲತಃ ನಾನು ಕ್ರೀಡಾಪಟು. ಮೈಸೂರಿನಲ್ಲಿ ಕಾಲೇಜು ಓದುವಾಗ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದೆ. ಕಾಲೇಜಿನಲ್ಲಿ ಅಚಾನಕ್ಕಾಗಿ ಮಾಡೆಲ್‌ಗಳ ಜತೆ ಹೆಜ್ಜೆ ಹಾಕುವ ಅವಕಾಶ ಬಂತು. ಅಲ್ಲಿಂದ ಮಾಡಲಿಂಗ್ ಪ್ರಾರಂಭಿಸಿದೆ. ರಾಷ್ಟ್ರಮಟ್ಟದ ಜಾಹೀರಾತು ಒಂದರಲ್ಲಿ ನಟಿಸಿದೆ. ಅದು ನನ್ನನ್ನು ಸಿನಿಮಾ ಕಡೆಗೆ ಕರೆದುಕೊಂಡು ಬಂದಿತು. ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಗೊಂಡೆ. ಇಲ್ಲಿ ಒಂದಷ್ಟು ಸಿನಿಮಾಗಳು ಹಿಟ್ ಆದವು. ಮೊದಲಿನಿಂದಲೂ ಜಾಹೀರಾತುಗಳಲ್ಲಿ ನಟಿಸುತ್ತಿದ್ದೆ. ಹೀಗಾಗಿ ಒಂದಷ್ಟು ಕಾಲ ಮುಂಬೈಗೆ ಹೋದೆ. ಮತ್ತೆ ಈಗ ಇಲ್ಲಿಗೆ ಮರಳಿರುವೆ.

- **ನೀವು ಕನ್ನಡದಲ್ಲಿ ಉತ್ತುಂಗದಲ್ಲಿದ್ದಾಗ, ಇಲ್ಲಿನ ಅವಕಾಶಗಳನ್ನು ತಿರಸ್ಕರಿಸಿ ಬಾಲಿವುಡ್ ಕಡೆ ಮುಖ ಮಾಡಿದ್ರಾ?**

ನಿಧಿ ಸುಬ್ಬಯ್ಯ ಪೀಕ್‌ನಲ್ಲಿ ಇದ್ದಾಗ ಕನ್ನಡ ಇಂಡಸ್ಟ್ರಿ ಬಿಟ್ಟು ಹೋದರು. ಇಲ್ಲೇ ಇದ್ದರೆ ಈಗ ಪ್ರಮುಖ ನಾಯಕಿಯರ ಪಟ್ಟಿಯಲ್ಲಿ ಜಾಗ ಪಡೆದಿರುತ್ತಿದ್ದರು ಎಂದು ಅನೇಕರು ಹೇಳುತ್ತಾರೆ. ‘ಕೃಷ್ಣನ್ ಮ್ಯಾರೇಜ್ ಸ್ಟೋರಿ’, ‘ಪಂಚರಂಗಿ’, ‘ಅಣ್ಣಾಬಾಂಡ್’ ಸಿನಿಮಾಗಳು ಹಿಟ್ ಆದರೂ ನನಗೆ ಅವಕಾಶ ಸಿಗಲಿಲ್ಲ. ಆರು ತಿಂಗಳು ಖಾಲಿ ಕುಳಿತೆ. ಆಗ ಕನ್ನಡದಲ್ಲಿ ಬಾಂಬೆ ಹೀರೋಯಿನ್ ಕ್ರೇಜ್ ತುಂಬ ಇತ್ತು. ಯಾವ ಸಿನಿಮಾದಲ್ಲಿ ಅವಕಾಶ ಕೇಳಿದರೂ, ಬಾಂಬೆಯಿಂದ ಹೀರೋಯಿನ್ ಕರೆಸಿದೀವಿ ಅನ್ನೋರು. ಭಾಷೆ ಗೊತ್ತಿಲ್ಲದ ಆ ನಟಿಯರಿಗೆ ಇಲ್ಲಿನ ಸಿನಿಮಾ ಹಿಟ್ ಆದರೂ, ತೋಪಾದರೂ ವೃತ್ತಿ ಬದುಕಿಗೆ ಹೆಚ್ಚು ಪರಿಣಾಮ ಬೀರುತ್ತಿರಲಿಲ್ಲ. ಹೀಗೆ ಬಂದು ಹಾಗೆ ಹೋಗುತ್ತಿದ್ದರು. ನಾವು ಇಲ್ಲೇ ಇದ್ದರೂ ಗುರುತಿಸುತ್ತಿರಲಿಲ್ಲ. ಹೀಗಾಗಿ ಬಾಲಿವುಡ್‌ನತ್ತ ಮುಖ ಮಾಡಿದೆ. ನಾನು ಒಮ್ಮೆ ಮುಂಬೈಗೆ ಹೋದ ನಂತರ ಇಲ್ಲಿ ಮತ್ತೆ ಅವಕಾಶಗಳು ಸಿಗತೊಡಗಿದವು. ಆದರೆ ಅಲ್ಲಿ ಕೆಲ ಹಿಂದಿ ಸಿನಿಮಾಗಳನ್ನು ಒಪ್ಪಿಕೊಂಡಿದ್ದೆ. ಹೀಗಾಗಿ ಇಲ್ಲಿನ ಸಿನಿಮಾಗಳಲ್ಲಿ ನಟಿಸಲು ಸಾಧ್ಯವಾಗಲಿಲ್ಲ. ಅಲ್ಲಿಂದ ಬಂದ ನಂತರವೂ ಅಷ್ಟೇನೂ ಅವಕಾಶಗಳು ಸಿಗಲಿಲ್ಲ.

- **ನಿಮ್ಮ ಮುಂದಿನ ಸಿನಿಮಾಗಳು...**

ಕನ್ನಡದಲ್ಲಿ ಸದ್ಯ ಬೇರೆ ಯಾವುದೇ ಸಿನಿಮಾಗಳಿಲ್ಲ. ತೆಲುಗಿನಲ್ಲಿ ಒಂದು ಸಿನಿಮಾ ಮಾತುಕತೆ ನಡೆಯುತ್ತಿದೆ. ಬೇರೆ ಭಾಷೆಯ ವೆಬ್ ಸರಣಿವೊಂದರಲ್ಲಿ ನಟಿಸುತ್ತಿರುವೆ. ನನಗೆ ನಟನೆಯೇ ಒಂದು ರೀತಿ ಧ್ಯಾನ. ಇಲ್ಲಿ ಸಿಕ್ಕ ಖುಷಿ ಬೇರೆ ಎಲ್ಲಿಯೂ ಸಿಗುವುದಿಲ್ಲ. ಹೀಗಾಗಿ ಅವಕಾಶಗಳಿಗೆ ಕಾಯುವೆ.

ಐದು ಭಾಷೆಗಳಲ್ಲಿ ದೇವಸಸ್ಯ

ಬಿಂಬಿಕಾ

ಅಪರೂಪದ ಗಿಡದ ಸುತ್ತ ನಡೆಯುವ ಘಟನೆಗಳನ್ನೇ ಕಥೆಯಾಗಿಸಿಕೊಂಡಿರುವ ‘ದೇವಸಸ್ಯ’ ಚಿತ್ರದ ಟೈಟಲ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅನಂತ ಫಿಲ್ಮ್ಸ್ ಅಡಿಯಲ್ಲಿ ಅನಂತಕುಮಾರ್ ಹೆಗಡೆ ಬಂಡವಾಳ ಹೂಡಿರುವ ಚಿತ್ರಕ್ಕೆ ಕಾರ್ತೀಕ್ ಭಟ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಇದು ಎರಡು ಊರುಗಳ ಮಧ್ಯೆ ನಡೆಯುವ ಕಥೆ. ಸಿದ್ದಿ ಹುಡುಗನ ಪಾತ್ರವನ್ನು ಸೆಲ್ವಿನ್ ದೇಸಾಯಿ ಮಾಡಿದ್ದಾರೆ. ಮತ್ತೊಂದು ಮುಖ್ಯ ಪಾತ್ರವನ್ನು ಅಹನ ಮಾಡಿದ್ದಾರೆ. 1995ರಲ್ಲಿ ನಡೆಯುವ ಕಥೆಯಾಗಿದ್ದರಿಂದ ಆ ರೀತಿ ಲೊಕೇಶನ್ ಎಲ್ಲಿಯೂ ಸಿಗಲಿಲ್ಲ. ಹಾಗಾಗಿ ಸೆಟ್ ಹಾಕಿ ಚಿತ್ರೀಕರಣ ಮಾಡಿದ್ದೇವೆ. ದೇವಸಸ್ಯ ಏನು ಎನ್ನುವುದು ಚಿತ್ರ ನೋಡಿದ ನಂತರವೇ ಗೊತ್ತಾಗುತ್ತದೆ’ ಎಂದರು ನಿರ್ದೇಶಕರು.

ಕನ್ನಡ, ತೆಲುಗು, ಹಿಂದಿ ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರ ನಿರ್ಮಾಣಗೊಳ್ಳುತ್ತಿದೆ. ರಾಜು ಎನ್.ಎಂ. ಛಾಯಾಚಿತ್ರಗ್ರಹಣ, ಹರಿ ಅಜಯ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ತಿಂಗಳಾಂತ್ಯಕ್ಕೆ ಬ್ಲಡಿ ಬಾಬು

ಚಿತ್ರದ ಪೋಸ್ಟರ್

ಹಿರಿಯ ನಿರ್ದೇಶಕ ರಾಜೇಶ್ ಮೂರ್ತಿ ತಮ್ಮ ಪುತ್ರನಿಗಾಗಿ ನಿರ್ಮಿಸಿ, ನಿರ್ದೇಶಿಸಿರುವ ‘ಬ್ಲಡಿ ಬಾಬು’ ಚಿತ್ರ ಈ ತಿಂಗಳ ಅಂತ್ಯದಲ್ಲಿ ತೆರೆಗೆ ಬರಲಿದೆ. ಸೈಕಲಾಜಿಕಲ್, ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು.

‘ಇತ್ತೀಚೆಗಷ್ಟೇ ಚಿತ್ರವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದೆ. ಬಿಡುಗಡೆ ಸಿದ್ಧತೆ ನಡೆಸಿದ್ದೇವೆ. ಜೂನ್ ಕೊನೆಯ ವಾರ ಚಿತ್ರ ತೆರೆಗೆ ಬರಲಿದೆ. ಮೂರು ಪ್ರಮುಖ ಪಾತ್ರಗಳ ನಡುವೆ ನಡೆಯುವ ಕಥೆ. ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿದೆ’ ಎಂದಿದ್ದಾರೆ ನಿರ್ದೇಶಕರು.

ನಾಯಕ ಯಶಸ್ವಗೆ ಸ್ಮಿತಾ ಜೋಡಿಯಾಗಿದ್ದಾರೆ. ದಿಲೀಪ್ ಕುಮಾರ್, ನೆ.ಲ.ನರೇಂದ್ರ ಬಾಬು ಮುಂತಾದವರು ಚಿತ್ರದಲ್ಲಿದ್ದಾರೆ. ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ನಿತೀಶ್ ಕುಮಾರ್ ಸಂಗೀತ ಸಂಯೋಜನೆ, ವಿನೋದ್ ಆರ್. ಛಾಯಾಚಿತ್ರಗ್ರಹಣವಿದೆ. ಬೆಂಗಳೂರು, ನಂದಿ ಹಿಲ್ಸ್ ಹಾಗೂ ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ.

ಇವಳು ಖೇಲಾದ ಪುಣ್ಯಾತ್ಗಿತ್ತಿ



ಆಶಿಕಾ ರಾವ್

‘ಖೇಲಾ’ ಚಿತ್ರದ ಪುಣ್ಯಾತ್ಗಿತ್ತಿ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಭರತ್ ಫಿಲ್ಮ್ಸ್ ಲಾಂಛನದಲ್ಲಿ ವಿ.ಜೆ.ಭರತ್ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ.

ಎಂ.ಎಸ್. ತ್ಯಾಗರಾಜ್ ಸಂಗೀತ ನೀಡಿದ್ದು, ಈ ಗೀತೆಗೆ ಪ್ರಮೋದ್ ಜೋಯಿಸ್ ಸಾಹಿತ್ಯ, ವೇಲ್ ಮುರುಗನ್ ಧ್ವನಿಯಿದೆ. ಕಿರುತೆರೆ ನಟ ವಿಹಾನ್ ಪ್ರಭಂಜನ್‌ಗೆ ಆಶಿಕಾ ರಾವ್ ಜೋಡಿಯಾಗಿದ್ದಾರೆ.

‘ನಾನು ಕನ್ನಡದ ಹಿರಿಯ ನಿರ್ಮಾಪಕ ಹಾಗೂ ನಿರ್ದೇಶಕ ವಿಷ್ಣುಕಾಂತ್ ಅವರ ಪುತ್ರ. ಅಪ್ಪನ ಮಾರ್ಗದರ್ಶನದಲ್ಲಿ ಚೊಚ್ಚಲ ಚಿತ್ರವನ್ನು ನಿರ್ಮಿಸುವುದರ ಜತೆಗೆ ನಿರ್ದೇಶನವನ್ನೂ ಮಾಡಿದ್ದೇನೆ. ಇದೊಂದು ಪ್ರೇಮಕಥೆಯ ಚಿತ್ರ. ವಿಶೇಷ ಪಾತ್ರದಲ್ಲಿ ಸಂಗೀತ ಭಟ್ ಕೂಡ ಅಭಿನಯಿಸಿದ್ದಾರೆ. ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಒಂದು ಹಾಡು ಹಾಗೂ ಒಂದು ಫೈಟ್‌ನ ಚಿತ್ರೀಕರಣ ಮಾತ್ರ ಬಾಕಿ ಇದೆ’ ಎಂದರು ಭರತ್.

ಅಚ್ಯುತ್ ಕುಮಾರ್ ‘ಗುರಿ’!

ಚಿತ್ರತಂಡ

ನಟ ಅಚ್ಯುತ್ ಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಗುರಿ’ ಚಿತ್ರದ ಟೀಸರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. 80ರ ದಶಕದಲ್ಲಿ ರಾಜ್‌ಕುಮಾರ್ ಅಭಿನಯಸಿದ್ದ ‘ಗುರಿ’ ಚಿತ್ರವು ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಹೆಸರಿನಲ್ಲಿ ಸಿನಿಮಾವೊಂದು ಸಿದ್ಧಗೊಂಡಿದ್ದು, ಸೆಲ್ವಂ ಮಾದಪ್ಪನ್ ಕಥೆ ಬರೆದು, ನಿರ್ದೇಶಿಸಿದ್ದಾರೆ.

‘ಸಿನಿಮಾವು ನೈಜ ಘಟನೆಯನ್ನು ಆಧರಿಸಿದೆ. ಒಮ್ಮೆ ಕೋಲಾರದ ತೇರಳ್ಳಿ ಬೆಟ್ಟಕ್ಕೆ ಹೋಗಿದ್ದಾಗ, ಅಲ್ಲಿ ಸರ್ಕಾರಿ ಶಾಲೆಯನ್ನು ಮುಚ್ಚಲಾಗಿತ್ತು. ಮಕ್ಕಳು ಶಿಕ್ಷಕರೊಂದಿಗೆ ಕೆರೆಯಲ್ಲಿ ಆಟವಾಡುತ್ತಿದ್ದರು. ಸ್ಥಳೀಯರೊಂದಿಗೆ ಮಾತನಾಡಿದಾಗ ಒಂದಷ್ಟು ವಿಚಾರ ತಿಳಿಯಿತು. ಅದನ್ನೇ ಚಿತ್ರಕಥೆಯಾಗಿಸಿದ್ದೇನೆ. ವಿದ್ಯಾರ್ಥಿ ಮತ್ತು ಶಿಕ್ಷಕನ ಬಾಂಧವ್ಯ, ಸರ್ಕಾರಿ ಹಾಗೂ ಖಾಸಗಿ ಶಾಲೆಯ ಸಂಘರ್ಷ, ಸರ್ಕಾರಿ ಶಾಲೆಗಳ ಇಂದಿನ ಸ್ಥಿತಿಗತಿ ಮೊದಲಾದ ಅಂಶಗಳು ಚಿತ್ರದಲ್ಲಿವೆ’ ಎಂದರು ನಿರ್ದೇಶಕರು.

ಚಿತ್ರಕ್ಕೆ ‘ನನ್ನ ಶಾಲೆಯನ್ನು ಪ್ರೀತಿಸುತ್ತೇನೆ’ ಎಂಬ ಅಡಿಬರಹವಿದೆ. ವಿಷ್ಣುದುರ್ಗಾ ಪ್ರೊಡಕ್ಷನ್ ಅಡಿಯಲ್ಲಿ ರಾಧಿಕಾ. ಎಸ್.ಆರ್ ಮತ್ತು ಚಿತ್ರಲೇಖಾ.ಎಸ್ ನಿರ್ಮಾಣ ಮಾಡಿದ್ದಾರೆ. ಬಾಲನಟರಾದ ಮಹಾನಿಧಿ, ಟಿ.ಎಸ್.ನಾಗಾಭರಣ, ಅವಿನಾಶ್, ಪವನ್‌ಕುಮಾರ್, ಜೀವಿತ್‌ಭೂಷಣ್, ಜಯಶ್ರೀ, ಉಗ್ರಂ ಮಂಜು, ಸಂದೀಪ್ ಮಲಾನಿ, ಮನೋಹರ್ ಮುಂತಾದವರು ಚಿತ್ರದಲ್ಲಿದ್ದಾರೆ.

ಪಳನಿ ಸೇನಾಪತಿ ಸಂಗೀತವಿದೆ. ನಿರ್ದೇಶಕರೇ ಛಾಯಾಚಿತ್ರಗ್ರಹಣವನ್ನೂ ಮಾಡಿದ್ದಾರೆ. ಕೆ.ಎಂ.ಪ್ರಕಾಶ್ ಸಂಕಲನ, ವಿ.ಮನೋಹರ್, ಮಧುಸೂದನ್ ಸಾಹಿತ್ಯ ಚಿತ್ರಕ್ಕಿದೆ. ಬೆಂಗಳೂರು, ಕೋಲಾರ, ತೇರಳ್ಳಿ ಬೆಟ್ಟ ಮೊದಲಾದೆಡೆ ಚಿತ್ರೀಕರಣಗೊಂಡಿದೆ.

5 ಈ ವಾರ ಚಿತ್ರಗಳು ತೆರೆಗೆ

ವಿನೋದ್, ಸೋನಲ್

ಮಾದೇವ

ವಿನೋದ್ ಪ್ರಭಾಕರ್, ಸೋನಲ್ ಮೊಂತೆರೊ ಅಭಿನಯದ ಚಿತ್ರ ಇಂದು (ಜೂ.6) ತೆರೆ ಕಾಣುತ್ತಿದೆ. ಮಾಸ್, ಆ್ಯಕ್ಷನ್ ಕಥೆ ಹೊಂದಿರುವ ಚಿತ್ರಕ್ಕೆ ನವೀನ್ ರೆಡ್ಡಿ ಬಿ. ನಿರ್ದೇಶನವಿದೆ.

‘ಈ ಸಿನಿಮಾ ನನ್ನ ವೃತ್ತಿಜೀವನದಲ್ಲಿ ಒಂದು ವಿಭಿನ್ನ ಸಿನಿಮಾ. ಗಟ್ಟಿಯಾದ ಕಂಟೆಂಟ್ ಸಿನಿಮಾ ಮಾಡಬೇಕು ಎಂದು ಮಾಡಿರುವ ಸಿನಿಮಾವಿದು. ನೇಣು ಹಾಕುವವನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಾನು ಮಾಡಿದ ಸಂಶೋಧನೆಯ ಪ್ರಕಾರ ನಾಯಕನೊಬ್ಬ ಇಂತಹ ಪಾತ್ರವನ್ನು ನಿಭಾಯಿಸಿರುವುದು ಅಪರೂಪ. ಈ ಪಾತ್ರ ಭಿನ್ನವಾಗಿದೆ ಎಂದು ನನಗೆ ಅನಿಸಿತು. 1984ರಲ್ಲಿ ತೆರೆಕಂಡ ನನ್ನ ತಂದೆಯವರ ಸಿನಿಮಾ ‘ಜಿದ್ದು’ವಿನಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ ಅನ್ಯಾಯವನ್ನು ತಡೆಯಲಾರದೆ ಮೃಗವಾಗಿ ಬದಲಾಗುತ್ತಾನೆ. ಈ ಘಟನೆ ನನಗೆ ಸ್ಫೂರ್ತಿಯಾಗಿತ್ತು. ಡಬ್ಬಿಂಗ್ ವಹಿವಾಟು ಆಗುತ್ತದೆ ಎಂದು ಸತತವಾಗಿ ಆ್ಯಕ್ಷನ್ ಸಿನಿಮಾಗಳನ್ನು ಮಾಡಿದೆ. ಫೈಟ್‌ಗಾಗಿಯೇ ದೃಶ್ಯಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ಕಥೆಯ ಹಾದಿ ತಪ್ಪುತ್ತಿತ್ತು. ಈ ಚಿತ್ರದಲ್ಲಿ ಆ ತಪ್ಪು ಆಗಿಲ್ಲ’ ಎಂದಿದ್ದಾರೆ ವಿನೋದ್ ಪ್ರಭಾಕರ್.

‘ಮಾದೇವ’ ಸಿನಿಮಾದ ಕಥೆಯನ್ನು ವಿನೋದ್ ಅವರೇ ನನ್ನ ಬಳಿ ಕಳುಹಿಸಿದರು. ಕಥೆ ಹಾಗೂ ಚಿತ್ರದೊಳಗಿನ ನಾಯಕಿಯ ಪಾತ್ರ ಬಹಳ ಇಷ್ಟವಾಯಿತು. ಇಲ್ಲಿಯವರೆಗೂ ಗ್ಲಾಮರಸ್ ಪಾತ್ರಗಳನ್ನು ಮಾಡಿದ್ದೇನೆ. ಇದು ಡಿ–ಗ್ಲಾಮರ್ ಪಾತ್ರ’ ಎಂದಿದ್ದಾರೆ ಸೋನಲ್.

ಪ್ರದ್ಯೋತ್ತನ್ ಸಂಗೀತ ನಿರ್ದೇಶನವಿದೆ. ಆರ್. ಕೇಶವ್ ಬಂಡವಾಳ ಹೂಡಿದ್ದಾರೆ. ಶ್ರೀನಗರ ಕಿಟ್ಟಿ, ಶ್ರುತಿ ಮೊದಲಾದವರು ಚಿತ್ರದಲ್ಲಿದ್ದಾರೆ.

ಸೀಸ್ ಕಡ್ಡಿ



ಪೆನ್ಸಿಲ್ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ ‘ಸೀಸ್ ಕಡ್ಡಿ’. ರತನ್ ಗಂಗಾಧರ್ ನಿರ್ದೇಶನದ ಚಿತ್ರವಿದು.

‘ಪುಸ್ತಕವೊಂದನ್ನು ಓದಿದಾಗ ಅದರಲ್ಲಿ ಪೆನ್ಸಿಲ್‌ನ ನಾನಾ ಸೂಕ್ಷ್ಮಗಳ ವಿವರಗಳಿತ್ತು. ಅದನ್ನು ಐದು ಪಾತ್ರಗಳನ್ನಾಗಿಸಿ, ಅದಕ್ಕೆ ಹೊಂದಿಕೊಂಡಂತೆ ಐದು ಕಥೆಗಳನ್ನು ಸೃಷ್ಟಿಸಿ, ಆ ಕಥೆಗಳೆಲ್ಲ ಒಂದು ಬಿಂದುವಿನಲ್ಲಿ ಸಂಧಿಸುವಂತೆ ಕಥೆ ಹೆಣೆಯಲಾಗಿದೆ. ಈ ಚಿತ್ರದಲ್ಲಿ ಬೆಂಗಳೂರು ಕನ್ನಡ, ಹವಿಗನ್ನಡ, ತುಮಕೂರು ಭಾಗದ ಹಳ್ಳಿಗಾಡಿನ ಕನ್ನಡ ಹಾಗೂ ಮೈಸೂರು ಸೀಮೆಯ ಕನ್ನಡ ಬಳಸಲಾಗಿದೆ. ಒಟ್ಟಾರೆ ಚಿತ್ರ ಪ್ರೇಕ್ಷಕರಿಗೆ ಹೊಸ ಅನುಭೂತಿ ನೀಡಲಿದೆ ಎಂಬ ನಂಬಿಕೆಯಿದೆ’ ಎನ್ನುತ್ತಾರೆ ನಿರ್ದೇಶಕರು.

ಗ್ರಹಣ ಪ್ರೊಡಕ್ಷನ್ ಮೂಲಕ ರತನ್ ಗಂಗಾಧರ್, ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಈ ಚಿತ್ರಕ್ಕೆ ಸುನಿಲ್ ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ, ಕೆ.ಸಿ. ಬಾಲಸಾರಂಗನ್ ಸಂಗೀತ ನಿರ್ದೇಶನ, ಅನಿರುದ್ಧ್ ಹರ್ಷವರ್ಧನ್ ಸಂಕಲನವಿದೆ. ಸಿತಿನ್ ಅಪ್ಪಯ್ಯ, ಬಿ.ಎಸ್. ರಾಮಮೂರ್ತಿ, ಮಾನ್ವಿ ಬಳಗಾರ್, ನೊಣವಿನಕೆರೆ ರಾಮಕೃಷ್ಣಯ್ಯ ಮುಂತಾದವರ ತಾರಾಗಣವಿದೆ.

ನೀತಿ

ಸಂಪತ್ ಮೈತ್ರೇಯ, ಖುಷಿ ರವಿ, ಪ್ರವೀಣ್ ಅಥರ್ವ ಪ್ರಮುಖ ಪಾತ್ರದಲ್ಲಿರುವ ಚಿತ್ರವಿದು. ರಾಜಗೋಪಾಲ್ ಕಥೆ ಬರೆದು ನಿರ್ದೇಶಿಸಿದ್ದಾರೆ.

‘ಒಂದೇ ಮನೆಯಲ್ಲಿ ಒಂದು ರಾತ್ರಿ ನಡೆಯುವ ವಿಭಿನ್ನ ಕಥೆಯಿದು. ಸಿನಿಮಾದಲ್ಲಿ ಮುಖ್ಯವಾಗಿ ಎರಡೇ ಪಾತ್ರಗಳಿರುವುದು. ಉಳಿದ ಪಾತ್ರಗಳು ಅಲ್ಲಲ್ಲಿ ಆಗಾಗ ಬಂದು ಹೋಗುತ್ತವೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾವಿದು. ಸಂಪತ್ ಮೈತ್ರೇಯ, ಖುಷಿ ರವಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ’ ಎನ್ನುತ್ತಾರೆ ನಿರ್ದೇಶಕರು.

ರೂಸಿಕ್ ಸಂಗೀತ ಸಂಯೋಜನೆಯಿದೆ. ಹಂಗೇರಿ ದೇಶದ ‘ಪಿಲ್‌ಹಾರ್ಮೋನಿಕ್ ಆರ್ಕೆಸ್ಟ್ರಾ’ದಲ್ಲಿ ಚಿತ್ರದ ಸಂಗೀತದ ಕೆಲಸಗಳು ನಡೆದಿರುವುದು ವಿಶೇಷ ಎಂದಿದೆ ಚಿತ್ರತಂಡ. ಪ್ರದೀಪ್ ಪದ್ಮಕುಮಾರ್ ಛಾಯಾಚಿತ್ರಗ್ರಹಣ, ಆರ್. ರಾಜ್‌ಕುಮಾರ್ ಸಂಕಲನವಿದೆ.

ಸಂಜು ವೆಡ್ಸ್ ಗೀತಾ-2

ಶ್ರೀನಗರ ಕಿಟ್ಟಿ, ರಚಿತಾ ರಾಮ್ ಜೋಡಿಯಾಗಿ ನಟಿಸಿರುವ ‘ಸಂಜು ವೆಡ್ಸ್ ಗೀತಾ-2’ ಮರು ಬಿಡುಗಡೆಯಾಗುತ್ತಿದೆ. ಜನವರಿ 17ರಂದು ಚಿತ್ರ ತೆರೆ ಕಂಡಿತ್ತು. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯದ ಕಾರಣ ಚಿತ್ರದೊಳಗೆ ಒಂದಷ್ಟು ಬದಲಾವಣೆ ಮಾಡಿಕೊಂಡು ಮತ್ತೆ ಬಿಡುಗಡೆ ಮಾಡುತ್ತಿದೆ ಚಿತ್ರತಂಡ.

ಪವಿತ್ರ ಇಂಟರ್‌ನ್ಯಾಷನಲ್ ಮೂವೀಮೇಕರ್ಸ್ ಅಡಿಯಲ್ಲಿ ಛಲವಾದಿ ಕುಮಾರ್ ನಿರ್ಮಿಸಿರುವ ಚಿತ್ರಕ್ಕೆ ನಾಗಶೇಖರ್ ನಿರ್ದೇಶನವಿದೆ. ಚಿತ್ರದ ಬಿಡುಗಡೆ ಪೂರ್ವ ಕಾರ್ಯಕ್ರಮದಲ್ಲಿ ಭಾಗಿಯಾದ ನಟ ಶಿವರಾಜ್‌ಕುಮಾರ್ ಚಿತ್ರತಂಡಕ್ಕೆ ಸಾಥ್ ನೀಡಿದ್ದಾರೆ.

‘ನಮ್ಮ ಸಿನಿಮಾ ಚೆನ್ನಾಗಿ ಮೂಡಿ ಬರಬೇಕು, ಅದನ್ನು ಜನರಿಗೆ ತಲುಪಿಸಬೇಕೆಂದು ಹೋರಾಡುತ್ತಿರುವ ನಿರ್ಮಾಪಕ ಕುಮಾರ್ ಅವರಿಗೆ ಹ್ಯಾಟ್ಸಾಫ್ ಹೇಳಲೇಬೇಕು. ಮತ್ತಷ್ಟು ಹಣ ಖರ್ಚು ಮಾಡಿ ಮರುಬಿಡುಗಡೆ ಮಾಡಲು ಯಾರೂ ಮುಂದೆ ಬರುವುದಿಲ್ಲ. ಆದರೆ ಇವರು ಆ ಧೈರ್ಯ ಮಾಡಿದ್ದಾರೆ. ಇಂಥ ಸಿನಿಮಾಗಳು ಗೆಲ್ಲಬೇಕು, ಮುಖ್ಯವಾಗಿ ನಿರ್ಮಾಪಕರು ಗೆಲ್ಲಬೇಕು. ತಂಡದಲ್ಲಿ ಎಲ್ಲರ ಕೆಲಸ ಅಚ್ಚುಕಟ್ಟಾಗಿದೆ’ ಎಂದಿದ್ದಾರೆ ಶಿವಣ್ಣ.

ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಶ್ರೀಧರ್ ವಿ. ಸಂಭ್ರಮ್ ಸಂಗೀತ ಈ ಚಿತ್ರಕ್ಕಿದೆ. ನಟ ಚೇತನ್ ಚಂದ್ರ, ರಾಗಿಣಿ ದ್ವಿವೇದಿ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಸಾಧು ಕೋಕಿಲ, ತಬಲಾ ನಾಣಿ, ಗಿಚ್ಚಿ ಗಿಲಿಗಿಲಿ ವಿನೋದ್, ಖಳನಟ ಸಂಪತ್‌ಕುಮಾರ್ ಸೇರಿದಂತೆ ಸಾಕಷ್ಟು ಕಲಾವಿದರು ತಾರಾಗಣದಲ್ಲಿದ್ದಾರೆ.

‘ನಮ್ಮ ಚಿತ್ರ ಈಗ ವೇಗ ಪಡೆದುಕೊಂಡಿದೆ. ತಂದೆ ಮಗಳ ಭಾವನಾತ್ಮಕ ದೃಶ್ಯ ಸೇರಿದಂತೆ ಹೊಸದಾಗಿ ಸೇರಿಸಲಾಗಿರುವ 21 ನಿಮಿಷಗಳ ಹೃದಯಸ್ಪರ್ಶಿ ದೃಶ್ಯಗಳು ಪ್ರೇಕ್ಷಕರ ಮನಸನ್ನು ಭಾರವಾಗಿಸುತ್ತವೆ’ ಎನ್ನುತ್ತಾರೆ ಶ್ರೀನಗರ ಕಿಟ್ಟಿ.

ಕಾಲೇಜ್ ಕಲಾವಿದ

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರ. ಕಾಲೇಜು ಆವರಣದಲ್ಲಿನ ಪ್ರೇಮಕಥೆ ಹೊಂದಿರುವ ಚಿತ್ರಕ್ಕೆ ಸಂಜಯ್ ಮಳವಳ್ಳಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಇದೊಂದು ಪ್ರೇಮಮಯ ಪಯಣ. ಮ್ಯೂಸಿಕಲ್ ಜರ್ನಿ ಹೊಂದಿರುವ ಈ ಸಿನಿಮಾದಲ್ಲಿ ಡ್ರಗ್ಸ್ ವಿಚಾರವೂ ಇದೆ. ಕಾಲೇಜು ವಿದ್ಯಾರ್ಥಿಗಳ ಸ್ನೇಹ, ಪ್ರೀತಿ, ಸಂಬಂಧ, ಹಾಸ್ಯ, ಫೈಟ್ ಸೇರಿದಂತೆ ಮನರಂಜನೆಯ ಎಲ್ಲಾ ಅಂಶಗಳನ್ನು ಒಳಗೊಂಡಿವೆ’ ಎಂದಿದ್ದಾರೆ ನಿರ್ದೇಶಕರು.

ಗಜಾನನ ಫಿಲ್ಮ್ಸ್ ಬ್ಯಾನರ್‌ನಲ್ಲಿ ತರುಣ್ ಶರ್ಮಾ ನಿರ್ಮಾಣ ಮಾಡಿದ್ದಾರೆ. ಸಾಕಷ್ಟು ಧಾರಾವಾಹಿಗಳಲ್ಲಿ ನಟಿಸರುವ ಆರವ್ ಸೂರ್ಯ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಅವರಿಗೆ ಚೈತ್ರ ಲೋಕನಾಥ್ ಜೋಡಿಯಾಗಿದ್ದಾರೆ. ಹುಲಿ ಕಾರ್ತಿಕ್, ಹರಿಣಿ ಶ್ರೀಕಾಂತ್, ರಮೇಶ್ ಭಟ್ ಮುಂತಾದವರು ಚಿತ್ರದಲ್ಲಿದ್ದಾರೆ. ಸುರಾಜ್ ಜೋಯಿಸ್ ಸಂಗೀತ, ಆನಂದ್ ಸುಂದರೇಶ ಛಾಯಾಚಿತ್ರಗ್ರಹಣ, ಮಹೇಶ್ ಗಂಗಾವತಿ ಸಂಕಲನವಿದೆ.



ಸಚಿವೆ ಶೋಭಾ ಆಯ್ಕೆ ಅಸಿಂಧು ಕೋರಿಕೆ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಬೆಂಗಳೂರಿನ ಉತ್ತರ ಲೋಕಸಭಾ ಕ್ಷೇತ್ರದಿಂದ 2024ರಲ್ಲಿ ಭಾರತೀಯ ಜನತಾ ಪಕ್ಷದಿಂದ ಸ್ಪರ್ಧಿಸಿ ಗೆದ್ದಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸುವಂತೆ ಕೋರಿ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ನಗರದ ಉದ್ಯಮಿ ಮತ್ತು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನಿಕಟವರ್ತಿಯೂ ಆದ ಬಿ.ಮೋಹನ ಕುಮಾರ್ ಸಲ್ಲಿಸಿದ್ದ ಈ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿದೆ.

ವಿಚಾರಣೆ ವೇಳೆ ಅರ್ಜಿದಾರ ಮೋಹನ ಕುಮಾರ್ ಪರ ಹೈಕೋರ್ಟ್ ವಕೀಲ ಸ್ಮರಣ ಶೆಟ್ಟಿ, 'ಶೋಭಾ ಕರಂದ್ಲಾಜೆ ಅವರು ನಾಮಪತ್ರ ಸಲ್ಲಿಸುವ ಮುನ್ನ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸುವಾಗ ವಾಸ್ತವಾಂಶ ಮುಚ್ಚಿಟ್ಟಿದ್ದಾರೆ' ಎಂದು ಆಕ್ಷೇಪಿಸಿದ್ದರು. ಅರ್ಜಿದಾರರ ಈ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, 'ಪ್ರಜಾ ಪ್ರಾತಿನಿಧ್ಯ ಕಾಯ್ದೆ-1951ರ ಕಲಂ 81ರ ಅಡಿಯಲ್ಲಿ ಸಲ್ಲಿಸಲಾಗಿರುವ ಈ ಅರ್ಜಿಯು, ಯಾವ ಕಾರಣಗಳಡಿ ವಿಚಾರಣೆಗೆ ಒಳಪಡಬೇಕು ಎಂಬುದನ್ನು ನಿಖರವಾಗಿ ವಿಶದಪಡಿಸುವಲ್ಲಿ ವಿಫಲವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಜಾಗೊಳಿಸಿದೆ.

ಶೋಭಾ ಕರಂದ್ಲಾಜೆ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ವಾದ ಮಂಡಿಸಿದ್ದರು.

ಅತ್ಯಾಚಾರ ಮಾಡಿಸಿದ ಆರೋಪ ಮುನಿರತ್ನ ಜಾಮೀನು ಅರ್ಜಿ ವಜಾ

ಬೆಂಗಳೂರು: ಮಧ್ಯವಯಸ್ಸಿನ ಮಹಿಳೆಯೊಬ್ಬರ ಮೇಲೆ ತನ್ನ ಸಹಚರರಿಂದ ಕಣ್ಣೆದುರೇ ಅತ್ಯಾಚಾರ ಮಾಡಿಸಿದ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಸೇರಿದಂತೆ ಒಟ್ಟು ನಾಲ್ವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಜನಪ್ರತಿನಿಧಿಗಳ ನ್ಯಾಯಾಲಯ ವಜಾಗೊಳಿಸಿದೆ.

ಈ ಕುರಿತಂತೆ ಮುನಿರತ್ನ ಹಾಗೂ ಇತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅರ್ಜಿ ವಜಾಗೊಳಿಸಿ ಗುರುವಾರ ಆದೇಶಿಸಿದರು.

ಸಂತ್ರಸ್ತೆಯ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, ಮುನಿರತ್ನ ಅವರು ಸಂತ್ರಸ್ತೆಗೆ ಬೆದರಿಕೆ ಒಡ್ಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನ ವಿವರವನ್ನು ಈ ಹಿಂದಿನ ವಿಚಾರಣೆಯಲ್ಲಿ ನ್ಯಾಯಾಲಯದ ಗಮನಕ್ಕೆ ತಂದಿದ್ದರು.

ಪ್ರಕರಣದ ಎರಡನೇ ಆರೋಪಿ ನಂದಿನಿ ಲೇಔಟ್‌ನ ವಸಂತ, ಚನ್ನಕೇಶವ, ಆಶ್ರಯ ನಗರದ ಕಮಲ್ ಅವರ ನಿರೀಕ್ಷಣಾ ಜಾಮೀನು ಅರ್ಜಿಗಳನ್ನೂ ವಜಾಗೊಳಿಸಲಾಗಿದೆ.

ನೆಲಬಾಡಿಗೆ ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿ ಸ್ವತ್ತುಗಳ ನೋಂದಣಿ ವೇಳೆ, ಮಾರುಕಟ್ಟೆ ದರಕ್ಕೆ ಜೋಡಣೆ ಮಾಡಿ 'ನೆಲಬಾಡಿಗೆ ಮತ್ತು ಇತರೆ ಶುಲ್ಕಗಳು' ಎಂಬ ಹೆಸರಿನಲ್ಲಿ ನೆಲಬಾಡಿಗೆ ಸಂಗ್ರಹಕ್ಕೆ ಹೊರಡಿಸಲಾಗಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ ಬೆಂಗಳೂರಿನ ಕೊಡಿಗೇಹಳ್ಳಿಯ 'ಮೆಸರ್ಸ್ ಸಪ್ತಗಿರಿ ಶೆಲ್ಟರ್ಸ್' ಪಾಲುದಾರ ಸುಬ್ರಹ್ಮಣ್ಯ ನಾಯ್ಡು ಸೇರಿದಂತೆ ಇತರೆ 500ಕ್ಕೂ ಹೆಚ್ಚು ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಗುರುವಾರ ಪ್ರಕಟಿಸಿದೆ. ಹೊಸ ಕಟ್ಟಡಗಳಿಗೆ ಪರವಾನಗಿ ನೀಡುವಾಗ ಮತ್ತು ಕಟ್ಟಡದ ನಕ್ಷೆ ಮಂಜೂರು ಮಾಡುವಾಗ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ರ ಅನ್ವಯ, ಉತ್ತಮತೆ ಹಾಗೂ ನಿವೇಶನ ಶುಲ್ಕಕ್ಕೆ ಅನ್ವಯವಾಗುವಂತೆ ನೆಲಬಾಡಿಗೆಯನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳಲು ಈ ಅಧಿಸೂಚನೆ ಹೊರಡಿಸಲಾಗಿತ್ತು. 80ಕ್ಕೂ ಹೆಚ್ಚು ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಸಮ್ಮಿತ್ ವಾದ ಮಂಡಿಸಿದ್ದರು.

'ನೇತ್ರಾವತಿ'ಯಲ್ಲಿ ನಗರಸಭೆ ಸದಸ್ಯನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಪುತ್ತೂರು ನಗರಸಭೆಯ ಬಿಜೆಪಿ ಸದಸ್ಯ ರಮೇಶ್ ರೈ ನೆಲ್ಲಿಕಟ್ಟೆ (54) ಅವರ ಮೃತದೇಹ ಇಲ್ಲಿಗೆ ಸಮೀಪದ ಪಾಣೆಮಂಗಳೂರು ನೇತ್ರಾವತಿ ನದಿ ತೀರದಲ್ಲಿರುವ ನೀರಿನ ಟ್ಯಾಂಕ್‌ನಲ್ಲಿ ಗುರುವಾರ ಪತ್ತೆಯಾಗಿದೆ.

ರಮೇಶ್ ರೈ

ಪಾಣೆಮಂಗಳೂರು ಹಳೆ ಸೇತುವೆ ಬಳಿ ವ್ಯಕ್ತಿಯೊಬ್ಬರ ಬೈಕ್, ಮೊಬೈಲ್, ಅಂಗಿ ಹಾಗೂ ಚಪ್ಪಲಿ ಬಿದ್ದಿದ್ದವು.

ಯಾರೋ ಅಂಗಿ ಕಳಚಿಟ್ಟು ನದಿಗೆ ಹಾರಿರಬಹುದು ಎಂಬ ಶಂಕೆಯಿಂದ ಸ್ಥಳೀಯ ಈಜುಗಾರರು ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಯ ಸಿಬ್ಬಂದಿ ನೇತ್ರಾವತಿ ನದಿಯಲ್ಲಿ ಸತತವಾಗಿ ಹುಡುಕಾಟವನ್ನು ನಡೆಸಿದ್ದರು.

ಅಲ್ಲಿ ಪತ್ತೆಯಾದ ಮೊಬೈಲ್ ಮತ್ತಿತರ ಸ್ವತ್ತುಗಳು ಪುತ್ತೂರು ನಗರ ಸಭಾ ಸದಸ್ಯ ರಮೇಶ್ ರೈ ನೆಲ್ಲಿಕಟ್ಟೆ ಅವರದ್ದು ಎಂದು ಗೊತ್ತಾಗಿತ್ತು.

ಸ್ವಲ್ಪ ಹೊತ್ತಿನಲ್ಲೇ ಮೃತದೇಹವು ಪತ್ತೆಯಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪುತ್ತೂರು ನಗರ ಸಭೆಯ ವಾರ್ಡ್ ಒಂದರಲ್ಲಿ ತೆರವಾದ ಸ್ಥಾನಕ್ಕೆ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ರಮೇಶ್ ರೈ ಅವರು ಬಿಜೆಪಿಯಿಂದ ಗೆದ್ದಿದ್ದರು.

ಬಂಟ್ವಾಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಮೇಶ್ ರೈ ಸಾವಿನ ಬಗ್ಗೆ ಸಮಗ್ರವಾದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಮಾನಗಳಿಗೆ 1,019 ಹುಸಿ ಬೆದರಿಕೆ ಕರೆ

ನವದೆಹಲಿ (ಪಿಟಿಐ): 2024ರ ಅವಧಿಯಲ್ಲಿ ಭಾರತೀಯ ನಾಗರಿಕ ವಿಮಾನಯಾನ ವಲಯಕ್ಕೆ 1,019 ಹುಸಿ ಬಾಂಬ್ ಬೆದರಿಕೆ ಕರೆಗಳು ಹಾಗೂ ಸಂದೇಶಗಳು ಬಂದಿವೆ. ಹಿಂದಿನ 6 ವರ್ಷಗಳಿಗೆ ಹೋಲಿಸಿದರೆ ಇದು 300 ಪಟ್ಟು ಅಧಿಕವಾಗಿದೆ ಎಂದು ಅಧಿಕೃತ ವರದಿಯು ತಿಳಿಸಿದೆ.

2018ರಿಂದ 2023ರವರೆಗೆ 330 ಬೆದರಿಕೆ ಸಂದೇಶಗಳು ಬಂದಿದ್ದವು. 2024ರ ಒಂದು ವರ್ಷದ ಅವಧಿಯಲ್ಲಿಯೇ ಈ ಸಂಖ್ಯೆ 1,019ರಷ್ಟಾಗಿದೆ. ಇವುಗಳಲ್ಲಿ ಅಕ್ಟೋಬರ್ ತಿಂಗಳಲ್ಲಿ ಅತಿ ಹೆಚ್ಚು, 687 ಬೆದರಿಕೆ ಸಂದೇಶಗಳು ಬಂದಿವೆ. ಒಟ್ಟು 600ಕ್ಕೂ ಹೆಚ್ಚು ದೇಶೀಯ ಹಾಗೂ ಅಂತರರಾಷ್ಟ್ರೀಯ ವಿಮಾನಗಳಿಗೆ ಈ ಬೆದರಿಕೆಗಳು ಬಂದಿವೆ.

ಒಟ್ಟು ಬೆದರಿಕೆಗಳಲ್ಲಿ ಶೇ60ರಷ್ಟು ಸಂದೇಶಗಳನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕಳುಹಿಸಲಾಗಿದೆ. ಉಳಿದವನ್ನು ಇ-ಮೇಲ್, ಫೋನ್ ಕರೆ ಹಾಗೂ ಇತರ ಮಾಧ್ಯಮಗಳ ಮೂಲಕ ಕಳುಹಿಸಲಾಗಿದೆ ಎಂದು ವರದಿ ತಿಳಿಸಿದೆ.

ಕೆಎಸ್‌ಆರ್‌ಟಿಸಿ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ಚಾಲಕ ಕಂ ನಿರ್ವಾಹಕ ಹುದ್ದೆಗೆ ಆಯ್ಕೆಯಾದವರ ತಾತ್ಕಾಲಿಕ ಪಟ್ಟಿಯನ್ನು ಶಾಂತಿನಗರದಲ್ಲಿರುವ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ksrtcjobs.karnataka.gov.in ನಲ್ಲಿ ಪ್ರಕಟಿಸಲಾಗಿದೆ.

ಆಯ್ಕೆ ಪಟ್ಟಿಗೆ ಆಕ್ಷೇಪ ಇದ್ದಲ್ಲಿ ಜೂನ್ 11ರ ಸಂಜೆಯೊಳಗೆ ಕೆಎಸ್‌ಆರ್‌ಟಿಸಿ, ಕೇಂದ್ರ ಕಚೇರಿ, ನೇಮಕಾತಿ ಶಾಖೆ, ಶಾಂತಿನಗರ ಇಲ್ಲಿಗೆ ಸಲ್ಲಿಸಬಹುದು ಅಥವಾ ನಿಗಮದ ಇ-ಮೇಲ್ dycpmrct@ksrtc.orgಗೆ ಕಳುಹಿಸಬಹುದು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ರಾಯಚೂರು
ಜಿಲ್ಲಾ ಅಧಿಕಾರಿಗಳ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು.
(ಜಿಲ್ಲಾಡಳಿತ ಭವನ ಮೊದಲನೇಯ ಮಹಡಿ, ಬಿ-2, ಯಕ್ಲಾಸಪೂರು ರಸ್ತೆ)
ದೂರವಾಣಿ ಸಂಖ್ಯೆ: 08532-295996, ಇ-ಮೇಲ್: dobcmraichur@gmail.com

ಸಂ: ಜಿಹಿಂವಕಇರಾ/ಕಾಟ್/ಇ-ಟೆಂಡರ್/ಸಿಆರ್/2025-26 ದಿನಾಂಕ: 03.06.2025

ಇ-ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರನ ಪತ್ರಿಕಾ ಪ್ರಕಟಣೆ

ರಾಯಚೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸ್ಮತ್ತಿರುವ ವಿದ್ಯಾರ್ಥಿನಿಲಯಗಳಿಗೆ ಅವಶ್ಯಕಯಿರುವ ಕಾಟ್, ಬೆಡ್ ಪೀಲ್ಲೊ, ಮೇಲು ಹಾಸಿಗೆ ಹೊದಿಕೆ ಮತ್ತು ಕೆಳ ಹಾಸಿಗೆ ಹೊದಿಕೆಗಳನ್ನು ಸರಬರಾಜು ಪಡೆಯಲು **ದಿನಾಂಕ: 03.06.2025** ರಂದು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್ಡುದಾರರು **ದಿನಾಂಕ: 03.06.2025 ರಿಂದ ದಿ: 11.06.2025**ರ ವರೆಗೆ Website: **www.kppp.karnataka.gov.in** ನಲ್ಲಿ ಭಾಗವಹಿಸಬಹುದಾಗಿದೆ.
ಹೆಚ್ಚಿನ ವಿವರಗಳಿಗೆ: ಜಿಲ್ಲಾ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ಜಿಲ್ಲೆ ಮೊಬೈಲ್ ನಂಬರ್: 9141323172, ಇ-ಮೇಲ್: **dobcmraichur@gmail.com**

ಸಹಿ/-
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು
ರಾಯಚೂರು.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
3ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ, ಕೆ.ಹೆಚ್.ರೋಡ್, ಶಾಂತಿನಗರ, ಬೆಂಗಳೂರು-560027. ದೂರವಾಣಿ ಸಂಖ್ಯೆ: 080-2214817
ಫ್ಯಾಕ್ಸ್ ಸಂಖ್ಯೆ: 080-22216500 ಇ-ಮೇಲ್: 1. controllerstateaccounts@yahoo.com 2. controllerksaad@gmail.com

ಸಂಖ್ಯೆ: ರಾಲೆಪ 05 ಪ್ರಹೊವಾ.2024-25 ದಿನಾಂಕ: 05/06/2025

ಪ್ರಸ್ತಾವನೆಗಳಿಗೆ ಆಹ್ವಾನ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ಕಚೇರಿಯ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಪಡೆಯಲು ನೋಂದಣಿಯಾಗಿರುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿದೆ.

ಆಸಕ್ತಿಯುಳ್ಳ ಸಂಸ್ಥೆಗಳು RFP ಯ ಎಲೆಕ್ಟ್ರಾನಿಕ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಪ್ರಸ್ತಾವನೆಗಳನ್ನು (PDF ನಮೂನೆಯಲ್ಲಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ https://kppp.karnataka.gov.in ನಲ್ಲಿ ಬಿಡ್ಡುದಾರರ ಡಿಜಿಟಲ್ ಹಸ್ತಾಕ್ಷರ ಪ್ರಮಾಣ ಪತ್ರ (DSC) ದ ಮೂಲಕ ಅಪ್‌ಲೋಡ್ ಮಾಡುವುದು.

ಭವಿಷ್ಯದಲ್ಲಿ RFPಗೆ ಸಂಬಂಧಿಸಿದ ಯಾವುದೇ ಸೂಚನೆಗಳು/ಮಾಹಿತಿಗಳು <https://kppp.karnataka.gov.in> ನಲ್ಲಿ ಮಾತ್ರ ಲಭ್ಯವಿರುವುದು.

ಅರ್ಹತಾ ಮಾನದಂಡಗಳು ಹಾಗೂ ನಿಬಂಧನೆಗಳಿಗಾಗಿ RFP ದಾಖಲೆಗಳನ್ನು ಉಲ್ಲೇಖಿಸುವುದು. ತಮ್ಮ ಪ್ರಸ್ತಾವನೆಗಳನ್ನು ದಿನಾಂಕ: **19.06.2025 ಸಂಜೆ 3.00** ಗಂಟೆ ಅಥವಾ ಮುಂಚಿತವಾಗಿ ಸಲ್ಲಿಸಬಹುದು.

ಟೆಂಡರ್ ಪ್ರಕಟಣೆ ದಿನಾಂಕ	05.06.2025
ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	19.06.2025 (3.00 PM)
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	20.06.2025 (4.00 PM)
ವಾಣಿಜ್ಯ ಬಿಡ್	24.06.2025 (4.00 PM)

ಸಹಿ/-
ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1089/ಅಕಾರ್/2025-26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು - 560 029
ಫೋನ್: 080-26096839 / 26096855 ಇಮೇಲ್: purchase@kmf.coop

ದಿನಾಂಕ: 04-06-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಟೆಂಡರ್ ಸಂಖ್ಯೆ	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
			ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಮೆಕ್ಕೆಜೋಳ	KMF/2025-26/ IND1443	1000	1000	1000	1000	1000
2	ಅಕ್ಕಿ ತೌಡು	KMF/2025-26/ IND1444	0	0	1000	0	0

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 04-06-2025; ಪೂರ್ವಭಾವಿ ಸಭೆಯ ದಿನಾಂಕ: 09-06-2025 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11-06-2025 at 03.00PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 12-06-2025 at 03.15PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 12-06-2025 at 03.30PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳವರ ಕಾರ್ಯಾಲಯ ಬೀದರ ಜಿಲ್ಲೆ ಬೀದರ
(ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ)
ದೂರವಾಣಿ ಸಂಖ್ಯೆ :08482-226232 E-mail : ddfcs.bidar-ka@nic.in

ಸಂ:ಎಫ್‌ಎಸ್‌ಬಿ/ಕಬ್ಬು/ಸಿಆರ್-01/2025-26 ದಿನಾಂಕ:05-06-2025

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬೆಂಗಳೂರು ಇವರ ಆದೇಶ ಸಂಖ್ಯೆ. ಡಿಎಸ್‌ಕೆ/ಕಬ್ಬು ಬಿಲ್ಲು ಬಾಕಿ/14/2024-25 ದಿನಾಂಕ: 04-02-2025ರ ಪ್ರಕಾರ 2024-25ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬಿನ ಬಿಲ್ಲು ಪಾವತಿಸಿದೇ ಇರುವುದರಿಂದ ದಿ॥ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಇಮಾಮಪೂರ ತಾಲೂಕು ಬೀದರ ಜಿಲ್ಲೆ ಬೀದರ ಈ ಕೆಳಕಂಡ ಸಕ್ಕರೆ ಕಾರ್ಖಾನೆ ಹಣ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಲಾಗಿರುತ್ತದೆ. ಅದರಂತೆ ಈ ಕಛೇರಿಯಿಂದ ಭೂಕಂದಾಯದಡಿ ವಸೂಲಾತಿ ಪ್ರಮಾಣ ಪತ್ರ ಹೊರಡಿಸಿದ್ದು, ಸದರಿ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆಯನ್ನು ಜಪ್ತಿ ಮಾಡಲಾಗಿರುತ್ತದೆ. ಜಪ್ತಿ ಮಾಡಿದ ಸಕ್ಕರೆಯನ್ನು NCDEX e-markets Ltd.,- E-Auction platform ರ ಮೂಲಕ ದಿನಾಂಕ. 09-06-2025ರಂದು ಸಮಯ 4:00 ರಿಂದ 5:00 ಗಂಟೆಯವರೆಗೆ ಇರುತ್ತದೆ. ಇಚ್ಛೆಯುಳ್ಳವರು ಟೆಂಡರ್ ಅರ್ಜಿಗಳನ್ನು www.neml.in ಮೂಲಕ ಪಡೆದುಕೊಳ್ಳಬಹುದು.
1) Name of the sugar factory : Naranja Co-Operative Sugar Factory at Imampur Taluka Bidar Dist.Bidar, 2) Sugar grade : S-30, 3) Sugar in Qtls. : 65000, 4) Godown No : 01, 5) Total : 65000.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಮತ್ತು ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.ದೂರವಾಣಿ ಸಂಖ್ಯೆ. 08482-226232 ಮೊಬೈಲ್ ಸಂಖ್ಯೆ. 7625015646, 7019830432, 7483675815, 9742492299, 8970314444, 9611123128, 9844302280, 9448349496,

ಸಹಿ/- ಜಿಲ್ಲಾಧಿಕಾರಿಗಳು ಬೀದರ
ಜಿಲ್ಲೆ ಬೀದರ

ವಾ.ಸಾ.ಸಂ.ಇ/ಬೀದರ/60/ಕೆ.ಎಸ್.ಎಂ.ಸಿ.&ಎ/25-26

ನಮ್ಮ ಮೆಟ್ರೋ namma metro ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಉದ್ಯಮ)
3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027
ಇಮೇಲ್: contactus@bmrc.co.in, ವೆಬ್‌ಸೈಟ್: www.bmrc.co.in

ಸಂಖ್ಯೆ: ಬಿಎಂಆರ್‌ಸಿಎಲ್/ಹೆಚ್‌ಆರ್/0008/ಪಿಎಂಜೆ/2025 ದಿನಾಂಕ: 03.06.2025

ಗುತ್ತಿಗೆ / ನಿಯೋಜನೆ ಮೇಲೆ ನೇಮಕಾತಿಗಾಗಿ ಪ್ರಕಟಣೆ

ಬಿಎಂಆರ್‌ಸಿಎಲ್ ಈ ಕೆಳಕಂಡ ಹುದ್ದೆಗಳಿಗೆ ಗುತ್ತಿಗೆ / ನಿಯೋಜನೆ ಮೇಲೆ ನೇಮಕ ಮಾಡಲು ಅರ್ಹ ಮತ್ತು ಅನುಭವ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಯೋಮಿತಿ
ನಿರ್ದೇಶಕರು (ಕಾರ್ಯಾಚರಣೆ & ನಿರ್ವಹಣೆ)	01	57 ವರ್ಷಗಳು
ನಿರ್ದೇಶಕರು (ಪ್ರಾಜೆಕ್ಟ್ & ಯೋಜನೆ)	01	

ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **30.06.2025** ಮತ್ತು ಅಗತ್ಯ ದಾಖಲೆಗಳೊಂದಿಗೆ ಸಹಿಮಾಡಿದ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ: **07.07.2025ರ ಸಂಜೆ 4.00 ಗಂಟೆವರೆಗೆ.**
ಅರ್ಹತಾ ಅಗತ್ಯತೆ, ವೇತನ, ಅರ್ಜಿಗಳ ಪ್ರಕ್ರಿಯೆ ಮತ್ತು ಇತರೆ ಸಂಬಂಧಿತ ಮಾಹಿತಿಗಳಿಗೆ ಬಿಎಂಆರ್‌ಸಿಎಲ್ ವೆಬ್‌ಸೈಟ್ **www.bmrc.co.in / career section** ಅನ್ನು ವೀಕ್ಷಿಸಿ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಮಾ.ಸಂ.)

ಕೃಷಿ ಇಲಾಖೆ
ಕೃಷಿ ಆಯುಕ್ತರವರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು - 560 001.
KSDA

ಸಂಖ್ಯೆ:JDA/(E,T&e-Gov)/e-Proc/AIC/KSDA/Server with os/01/2025-26 ದಿನಾಂಕ:02.06.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೃಷಿ ಇಲಾಖೆಯಲ್ಲಿನ ಕೃಷಿ ಮಾಹಿತಿ ಕೇಂದ್ರಕ್ಕೆ ಅವಶ್ಯವಿರುವ **Server with OS ಘಟಕ ಸಂಗ್ರಹಿಸಲು** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಸಕ್ತ ಸಂಸ್ಥೆಗಳಿಂದ (ಬಿಡ್‌ದಾರರಿಂದ) ಟೆಂಡರನ್ನು ಆಹ್ವಾನಿಸಿದೆ.
ಬಿಡ್‌ದಾರರಿಗೆ ಸೂಚನೆಗಳು, ಅರ್ಹತೆಯ ಮಾನದಂಡಗಳು, ಮೌಲ್ಯಮಾಪನದ ಮಾನದಂಡಗಳು ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುವ ಬಿಡ್ ಡಾಕ್ಯುಮೆಂಟ್ನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು **https//kppp.karnataka.gov.in** ಮತ್ತು ಟೆಂಡರ್ ಡಾಕ್ಯುಮೆಂಟ್‌ನ ಕರಾರುಗಳಿಗೆ ಅನುಗುಣವಾಗಿ ಟೆಂಡರ್‌ನ್ನು ಸಲ್ಲಿಸತಕ್ಕದ್ದು.
ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2025. ಬಿಡ್‌ಗಳನ್ನು ತೆರೆಯುವ ದಿನಾಂಕ: 18.06.2025. ಇಎಂಡಿ ಮೊತ್ತ: ರೂ. 30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಬಿಡ್ ಭದ್ರತಾ ಮೌಲ್ಯ: ರೂ. 75,000/- (ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ).
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಶ್ರೀ ಮಾರ್ಥಂಡ,** ಸಹಾಯಕ ಕೃಷಿ ನಿರ್ದೇಶಕರು (ಕೃಷಿ ವಾರ್ತೆ), ಕೃಷಿ ಇಲಾಖೆ ಶೇಷಾದ್ರಿ ರಸ್ತೆ, ಬೆಂಗಳೂರು-560001. ಮೊಬೈಲ್: 8277929837, ಇ-ಮೇಲ್ ವಿಳಾಸ: digiagrigok@gmail.com

ಸಹಿ/-
ಕೃಷಿ ನಿರ್ದೇಶಕರು ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

ವಾಸಾಸಂಇ/ವಾಪ್ರ/ಜಿಎ/1038/2025-26

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
Email:bnuregistrar@karnataka.gov.in
web:www.bnu.karnataka.gov.in

ದಿನಾಂಕ: 03.06.2025

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ ಇಲ್ಲಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಬಗ್ಗೆ. ಟೆಂಡರ್ ನಂ: **BNU/2025-26/SE0010**
ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು **ದಿನಾಂಕ: 31.05.2025** ರಿಂದ **http://kppp.karnataka.gov.in** ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/-
ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ-563103

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:109/ಕೆಎಸ್ಎಂಸಿಎ/2025-26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195-200307E.Mail I.D.: ubpee06@gmail.com

ಸಂಖ್ಯೆ: ವಿಜನಿನಿ/ಭಮೇಯೋ/ಕಾಇಂ ವಿ-6/ಚಳ್ಳಕೆರೆ/ಟೆಂಡರ್ ಪ್ರಕಟಣೆ/2025-26/200-204 ದಿನಾಂಕ: 05.06.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫ್ಯಾಂಟರಿರೋಡ್, ಬೆಂಗಳೂರು-560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿ ವ್ಯಾಪ್ತಿಯ ಲೆಕ್ಕಶೀರ್ಷಿಕೆ-4701 ಮತ್ತು ಟಿ.ಎಸ್.ಪಿ.(ಉಳಿತಾಯ ಮೊತ್ತ) ಯೋಜನೆ ಯಡಿಗಳಲ್ಲಿ ಅನುಮೋದನೆಯಾಗಿರುವ ಬ್ಯಾರೇಜ್ / ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಏಕ-ಲೋಕಟೆ ಮತ್ತು ದ್ವಿ-ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು ಕಾಮಗಾರಿಗಳ ಇಂಡೆಂಟ್ ಸಂ./ಟೆಂಡರ್‌ಗಿಟ್ಟ ಮೊತ್ತ **1) 239 - 419.40 ಲಕ್ಷಗಳು, 2) 240 - 422.78 ಲಕ್ಷಗಳು, 3) 241 - 249.95 ಲಕ್ಷಗಳು ಮತ್ತು 4) 242 - 105.88 ಲಕ್ಷಗಳು.** ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಪ್ರೀ ಬಿಡ್ ಸಭೆಯನ್ನು ದಿನಾಂಕ-16.06.2025 ರಂದು ಈ ವಿಭಾಗ ಕಛೇರಿಯಲ್ಲಿ ಮಧ್ಯಾಹ್ನ 12.30 ಗಂಟೆಗೆ ನಿಗಧಿ ಪಡಿಸಲಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಗಳಿಗೆ ಬಿಡ್ ಸಲ್ಲಿಸುವ ಅಂತಿಮ ದಿನಾಂಕ: 20.06.2025 (ಸಂಜೆ 5.00 ಗಂಟೆ ವರೆಗೆ), ಕಾಮಗಾರಿಗಳ ತಾಂತ್ರಿಕ ಬಿಡ್/ಏಕ-ಲೋಕಟೆ ಬಿಡ್‌ನ್ನು ದಿನಾಂಕ: 23.06.2025 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ವಿಭಾಗ ಕಛೇರಿಯಲ್ಲಿ ತೆರೆಯಲಾಗುವುದು ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅರ್ಹಗುತ್ತಿಗೆದಾರರು www.kppp.karnataka.gov.in ಅಂತರ್ಜಾಲ ಪೋರ್ಟಲ್ ಮೂಲಕ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

DIPR/CTA/KSMCA/129/2025-26
ಸಹಿ/ ಕಾರ್ಯಪಾಲಕ ಅಭಿಯಂತರರು,
ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ದೂರವಾಣಿ : +91-80-22864626, ಇ-ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0310 ದಿನಾಂಕ: 04.06.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಬೆಂಗಳೂರು ನಗರದ ಡಿಜಿಟಲ್ ಯು.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 287.95 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 18.06.2025 ಸಮಯ ಸಂಜೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 05.07.2025 ಸಮಯ ಸಂಜೆ 17.00 ಗಂಟೆಗಳು.** ಇತರೆಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು

ವಾಸಾಸಂಇ/ವಾ.ಪ್ರ./1084/2025-26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ ರವರು ಬೆಂಮಕ್ಷೇವ ದಕ್ಷಿಣ, ಬೆಂಗಳೂರು, ವಾ ಕಾ ಮತ್ತು ಪಾ ವಿಭಾಗಗಳ ದಕ್ಷಿಣ ವೃತ್ತ ಮತ್ತು ಪಶ್ಚಿಮ ವೃತ್ತಕ್ಕೆ ಆರು ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಗ್ಯಾಂಗ್‌ಮೆನ್ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.
1) ವಿಚಾರಣೆ ಸಂ. ಬೆವಿಕಂ/2025-26/ಎಸ್‌ಇ0241 ರ ಅನ್ವಯ ದಕ್ಷಿಣ ವೃತ್ತಕ್ಕೆ 373 ಸಂಖ್ಯೆಯ ಗ್ಯಾಂಗ್‌ಮೆನ್ ಸೇವೆಯನ್ನು ಒದಗಿಸುವುದು. **2) ವಿಚಾರಣೆ ಸಂ. ಬೆವಿಕಂ/2025-26/ಎಸ್‌ಇ0242** ರ ಅನ್ವಯ ಪಶ್ಚಿಮ ವೃತ್ತಕ್ಕೆ 329 ಸಂಖ್ಯೆಯ ಗ್ಯಾಂಗ್‌ಮೆನ್ ಸೇವೆಗಳನ್ನು ಒದಗಿಸುವುದು.
ಬಿಡ್ ದಸ್ತಾವೇಜುಗಳ ವಿತರಣೆ ದಿನಾಂಕ: **06.06.2025 ಸಂಜೆ 4.00 ಗಂಟೆಯಿಂದ 07.07.2025 ಸಂಜೆ 4.00 ಗಂಟೆಯವರೆಗೆ.** ಬಿಡ್‌ಗಳನ್ನು ಸ್ವೀಕರಿಸುವ ದಿನಾಂಕ: **07.07.2025 ಸಂಜೆ 4.00 ಗಂಟೆಯವರೆಗೆ.** ಬಿಡ್‌ಗಳನ್ನು ದಿನಾಂಕ: **09.07.2025, ಸಂಜೆ 4.00 ಗಂಟೆಗೆ** ತೆರೆಯಲಾಗುವುದು.
ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಥವಾ ನೇರವಾಗಿ ವೆಬ್‌ಸೈಟ್: **https://https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಇ-ಪಾವತಿ ಬಗ್ಗೆ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: +91 80 46010000, +91 80 68948777 ಅಥವಾ ಇ-ಮೇಲ್: helpdesk.blr@rteservices.com

ಸಹಿ/-
ಮುಖ್ಯ ಇಂಜಿನಿಯರ್ (ವಿದ್ಯುತ್), (ವಾ ಕಾ&ಪಾ),
ಬೆಂಮಕ್ಷೇವ ದಕ್ಷಿಣ, ಬೆವಿಕಂ, ಬೆಂಗಳೂರು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ.
ದೂರವಾಣಿ : 0831-2498100 ಫ್ಯಾಕ್ಸ್ : 0831-2405467.

ಸಂಖ್ಯೆ : ವಿ.ತಾ.ವಿ./ಬೆ./ಸ್ಥಾ.ಅ./2025-26/ಐ.ಎಫ್.ಟಿ. ನಂ. 39/1110
ದಿನಾಂಕ : 04-06-2025

ಟೆಂಡರ್ ಪ್ರಕಟಣೆ (ದ್ವಿ-ಲಕೋಟಿ ಪದ್ಧತಿ)
(ಇ-ಪ್ರೊಕ್ಯೂರಮೆಂಟ್ ಮೂಲಕ)

ಕುಲಸಚಿವರು, ವಿ.ತಾ.ವಿ., **ಬೆಳಗಾವಿ** ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ದ್ವಿ-ಲಕೋಟಿ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ.

ಕಾಮಗಾರಿ ಹೆಸರು : 1) ವಿ.ತಾ.ವಿ.ಯ, ಪ್ರಾದೇಶಿಕ ಕಛೇರಿಯ ಬೆಂಗಳೂರಿನಲ್ಲಿರುವ ಸ್ಕ್ಯಾನಿಂಗ್ ಸೆಂಟರ್‌ನ್ನು ಚಿ.ತಾ.ವಿ.ಯ VIAT, ಕ್ಯಾಂಪಸ್ ಮುದ್ದೇನಹಳ್ಳಿ, ಚಿಕ್ಕಬಳ್ಳಾಪೂರ ಜಿಲ್ಲೆಗೆ ಸ್ಥಳಾಂತರಿಸುವ ಕಾಮಗಾರಿ ಮೊತ್ತ : ರೂ. 58,61,310/- (ತೆರಿಗೆ ರಹಿತ) ಮತ್ತು 2) ವಿ.ತಾ.ವಿ.ಯ, ಪ್ರಾದೇಶಿಕ ಕಛೇರಿ ಮೈಸೂರಿನ ನೆಲ ಮಹಡಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಯುಜಿ ಕಾರ್ಯಕ್ರಮಗಳಿಗಾಗಿ ಪ್ರಯೋಗಾಲಯಗಳ ಸ್ಥಾಪನೆಯ ಕಾಮಗಾರಿ ಮೊತ್ತ : ರೂ. 65,91,561/- (ತೆರಿಗೆ ರಹಿತ).

ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ದಿನಾಂಕ : **09-06-2025** ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/421/ಮಣಿಪಾಲ್/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, (ಘತ್ಯಾವಿ ಮಹದೇವಪುರ ವಲಯ), 9ನೇ ಮಹಡಿ, ಜಯನಗರ, ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-11.

ಸಂಖ್ಯೆ:ಕಾಪಾಅ/ಘತ್ಯಾವಿ/ಮಪು/ಟೆಂಡರ್/08/2025-26 ದಿನಾಂಕ: 05-06-2025

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in**
ಕಾರ್ಯಪಾಲಕ ಅಭಿಯಂತರರು, (ಎಸ್‌ಡಬ್ಲ್ಯೂಡಿ-ಮಹದೇವಪುರ ವಲಯ), ಬೃಬೆಂಮಪಾ ರವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	**ಮಳೆಯ ನಂತರ ನೀರನ್ನು ಹೊರಹಾಕಲು ಸೂಕ್ತವಾದ ವ್ಯವಸ್ಥೆಯೊಂದಿಗೆ ಪ್ರವಾಹವನ್ನು ತಪ್ಪಿಸಲು ದುರ್ಬಲ ಸ್ಥಳಗಳಲ್ಲಿ ಧಾರಣ ಟ್ಯಾಂಕ್‌ಗಳನ್ನು ಒದಗಿಸುವುದು ಮತ್ತು ಕೆಳಭಾಗದಲ್ಲಿ ದಿಢೀರ್ ಮಳೆಯ ಸಮಯದಲ್ಲಿ ಪ್ರವಾಹವನ್ನು ತಪ್ಪಿಸಲು ಮಳೆನೀರಿನ ಚರಂಡಿಯಲ್ಲಿ ನೀರಿನ ಹರಿವಿನ ಉದ್ದಕ್ಕೂ ಚೆಕ್ ಅಣೆಕಟ್ಟುಗಳನ್ನು ಒದಗಿಸುವುದು.** ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ).: **440.00 ಲಕ್ಷಗಳು.** ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ) : **8.8 ಲಕ್ಷಗಳು** (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ).
2)	**ಮಹದೇವಪುರ ವಿಧಾನ ಸಭಾಕ್ಷೇತ್ರದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಪರ್ಕೊಲೇಷನ್ ಪಿಟ್‌ಗಳು / ಬಾವಿಗಳ ನಿರ್ಮಾಣ. ಕರೆ-2.** ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ).: **45.00 ಲಕ್ಷಗಳು.** ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ) : **1.12 ಲಕ್ಷಗಳು** (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ).
3)	**ಮಹಾದೇವಪುರ ವಿಧಾನ ಸಭಾಕ್ಷೇತ್ರದ ವಿವಿಧ ಸ್ಥಳಗಳಲ್ಲಿ ಮಹದೇವಪುರ ವಲಯದ ಪ್ಯಾಕೇಜ್ MDP-1 (ಯೋಜನೆ ಸಂಖ್ಯೆ 29, 30, 31, 32, 33 ಮತ್ತು 34) ರಲ್ಲಿ ಕಿರಿದಾದ ನೀರಿನ ದ್ವಾರಗಳ ಅಗಲೀಕರಣ ಹಾಗೂ ತಡೆಗೋಡೆಗಳು, `U' ಆಕಾರದ ಒಳಚರಂಡಿಗಳು, ಬಾಕ್ಸ್ ಒಳಚರಂಡಿಗಳು ಮತ್ತು ಕಲ್ವರ್ಟ್‌ಗಳು / ಮಳೆನೀರು ಒಳಚರಂಡಿಗಳಿಗೆ ಸೇತುವೆಗಳ ನಿರ್ಮಾಣಕ್ಕಾಗಿ ಕರೆ-2.** ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ).: **2018.00 ಲಕ್ಷಗಳು.** ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ) : **ಕೆಪಿಪಿ ಪೋರ್ಟಲ್ ಮೂಲಕ ರೂ.1,00,000.00 ಮತ್ತು EE (SWD-MDP ವಲಯ) ಪರವಾಗಿ ಬ್ಯಾಂಕ್ ಗ್ಯಾರಂಟಿ ಮೂಲಕ ರೂ.19,18,000.00/-.**

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡುವ **ದಿನಾಂಕ: 06-06-2025 ರಿಂದ. 2)** ಪೂರ್ವ ಬಿಡ್ ಸಭೆಯು **ದಿನಾಂಕ: 18-06-2025ರ ಸಂಜೆ 3:00 ಗಂಟೆಗೆ** ನಡೆಸಲಾಗುವುದು. **3)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **20-06-2025 ರಿಂದ ಸಂಜೆ 4.00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21-06-2025 ಸಂಜೆ 4.30 ಗಂಟೆಗೆ ಅಥವಾ ಮುಂದಿನ ದಿನ. 5)** ತಾಂತ್ರಿಕವಾಗಿ ಅರ್ಹತೆ ಪಡೆದ ಗುತ್ತಿಗೆದಾರ ಯಶಸ್ವಿ ಬಿಡ್ದಾರರಿಗೆ ಹಣಕಾಸು ಬಿಡ್ ತೆರೆಯುವ **ದಿನಾಂಕವನ್ನು 23.06.2025** ರಂದು ತಿಳಿಸಲಾಗುವುದು.

ಸಹಿ/-, ಕಾರ್ಯಪಾಲಕ ಅಭಿಯಂತರರು,
ಘತ್ಯಾವಿ ಮಹದೇವಪುರ ವಲಯ, ಬೃಬೆಂಮಪಾ.

ಕಾಲ್ತುಳಿತ: ಇನ್ನೂ ನಿಲ್ಲದ ಕಣ್ಣೀರು

ವಿಚಾರಣಾಧಿಕಾರಿ ಜಗದೀಶ್ ಅವರು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು(ಎಡಚಿತ್ರ) ವಿಧಾನಸೌಧದ ಮುಂದೆ ಇರುವ ಉದ್ಯಾನದಲ್ಲಿ ಗ್ರಿಲ್‌ಗಳು ಮುರಿದಿರುವುದು –ಪ್ರಜಾವಾಣಿ ಚಿತ್ರಗಳು

15 ದಿನದೊಳಗೆ ಸರ್ಕಾರಕ್ಕೆ ವರದಿ

ಕ್ರೀಡಾಂಗಣಕ್ಕೆ ವಿಚಾರಣಾಧಿಕಾರಿ ಭೇಟಿ, ಪರಿಶೀಲನೆ • ಕೆಎಸ್‌ಸಿಎ, ಆರ್‌ಸಿಬಿ ಫ್ರಾಂಚೈಸಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ಕೂಲಂಕಷವಾಗಿ ತನಿಖೆ ನಡೆಸಿ 15 ದಿನದೊಳಗಾಗಿ ಸರ್ಕಾರಕ್ಕೆ ವರದಿ ನೀಡಲಾಗುವುದು ಎಂದು ವಿಚಾರಣಾಧಿಕಾರಿಯಾಗಿರುವ ಬೆಂಗಳೂರು ಜಿಲ್ಲಾಧಿಕಾರಿ ಜಿ. ಜಗದೀಶ್ ತಿಳಿಸಿದರು.

ಘಟನೆ ನಡೆದ ಚಿನ್ನಸ್ವಾಮಿ ಕ್ರೀಡಾಂಗಣದ ಸ್ಥಳ ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮದವರ ಜತೆ ಮಾತನಾಡಿದ ಅವರು, ಕಾಲ್ತುಳಿತ ಉಂಟಾಗಿರುವ ಸ್ಥಳದ ಬಗ್ಗೆ ತಪಾಸಣೆ ನಡೆಸಲಾಗಿದೆ. ಘಟನೆ ಸಂಬಂಧ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪಡೆದು ಪರಿಶೀಲಿಸಲಾಗುವುದು ಎಂದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ), ಸಮಾರಂಭದ ಆಯೋಜಕರಾಗಿದ್ದ ಆರ್‌ಸಿಬಿ ಫ್ರಾಂಚೈಸಿ, ವಿಜಯೋತ್ಸವದ ವೇಳೆ ಕ್ರೀಡಾಂಗಣದ ಭದ್ರತೆ ಹೊಣೆ ಹೊತ್ತಿದ್ದ ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್‌ಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಅವರು ಹೇಳಿದರು.

ದುರಂತದಲ್ಲಿ ಮೃತಪಟ್ಟಿರುವವರ ಕುಟುಂಬಸ್ಥರು ಹಾಗೂ ಗಾಯಾಳುಗಳಿಗೆ ನೋಟಿಸ್ ನೀಡಿ ಅವರಿಂದ ಹೇಳಿಕೆ ಪಡೆಯಲಾಗುವುದು. ಜೂನ್ 13ರಂದು ಬೆಳಿಗ್ಗೆ 10.30ರಿಂದ 1.30ರವರೆಗೆ ಸಾರ್ವಜನಿಕರು ಸಹ ಬಂದು ತಮ್ಮ ಹೇಳಿಕೆಗಳನ್ನು ನೀಡಲು ಅವಕಾಶ ಮಾಡಿಕೊಡಲಾಗುವುದು. ದುರಂತದ ಬಗ್ಗೆ ಹೇಳಿಕೆ ಪಡೆಯಲು ಬುಧವಾರ ಸ್ಥಳದಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಸಿಬ್ಬಂದಿಯ ಮಾಹಿತಿ ನೀಡುವಂತೆ ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ವಿಜಯೋತ್ಸವದಲ್ಲಿ ಭಾಗಿಯಾಗಲು ನಗರದ ನಾನಾ ಭಾಗಗಳಿಂದ ಅಭಿಮಾನಿಗಳು ಮೆಟ್ರೊ ಮೂಲಕ ಸಾವಿರಾರು ಸಂಖ್ಯೆಯಲ್ಲಿ ಏಕಾಏಕಿ ಬಂದಿದ್ದರಿಂದ ದಟ್ಟಣೆ ಹೆಚ್ಚಾಗಿತ್ತು. ಈ ಕೂಡಲೇ ಸಮನ್ವಯ ಸಾಧಿಸಿ ಸಂಬಂಧಪಟ್ಟವರಿಗೆ ಮಾಹಿತಿ ನೀಡಬಹುದಾಗಿತ್ತು. ಈ ಬಗ್ಗೆ ಬಿಎಂಆರ್ ಸಿಎಲ್ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗುವುದು ಎಂದರು.

ಇದಕ್ಕೂ ಮುನ್ನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿರುವ ಎಲ್ಲಾ ಪ್ರವೇಶ ದ್ವಾರಗಳಿಗೆ ತೆರಳಿ ಅನಾಹುತಗಳ ಬಗ್ಗೆ ಕಬ್ಬನ್ ಪಾರ್ಕ್ ಪೊಲೀಸರಿಂದ ಮಾಹಿತಿ ಪಡೆದುಕೊಂಡರು. ನೂಕುನುಗ್ಗಲು ವೇಳೆ ಗೇಟ್ ನಂಬರ್ 6 ಎ ಬಳಿ ತಂತಿ ಬೇಲಿ ಮುರಿದಿರುವುದು, ಗೇಟ್ ನಂಬರ್ 8ರ ಬಳಿ ಕಾರಿನ ಗಾಜು ಹೊಡೆದು ಹಾನಿಯಾಗಿರುವುದನ್ನು ವೀಕ್ಷಿಸಿದರು.

‘ಒಬ್ಬರ ಮೇಲೆ ಹೊಣೆ ಹಾಕಲು ಆಗದು’

ಬೆಂಗಳೂರು: ‘ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಸಂಭವಿಸಿದ ದುರ್ಘಟನೆಯ ಹೊಣೆಯನ್ನು ಒಬ್ಬರು, ಇಬ್ಬರ ಮೇಲೆ ಹಾಕಲು ಆಗುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಬದುಕಿ ಬಾಳಬೇಕಿದ್ದ ಮಕ್ಕಳು ಕಾಲ್ತುಳಿತಕ್ಕೆ ಬಲಿ ಆಗಿರುವುದನ್ನು ಅರಗಿಸಿ ಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎನ್ನುತ್ತಲೇ ಭಾವುಕರಾದರು.

‘ಈ ದುರ್ಘಟನೆಯಿಂದ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯದ ಘನತೆಗೆ ಧಕ್ಕೆಯಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ಮಾಡಿ ಲೋಪದೋಷ ಸರಿಪಡಿಸಲಾಗುವುದು. ಈ ಘಟನೆಯಿಂದ ನಾವು ಪಾಠ ಕಲಿಯಬೇಕಿದೆ’ ಎಂದರು.

ರಾಜಕುಮಾರ್ ಅವರು ಸತ್ತಾಗ ಏನೆಲ್ಲಾ ಆಯಿತು ಎಂದು ನಾನು ಈಗ ಮಾತನಾಡಲು ಬಯಸುವುದಿಲ್ಲ. ಅಂತಹ ನೀಚ ರಾಜಕಾರಣ ಮಾಡಲು ನನಗೆ ಇಷ್ಟವಿಲ್ಲ

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ನೀಚ ರಾಜಕಾರಣ: ‘ಹೆಣದ ಮೇಲೆ ರಾಜಕೀಯ ಮಾಡುವುದೇ ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರ ವೃತ್ತಿ. ಶೋಕದ ಸಮಯದಲ್ಲಿ ಅವರಂತೆ ನೀಚ ರಾಜಕಾರಣ ಮಾಡುವುದಿಲ್ಲ. ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಅವರ ಆಡಳಿತ ಅವಧಿಯಲ್ಲಿನ ಘಟನೆಗಳ ಬಗ್ಗೆ ಚರ್ಚೆ ಮಾಡುತ್ತೇನೆ’ ಎಂದು ತಿಳಿಸಿದರು.

ಬಿಜೆಪಿಯವರ ಟೀಕೆ ಬಗ್ಗೆ ಕೇಳಿದಾಗ, ‘ಈ ವಿಚಾರದಲ್ಲಿ ರಾಜ್ಯದ ಜನರಿಗೆ ನಾನು ಉತ್ತರ ನೀಡಬೇಕೇ ಹೊರತು, ಬಿಜೆಪಿಯವರ ಹೇಳಿಕೆಗಳಿಗೆ ಅಲ್ಲ. ಅವರ ಹೇಳಿಕೆಗಳು ಅಸಂಬದ್ಧ. ರಾಜಕೀಯ ಮಾಡುವುದರಲ್ಲಿ ಅವರು ಮಾಸ್ಟರ್ ಮೈಂಡ್‌ಗಳು’ ಎಂದರು.

‘ಈ ಘಟನೆ ವಿಚಾರದಲ್ಲಿ ಸಿ.ಟಿ. ರವಿ, ಎಚ್‌.ಡಿ. ಕುಮಾರಸ್ವಾಮಿ, ಆರ್. ಅಶೋಕ ಸೇರಿದಂತೆ ಎಲ್ಲರದ್ದು ಕೇವಲ ರಾಜಕಾರಣ. ಮಾಧ್ಯಮದವರು ಕೂಡ ಈ ಸಂದರ್ಭದಲ್ಲಿ ರಾಜಕೀಯ ವಿಚಾರಗಳನ್ನು ಪ್ರಸ್ತಾಪ ಮಾಡಬೇಡಿ. ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಸಿ.ಎಂ ರಾಜೀನಾಮೆ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ದುರಂತದ ತನಿಖೆಯ ಹೊಣೆಯನ್ನು ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯೊಬ್ಬರಿಗೆ ವಹಿಸಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ಈ ಕುರಿತು ವಿವಿಧೆಡೆ ಸುದ್ದಿಗಾರರ ಜತೆ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಕಬ್ಬನ್ ಪಾರ್ಕ್ ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅದರಲ್ಲಿ ಸರ್ಕಾರವನ್ನು ಅಪರಾಧಿ ಎಂದು ನಮೂದಿಸಬೇಕು. ಸಮರ್ಪಕ ತನಿಖೆ ನಡೆಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

‘ಕೇರಳದಲ್ಲಿ ಕರ್ನಾಟಕದ ಆನೆ ತುಳಿತದಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ರಾಜ್ಯ ಸರ್ಕಾರ ₹25 ಲಕ್ಷ ಪರಿಹಾರ ಘೋಷಿಸಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಮೃತಪಟ್ಟ ಎಲ್ಲ 11 ಮಂದಿಯ ಕುಟುಂಬಗಳಿಗೆ ತಲಾ ₹50 ಲಕ್ಷ ಪರಿಹಾರ ಕೊಡಬೇಕು. ತೆಲಂಗಾಣದಲ್ಲಿ ಅಲ್ಲು ಅರ್ಜುನ್ ಅವರ ಸಿನಿಮಾ ಬಿಡುಗಡೆ ವೇಳೆ ಕಾಲ್ತುಳಿತ ನಡೆದಿತ್ತು. ಅಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಇತ್ತು. ಘಟನೆ ಸಂಬಂಧ ಅಲ್ಲು ಅರ್ಜುನ್ ಅವರನ್ನು ಬಂಧಿಸಲಿಲ್ಲವೇ? ಬೆಂಗಳೂರಿನಲ್ಲಿ ನಡೆದ ದುರ್ಘಟನೆಗೆ ಯಾರನ್ನು ಬಂಧಿಸುತ್ತೀರಿ’ ಎಂದು ವಿಜಯೇಂದ್ರ ಪ್ರಶ್ನಿಸಿದರು.

ವೈಫಲ್ಯದ ಹೊಣೆಯನ್ನು ಸರ್ಕಾರ ಹೊರಲು ಸಿದ್ಧವಿಲ್ಲ. ಹಾಗಾಗಿಯೇ ಒಬ್ಬ ಜಿಲ್ಲಾಧಿಕಾರಿಗೆ ತನಿಖೆಯ ಜವಾಬ್ದಾರಿ ನೀಡಿದೆ. ಜಿಲ್ಲಾಧಿಕಾರಿ ತನಿಖೆ ನಡೆಸಿದರೆ ಅಪರಾಧಿ ಸ್ಥಾನದಲ್ಲಿರುವ ಮುಖ್ಯಮಂತ್ರಿ, ಸಚಿವರನ್ನು ತನಿಖೆ ಮಾಡಲು ಆಗುತ್ತದೆಯೇ ಎಂದರು.

ದುರಂತದ ನಂತರವೂ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸೆಲ್ಫಿ ತೆಗೆದು ಕೊಳ್ಳುತ್ತಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡಿಸಿಎಂ ಕಪ್‌ಗೆ ಮುತ್ತಿಕ್ಕುತ್ತಿದ್ದರು

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಚಿವರ ಮಕ್ಕಳ ಒತ್ತಡಕ್ಕೆ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತೇ? ಕಾಲ್ತುಳಿತದ ಸಾವಿನ ಹೊಣೆ ಹೊತ್ತು ಮುಖ್ಯಮಂತ್ರಿ ತಕ್ಷಣ ರಾಜೀನಾಮೆ ನೀಡಬೇಕು

ಶೋಭಾ ಕರಂದ್ಲಾಜೆ
ಕೇಂದ್ರ ಸಚಿವೆ

ಕಾರ್ಯಕ್ರಮದ ರೂಪುರೇಷೆ ನಿರ್ಧರಿಸಿ, ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾದ ಜಿಲ್ಲಾಧಿಕಾರಿ ಸರ್ಕಾರದ ಲೋಪದೋಷದ ಬಗ್ಗೆ ಪ್ರಾಮಾಣಿಕವಾಗಿ ತನಿಖೆ ಮಾಡಿ, ವರದಿ ನೀಡುವರೇ?

ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

11 ಜನರ ಆಟದ ಗೆಲುವಿನ ಸಂಭ್ರಮಕ್ಕೆ 11 ಜನರನ್ನು ರಾಜ್ಯ ಸರ್ಕಾರ ಬಲಿ ಪಡೆದಿದೆ. ಸದ್ಯ ಈ ಘಟನೆಗೆ ಬಿಜೆಪಿ, ಆರ್‌ಎಸ್‌ಎಸ್ ಕಾರಣವೆಂದು ಮುಖ್ಯಮಂತ್ರಿ ಏಕೆ ಹೇಳುತ್ತಿಲ್ಲ?

ಛಲವಾದಿ ನಾರಾಯಣಸ್ವಾಮಿ
ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು: ಅಶೋಕ

ಹೈಕೋರ್ಟ್ ನ್ಯಾಯಮೂರ್ತಿಗಳ ಸುಪರ್ದಿನಲ್ಲೇ ತನಿಖೆ ನಡೆಯಬೇಕು. ಅದಕ್ಕಾಗಿ ಎಸ್‌ಐಟಿ ರಚಿಸಬೇಕು. ವರದಿಯನ್ನು ನೇರವಾಗಿ ಹೈಕೋರ್ಟ್‌ಗೆ ಸಲ್ಲಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಈ ಎಲ್ಲ ಸಾವುಗಳಿಗೆ ನ್ಯಾಯ ನೀಡಬೇಕು ಎಂದು ಆರ್. ಅಶೋಕ ಒತ್ತಾಯಿಸಿದರು.

ಟ್ರೋಫಿ ಎತ್ತಿ ಫೋಟೊ ತೆಗೆಸಿಕೊಂಡು ಸಂಭ್ರಮಪಟ್ಟವರು ಸತ್ತ ಅಮಾಯಕರ ಶವಕ್ಕೆ ಹೆಗಲು ಕೊಡಲು ಬರಲಿಲ್ಲ. ವಿಮಾನನಿಲ್ದಾಣಕ್ಕೆ ಹೋಗಿ ಸೆಲ್ಫಿ ತೆಗೆಸಿಕೊಂಡು ಖುಷಿ ಪಟ್ಟವರು ಸತ್ತವರ ಮನೆಗೆ ಹೋಗಿ ಸಾಂತ್ವನ ಹೇಳಲಿಲ್ಲ. ಇದು ಹೃದಯಹೀನ ಸರ್ಕಾರ. ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಕಾರ್ಯಕ್ರಮ ಎಂದು ಹೇಳಿ ಸಿದ್ದರಾಮಯ್ಯ ಜವಾಬ್ದಾರಿ ಮರೆತಿದ್ದಾರೆ. ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ನೋಡಿದ್ದಾರೆ ಎಂದು ದೂರಿದರು.

ವಿಧಾನಸೌಧದಲ್ಲಿ ಸನ್ಮಾನ ಕಾರ್ಯಕ್ರಮ ಆರಂಭವಾಗುವ ಮೊದಲೇ ಸಾವಿನ ಸರಣಿ ಆರಂಭವಾಗಿತ್ತು. ಇದು ಗೊತ್ತಿದ್ದರೂ ಸಚಿವರ ಫೋಟೊ ಶೂಟ್‌ಗಾಗಿ ಅಮಾಯಕರನ್ನು ಬಲಿ ತೆಗೆದುಕೊಳ್ಳಲಾಗಿದೆ. ಜನರು ಸತ್ತ ಸುದ್ದಿ ಗೊತ್ತಾದ ಕೂಡಲೇ ಕಾರ್ಯಕ್ರಮ ರದ್ದು ಮಾಡಬೇಕಿತ್ತು ಎಂದರು.

ಅಂತ್ಯಕ್ರಿಯೆ: ಕುಟುಂಬಸ್ಥರ ಆಕ್ರಂದನ

ಪ್ರಜಾವಾಣಿ ವಾರ್ತೆ

ಕೆ.ಟಿ.ಶ್ರವಣ್

ಮನೋಜ್

ಪ್ರಜ್ವಲ್

ಸಹನಾ

ಚಿಂತಾಮಣಿ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಬುಧವಾರ ಕಾಲ್ತುಳಿತದಿಂದ ಮೃತಪಟ್ಟ 11 ಮಂದಿಯಲ್ಲಿ ಚಿಂತಾಮಣಿ ತಾಲ್ಲೂಕಿನ ಇಬ್ಬರು ಯುವಕರು ಸೇರಿದ್ದಾರೆ.

ತಾಲ್ಲೂಕಿನ ಗೋಪಲ್ಲಿ ಗ್ರಾಮದ ಪ್ರಜ್ವಲ್ (25) ಹಾಗೂ ಕುರುಟಹಳ್ಳಿ ಕೆ.ಟಿ ಶ್ರವಣ್ (20) ಮೃತರು. ಗೋಪಲ್ಲಿ ಗ್ರಾಮದ ಕಡು ಬಡತನದ ಕುಟುಂಬದ ಹಿನ್ನೆಲೆಯ ಪ್ರಜ್ವಲ್ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿ, ಖಾಸಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ.

ಇನ್ನು ಕೆ.ಟಿ.ಶ್ರವಣ್ ಬೆಂಗಳೂರಿನಲ್ಲಿರುವ ಡಾ.ಅಂಬೇಡ್ಕರ್ ದಂತ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಈ ಇಬ್ಬರ ಮೃತದೇಹಗಳನ್ನು ಗುರುವಾರ ಬೆಳಗ್ಗೆ ಗ್ರಾಮಕ್ಕೆ ತರಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರೆಲ್ಲರು ಜಮಾಯಿಸಿದ್ದರು. ಸಾರ್ವಜನಿಕರ ದರ್ಶನಕ್ಕೆ ಇಟ್ಟು, ಮಧ್ಯಾಹ್ನ 3ಕ್ಕೆ ಅಂತ್ಯಕ್ರಿಯೆ ನಡೆಸಲಾಯಿತು.

(ಕೋಲಾರ ವರದಿ) ಕೆಜಿಎಫ್: ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತದಲ್ಲಿ ಮೃತಪಟ್ಟ ಕೆಜಿಎಫ್ ತಾಲ್ಲೂಕಿನ ಬಡಮಾಕನಹಳ್ಳಿ ಸಹನಾ (23) ಅವರ ಮೃತದೇಹವನ್ನು ಸ್ವಗ್ರಾಮಕ್ಕೆ ಗುರುವಾರ ತರಲಾಯಿತು. ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತು.

ಗ್ರಾಮದ ಶಿಕ್ಷಕ ದಂಪತಿ ಮಂಜುಳಾ–ಸುರೇಶ್ ಬಾಬು ದಂಪತಿ ಪುತ್ರಿ ಸಹನಾ, ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿ ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ಆರ್‌ಸಿಬಿ ವಿಜಯೋತ್ಸವ ನೋಡಲು ಸ್ನೇಹಿತರೊಂದಿಗೆ ತೆರಳಿದ್ದರು.

(ತುಮಕೂರು ವರದಿ) ಕುಣಿಗಲ್: ಕಾಲ್ತುಳಿತದಲ್ಲಿ ತಾಲ್ಲೂಕಿನ ನಾಗಸಂದ್ರ ಗ್ರಾಮದ ಮನೋಜ್ (19) ಮೃತಪಟ್ಟಿದ್ದು, ಗುರುವಾರ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮೃತ ಮನೋಜ್ ತಂದೆ ದೇವರಾಜು, ಮಗನಿಗೆ ಉನ್ನತ ಶಿಕ್ಷಣ ಕೊಡಿಸುವ ಉದ್ದೇಶದಿಂದ ಈಚೆಗೆ ನಾಗಸಂದ್ರ ಗ್ರಾಮದಿಂದ ಬೆಂಗಳೂರಿಗೆ ವಾಸ್ತವ್ಯ ಬದಲಾಯಿಸಿದ್ದರು. ಜೀವನ ನಿರ್ವಹಣೆಗಾಗಿ ಪಾನಿಪುರಿ ವ್ಯಾಪಾರ ನಡೆಸುತ್ತಿದ್ದರು. ಹೆಬ್ಬಾಳ ಬಳಿಯ ಕೆಂಪಾಪುರ ರೆಸಿಡೆನ್ಸ್ ಕಾಲೇಜಿನಲ್ಲಿ ಬಿಬಿಎಂ ವಿದ್ಯಾಭ್ಯಾಸ ಮಾಡಲು ಮನೋಜ್ ಅವರನ್ನು ದಾಖಲಿಸಿದ್ದರು.

‘ನಮ್ಮ ರಾಜ್ಯದಲ್ಲಿ ನಮ್ಮವರೇ ಸುರಕ್ಷಿತರಲ್ಲ’

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): ‘ನಮ್ಮ ಮಗನೇನು ಜಮ್ಮು–ಕಾಶ್ಮೀರಕ್ಕೆ ಹೋಗಿದ್ದನೆ? ಅಲ್ಲಿ ಅವನನ್ನು ಉಗ್ರರು ಕೊಂದು ಹಾಕಿದರೆ? ನಮ್ಮದೇ ರಾಜ್ಯದಲ್ಲಿ ನಮ್ಮವರು ಸುರಕ್ಷಿತವಾಗಿಲ್ಲ ಎಂದರೆ ಹೇಗೆ?...’

ಬೆಂಗಳೂರಿನಲ್ಲಿ ಬುಧವಾರ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟ ತಾಲ್ಲೂಕಿನ ಕುಪ್ಪಗೋಡು ಗ್ರಾಮದ ಭೂಮಿಕ್ (20) ಅಂತ್ಯಕ್ರಿಯೆ ಗುರುವಾರ ಗ್ರಾಮದಲ್ಲಿ ನಡೆದ ವೇಳೆ ಅವರ ತಂದೆ ಡಿ.ಟಿ. ಲಕ್ಷ್ಮಣ ಅಸಹಾಯಕತೆಯಿಂದಹೀಗೆನುಡಿದರು.

‘ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗದಿದ್ದರೆ, ಇಂತಹ ಸರ್ಕಾರ ಏತಕ್ಕೆ ಬೇಕು? ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡಿದ್ದೇವೆ. ಈ ಅನಾಹುತಕ್ಕೆ ಸರ್ಕಾರವೇ ಕಾರಣ’ ಎಂದರು.

ಗ್ರಾಮಕ್ಕೆ ಭೇಟಿ ನೀಡಿ, ಭೂಮಿಕ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ‘ಇಂಥ ಘಟನೆ ನಡೆಯಬಾರದಿತ್ತು. ಇದರಲ್ಲಿ ಅಧಿಕಾರಿಗಳ ವೈಫಲ್ಯವಿದೆ. ವಯಸ್ಸಿಗೆ ಬಂದ ಮಗನನ್ನು ಕಳೆದುಕೊಂಡ ದುಃಖ ಸಹಿಸಲು ಅಸಾಧ್ಯ’ ಎಂದು ಹೇಳಿದರು.

‘ಡಿ.ಟಿ. ಲಕ್ಷ್ಮಣ ಅವರು 20 ವರ್ಷಗಳ ಹಿಂದೆ ಬೆಂಗಳೂರಿಗೆ ಸ್ಥಳಾಂತರವಾಗಿದ್ದು, ಸಣ್ಣ ಉದ್ಯಮ ನಡೆಸುತ್ತಿದ್ದಾರೆ. ಭೂಮಿಕ್ 2ನೇ ವರ್ಷದ ಎಂಜಿನಿಯರಿಂಗ್ ಓದುತ್ತಿದ್ದ. ಬುಧವಾರ ಮಧ್ಯಾಹ್ನ 3.30ಕ್ಕೆ ಸ್ನೇಹಿತರ ಜೊತೆಗೂಡಿ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತೆರಳಿದ್ದ. ಕಾಲ್ತುಳಿತದ ಮಾಹಿತಿ ಪಡೆದ ತಾಯಿ ಹಲವಾರು ಬಾರಿ ಭೂಮಿಕ್ ಮೊಬೈಲ್‌ಗೆ ಕರೆ ಮಾಡಿದ್ದರು. ಆದರೆ ಕರೆ ಸ್ವೀಕರಿಸಿರಲಿಲ್ಲ. ನಂತರ ಕರೆ ಸ್ವೀಕರಿಸಿದ ಅಪರಿಚಿತರೊಬ್ಬರು, ಮಗ ಮೃತಪಟ್ಟಿರುವ ಮಾಹಿತಿ ನೀಡಿದರು’ ಎಂದು ಸಂಬಂಧಿಕರು ತಿಳಿಸಿದರು.

ಬೇಲೂರು ತಾಲ್ಲೂಕಿನ ಕುಪ್ಪಗೋಡು ಗ್ರಾಮದಲ್ಲಿ ಭೂಮಿಕ್ ಪಾರ್ಥಿವಶರೀರದ ಎದುರು ರೋದಿಸುತ್ತಿದ್ದ ಪಾಲಕರಿಗೆ ಶಾಸಕ ಎಚ್‌.ಕೆ.ಸುರೇಶ್ ಸಾಂತ್ವನ ಹೇಳಿದರು

ಮೃತ ಚಿನ್ಮಯಿ ಹೆಬ್ರಿಯವರು

ಪ್ರಜಾವಾಣಿ ವಾರ್ತೆ

ಹೆಬ್ರಿ (ಉಡುಪಿ): ಆರ್‌ಸಿಬಿ ತಂಡದ ಸಂಭ್ರಮಾಚರಣೆಯ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟಿರುವ ಚಿನ್ಮಯಿ ಶೆಟ್ಟಿ (19) ಅವರು ಮೂಲತಃ ಹೆಬ್ರಿಯವರು. ಅವರು ಕರುಣಾಕರ ಶೆಟ್ಟಿ ಮತ್ತು ಪೂಜಾ ಶೆಟ್ಟಿ ಅವರ ಪುತ್ರಿಯಾಗಿದ್ದು, ಪೂಜಾ ಶೆಟ್ಟಿ ಅವರ ತಾಯಿ ಮನೆ ಹೆಬ್ರಿಯ ಇಂದಿರಾನಗರದ ಮದಗದಲ್ಲಿದೆ.

ಕುರುಣಾಕರ ಶೆಟ್ಟಿ ಅವರ ಕುಟುಂಬವು ಬೆಂಗಳೂರಿನ ತಿಪ್ಪಸಂದ್ರದಲ್ಲಿ ನೆಲೆಸಿದ್ದು, ರಜಾದಿನಗಳಲ್ಲಿ ಚಿನ್ಮಯಿ ಅವರು ಅಜ್ಜಿ ಮನೆಗೆ ಬರುತ್ತಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.



ಚಿನ್ಮಯಿ ಶೆಟ್ಟಿ

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಜ್ಯೋತಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡುತ್ತಿದ್ದ ಚಿನ್ಮಯಿ ಅವರು ಬಾಲ್ಯದಿಂದಲೇ ಪ್ರತಿಭಾನ್ವಿತೆಯಾಗಿದ್ದರು.

ಒಂದೂವರೆ ವರ್ಷದ ಹಿಂದಷ್ಟೇ ವಿವಾಹವಾಗಿದ್ದ ಅಕ್ಷತಾ

ಖುಷಿ ಕಸಿದ ಸಂಭ್ರಮಾಚರಣೆ

ಪ್ರಜಾವಾಣಿ ವಾರ್ತೆ

ಕಾರವಾರ/ಸಿದ್ದಾಪುರ: ‘ಆರ್‌ಸಿಬಿ ತಂಡದ ಅಪ್ಪಟ ಅಭಿಯಾನಿಯಾಗಿದ್ದ ಪತ್ನಿಯ ಜೊತೆ ತಂಡದ ಸಂಭ್ರಮಾಚರಣೆ ಕಣ್ತುಂಬಿಕೊಳ್ಳಲು ಅರ್ಧ ದಿನ ಕೆಲಸಕ್ಕೆ ರಜೆ ಹಾಕಿ ಕ್ರೀಡಾಂಗಣದ ಬಳಿ ತೆರಳಿದ್ದೆವು. ಸಂಭ್ರಮದ ನೆಪದಲ್ಲಿ ನಡೆದ ನೂಕುನುಗ್ಗಲು ನನ್ನ ಜೀವನದ ಸಂಭ್ರಮವನ್ನೇ ಕಸಿಯಿತು...’

ಹೀಗೆಂದು ಸಿದ್ದಾಪುರ ಪಟ್ಟಣದ ರವೀಂದ್ರ ನಗರದ ತನ್ನ ಮನೆಯಲ್ಲಿ ಪತ್ನಿಯ ಮೃತದೇಹದ ಎದುರು ಕಣ್ಣೀರು ಸುರಿಸುತ್ತ ಸಾಫ್ಟ್‌ವೇರ್ ಉದ್ಯೋಗಿ ಆಶಯ್ ಅಂಬಳ್ಕಿ ಹೇಳಿದರು. ಅವರ ಪತ್ನಿ ಅಕ್ಷತಾ ಪೈ (ಅಂಬಳ್ಕಿ) ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ನಂ.17ರ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟಿದ್ದಾರೆ.

‘ಮದುವೆಯಾಗಿ ಒಂದೂವರೆ ವರ್ಷವಷ್ಟೇ ಕಳೆದಿತ್ತು. ಅಕ್ಷತಾ ಚಾರ್ಟರ್ಡ್ ಅಕೌಂಟೆಂಟ್ ಪರೀಕ್ಷೆಯಲ್ಲಿ ಚಿನ್ನದ ಪದಕ ಗಳಿಸಿದ್ದರು. ಇಬ್ಬರೂ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದೆವು. ಆರ್‌ಸಿಬಿ ತಂಡದ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಜಯೋತ್ಸವ ಪರೇಡ್ ಬಗ್ಗೆ ಮಾಹಿತಿ ತಿಳಿಯಿತು. ಅರ್ಧ ದಿನ ರಜೆ ಹಾಕಿ, ಇಬ್ಬರೂ ಕ್ರೀಡಾಂಗಣದ ಬಳಿ ತೆರಳಿದೆವು. ತಂಡದ ಮೇಲಿನ ಅಭಿಮಾನದಿಂದ ಆರ್‌ಸಿಬಿ ಜರ್ಸಿ ಧರಿಸಿದೆವು. ಗೇಟ್ ನಂ.17 ಬಳಿ ಏಕಾಏಕಿ ನೂಕುನುಗ್ಗಲು ಉಂಟಾದಾಗ, ಪತ್ನಿಯ ಕೈ ಬಿಗಿಯಾಗಿ ಹಿಡಿದಿದ್ದೆ. ಹಲವರು ನನ್ನ ಮೈಮೇಲೆ ಬಿದ್ದಿದ್ದರಿಂದ ನಿಯಂತ್ರಣ ತಪ್ಪಿ ಕೆಳಕ್ಕೆ ಕುಸಿದಿದ್ದೆ. ನೆರವಿಗೆ ಅಂಗಲಾಚಿದಾಗ ಅಲ್ಲಿದ್ದ ಕೆಲವರು ನನ್ನನ್ನು ಮೇಲಕ್ಕೆತ್ತಿದ್ದರು. ಅಕ್ಕಪಕ್ಕದಲ್ಲಿ ಎಲ್ಲಿಯೂ ಅಕ್ಷತಾ ಕಾಣಿಸದಿದ್ದಾಗ ಚಿಂತೆಗೀಡಾದೆ’ ಎಂದು ದುರ್ಘಟನೆಯನ್ನು ಆಶಯ್ ವಿವರಿಸಿದರು.

ಅಕ್ಷತಾ ಪೈ

‘ಪತ್ನಿಗಾಗಿ ಸುತ್ತಮುತ್ತಲೆಲ್ಲ ಹುಡುಕಾಡಿದೆ. ಪೊಲೀಸರು ಅಲ್ಲದೇ, ಅಲ್ಲಿದ್ದ ಜನರ ಬಳಿ ವಿಚಾರಿಸಿದೆ. ಯುವಕನೊಬ್ಬ ಮೊಬೈಲ್‌ನಲ್ಲಿ ಸೆರೆಹಿಡಿದ್ದ ಜರ್ಸಿ ತೊಟ್ಟಿದ್ದ ಯುವತಿಯನ್ನು ಹೊತ್ತೊಯ್ಯುತ್ತಿರುವ ದೃಶ್ಯ ತೋರಿಸಿದ. ಆಕೆ ಅಕ್ಷತಾ ಎಂಬುದು ಖಚಿತವಾಯಿತು. ಹಲವು ಆಸ್ಪತ್ರೆಗೆ ಅಲೆದಾಡಿ, ಕೊನೆಗೆ ಬೌರಿಂಗ್ ಆಸ್ಪತ್ರೆಗೆ ತೆರಳಿದಾಗ ಆಕೆಯ ಮೃತದೇಹ ನೋಡುವ ಸ್ಥಿತಿ ಎದುರಾಯಿತು’ ಎನ್ನುತ್ತ ಗದ್ಗದಿತರಾದರು.

ಅಕ್ಷತಾ ಮೃತದೇಹವನ್ನು ಗುರುವಾರ ನಸುಕಿನಲ್ಲಿ ಸಿದ್ದಾಪುರಕ್ಕೆ ತರಲಾಗಿದ್ದು, ಇಲ್ಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಕುಟುಂಬ ಸದಸ್ಯರ ರೋದನ ಮುಗಿಲುಮುಟ್ಟಿತ್ತು. ಶಿರಸಿ ಉಪವಿಭಾಗಾಧಿಕಾರಿ ಕಾವ್ಯರಾಣಿ, ತಹಶೀಲ್ದಾರ್ ಎಂ.ಆರ್.ಕುಲಕರ್ಣಿ, ಇತರರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮದುವೆ ಸಿದ್ಧತೆಯಲ್ಲಿದ್ದ ಪೂರ್ಣಚಂದ್ರ

ಪ್ರಜಾವಾಣಿ ವಾರ್ತೆ

ಕೆ.ಆರ್. ಪೇಟೆ(ಮಂಡ್ಯ ಜಿಲ್ಲೆ) : ‘ಮಗನಿಗೆ ಹೆಣ್ಣು ನೋಡಿದ್ದೆವು, ಇನ್ನೇನು ಮದುವೆ ನಿಶ್ಚಯವಾಗಬಹುದು ಎಂಬ ನಿರೀಕ್ಷೆಯಲ್ಲಿದ್ದೆವು. ನಮ್ಮನ್ನೆಲ್ಲಾ ಸಲಹಬೇಕಿದ್ದ ಮಗ ನಮ್ಮನ್ನು ಬಿಟ್ಟು ಹೋಗಿರುವುದನ್ನು ತಡೆದುಕೊಳ್ಳಲು ಆಗುತ್ತಿಲ್ಲ.ಸೂಕ್ತ ಮುಂಜಾಗ ರೂಕತೆ ವಹಿಸಿದ್ದರೆ ಅವನು ಬೀದಿ ಹೆಣವಾಗುತ್ತಿರಲಿಲ್ಲ..’

ಪೂರ್ಣಚಂದ್ರ

ಕಾಲ್ತುಳಿತದಲ್ಲಿ ಮೃತಪಟ್ಟ ಮಗ ಪೂರ್ಣಚಂದ್ರನ (25) ಅಂತ್ಯಕ್ರಿಯೆಯು ಗುರುವಾರ ತಾಲ್ಲೂಕಿನ ರಾಯಸಮುದ್ರದಲ್ಲಿ ನಡೆದ ವೇಳೆ, ಪೋಷಕರಾದ ಗ್ರಾಮದ ಶಿಕ್ಷಕ ಆರ್.ಬಿ. ಚಂದ್ರು ಮತ್ತು ಕಾಂತಾಮಣಿ ದಂಪತಿ ಹೀಗೆ ಹೇಳುತ್ತಾ ಕಣ್ಣೀರು ಸುರಿಸಿದರು.

ಮಂಗಳವಾರ ರಾತ್ರಿ ಆರ್‌ಸಿಬಿ ಗೆಲುವಿನ ಸಂಭ್ರಮವನ್ನು ಊರಿನ ಯುವಕರೊಂದಿಗೆ ಆಚರಿಸಿದ್ದ ಪೂರ್ಣಚಂದ್ರ, ಬುಧವಾರ ಬೆಳಿಗ್ಗೆ ಪೋಷಕ ರೊಂದಿಗೆ ವಧು ನೋಡಲು ಪಾಂಡವ ಪುರಕ್ಕೆ ತೆರಳಿದ್ದರು. ನಂತರ ಪೋಷಕರು ರಾಯಸಮುದ್ರಕ್ಕೆ ಹಿಂತಿರುಗಿದರೆ, ಅವರು ಕೆಲಸಕ್ಕೆಂದು ಮೈಸೂರಿಗೆ ಹೋದರು. ಅಲ್ಲಿಂದ ಸ್ನೇಹಿತರೊಂದಿಗೆ ಬೆಂಗಳೂರಿಗೆ ತೆರಳಿದ್ದರು.

ಇಡೀ ಗ್ರಾಮದಲ್ಲಿ ದುಃಖ ಮಡುಗಟ್ಟಿತ್ತು. ‘ಸಂಭ್ರಮಾಚರಣೆ ನೋಡಲು ಹೋದವನು ಶವವಾಗಿ ಬರುತ್ತಾನೆಂದು ಯಾರೂ ಅಂದುಕೊಂಡಿರಲಿಲ್ಲ’ ಎಂದು ಸಂಬಂಧಿಕರು ರೋದಿಸಿದರು. ಸುತ್ತ ಮುತ್ತಲ ಗ್ರಾಮಗಳ ನೂರಾರು ಮಂದಿಯೂ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಶಾಸಕ ಎಚ್‌.ಟಿ. ಮಂಜು, ಹಲವು ಗಣ್ಯರು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸಂಪುಟದಿಂದ ಡಿಕೆಶಿ ಹೊರಹಾಕಿ: ಎಚ್‌ಡಿಕೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ವೈಭವೀಕರಣಕ್ಕಾಗಿ ಆರ್‌ಸಿಬಿ ಆಟಗಾರರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಿ, 11 ಕ್ರಿಕೆಟ್ ಪ್ರೇಮಿಗಳ ಸಾವಿಗೆ ಕಾರಣರಾದರು. ಜನರು ಸತ್ತಿದ್ದು ಗೊತ್ತಾದರೂ ಟ್ರೋಫಿಗೆ ಮುತ್ತಿಕ್ಕುತ್ತಿದ್ದ ಇಂತಹ ರಾಕ್ಷಸೀ ಪ್ರವೃತ್ತಿಯ ವ್ಯಕ್ತಿಯನ್ನು ಸಂಪುಟದಿಂದ ಹೊರಹಾಕಬೇಕು’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ದೆಹಲಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತಮ್ಮ ಪ್ರಚಾರದ ಹೊಣೆ ಹೊತ್ತಿರುವ ಕಂಪನಿ ಬರೆದುಕೊಟ್ಟ ಸ್ಕ್ರಿಪ್ಟ್‌ನಂತೆ ಉಪ ಮುಖ್ಯಮಂತ್ರಿ ಇಡೀ ದಿನ ಡ್ರಾಮಾ ನಡೆಸಿದರು. ವಿವಿಧೆಡೆ ಆ ವ್ಯಕ್ತಿ ತೋರಿದ ವರ್ತನೆಯನ್ನು ಗಮನಿಸಿದರೆ, ಅವರಿಗೆ ಮಾನವೀಯತೆ ಇಲ್ಲ ಎಂಬುದು ಗೊತ್ತಾಗುತ್ತದೆ’ ಎಂದರು.

‘ಎರಡು ಕಡೆ ಕಾರ್ಯಕ್ರಮ ಮಾಡುವುದು ಬೇಡ ಎಂದು ಗುಪ್ತಚರ ಇಲಾಖೆ, ಪೊಲೀಸರು ಹೇಳಿದ್ದರೂ ಈ ವ್ಯಕ್ತಿ ಒತ್ತಡ ತಂದು ಕಾರ್ಯಕ್ರಮ ನಡೆಸಿದ್ದಾರೆ. ಆರ್‌ಸಿಬಿ ತಂಡ ಮಂಗಳವಾರ ತಡರಾತ್ರಿ ಗೆಲುವು ಸಾಧಿಸಿತ್ತು. ಅವರಿಗೆ ಮರುದಿನವೇ ಬೆಂಗಳೂರಿನಲ್ಲಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳುವ ಅಗತ್ಯ ಏನಿತ್ತು? ಆಹ್ವಾನ ಕೊಟ್ಟವರು ಯಾರು? ಇದೆಲ್ಲದರಲ್ಲಿ ಶಿವಕುಮಾರ್ ಪಾತ್ರವೇನು ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದರು.

‘ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ಮಾಡುವ ಉದ್ದೇಶವೇನು? ಇವರ ಮಕ್ಕಳು–ಮೊಮ್ಮಕ್ಕಳು, ಆಪ್ತರು, ಹೊಗಳುಭಟರೆಲ್ಲರೂ ವೇದಿಕೆ ಏರಿ ಷೋ ಮಾಡುತ್ತಿದ್ದರು. ಸಿದ್ದರಾಮಯ್ಯ ಅವರಿಗೆ ಧೈರ್ಯ ಇದ್ದರೆ, ಶಿವಕುಮಾರ್ ಅವರನ್ನು ಸಂಪುಟದಿಂದ ಕಿತ್ತೊಗೆಯಬೇಕು’ ಎಂದು ಆಗ್ರಹಿಸಿದರು.

ಹಟವೇ ದುರಂತಕ್ಕೆ ದಾರಿ...

ಒಂದನೇ ಪುಟದಿಂದ...

‘ಫೈನಲ್ ಪಂದ್ಯ ವೀಕ್ಷಣೆಗೆ ಮಂಗಳವಾರ ರಾತ್ರಿ ನಗರದ ಪಬ್, ಮಾಲ್ ಹಾಗೂ ಮೈದಾನಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಗೂ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಆರ್‌ಸಿಬಿ ತಂಡವು ಐಪಿಎಲ್ ಟ್ರೋಫಿ ಗೆದ್ದ ಕಾರಣ ಬುಧವಾರ ನಸುಕಿನವರೆಗೂ ನಗರದ ಹಲವೆಡೆ ಸಂಭ್ರಮಾಚರಣೆಗಳು ನಡೆದಿದ್ದವು. ನಸುಕಿನವರೆಗೂ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಪೊಲೀಸರನ್ನು ಮತ್ತೆ ಕರ್ತವ್ಯಕ್ಕೆ ನಿಯೋಜಿಸುವುದು, ಬೇರೆ ಜಿಲ್ಲೆಗಳಿಂದ ಸಿಬ್ಬಂದಿ ಕರೆಸುವುದು, ಬ್ಯಾರಿಕೇಡ್ ಅಳವಡಿಸುವುದು, ಸಂಚಾರ ಮಾರ್ಗ ಬದಲಾವಣೆ ಕಷ್ಟ ಎಂದು ಪೊಲೀಸರು ತಿಳಿಸಿದ್ದರು’ ಎಂದು ಗೊತ್ತಾಗಿದೆ.

‘ಪೊಲೀಸರ ಮನವಿ ಬಳಿಕ ತೆರೆದ ವಾಹನದಲ್ಲಿ ಮೆರವಣಿಗೆಯನ್ನು ಕೈಬಿಟ್ಟು ವಿಧಾನಸೌಧ ಹಾಗೂ ಕ್ರೀಡಾಂಗಣದಲ್ಲಿ ಸಮಾರಂಭ ನಡೆಸಲು ತೀರ್ಮಾನಿಸಲಾಗಿತ್ತು. ಅಷ್ಟರಲ್ಲಿ ಆರ್‌ಸಿಬಿ ಮ್ಯಾನೇಜ್‌ಮೆಂಟ್ ತನ್ನ ವೆಬ್‌ಸೈಟ್‌ನಲ್ಲಿ ಕ್ರೀಡಾಂಗಣ ಪ್ರವೇಶ ಉಚಿತ ಎಂಬ ಪ್ರಕಟಣೆ ಹೊರಡಿಸಿತ್ತು. ಇದರಿಂದ ನಗರದ ಮೂಲೆ ಮೂಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳು ಕ್ರೀಡಾಂಗಣದತ್ತ ಬಂದಿದ್ದರು. ಭದ್ರತಾ ಸಿಬ್ಬಂದಿಗೆ ಅವರನ್ನು ನಿಯಂತ್ರಿಸುವುದು ಸಾಧ್ಯವಾಗಲಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕ್ರೀಡಾಂಗಣ ಹಾಗೂ ಕಾಲ್ತುಳಿತ ನಡೆದ ಸ್ಥಳಗಳಿಗೆ ಗೃಹ ಸಚಿವ ಜಿ. ಪರಮೇಶ್ವರ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ವಿಚಾರಣಾಧಿಕಾರಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಗುರುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಘಟನೆ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಪದಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಎಂಟು ಗೇಟ್‌ಗಳಲ್ಲಿ ಕಾಲ್ತುಳಿತ: ಗೇಟ್ ನಂಬರ್ 6, 7, 2, 2ಎ, 17, 18, 21, 16ನೇ ಗೇಟ್‌ಗಳಲ್ಲಿ ಕಾಲ್ತುಳಿತ ಸಂಭವಿಸಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಈ ಎಂಟು ಗೇಟ್‌ಗಳ ಬಳಿ ಹೆಚ್ಚಿನ ಜನರು ಜಮಾಯಿಸಿದ್ದರು. ಸಂಜೆ ನಾಲ್ಕು ಗಂಟೆಯವರೆಗೂ ಯಾವುದೇ ಗೇಟ್ ತೆರೆದಿರಲಿಲ್ಲ. ನಂತರ, ಮೂರು ಗೇಟ್ ತೆರೆಯಲಾಯಿತು. ಎಲ್ಲಾ 21 ಗೇಟ್ ತೆರೆದು ಪ್ರವೇಶ ಕಲ್ಪಿಸುವಂತೆ ಅಭಿಮಾನಿಗಳ ಮನವಿಯನ್ನು ಕ್ರೀಡಾಂಗಣದ ಸಿಬ್ಬಂದಿ ಪರಿಗಣಿಸಲಿಲ್ಲ.

ಆಧಾರ್ ಕಾರ್ಡ್ ಪರಿಶೀಲಿಸಿ ಉಚಿತ ಟಿಕೆಟ್ ನೀಡುವುದು ತಡವಾಗಿದ್ದರಿಂದ ಜನರು ಗೇಟ್ ಒದ್ದು ನುಗ್ಗಲು ಯತ್ನಿಸಿದರು. ಇನ್ನೂ ಕೆಲವರು ಕಾಂಪೌಂಡ್ ಹತ್ತಿದರು. ಆಗ ನೂಕುನುಗ್ಗಲು ಸಂಭವಿಸಿ ಕೆಲವರು ನೆಲಕ್ಕೆ ಬಿದ್ದರು. ಪೊಲೀಸರು ಲಾಠಿ ಬೀಸಿದ್ದರಿಂದ ಬಿದ್ದವರನ್ನೇ ತುಳಿದು ಓಡಿದ್ದರಿಂದ ಸಾವು ಸಂಭವಿಸಿತು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ವಿರುದ್ಧ ಎಫ್‌ಐಆರ್

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, 64 ಮಂದಿ ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿ ಆರ್‌ಸಿಬಿ ಫ್ರಾಂಚೈಸಿ (ಎ–1), ಡಿಎನ್ ಎಂಟರ್‌ಟೈನ್‌ಮೆಂಟ್ ಸಂಸ್ಥೆ (ಈವೆಂಟ್ ಮ್ಯಾನೇಜ್‌ಮೆಂಟ್) (ಎ–2), ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಎ–3) ವಿರುದ್ಧ ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ. ಬಿಎನ್‌ಎಸ್ ಸೆಕ್ಷನ್‌ಗಳಾದ 105, 115(2), 118(1), 118(2), 3(5), 190, 132, 125(ಎ), 125 (ಬಿ) ಅಡಿ ದೂರು ದಾಖಲಾಗಿದೆ.

ಮೊದಲು ಯಾರನ್ನೂ ಹೊಣೆ ಮಾಡದೇ ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಿ ಪೊಲೀಸರು ತನಿಖೆಗೆ ಮುಂದಾಗಿದ್ದರು. ಮೃತರ ಕುಟುಂಬಸ್ಥರಿಂದ ಆಕ್ರೋಶ ಹೆಚ್ಚಾದ ಬೆನ್ನಲ್ಲೇ ಎಫ್‌ಐಆರ್ ದಾಖಲಾಗಿದೆ.

ದುರಂತಕ್ಕೆ ಕಾರಣರಾದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಬೇಕು. ಯುಡಿಆರ್ ದಾಖಲಿಸಿಕೊಂಡು ಪ್ರಕರಣವನ್ನು ಮುಚ್ಚಿ ಹಾಕುವ ತಂತ್ರ ಮಾಡಲಾಗಿದೆ ಎಂದು ಸಂಬಂಧಿಕರು ದೂರಿದ್ದರು.

ಕಾಲ್ತುಳಿತ ಘಟನೆ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ), ಸಮಾರಂಭದ ಆಯೋಜಕರಾಗಿದ್ದ ಆರ್‌ಸಿಬಿ ಫ್ರಾಂಚೈಸಿ, ಮತ್ತು ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್‌ಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ದುರಂತದ ವಿಚಾರಣಾಧಿಕಾರಿ ಜಿ. ಜಗದೀಶ್ ತಿಳಿಸಿದರು.

‘ಕಾರ್ಯಕ್ರಮ ನಡೆಸಲು ಒತ್ತಡವಿತ್ತು’

ಮೈಸೂರು: ಆರ್‌ಸಿಬಿ ತಂಡದ ಸನ್ಮಾನ ಸಮಾರಂಭದ ವೇಳೆ ತಪ್ಪುಗಳು ಆಗಿರುವುದು ಸತ್ಯ. ಸರ್ಕಾರವೂ ಅದನ್ನು ಒಪ್ಪಿಕೊಂಡಿದೆ. ಕಾರ್ಯಕ್ರಮ ನಡೆಸಲು ಸರ್ಕಾರದ ಮೇಲೆ ಒತ್ತಡವಿತ್ತು’ ಎಂದು ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ‘ನಿರೀಕ್ಷೆಗಿಂತ ಅತಿ ಹೆಚ್ಚು ಜನ ಬಂದಿದ್ದರಿಂದ ಘಟನೆ ನಡೆದಿದ್ದು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯ ತಪ್ಪಿಲ್ಲ ’ ಎಂದರು.

‘ವಿಧಾನಸೌಧದ ಬಳಿ ಕಾರ್ಯಕ್ರಮಕ್ಕೆ ಸಚಿವರು, ಅವರ ಸಂಬಂಧಿಕರು ಹಾಗೂ ಕುಟುಂಬದವರು ಬಂದಿರಬಹುದು. ಜನ ಕ್ರಿಕೆಟಿಗರನ್ನು ನೋಡಲು ಸ್ಟೇಡಿಯಂಗೆ ಹೋದರು. ಅಲ್ಲಿ ಸಮಸ್ಯೆಯಾಗಿದೆ’ ಎಂದರು.

ಹೊನಗೇರಾದ ಶಿವಲಿಂಗ ಕುಂಬಾರ ಸಾವು

ಪ್ರಜಾವಾಣಿ ವಾರ್ತೆ

ಯರಗೋಳ (ಯಾದಗಿರಿ ಜಿಲ್ಲೆ): ಜಯದ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ತೆರಳಿದ್ದ ಯಾದಗಿರಿ ಜಿಲ್ಲೆಯ ಹೊನಗೇರಾ ಗ್ರಾಮದವರಾದ ಶಿವಲಿಂಗ ಚಂದಪ್ಪ ಕುಂಬಾರ (17) ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಹೊನಗೇರಾ ಮೂಲದವರಾದ ಶಿವಲಿಂಗ ಅವರ ಪಾಲಕರಾದ ತಿಮ್ಮಮ್ಮ–ಚಂದಪ್ಪ ಕುಂಬಾರ ದಂಪತಿ ಹಲವು ವರ್ಷಗಳ ಹಿಂದೆ ಬೆಂಗಳೂರಿಗೆ ತೆರಳಿ ಸಣ್ಣೂರಿನಲ್ಲಿ ಸಿಮೆಂಟ್ ಇಟ್ಟಿಗೆ ತಯಾರಿಸುವ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ದಂಪತಿಗೆ ಶಿವಲಿಂಗ ಸೇರಿ ಮೂವರು ಮಕ್ಕಳಿದ್ದಾರೆ. ಕೊನೆಯ ಪುತ್ರ ಶಿವಲಿಂಗ ಬೆಂಗಳೂರಿನ ಯಲಹಂಕ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಓದುತ್ತಿದ್ದರು.

ಆರ್‌ಸಿಬಿ ವಿಜಯದ ಸಂಭ್ರಮ ನೋಡಲು ಕ್ರೀಡಾಂಗಣಕ್ಕೆ ತೆರಳಿದ್ದರು. ರಾತ್ರಿಯಾದರೂ ಮನೆಗೆ ಬಾರದಿರುವುದರಿಂದ ತಾಯಿ ಫೋನ್ ಮೂಲಕ ಸಂಪರ್ಕಿಸಿದ್ದಾರೆ. ಮೃತ ಶಿವಲಿಂಗನ ಜೇಬಿನಲ್ಲಿದ್ದ ಮೊಬೈಲ್ ಕರೆ ಸ್ವೀಕರಿಸಿದ ಪೊಲೀಸ್ ಸಿಬ್ಬಂದಿ, ‘ನಿಮ್ಮ ಮಗನಿಗೆ ಅಪಘಾತವಾಗಿದೆ. ಬೌರಿಂಗ್ ಆಸ್ಪತ್ರೆಗೆ ಬನ್ನಿ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಕುಟುಂಬದ ಸದಸ್ಯರು ಬೌರಿಂಗ್ ಆಸ್ಪತ್ರೆಗೆ ಬಂದಾಗ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಿಂದ ಶಿವಲಿಂಗ ಮೃತಪಟ್ಟಿದ್ದಾರೆ. ಆಘಾತಕ್ಕೆ ಒಳಗಾಗುವಿರಿ ಎಂಬ ಕಾರಣಕ್ಕೆ ಅಪಘಾತವಾಗಿದೆ ಎಂದು ಹೇಳಿದ್ದಾಗಿ ಪೊಲೀಸರು ತಿಳಿಸಿದರು’ ಎಂದು ಶಿವಲಿಂಗನ ಸಹೋದರ ಹೊನ್ನಪ್ಪ ಕುಂಬಾರ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಶಿವಲಿಂಗ

‘ತಮ್ಮನ ಎದೆಯ ಮೇಲೆ ತುಳಿತದ ಗಾಯಗಳಾಗಿದ್ದವು ’ ಎಂದರು.

ಚಂದಪ್ಪ ಅವರ ಬಳಿ ಸ್ವಂತ ಹೊಲ ಇಲ್ಲ. ಆಶನಾಳ ಗ್ರಾಮದ ಸೋದರ ಮಾವನ ಹೊಲದಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಕ್ರೀಡಾಂಗಣಕ್ಕೆ ಕರೆದೊಯ್ಯಬಾರದಿತ್ತು...’

ಕಾಲ್ತುಳಿತ ದುರಂತ: ಮುಗಿಲು ಮುಟ್ಟಿದ ಮೃತರ ಪೋಷಕರು, ಸಂಬಂಧಿಕರ ಆಕ್ರಂದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತದ ವೇಳೆ ಮೃತಪಟ್ಟ ಬೆಂಗಳೂರಿನ ಬಿ.ಎಸ್. ದಿವ್ಯಾಂಶಿ, ಕಾಮಾಕ್ಷಿ ದೇವಿ, ಚಿನ್ಮಯಿ ಶೆಟ್ಟಿ ಅವರ ಮರಣೋತ್ತರ ಪರೀಕ್ಷೆ ನಡೆಸಿ, ಮೃತ ದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಈ ವೇಳೆ ಪೋಷಕರು ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಆಸ್ಪತ್ರೆಯ ಆವರಣದಲ್ಲಿ ನೆರೆದಿದ್ದವರ ಕಣ್ಣಾಲಿಗಳು ಒದ್ದೆಯಾಗಿದ್ದವು. ಆಸ್ಪತ್ರೆ ಸಿಬ್ಬಂದಿ ಸಂತೈಸುತ್ತಿದ್ದ ದೃಶ್ಯ ಕಂಡು ಬಂತು.

ಶಾಲೆಗೆ ಹೊರಟಿದ್ದ ಬಾಲಕಿ ದಿವ್ಯಾಂಶಿ, ಕ್ರಿಕೆಟ್ ಬಗ್ಗೆ ಆಸಕ್ತಿಯೇ ಇಲ್ಲದ ಚಿನ್ಮಯಿ ಶೆಟ್ಟಿ ಸ್ನೇಹಿತರ ಜತೆ ಕ್ರೀಡಾಂಗಣಕ್ಕೆ ಬಂದು ಇನ್ನಿಲ್ಲವಾದರು.

‘ಯಲಹಂಕದಲ್ಲಿ 9ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದ ದಿವ್ಯಾಂಶಿ, ನೃತ್ಯಗಾರ್ತಿಯಾಗಿದ್ದು, ಪಶುವೈದ್ಯೆಯಾಗಬೇಕೆಂಬ ಆಸೆ ಹೊಂದಿದ್ದಳು. ಹೀಗಾಗಿ ಆಕೆಯನ್ನು ಕಷ್ಟಪಟ್ಟು ಓದಿಸುತ್ತಿದ್ದೆವು. ಜೀವನದಲ್ಲಿ ಸಂದರ್ಭಗಳನ್ನು ಹೇಗೆ ನಿಭಾಯಿಸಬೇಕೆಂದು ಅವಳೇ ನನಗೆ ಸ್ಫೂರ್ತಿ ನೀಡುತ್ತಿದ್ದಳು’ ಎಂದು 14 ವರ್ಷದ ದಿವ್ಯಾಂಶಿ ಅವರ ತಾಯಿ ಅಶ್ವಿನಿ ಹೇಳಿದರು.

ಕಾಲ್ತುಳಿತದಲ್ಲಿ ಮೃತಪಟ್ಟ ದಿವ್ಯಾಂಶಿ ಕುಟುಂಬಸ್ಥರ ಆಕ್ರಂದನ ಪಿಟಿಐ ಚಿತ್ರ

‘ಬೆಳಿಗ್ಗೆ 8 ಗಂಟೆಗೆ ಶಾಲೆಗೆ ಹೊರಡಲು ಸಿದ್ಧವಾಗಿದ್ದಳು. ಆರ್‌ಸಿಬಿ ತಂಡ ಬೆಂಗಳೂರಿಗೆ ಬರುತ್ತಿರುವ ವಿಷಯ ತಿಳಿದು, ವಿರಾಟ್ ಕೊಹ್ಲಿ ನೋಡಲು ಬಯಸಿದಳು. ನಾನು, ನನ್ನ ತಂಗಿ ಮತ್ತು ದಿವ್ಯಾಂಶಿ ಮೂವರೂ ಕ್ರೀಡಾಂಗಣದ ಬಳಿ ತೆರಳಿದೆವು. ನೂಕುನುಗ್ಗಲು ಉಂಟಾಯಿತು. ಮೂವರು ಬೇರ್ಪಟ್ಟೆವು. ನಾನು ಕಾಲ್ತುಳಿತದಲ್ಲಿ ಸಿಲುಕಿಕೊಂಡೆ. ಆದರೆ, ಹೇಗೋ ತಪ್ಪಿಸಿಕೊಂಡು ಹೊರಗೆ ಬಂದೆ. ಆದರೆ,ನನ್ನ ಸಹೋದರಿ ನನಗೆ ಕರೆಮಾಡಿ ದಿವ್ಯಾಂಶಿ ತಪ್ಪಿಸಿಕೊಂಡು ಕಾಲ್ತುಳಿತದಲ್ಲಿ ಸಿಲುಕಿದ್ದಾಳೆ ಎಂಬುದಾಗಿ ಹೇಳಿದಳು’ ಎಂದು ಘಟನೆಯನ್ನು ವಿವರಿಸಿದರು.

‘ಮಗಳನ್ನು ಕ್ರೀಡಾಂಗಣಕ್ಕೆ ಕರೆದುಕೊಂಡು ಬಂದು ಸಾವಿನ ಬಾಯಿಗೆ ದೂಡಿದೆ. ಇದು ನನ್ನದೇ ತಪ್ಪು. ದುರಂತಕ್ಕೆ ಯಾರನ್ನೂ ದೂಷಿಸಲು ಬಯಸುವುದಿಲ್ಲ. ಮಗಳನ್ನು ಕ್ರೀಡಾಂಗಣಕ್ಕೆ ಕರೆದೊಯ್ಯಬಾರದಿತ್ತು. ಒಬ್ಬ ತಾಯಿಯಾಗಿ, ಅಲ್ಲಿನ ಪರಿಸ್ಥಿತಿ ಬಗ್ಗೆ ಮೊದಲೇ ಯೋಚಿಸಬೇಕಾಗಿತ್ತು’ ಎಂದು ಕಣ್ಣೀರು ಹಾಕಿದರು.

ದಿವ್ಯಾಂಶಿಯ ಅಂತಿಮ ವಿಧಿವಿಧಾನಗಳನ್ನು ಆಂಧ್ರಪ್ರದೇಶದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಸದಸ್ಯರು ಮಾಹಿತಿ ನೀಡಿದರು. ಸ್ನೇಹಿತರು ಕರೆದುಕೊಂಡು ಹೋಗಿದ್ದರು.

‘ಮಗಳಿಗೆ ಕ್ರಿಕೆಟ್ ಬಗ್ಗೆ ಆಸಕ್ತಿ ಇರಲಿಲ್ಲ. ಸ್ನೇಹಿತರು ಕರೆದರು ಎಂದು ಹೋಗಿ ಕಾಲ್ತುಳಿತದಲ್ಲಿ ಮೃತಪಟ್ಟಿದ್ದಾಳೆ. ಈ ರೀತಿ ಯಾವ ತಂದೆ-ತಾಯಿಗೂ ಆಗಬಾರದು’ ಎಂದು ಚಿನ್ಮಯಿ ಶೆಟ್ಟಿ ಅವರ ತಂದೆ ಕರುಣಾಕರ್ ಶೆಟ್ಟಿ ಕಣ್ಣೀರಿಟ್ಟರು.

ದಕ್ಷಿಣ ಕನ್ನಡ ಮೂಲದ ಕರುಣಾಕರ್ ಶೆಟ್ಟಿ ಹಲವು ವರ್ಷಗಳಿಂದ ನಗರದ ದೊಡ್ಡಕಲ್ಲಸಂದ್ರದಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ನೆಲಸಿದ್ದರು. ಚಿನ್ಮಯಿ ಶೆಟ್ಟಿ ಓದಿನ ಜತೆ ಯಕ್ಷಗಾನದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಳು. ಕನಕಪುರ ರಸ್ತೆಯ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಇ ವ್ಯಾಸಂಗ ಮಾಡುತ್ತಿದ್ದಳು.

‘ಮಧ್ಯಾಹ್ನ ಕರೆ ಮಾಡಿ ಸ್ನೇಹಿತರೊಂದಿಗೆ ವಿಧಾನಸೌಧದತ್ತ ಹೋಗುತ್ತಿರುವುದಾಗಿ ಹೇಳಿದ್ದಳು. ಸಂಜೆ 5.30ಕ್ಕೆ ವೈದ್ಯರು ಕರೆ ಮಾಡಿ ಸಾವಿನ ಸುದ್ದಿ ತಿಳಿಸಿದರು. ಇನ್ನಾದರೂ ಸರ್ಕಾರ ಯಾವುದೇ ಕಾರ್ಯಕ್ರಮ ಮಾಡುವಾಗ ಸಮರ್ಪಕವಾಗಿ ವ್ಯವಸ್ಥೆ ಮಾಡಬೇಕು. ಕಾಲ್ತುಳಿತದಲ್ಲಿ ಚಿಕ್ಕ ವಯಸ್ಸಿನವರೇ ಮೃತಪಟ್ಟಿದ್ದಾರೆ. ಗೆದ್ದ ಮರುದಿನವೇ ವಿಜಯೋತ್ಸವ ಆಚರಿಸುವಂತಹದು ಏನಿತ್ತು’ ಎಂದು ಪ್ರಶ್ನಿಸಿ ಗೋಳಾಡಿದರು.

ಕುಟುಂಬದ ಸದಸ್ಯರು, ಸ್ನೇಹಿತರು ಹಾಗೂ ಬಂಧುಗಳು ಗುರುವಾರ ಬನಶಂಕರಿಯ ಚಿತಾಗಾರದಲ್ಲಿ ಚಿನ್ಮಯಿ ಶೆಟ್ಟಿ ಅಂತ್ಯಕ್ರಿಯೆ ನೆರವೇರಿಸಿದರು.

ಮದುವೆ ನಿಶ್ಚಯವಾಗಿತ್ತು..

ತಮಿಳುನಾಡಿನ ಕೊಯಮತ್ತೂರು ಮೂಲದ ಕಾಮಾಕ್ಷಿದೇವಿ ನಗರದಲ್ಲಿ ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

‘ಕೆಲ ದಿನಗಳ ಹಿಂದಷ್ಟೇ ಕಾಮಾಕ್ಷಿದೇವಿಗೆ ಮದುವೆ ನಿಶ್ಚಯವಾಗಿತ್ತು. ಆರ್‌ಸಿಬಿ ವಿಜಯೋತ್ಸವದಲ್ಲಿ ಭಾಗಿಯಾಗಲು ಇಬ್ಬರು ಸಹೋದ್ಯೋಗಿಗಳ ಜತೆ ಕ್ರೀಡಾಂಗಣಕ್ಕೆ ಬಂದಿದ್ದರು. ಗೇಟ್ 7 ತೆರೆಯುತ್ತಿದ್ದಂತೆ ಒಮ್ಮೆಲೆ ಪ್ರವೇಶಿಸಲು ಮುಂದಾದಾಗ ಉಸಿರುಗಟ್ಟಿ ಪ್ರಾಣ ಕಳೆದುಕೊಂಡಿದ್ದಾರೆ. ಆಕೆಯ ಇಬ್ಬರು ಸ್ನೇಹಿತರು ಕಾಲು ಮತ್ತು ಕೈ ಮೂಳೆ ಮುರಿದುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಕಾಮಾಕ್ಷಿದೇವಿ ಸೋದರ ಸಂಬಂಧಿ ವಿಠಲಾರಾಮ ತಮಿಳ್ ಸೆಲ್ವನ್ ತಿಳಿಸಿದರು. ತಮಿಳುನಾಡಿನಲ್ಲಿ ಕಾಮಾಕ್ಷಿದೇವಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

‘ಉಸಿರಾಡಲು ಕಷ್ಟವಾಗಿತ್ತು’

ಬೆಂಗಳೂರು: ‘ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮಕ್ಕೆ ಹೋಗಲು ಪಾಸ್ ಸಿಕ್ಕಿತ್ತು. ಅಲ್ಲಿ ಏಕಾಏಕಿ ಜನಸಂದಣಿಯಾಯಿತು. ಒಂದು ಕ್ಷಣ ನನಗೆ ಉಸಿರಾಡಲು ಕಷ್ಟ ಆಯ್ತು’ ಎಂದು ನಟ ಚಂದನ್ ಶೆಟ್ಟಿ ಹೇಳಿದ್ದಾರೆ.

‘ಗೇಟ್ ನಂಬರ್ 3ಕ್ಕೆ ಹೋಗಲು ನನಗೆ ಪಾಸ್ ಸಿಕ್ಕಿತ್ತು, ಆದರೆ ಹೋಗಲು ಸಾಧ್ಯವಾಗಲಿಲ್ಲ. ಅಲ್ಲಿಂದ ಹೇಗೋ ಗೇಟ್ ನಂಬರ್ 10ರ ಬಳಿ ಬಂದಾಗ ಜನಸಂದಣಿ ಇತ್ತು. ಇದರಿಂದಾಗಿ ಉಸಿರಾಡಲು ಕಷ್ಟವಾಯಿತು. ದುರಂತದಲ್ಲಿ ಪ್ರಾಣ ಕಳೆದುಕೊಂಡವರಿಗೆ ಎಷ್ಟು ಕಷ್ಟ ಆಗಿತ್ತೋ, ಏನೋ? ಕಾಲ್ತುಳಿತದಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೇಳಿಕೊಳ್ಳುತ್ತಿದ್ದೇನೆ’ ಎಂದಿದ್ದಾರೆ.

‘ಬಿಸಿಸಿಐ ತಲಾ ₹1 ಕೋಟಿ ನೀಡಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಐಪಿಎಲ್ ವಿಜಯೋತ್ಸವ ವೇಳೆ ನೂಕು ನುಗ್ಗಲಿನಿಂದ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಬಿಸಿಸಿಐ ತಲಾ ₹1 ಕೋಟಿ ಪರಿಹಾರ ಕೊಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಗುರುವಾರ ಆಗ್ರಹಪಡಿಸಿದ್ದಾರೆ.

ಬಿ.ಕೆ. ಹರಿಪ್ರಸಾದ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಆರ್‌ಸಿಬಿ ರಾಜ್ಯ ಅಥವಾ ರಾಷ್ಟ್ರದ ಕ್ರಿಕೆಟ್ ತಂಡ ಅಲ್ಲ. ವಿಜಯೋತ್ಸವದ ವೇಳೆ ದುರ್ಘಟನೆ ಸಂಭವಿಸಿದೆ. ಎಲ್ಲರೂ ದುಃಖದಲ್ಲಿದ್ದಾರೆ. ಹೆಚ್ಚು ಹೇಳಬಯಸುವುದಿಲ್ಲ’ ಎಂದರು.

‘ಸರ್ಕಾರ ಏನು ಮಾಡಿದೆ ಅಥವಾ ಏನು ಮಾಡಿಲ್ಲ ಎಂಬುದನ್ನು ಜವಾಬ್ದಾರಿ ಸ್ಥಾನದಲ್ಲಿರುವ ನಾನು ಹೇಳಲಾಗದು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಈ ಬಗ್ಗೆ ತಿಳಿವಳಿಕೆ ಕೊಡಬೇಕು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗರಿಷ್ಠ 35 ಸಾವಿರ ಮಂದಿ ಸೇರುವಷ್ಟು ಮಾತ್ರ ಸಾಮರ್ಥ್ಯವಿದೆ. ಉಚಿತ ಪ್ರವೇಶ ಎಂದು ತಿಳಿದು ಅಲ್ಲಿಗೆ 3 ಲಕ್ಷ ಜನ ತೆರಳಿದ್ದಾರೆ. ಎಲ್ಲೋ ಒಂದು ಕಡೆ ಹೆಚ್ಚು ಕಮ್ಮಿ ಆಗಿದೆ’ ಎಂದರು.

‘11 ಜನರ ಸಾವಿಗೆ ಯಾರು ಹೊಣೆ ಎಂದು ಸರ್ಕಾರ ತಿಳಿಸಬೇಕು. ದುರ್ಘಟನೆ ಕ್ರೀಡಾಂಗಣದ ಬಳಿ ನಡೆದಿದೆ. ಅಲ್ಲಿ ಕಾರ್ಯಕ್ರಮ ಆಯೋಜಿಸುವಾಗ ಯೋಚಿಸಬೇಕಿತ್ತು’ ಎಂದು ಹೇಳಿದರು.

‘ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಳ್ಳುವ ಅಧಿಕಾರ ಹೈಕೋರ್ಟ್‌ಗೆ ಇದೆ. ಎಲ್ಲ ವಿಚಾರಗಳಲ್ಲೂ ಇದೇ ತರಹ ಮಾಡಿದರೆ ಒಳ್ಳೆಯದು’ ಎಂದು ಹೇಳಿದರು.

ಕಾಲ್ತುಳಿತ: ಕಮಿಷನರ್ ಅಮಾನತು

ಒಂದನೇ ಪುಟದಿಂದ...

3 ಸಂಸ್ಥೆಗಳ ಮುಖ್ಯಸ್ಥರ ಬಂಧನಕ್ಕೆ ಸೂಚನೆ: ಆರ್‌ಸಿಬಿ ಫ್ರಾಂಚೈಸಿ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಸೇರಿ ಮೂರೂ ಸಂಸ್ಥೆಗಳ ಮುಖ್ಯಸ್ಥರನ್ನು ಬಂಧಿಸಲು ಸೂಚನೆ ನೀಡಲಾಗಿದೆ. ಮೂರು ಸಂಸ್ಥೆಗಳ ವಿರುದ್ಧದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು.

ಕಠಿಣ ಕ್ರಮಕ್ಕೆ ಸಚಿವರ ಪಟ್ಟು: ಸಚಿವ ಸಂಪುಟ ಸಭೆಯಲ್ಲಿ ಹಾಜರಿದ್ದ ಎಲ್ಲ ಸಚಿವರೂ ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದೂ ಅಲ್ಲದೇ ಕಾರಣರಾದವರ ತಲೆದಂಡ ಆಗಬೇಕು ಎಂದು ಪಟ್ಟು ಹಿಡಿದರು ಎಂದು ಗೊತ್ತಾಗಿದೆ.

‘ಸಾರ್ವಜನಿಕವಾಗಿ ಸರ್ಕಾರದ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿದೆ. ಸಂತ್ರಸ್ತ ಕುಟುಂಬಗಳ ರೋದನ, ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ’ ಎಂದು ಸಚಿವರು ಮುಖ್ಯಮಂತ್ರಿಯವರ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ. ‘ಆಗ ಮಾತನಾಡಿದ ಸಿದ್ದರಾಮಯ್ಯ, ನನ್ನ ಅಧಿಕಾರದ ಅವಧಿಯಲ್ಲಿ ಇಂತಹದ್ದೊಂದು ದುರಂತ ಸಂಭವಿಸಿರಲಿಲ್ಲ. ನಿನ್ನೆಯ ಘಟನೆಯಿಂದ ತೀವ್ರ ಆಘಾತ ಆಗಿದೆ ಎಂದು ಸಿದ್ದರಾಮಯ್ಯ ಅವರೂ ತೀವ್ರ ನೋವು ತೋಡಿಕೊಂಡರು’ ಎಂದು ಮೂಲಗಳು ಹೇಳಿವೆ.

‘ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಲೇಬೇಕು’ ಎಂದು ಬಹುತೇಕ ಸಚಿವರು ಪಟ್ಟು ಹಿಡಿದಾಗ ಮುಖ್ಯಮಂತ್ರಿಯವರು ರಾಜ್ಯ ಪೊಲೀಸ್ ಮಹಾ ನಿರ್ದೇಶಕರೂ ಸೇರಿ ಹಿರಿಯ ಅಧಿಕಾರಿಗಳನ್ನು ಸಂಪುಟ ಸಭೆಗೆ ಕರೆಸಿಕೊಂಡರು.

‘ಇಷ್ಟೊಂದು ದೊಡ್ಡ ಘಟನೆ ಸಂಭವಿಸಿ ಸರ್ಕಾರಕ್ಕೆ ದೊಡ್ಡ ಮಟ್ಟದ ಮುಜುಗರ ಆಗಿರುವಾಗ ಆರ್‌ಸಿಬಿ ಆಡಳಿತ ಮಂಡಳಿ ಮತ್ತು ನಗರ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಆಗಲೇಬೇಕು ಎಂದು ಹಿರಿಯ ಸಚಿವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು’ ಎಂದು ಮೂಲಗಳು ಹೇಳಿವೆ.

‘ಜನದಟ್ಟಣೆ ನಿರ್ವಹಣೆಗೆ ವಿಭಿನ್ನ ಮಾರ್ಗ ಅಗತ್ಯ’

ವಾಷಿಂಗ್ಟನ್ (ಪಿಟಿಐ): ಬೆಂಗಳೂರಿನ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆಯನ್ನು ‘ದುರಂತ’ ಎಂದಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ‘ಜನದಟ್ಟಣೆ ನಿಯಂತ್ರಿಸುವ ವಿಚಾರದಲ್ಲಿ ನಾವು ವಿಭಿನ್ನ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ’ ಎಂದಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಅವರು, ಬೆಂಗಳೂರಿನಲ್ಲಿ ನಡೆದ ದುರ್ಘಟನೆ ಕುರಿತು ಪ್ರತಿಕ್ರಿಯಿಸಿದರು. ‘ಕರ್ನಾಟಕದಲ್ಲಿರುವ ನಿಮ್ಮದೇ ಪಕ್ಷದ ನೇತೃತ್ವದ ಸರ್ಕಾರಕ್ಕೆ ಈ ವಿಷಯದಲ್ಲಿ ಏನಾದರೂ ಸಲಹೆ ನೀಡಲು ಬಯಸುತ್ತೀರಾ’ ಎಂಬ ಪ್ರಶ್ನೆಗೆ, ‘ಜನದಟ್ಟಣೆ ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಾವು ವಿಭಿನ್ನ ಮಾರ್ಗೋಪಾಯಗಳನ್ನು ಕಂಡುಕೊಳ್ಳಲೇಬೇಕಿದೆ. ಅಲ್ಲಿರುವ ಸರ್ಕಾರ ಈ ವಿಷಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ’ ಎಂದು ಹೇಳಿದರು.

ಡಿಸಿಪಿ ಸೇರಿ ಹಲವು ಸಿಬ್ಬಂದಿಗೆ ಗಾಯ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದ ವೇಳೆ ಬೆಂಗಳೂರು ಉತ್ತರ ವಿಭಾಗದ ಡಿಸಿಪಿ ಸೈದುಲು ಅಡಾವತ್ ಸೇರಿದಂತೆ ಹಲವು ಪೊಲೀಸರು ಗಾಯಗೊಂಡಿದ್ದಾರೆ.

ಬುಧವಾರ ಮಧ್ಯಾಹ್ನ ಕ್ರೀಡಾಂಗಣದ ಗೇಟ್ ನಂಬರ್ 19ರ ಬಳಿ ಸೈದುಲು ಅಡಾವತ್ ಅವರು ಕರ್ತವ್ಯ ನಿರ್ವಹಿಸುತ್ತಿದ್ದರು. ಆಗ ಏಕಾಏಕಿ ಅಭಿಮಾನಿಗಳ ಗುಂಪು ನುಗ್ಗಿದ್ದು, ಹೆಚ್ಚಿನ ಸಿಬ್ಬಂದಿ ಇರದ ಕಾರಣ ಡಿಸಿಪಿ ಅವರೇ ಲಾಠಿ ಹಿಡಿದು, ಸಾಧ್ಯವಾದಷ್ಟು ಗುಂಪು ಚದುರಿಸಿದ್ದಾರೆ. ಆದರೂ ಜನದಟ್ಟಣೆಯ ನಡುವೆ ಸಿಲುಕಿಕೊಂಡ ಅವರು ಗಾಯಗೊಂಡರು. ಸದ್ಯ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜನದಟ್ಟಣೆ ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. ತಳ್ಳಾಟ, ನೂಕಾಟ ಹೆಚ್ಚಾದ ಕಾರಣ ಪೊಲೀಸರು ಕೆಳಗೆ ಬಿದ್ದು ಗಾಯಗೊಂಡರು. ಕೆಲವರು ಸಮೀಪದ ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ‘ಸೈದುಲು ಅಡಾವತ್ ಅವರು ಚೇತರಿಸಿಕೊಳ್ಳುತ್ತಿದ್ದು, ಶೀಘ್ರವೇ ಮನೆಗೆ ತೆರಳಲಿದ್ದಾರೆ’ ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಡಿಸಿಇಟಿ: ಅರ್ಜಿ ತಿದ್ದುಪಡಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ವರ್ಷದ ಎಂಜಿನಿಯರಿಂಗ್ ನೇರ ಪ್ರವೇಶಕ್ಕೆ (ಲ್ಯಾಟರಲ್ ಎಂಟ್ರಿ) ನಡೆಸಿದ ಡಿಪ್ಲೊಮಾ ಸಿಇಟಿ-25ರ ಅರ್ಜಿಯಲ್ಲಿನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಜೂನ್ 5ರಿಂದ 8ರವರೆಗೆ ಅವಕಾಶ ನೀಡಲಾಗಿದೆ.

ಅಭ್ಯರ್ಥಿಗಳ ಕೋರಿಕೆ ಮೇರೆಗೆ ಆದಾಯ, ಮೀಸಲಾತಿ, ಅಂಕಗಳ ತಪ್ಪು ನಮೂದು ಮತ್ತಿತರ ಅಂಶಗಳ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. ಅಭ್ಯರ್ಥಿಯ ಹೆಸರು, ತಂದೆ-ತಾಯಿ ಹೆಸರು, ಜನ್ಮ ದಿನಾಂಕ, ಲಿಂಗ, ಮೊಬೈಲ್ ಸಂಖ್ಯೆ ಬದಲಾವಣೆಗೆ ಅವಕಾಶ ಇರುವುದಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಸಂಖ್ಯೆ: ಮು.ಪ್ರ.ವ್ಯ(ತಾ)/ಅ.ಇಂ(ವಿ)ಎಪಿಸಿಸಿ&ಪೊ/ಕಾನಿಇಂಪಿ/ಸ.ಕಾ.ನಿ.ಇಂ2/2025-26/598-609 ದಿನಾಂಕ: 05.06.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಟೆಂಡರ್ ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2298 **ಕಾರ್ಪೊರೇಟ್ ಕಛೇರಿ, ಎಸ್‌ಎಲ್‌ಡಿಸಿ ಮತ್ತು ಬೆಂಗಳೂರು ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.
2) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2305 **ಬಾಗಲಕೋಟೆ ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.
3) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2306 **ಕಲಬುರಗಿ ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.
4) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2307 **ಹಾಸನ ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.
5) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2308 **ತುಮಕೂರು ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.
6) ವಿಚಾರಣೆ ಸಂಖ್ಯೆ: KPTCL/2025-26/OW/WORK_INDENT2309 **ಮೈಸೂರು ಕಾರ್ಯಾಚರಣೆ ವಲಯ,** ಕವಿಪ್ರನಿನಿಯ ಅಧಿಕಾರಿಗಳ ಬಳಕೆಗಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು.

ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: ಕ್ರ.ಸಂ. 1 & 2ಕ್ಕೆ ದಿನಾಂಕ: 09.06.2025 @15:00 ಅಥವಾ ನಂತರ ಮತ್ತು ಕ್ರ.ಸಂ. 3 & 4ಕ್ಕೆ ದಿನಾಂಕ: 10.06.2025 @15:00 ಅಥವಾ ನಂತರ ಹಾಗೂ ಕ್ರ.ಸಂ. 5 & 6ಕ್ಕೆ ದಿನಾಂಕ: 11.06.2025 @15:00 ಅಥವಾ ನಂತರ.

ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: ಕ್ರ.ಸಂ. 1 & 2ಕ್ಕೆ 01.07.2025 ರಂದು ಅಪರಾಹ್ನ 15:00 ಗಂಟೆಗೆ ಮತ್ತು ಕ್ರ.ಸಂ. 3 & 4ಕ್ಕೆ 02.07.2025 ರಂದು ಅಪರಾಹ್ನ 15:00 ಗಂಟೆ ಹಾಗೂ ಕ್ರ.ಸಂ. 5 & 6ಕ್ಕೆ 03.07.2025 ರಂದು ಅಪರಾಹ್ನ 15:00 ಗಂಟೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ “E Procurement KPTCL” ಅಥವಾ https://kppp.karnataka.gov.inನಲ್ಲಿ ಲಾಗಿನ್ ಆಗಿ ಪಡೆಯಬಹುದು. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ಕಾರ್ಪೊರೇಟ್ ಕಚೇರಿ, 2ನೇ ಮಹಡಿ, ಕಾವೇರಿ ಭವನ,
ಬೆಂಗಳೂರು-560 009.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268 E.Mail: eepwdgad@gmail.com

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ನಂ:ಕಾನಿಇಂಗಃಲೋಇ:ಪಿಬಿ-1: ವಿವಿಧ: 2025-26/925 ದಿನಾಂಕ: 05-06-2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 179.00 ಲಕ್ಷ ಮೊತ್ತದಲ್ಲಿ** ಒಟ್ಟು **03** ಕಾಮಗಾರಿಗೆ (ಕನಿಷ್ಟ ಮೊತ್ತ **ರೂ: 5.00 ಲಕ್ಷ** ಹಾಗೂ ಗರಿಷ್ಟ ಮೊತ್ತ **ರೂ: 165.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ-1 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in/ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1)
22056, 21580 and 21492

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ: 02-07-2025** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 05-07-2025** ಮಧ್ಯಾಹ್ನ **4:00** ಗಂಟೆಯ ವರೆಗೆ, ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07-07-2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 08-07-2025**

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ವಾ.ಸಾ.ಇ/ಗದಗ/92/ದೇಶಪಾಂಡೆಪಬ್ಲಿಸಿಟಿ/2025-26

ಭಾರತ ಸರ್ಕಾರ

ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ
ರಾಷ್ಟ್ರೀಯ ಹೆದ್ದಾರಿ-150ಎ, ಕೆ.ಬಿ ಕ್ರಾಸ್ ಚುಂಚನಹಳ್ಳಿ ಭಾಗ

ತುಮಕೂರು ಘಟಕ, ಬೆಟ್ಟಶ್ರೀ ಕಾಂಪ್ಲೆಕ್ಸ್,
ರೇಣುಕ ಸೂಪರ್ ಬಜಾರ್ ಮೇಲೆ, 5ನೇ ಕ್ರಾಸ್ 60ಅಡಿ ರಸ್ತೆ, ಸಪ್ತಗಿರಿ ಬಡಾವಣೆ, ತುಮಕೂರು-572102
ಇ-ಮೇಲ್:- slaonh206@gmail.com ದೂರವಾಣಿ ನಂ: 0816-2292609

ದಿನಾಂಕ: 05.06.2025

ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ-150ಎ ಕೆ.ಬಿ ಕ್ರಾಸ್ ಚುಂಚನಹಳ್ಳಿ ಭಾಗದ ದ್ವಿಪಥ/ಚತುಷ್ಪತ ರಸ್ತೆ ಕಾಮಗಾರಿಯ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನಗೊಂಡಿರುವ ಭೂಮಾಲೀಕರಿಗೆ ಅವಾರ್ಡ್ ನೋಟೀಸ್ ನೀಡಲಾಗಿರುತ್ತದೆ. ರಾಷ್ಟ್ರೀಯ ಹೆದ್ದಾರಿ-150ಎ ಯೋಜನೆಗೆ ಭೂಸ್ವಾಧೀನಕ್ಕೆ ಒಳಪಡುವ ತುರುವೇಕೆರೆ ತಾಲ್ಲೂಕಿನ ಗ್ರಾಮಗಳಾದ **ಬಾಣಾಸಂದ್ರ, ಕುನೀಕೇನಹಳ್ಳಿ, ಸಂಗಲಾಪುರ, ಕೋಡಿನಾಗಸಂದ್ರ, ಮಾಯಸಂದ್ರ, ಚಿಕ್ಕಶೆಟ್ಟಿಕೆರೆ, ದೊಡ್ಡಶೆಟ್ಟಿಕೆರೆ, ದನನಾಯಕನಪುರದಕಾವಲ್** ಮತ್ತು **ದೊಡ್ಡಬೀರನಕೆರೆ** ಭೂಮಾಲೀಕರು ಅವಾರ್ಡ್ ನೋಟೀಸ್‌ನಲ್ಲಿ ನಮೂದಿಸಿರುವ ದಾಖಲಾತಿಗಳನ್ನು ಸಲ್ಲಿಸಲು **ಭೂಸ್ವಾಧೀನಾಧಿಕಾರಿಗಳ ಶಿಬಿರ ಕಛೇರಿಯನ್ನು ತಹಶೀಲ್ದಾರ್‌ರವರ ಕಚೇರಿ ತುರುವೇಕೆರೆ ತಾಲ್ಲೂಕು, ತುರುವೇಕೆರೆ ಇಲ್ಲಿ ದಿನಾಂಕ: 06.06.2025 ರಿಂದ 20.06.2025 ವರೆಗೆ ಸಲ್ಲಿಸಲು ಕೋರಿದೆ.**

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ
ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ತುಮಕೂರು.

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬೆಂಗಳೂರು ನಗರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು - 560 009

ಸಂ. ಎಂ.ಎ.ಜೆ(4)/ಮಿಸ್/ಸಿಆರ್/03/2025-26 ದಿನಾಂಕ : 05.06.2025

ಪತ್ರಿಕಾ ಪ್ರಕಟಣೆ
ಸಾರ್ವಜನಿಕರ ಗಮನಕ್ಕೆ

ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ದಿನಾಂಕ: 04.06.2025 ರಂದು ಆರ್.ಸಿ.ಬಿ ಕ್ರಿಕೆಟ್ ತಂಡದ ವಿಜಯೋತ್ಸವದ ಅಭಿನಂದನಾ ಸಮಾರಂಭದ ಸಂದರ್ಭದಲ್ಲಿ ನಡೆದ ಅಹಿತಕರ ಘಟನೆಯಲ್ಲಿ ಬೆಂಗಳೂರು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉಂಟಾದ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟಿದ್ದು, 47 ಮಂದಿ ಗಾಯಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 218 ಪಿಸಿಇ 2025, ಬೆಂಗಳೂರು, ದಿನಾಂಕ: 04.06.2025 ರನ್ವಯ ಮೇಲೆ ಉಲ್ಲೇಖಿಸಿರುವ ಘಟನೆಯಲ್ಲಿ ದುರಂತದ ಸಾವಿಗೆ ಕಾರಣಗಳು, ಘಟನಾವಳಿಗಳ ಸರಣಿ ಹಾಗೂ ಸನ್ನಿವೇಶಗಳ ಬಗ್ಗೆ ಮತ್ತು ಈ ಪ್ರಕರಣದಲ್ಲಿ ಲೋಪ ಉಂಟಾಗಿದಲ್ಲಿ, ಉಂಟಾಗಿರಬಹುದಾದ ಲೋಪಗಳ ಕುರಿತು, ಈ ಲೋಪಕ್ಕೆ ಕಾರಣರಾದರವರ ಬಗ್ಗೆ ಹಾಗೂ ನಿರ್ಲಕ್ಷ್ಯತೆ ಯಿಂದ ಉಂಟಾಗಿದೆಯೇ ಎಂಬುದರ ಬಗ್ಗೆ ಸಮಗ್ರವಾಗಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ **ಶ್ರೀ ಜಗದೀಶ ಜಿ, ಭಾ.ಆ.ಸೇ.,** ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಆದ ನನ್ನನ್ನು ಸರ್ಕಾರವು ನೇಮಿಸಿದೆ.

ಈ ಸಂಬಂಧ **ದಿನಾಂಕ: 13.06.2025ರಂದು ಪೂರ್ವಾಹ್ನ 11.00 ಘಂಟೆಯಿಂದ ಅಪರಾಹ್ನ 1.30 ಘಂಟೆಯವರೆಗೆ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಕೆ.ಜಿ ರಸ್ತೆ, ಬೆಂಗಳೂರು -560009 ಇಲ್ಲಿ ವಿಚಾರಣೆ ನಡೆಸಲಾಗುವುದು.** ಸದರಿ ದಿನ ಈ ಘಟನೆ ಬಗ್ಗೆ ಮಾಹಿತಿಯುಳ್ಳ ಅಥವಾ ಈ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ ಯಾರೇ ಆಗಲಿ ನನ್ನ ಸಮಕ್ಷಮ ಹಾಜರಾಗಿ ಸಾಕ್ಷ್ಯ ಅಥವಾ ಹೇಳಿಕೆಯನ್ನು ನೀಡಬಹುದಾಗಿದೆ ಎಂದು ಈ ಮೂಲಕ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಣೆಯನ್ನು ಹೊರಡಿಸಿದೆ.

ಸಹಿ/-
ಜೆ. ಜಗದೀಶ, ಭಾ.ಆ.ಸೇ
ವಿಚಾರಣಾಧಿಕಾರಿಗಳು, ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ.

DIPR/CP/SA/1083/2025-26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ದೂರವಾಣಿ. ಸಂ: 08182-2268512 E-mail:ka.shivamogga.cc@gmail.com

ಟೆಂಡರ್ ಪ್ರಕಟಣೆ

ಸಂಖ್ಯೆ:ಶಿಮನಪಾ/ಆ.ವಿ/ಸಿಆರ್/70/2025-26 ದಿನಾಂಕ:03.06.2025

ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಣ ತ್ಯಾಜ್ಯ ನಿರ್ವಹಣೆಗಾಗಿ ಮೆಟಿರಿಯಲ್ ರಿಕವರಿ ಫಸಲಿಟಿ (50TPD& 22 TPD) ಮಿತಿಯಲ್ಲಿನ ಘಟಕಗಳಿಗೆ ಯಂತ್ರೋಪಕರಣಗಳನ್ನು ಅಳವಡಿಸಲು ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ ಶಿವಮೊಗ್ಗ ಇವರಿಂದ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ (https//kppp.karnataka.gov.in) ಟೆಂಡರ್ ಸಲ್ಲಿಸುವುದು.

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಲೆಕ್ಕಶೀರ್ಷಿಕೆ
1	Supply, Installation and commissioning of Material recovery facility Machineries for 50 TPD (Phase 1 & Phase 2) & 22 TPD (Phase 1 & Phase 2) in Shivamogga city corporation limits. (Indent No DMA/2024-25/IND3082/CALL-3)	430.00	6,45,000	ಸ್ವಚ್ಛಭಾರತ್ ಮಿಷನ್ (2.0)ನಿಧಿ

(1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **04.06.2025** (2) ಪೂರ್ವಭಾವಿ ಸಭೆ (PRE -BID MEETING) : **09.06.2025** ರ **ಪೂರ್ವಾಹ್ನ 11:00 ಗಂಟೆಗೆ ಮಹಾನಗರಪಾಲಿಕೆ ಶಿವಮೊಗ್ಗ** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **18.06.2025** ರ **ಸಂಜೆ 04.30 ಗಂಟೆಗೆ.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ)ರವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ KPP-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪುಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.09-06/ಝೇಂಕಾರ್/2025-26

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ /2025-26/786 ದಿ:-03.06.2025

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THESE WORK ARE RESERVED FOR SC CATOGERY					
1	PWD/2025-26/RD/WORK_INDENT21877	100.00	3	PWD/2025-26/RD/WORK_INDENT22078	100.00
2	PWD/2025-26/RD/WORK_INDENT21976	100.00			
THESE WORK ARE RESERVED FOR ST CATOGERY					
4	PWD/2024-25/BR/WORK_INDENT20094	100.00			
THESE WORK ARE RESERVED FOR CAT-2A CATOGERY					
5	PWD/2025-26/RD/WORK_INDENT21863	70.00	6	PWD/2025-26/RD/WORK_INDENT22146	50.00
General Work					
7	PWD/2025-26/RD/WORK_INDENT21861	100.00	14	PWD/2025-26/RD/WORK_INDENT21977	100.00
8	PWD/2025-26/RD/WORK_INDENT21879	100.00	15	PWD/2025-26/EL/WORK_INDENT22096	150.00
9	PWD/2025-26/RD/WORK_INDENT21880	100.00	16	PWD/2025-26/RD/WORK_INDENT22064	200.00
10	PWD/2025-26/RD/WORK_INDENT22043	100.00	17	PWD/2025-26/RD/WORK_INDENT21979	300.00
11	PWD/2025-26/RD/WORK_INDENT21876	100.00	18	PWD/2025-26/RD/WORK_INDENT21978	300.00
12	PWD/2025-26/RD/WORK_INDENT22044	100.00	19	PWD/2025-26/RD/WORK_INDENT22094	270.00
13	PWD/2025-26/RD/WORK_INDENT21905	100.00	20	PWD/2025-26/BR/WORK_INDENT22152	150.00

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **24.06.2025 (16.00 ಗಂಟೆಗೆ).** 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **25.06.2025 (16.30 ಗಂಟೆಗೆ).** 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೋಡಿಕೊಳ್ಳಬಹುದು

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/86

❦ ಸುಭಾಷಿತ ❦

ಜಗತ್ತಿನ ಎಲ್ಲ ಶಕ್ತಿಗಳೂ ಈಗಾಗಲೇ ನಮ್ಮವಾಗಿವೆ. ಆದರೆ, ನಾವು ಮಾತ್ರ ಕೈಗಳನ್ನು ನಮ್ಮ ಕಣ್ಣುಗಳಿಗೆ ಅಡ್ಡ ಇಟ್ಟುಕೊಂಡು ಕತ್ತಲೆ ತುಂಬಿದೆ ಎಂದು ಅಳುತ್ತೇವೆ.

-ಸ್ವಾಮಿ ವಿವೇಕಾನಂದ

ಮತೀಯ ಹಿಂಸೆ ನಿಗ್ರಹ: ಪೊಲೀಸ್ ಕೆಲಸದಲ್ಲಿ ಹಸ್ತಕ್ಷೇಪ ಸಲ್ಲದು

ಮತೀಯ ದ್ವೇಷದ ಹಿಂಸೆಯ ತಾಣವಾಗಿ ಬದಲಾಗಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಪ್ರಿಲ್ ಕೊನೆಯ ವಾರ ಕೇರಳದ ವ್ಯಕ್ತಿಯೊಬ್ಬರನ್ನು ಗುಂಪು ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿತ್ತು. ಮೇ 1ರ ಬಳಿಕ ಮತೀಯ ದ್ವೇಷದ ಕಾರಣಕ್ಕಾಗಿಯೇ ಇಬ್ಬರ ಕೊಲೆಗಳು ನಡೆದಿವೆ. ಈ ಪ್ರಕರಣಗಳ ಬೆನ್ನಲ್ಲೇ ಮತೀಯ ದ್ವೇಷದ ಬೆಂಕಿ ಇಡೀ ಕರಾವಳಿಯನ್ನು ವ್ಯಾಪಿಸಿಕೊಳ್ಳುವ ಲಕ್ಷಣಗಳು ಗೋಚರಿಸಿದ್ದವು. ಕೊಲೆ ಪ್ರಕರಣಗಳನ್ನೇ ಮುಂದಿಟ್ಟುಕೊಂಡು ಹಿಂದೂ- ಮುಸ್ಲಿಮರ ನಡುವೆ ದ್ವೇಷ ಬಿತ್ತುವ ಪ್ರಯತ್ನಗಳೂ ಆರಂಭವಾಗಿದ್ದವು. ತಕ್ಷಣವೇ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರವು ಮಂಗಳೂರು ಪೊಲೀಸ್ ಕಮಿಷನರ್ ಹಾಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಬದಲಾವಣೆ ಮಾಡಿತು. ದೀರ್ಘಕಾಲದಿಂದ ಒಂದೇ ಠಾಣೆ, ಉಪವಿಭಾಗಗಳಲ್ಲಿ ಠಿಕಾಣಿ ಹೂಡಿರುವ ಕೆಳಹಂತದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ವರ್ಗಾವಣೆ ಮಾಡುವ ಪ್ರಕ್ರಿಯೆಯನ್ನೂ ಆರಂಭಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿನ ಮತೀಯ ದ್ವೇಷದ ಹಿಂಸಾ ಕೃತ್ಯಗಳ ಹಿಂದಿನ ಆಳ-ಅಗಲ ಬಲ್ಲ ಐಪಿಎಸ್ ಅಧಿಕಾರಿಗಳನ್ನು ಅಲ್ಲಿಗೆ ನಿಯೋಜಿಸುತ್ತಿದ್ದಂತೆಯೇ ಪೊಲೀಸರ ಕಾರ್ಯವೈಖರಿ ಬದಲಾಗಿದೆ. ಮತೀಯ ದ್ವೇಷದ ಭಾಷಣ ಮಾಡುವವರು, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್‌ಗಳನ್ನು ಹಾಕುವ ಮೂಲಕ ಹಿಂಸೆಯನ್ನು ಪ್ರಚೋದಿಸುವವರು, ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಶಾಂತಿ ಕದಡುವ ವ್ಯಕ್ತಿಗಳ ವಿರುದ್ಧದ ಕಾರ್ಯಾಚರಣೆ ಚುರುಕುಗೊಂಡಿದೆ.

ತೆರೆಯ ಹಿಂದೆ ಕುಳಿತು ಪ್ರಚೋದನೆ ನೀಡುವ, ಕಾರ್ಯತಂತ್ರ ರೂಪಿಸುವ ಸೂತ್ರಧಾರರನ್ನೂ ಕಾನೂನಿನ ಅಡಿಯಲ್ಲಿ ಕ್ರಮಕ್ಕೆ ಒಳಪಡಿಸುವ ಕೆಲಸ ಆಗಬೇಕಿದೆ

ಮತೀಯ ಹಿಂಸಾ ಕೃತ್ಯಗಳಲ್ಲಿ ನೇರವಾಗಿ ಭಾಗಿಯಾದವರು ಮತ್ತು ಅಂತಹ ಕೃತ್ಯಗಳಿಗೆ ಪ್ರಚೋದನೆ ನೀಡಿದ್ದಾರೆ ಎನ್ನಲಾದ 36 ಮಂದಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಗಡೀಪಾರು ಮಾಡುವ ಪ್ರಕ್ರಿಯೆ ಆರಂಭವಾಗಿದೆ. ವಿದೇಶಗಳಲ್ಲಿ ಕುಳಿತು ಸಾಮಾಜಿಕ ಮಾಧ್ಯಮಗಳ ಮೂಲಕ ಹಿಂಸೆಯನ್ನು ಪ್ರಚೋದಿಸುವವರನ್ನು ನಿಯಂತ್ರಿಸುವುದು ಪೊಲೀಸರಿಗೆ ಸವಾಲಾಗಿತ್ತು. ಈಗ ಹೊಸ ತಂತ್ರಗಾರಿಕೆ ಪ್ರಯೋಗಿಸಿರುವ ಪೊಲೀಸರು, ಲುಕ್‌ಔಟ್ ನೋಟಿಸ್ ಹೊರಡಿಸಿ ಅಂತಹವರನ್ನು ಸ್ವದೇಶಕ್ಕೆ ಕರೆಸಿಕೊಂಡು, ಬಂಧಿಸಿ ಜೈಲಿಗೆ ಕಳುಹಿಸುತ್ತಿದ್ದಾರೆ. ಕರಾವಳಿಯಲ್ಲಿನ ಮತೀಯ ದ್ವೇಷದ ಹಿಂಸಾಚಾರಕ್ಕೂ ಅಕ್ರಮ ಮರಳು ಸಾಗಣೆ, ಮಾದಕ ವಸ್ತು ಮಾರಾಟ ಮತ್ತು ದನದ ಮಾಂಸ ಪೂರೈಕೆ ಜಾಲಕ್ಕೂ ನಂಟು ಇದೆ ಎಂಬುದನ್ನು ಅರಿತು, ಅಂತಹ ಕೃತ್ಯಗಳನ್ನೂ ಹತ್ತಿಕ್ಕಲು ಕಾರ್ಯತಂತ್ರ ರೂಪಿಸಿ, ಕಾರ್ಯಾಚರಣೆ ಆರಂಭಿಸಿದ್ದಾರೆ. ಕೋಮು ಆಧಾರಿತ ಹಿಂಸೆಯನ್ನು ಹತ್ತಿಕ್ಕಲು ಈ ಬಾರಿ ಪೊಲೀಸರು ದೃಢವಾದ ಹೆಜ್ಜೆಗಳನ್ನು ಇರಿಸಿದ್ದಾರೆ. ಪೊಲೀಸರ ಈ ನಡೆಯನ್ನು ಬೆಂಬಲಿಸಬೇಕಾದ ಜವಾಬ್ದಾರಿ ಸರ್ಕಾರ, ರಾಜಕೀಯ ಪಕ್ಷಗಳು ಮತ್ತು ಸಮಾಜದ ಮೇಲಿದೆ.

ಈ ವಿಚಾರದಲ್ಲಿ ಆರಂಭಿಕ ಹಂತದಲ್ಲಿ ರಾಜ್ಯ ಸರ್ಕಾರವು ಪೊಲೀಸರಿಗೆ ಮುಕ್ತವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದೆ ಎಂಬ ಮಾತು ಅಧಿಕಾರಿಗಳ ವಲಯದಲ್ಲಿ ಇದೆ. ಆದರೆ, ಪೊಲೀಸರ ಕಾರ್ಯಾಚರಣೆಗೆ ರಾಜಕೀಯ ಬಣ್ಣ ಬಳಿಯುವ ಪ್ರಯತ್ನವೂ ಕೆಲವರಿಂದ ಆರಂಭವಾಗಿದೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಕೂಡ ಆ ಗುಂಪಿನಲ್ಲಿ ಸೇರಿದ್ದಾರೆ. ಪೊಲೀಸರ ಕಾರ್ಯಾಚರಣೆಯನ್ನೇ ಶಂಕಿಸಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದಿದ್ದಾರೆ. ಹಿಂದುತ್ವ ಪರ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮವನ್ನೇ ಕೈಗೊಳ್ಳಬಾರದು ಎಂಬ ಧಾಟಿಯಲ್ಲಿ ಅವರ ಪತ್ರವಿದೆ. ಸಾಂವಿಧಾನಿಕ ಅಧಿಕಾರ ಹೊಂದಿರುವ ಶೋಭಾ ಅವರು ಕಾನೂನಿನ ಆಡಳಿತವನ್ನು ಬೆಂಬಲಿಸಬೇಕೇ ವಿನಾ ಧರ್ಮದ ಹೆಸರಿನಲ್ಲಿ ಸಂಘಟನೆಗಳನ್ನು ಕಟ್ಟಿಕೊಂಡು ಹಿಂಸಾಚಾರಕ್ಕೆ ಇಳಿಯುವವರನ್ನಲ್ಲ. ಪೊಲೀಸರು ಒಂದೇ ಧರ್ಮಕ್ಕೆ ಸೇರಿದವರ ವಿರುದ್ಧವಷ್ಟೇ ಕ್ರಮಕ್ಕೆ ಮುಂದಾಗಿಲ್ಲ ಎಂಬುದನ್ನು ದಾಖಲೆಗಳು ಹೇಳುತ್ತವೆ. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವವರನ್ನು ಧರ್ಮದ ಆಧಾರದಲ್ಲಿ ನೋಡುವುದು, ಧರ್ಮದ ನೆರಳಿನಲ್ಲಿ ರಕ್ಷಿಸುವುದು ಸಂವಿಧಾನಕ್ಕೆ ಅಪಚಾರ ಬಗೆಯುವ ಕೆಲಸ. ಕೋಮು ಹಿಂಸೆಯಲ್ಲಿ ನೇರವಾಗಿ ಭಾಗಿಯಾಗುವವರ ವಿರುದ್ಧವಷ್ಟೇ ಕ್ರಮ ಆದರೆ ಸಾಲದು. ತೆರೆಯ ಹಿಂದೆ ಕುಳಿತು ಪ್ರಚೋದನೆ ನೀಡುವ, ಕಾರ್ಯತಂತ್ರ ರೂಪಿಸುವ ಸೂತ್ರಧಾರರನ್ನೂ ಕಾನೂನಿನ ಅಡಿಯಲ್ಲಿ ಕ್ರಮಕ್ಕೆ ಒಳಪಡಿಸುವ ಕೆಲಸ ಆಗಬೇಕು. ಅವರು ಯಾವುದೇ ಸಂಘಟನೆ ಅಥವಾ ರಾಜಕೀಯ ಪಕ್ಷಗಳಲ್ಲಿ ಎಷ್ಟೇ ಪ್ರಭಾವಿಗಳಾಗಿದ್ದರೂ ಒತ್ತಡಕ್ಕೆ ಮಣಿಯದೇ ಕ್ರಮ ಜರುಗಿಸಬೇಕು. ರಾಜಕೀಯ ಲಾಭಕ್ಕಾಗಿ ಮತೀಯ ಹಿಂಸೆಯನ್ನು ಬೆಂಬಲಿಸುವವರು, ಅದನ್ನು ತಡೆಗಟ್ಟುವ ಪ್ರಯತ್ನಕ್ಕೆ ವಿರುದ್ಧವಾಗಿ ಕೆಲಸ ಮಾಡುವ ರಾಜಕಾರಣಿಗಳು ಮತ್ತು ಸಂಘಟನೆಗಳ ಮುಖಂಡರ ವಿರುದ್ಧವೂ ಕಾನೂನು ಕ್ರಮ ಜರುಗಿಸುವ ಬಲವಾದ ಇಚ್ಛಾಶಕ್ತಿಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು. ಆಗ ಕೋಮು ಹಿಂಸೆ ನಿಗ್ರಹಕ್ಕೆ ಪಣ ತೊಟ್ಟ ಪೊಲೀಸರ ಕೈಗಳು ಮತ್ತಷ್ಟು ಬಲಗೊಳ್ಳುತ್ತವೆ.

ದಿನದ ಟ್ವೀಟ್

ಘೋರ ದುರಂತ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತವು ಘೋರ ದುರಂತವಾಗಿದೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಿನ್ನೆ ನಿಮ್ಮೊಂದಿಗೆ ನಾವು ಸಂಭ್ರಮಿಸಿದ್ದೆವು; ಇಂದು ನಿಮ್ಮೊಂದಿಗೆ ನಾವು ಶೋಕದಲ್ಲಿದ್ದೇವೆ.

ಫಿಲ್ ಸಾಲ್ಟ್, ಆರ್‌ಸಿಬಿ ಆಟಗಾರ

ಕಿಡಿನುಡಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಗಲಭೆಗಳ ಪಾತ್ರಧಾರಿಗಳು ಮತ್ತು ಅವರ ಕುಟುಂಬದವರು ಬಡಪಾಯಿಗಳು. ಸೂತ್ರಧಾರಿಗಳು ಯಾರ ಕೈಗೂ ಸಿಗದೇ ತಪ್ಪಿಸಿಕೊಳ್ಳುತ್ತಾ ಇದ್ದಾರೆ. ಸೂತ್ರಧಾರಿಗಳ ಕೈಗೊಂಬೆಗಳಾದ ಪಾತ್ರಧಾರಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ

25 ವರ್ಷಗಳ ಹಿಂದೆ

ಮಂಗಳವಾರ, 6-6-2000

• **ಕುಡಿಯುವ ನೀರು ಪೂರೈಕೆ ಖಾಸಗೀಕರಣ ಶೀಘ್ರ: ಕೃಷ್ಣ**

ಬೆಂಗಳೂರು, ಜೂನ್ 5– ‘ಶೀಘ್ರವೇ ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆ ಹಾಗೂ ನಿರ್ವಹಣೆಯನ್ನು ಖಾಸಗೀಕರಿಸಲಾಗುವುದು’ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಪ್ರಕಟಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶ್ವ ಹೂಡಿಕೆದಾರರ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯಮಂತ್ರಿ, ‘ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯನ್ನು ಖಾಸಗೀಕರಿಸುವ ಪ್ರಕ್ರಿಯೆ ರಾಜ್ಯದಲ್ಲಿ ಭರದಿಂದ ನಡೆದಿದೆ. ಎರಡನೆಯ ಹಂತವಾಗಿ ನೀರಿನ ಪೂರೈಕೆ ಹಾಗೂ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗುವುದು. ಈ ಕೆಲಸವನ್ನು ಬೆಂಗಳೂರಿನಿಂದ ಆರಂಭಿಸಿ ಮೈಸೂರು, ಹುಬ್ಬಳ್ಳಿ ಮುಂತಾಗಿ ಜಿಲ್ಲಾ ಕೇಂದ್ರಗಳಿಗೆ ವಿಸ್ತರಿಸಲಾಗುವುದು’ ಎಂದು ಪ್ರಕಟಿಸಿದರು.

• **ಪಂಚಾಯಿತಿ ಚುನಾವಣೆ ಇಂದು ಮುಕ್ತಾಯ**

ಬೆಂಗಳೂರು, ಜೂನ್ 5– ರಾಜ್ಯದಲ್ಲಿ ನಾಳೆ ಉಳಿದ 11 ಜಿಲ್ಲಾ ಪಂಚಾಯಿತಿ ಮತ್ತು 76 ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯಲಿದ್ದು, ರಾಜ್ಯ ಚುನಾವಣಾ ಆಯೋಗವು ಸುಸೂತ್ರ ಮತದಾನಕ್ಕೆ ಸಕಲ ವ್ಯವಸ್ಥೆ ಮಾಡಿದೆ.

ರಾಜ್ಯದ ಪೂರ್ವ ಮತ್ತು ಮಧ್ಯ ಭಾಗದಲ್ಲಿನ ಕಲ್ಬುರ್ಗಿ, ವಿಜಾಪುರ, ಬಾಗಲಕೋಟೆ, ಹಾವೇರಿ, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಚುನಾವಣೆ ನಡೆಯಲಿದ್ದು ನಿನ್ನೆ ಸಂಜೆ ಚುನಾವಣಾ ಪ್ರಚಾರ ಅಂತ್ಯಗೊಂಡಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 6-6-1975

• **ಎಂಟು ವರ್ಷದ ನಂತರ ಸೂಯೆಜ್‌ನಲ್ಲಿ ಮತ್ತೆ ಸಂಚಾರ ಆರಂಭ**

ಪೋರ್ಟ್‌ಸೈಯದ್, ಜೂನ್ 5– ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದತ್ ಅವರು ಇಂದು ಅರಬ್- ಇಸ್ರೇಲ್ ಸಮರದ ಎಂಟನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಸೂಯೆಜ್ ಕಾಲುವೆಯನ್ನು ಔಪಚಾರಿಕವಾಗಿ ಮತ್ತೆ ತೆರೆದರು.

1967ರಲ್ಲಿ ಸಮರ ಆರಂಭ ಕಾಲದಲ್ಲಿ ಮುಚ್ಚಿದ ಈ ಜಲ ಮಾರ್ಗವು ‘ಶಾಂತಿಯ ಉಪನದಿ ಮತ್ತು ಜನತೆಯ ನಡುವೆ ಸಹಕಾರ ಮತ್ತು ಅಭಿವೃದ್ಧಿಯ ಕಾಲುವೆಯಾಗಿದೆ’ ಎಂದು ಸಾದತ್ ಅವರು ತಿಳಿಸಿದರು.

• **ಕಳ್ಳಬಟ್ಟಿ ಕುಡಿದು ಸತ್ತವರ ಸಂಖ್ಯೆ 25**

ಮದರಾಸ್, ಜೂನ್ 5– ಇಲ್ಲಿ ‘ಮಾರಕ ಪಾನೀಯ’ ವಾರ್ನಿಷ್ ಕುಡಿದು ಸತ್ತವರ ಸಂಖ್ಯೆ ಇಂದು 25ಕ್ಕೆ ಏರಿತು.

ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಇಂದು ಇನ್ನೂ 6 ಮಂದಿ ಸತ್ತರು. ವಿಷ ಮಿಶ್ರಿತ ವಾರ್ನಿಷ್ ಕುಡಿದ 50 ಮಂದಿಯನ್ನು ಮಂಗಳವಾರ ಆಸ್ಪತ್ರೆಗೆ ಸೇರಿಸಲಾಗಿತ್ತು.

‘ಆರ್.ಎಸ್. ಮಿಲ್ಲಿ’ ಎಂಬ ಹೆಸರಿನ ಕಳ್ಳಬಟ್ಟಿ ಮದ್ಯವನ್ನು ಆಂಧ್ರಪ್ರದೇಶದಿಂದ ಕಳ್ಳತನದಲ್ಲಿ ತರಲಾಗಿತ್ತು. ವಿಷಮಿಶ್ರಿತ ಪಾನೀಯ ಕುಡಿದ ಇನ್ನೂ 19 ಮಂದಿಯನ್ನು ಜನರಲ್ ಆಸ್ಪತ್ರೆಗೆ ಸೇರಿಸಲಾಗಿದೆ.

ಕಾರ್ಮಿಕ ಕಾಯ್ದೆಗಳ ತಿದ್ದುಪಡಿಯಿಂದ ಮಹಿಳಾ ಕಾರ್ಮಿಕರಿಗೆ ಬರೆ

ಮಹಿಳಾ ಹೋರಾಟ: ಬೆವರ ಸಂಕಥನ

ವಿಶ್ಲೇಷಣೆ

ದು. ಸರಸ್ವತಿ

ಸರ್ವರಿಗೂ ಸಮಾನತೆ, ಘನತೆಯನ್ನು ಖಾತರಿಪಡಿಸುವ ಸಂವಿಧಾನದ ಆಶಯಗಳನ್ನು ಈಡೇರಿಸುವ ಉದ್ದೇಶದಿಂದ ರೂಪುಗೊಂಡ ಕಾರ್ಮಿಕ ಕಾಯ್ದೆಗಳು ಪೂರ್ಣಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವ ಮೊದಲೇ ಅವುಗಳಿಗೆ ತಿದ್ದುಪಡಿ ತರಲು ಸರ್ಕಾರ ಹೊರಟಿದೆ. ಕಾಯ್ದೆಗಳನ್ನು ಮತ್ತಷ್ಟು ಮಾನವೀಯಗೊಳಿಸುವ ಬದಲಾಗಿ, ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತಂದು ನಾಲ್ಕು ಸಂಹಿತೆಗಳಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇದು ದುಡಿಯುವ ವರ್ಗವನ್ನು- ನಿರ್ದಿಷ್ಟವಾಗಿ ಮಹಿಳಾ ದುಡಿಮೆಗಾರರನ್ನು ಇನ್ನಷ್ಟು ದುಃಸ್ಥಿತಿಗೆ ತಳ್ಳಲಿದೆ. ಹೊಸ ಸಂಹಿತೆಯ ಭಾಗವಾಗಿ ರಾಜ್ಯ ಸರ್ಕಾರವು ರಾತ್ರಿ ಪಾಳಿಯಲ್ಲಿ ಮತ್ತು ಅಪಾಯಕಾರಿ ಉದ್ದಿಮೆಗಳಲ್ಲಿ ಮಹಿಳೆಯರು ದುಡಿಯುವುದನ್ನು ಕಡ್ಡಾಯಗೊಳಿಸಲು ಅನುವಾಗುವಂತೆ ಕಾರ್ಖಾನೆ ಕಾಯ್ದೆಗಳಿಗೆ ತಿದ್ದುಪಡಿ ತರಲು ಹೊರಟಿದೆ; ಮಹಿಳೆಯರಿಗೆ ಕನಿಷ್ಠ ವೇತನದಲ್ಲಿ ಅಪಾರ ತಾರತಮ್ಯವನ್ನು ಸೃಷ್ಟಿಸಲು ಮುಂದಾಗಿದೆ.

ದುಡಿಯುವ ಮಹಿಳೆಯರಿಗೆ ಸುರಕ್ಷತೆ, ಸೌಕರ್ಯಗಳು ಇಲ್ಲದ ಸ್ಥಿತಿಯಲ್ಲಿ ಕಾರ್ಮಿಕರಿಂದ ಮತ್ತಷ್ಟು ಬೆವರು ಹರಿಸುವ ಲಾಭಕೋರತನವನ್ನು ಪ್ರೋತ್ಸಾಹಿಸಲು ‘ಕಾರ್ಮಿಕ ಸಂಹಿತೆ’ ಮುಂದಾಗಿದೆ. ಇದನ್ನು ವಿರೋಧಿಸಲು ದುಡಿಯುವ ಮಹಿಳೆಯರೆಲ್ಲರೂ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯಡಿ (ಜೆಸಿಟಿಯು) ಒಗ್ಗೂಡಿರುವುದು ಮಹತ್ವದ ಬೆಳವಣಿಗೆಯಾಗಿದೆ. ಈ ಒಗ್ಗೂಡುವಿಕೆಯ ಭಾಗವಾಗಿ ಗಾರ್ಮೆಂಟ್ಸ್, ಫ್ಯಾಕ್ಟರಿ, ತೋಟಗಾರಿಕೆ, ಗ್ರಂಥಾಲಯ, ಟೋಲ್, ಆಟೊಮೊಬೈಲ್, ನಗರ ಸಾರಿಗೆ, ರೈಲುಗಳ ಚಾಲನೆ, ನಗರ ಸ್ವಚ್ಛತೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರು ಮೇ 15ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದರು. ಈ ಸಭೆಯು ಮೂಲ ಸೌಕರ್ಯಗಳೂ ಇಲ್ಲದ ಪರಿಸರದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಪರಿಹಾರೋಪಾಯ ಶೋಧಿಸಲು ವೇದಿಕೆಯಾಯಿತು.

ಕಾರ್ಮಿಕ ಮಹಿಳೆಯರು ಎದುರಿಸುತ್ತಿರುವ ಸಂಕಟಗಳು ಒಂದೆರಡು ಬಗೆಯವಲ್ಲ. ಗಾರ್ಮೆಂಟ್ಸ್‌ನಲ್ಲಿ ಸೂಜಿ ಮೊನೆಯನ್ನು ದಿಟ್ಟಿಸಿಕೊಂಡೇ ಕೆಲಸ ಮಾಡಬೇಕು, ಎಚ್ಚರ ತಪ್ಪಿದರೆ ಬೆರಳು ಸೂಜಿಯಡಿಗೆ ಸಿಕ್ಕಿಕೊಳ್ಳುತ್ತದೆ. ಕೆಲಸದ ನಡುವೆ ಶೌಚಕ್ಕೆ ಹೋಗುವಂತಿಲ್ಲ. ಟೋಲ್‌ನಲ್ಲಿ 2-3 ಬೂತ್‌ಗಳ ಕಟ್ಟೆಗಳನ್ನು ದಾಟಿಕೊಂಡು ಓಡಾಡಬೇಕಾದುದರಿಂದ ಕಾಲುಗಳಿಗೆ ಅಸಾಧ್ಯ ನೋವುಂಟಾಗುತ್ತದೆ. ಸ್ವಚ್ಛತೆಯ ಕೆಲಸ ಮಾಡುವವರು ಆಸ್ಪತ್ರೆ ತ್ಯಾಜ್ಯ, ಗಾಜು, ಚೂಪಾದ ವಸ್ತುಗಳು, ನ್ಯಾಪ್‌ಕಿನ್, ಡೈಪರ್‌ನಂತಹ ಅಪಾಯಕಾರಿ ಕಸವನ್ನು ಸುರಕ್ಷತಾ ಸಲಕರಣೆಗಳಿಲ್ಲದೆ ಸಂಗ್ರಹಿಸಿ ವಿಲೇವಾರಿ ಮಾಡಬೇಕಾಗಿದೆ.

ಲೋಗೊ, ಸ್ಟಿಕ್ಕರ್ ಉತ್ಪಾದಿಸುವ ಫ್ಯಾಕ್ಟರಿಗಳಲ್ಲಿ 12 ಗಂಟೆ ನಿಂತೇ ಕೆಲಸ ಮಾಡಬೇಕು. ಜೀನ್ಸ್ ಫ್ಯಾಕ್ಟರಿಯಲ್ಲಿ 8 ಗಂಟೆ ಚಕ್ಕಂಬಕ್ಕಳ ಕೂತು ಕೆಲಸ ಮಾಡುವುದು ಅಗತ್ಯ. ಮಹಿಳಾ ಕಾರ್ಮಿಕರನ್ನು ಕೆಲಸದ ಸ್ಥಳಕ್ಕೆ ಕರೆತರುವ ಸಾರಿಗೆ ವ್ಯವಸ್ಥೆಯೂ ಅಸಮರ್ಪಕವಾಗಿದೆ. 25 ಜನ ಕೂರಬಹುದಾದ ಬಸ್ಸಿನಲ್ಲಿ 50 ಜನರನ್ನು ತುರುಕುವುದಿದೆ.

ತೋಟಗಳಲ್ಲಿ ದುಡಿಯುವವರು, 20 ಲೀಟರ್ ಔಷಧ ಇರುವ ಎರಡು ಬ್ಯಾರೆಲ್‌ಗಳನ್ನು ಬೆನ್ನ ಮೇಲೆ ಹೊತ್ತು ಕಾಫಿ ಗಿಡಗಳ ಸಾಲಿಗೆ ಸ್ಪ್ರೇ ಮಾಡುವ ಸ್ಥಿತಿಯಿದೆ. ಕಾಟಿ, ಆನೆ, ಹಾವು, ಕಾಡುಹಂದಿಗಳಿಂದ ಅಪಾಯವಿದ್ದರೂ ಕೆಲಸ ಮಾಡಬೇಕು.

ರೈಲಿನ ಚಾಲಕಿಯರಿಗೂ ಸಮಸ್ಯೆಗಳು ತಪ್ಪಿದ್ದಲ್ಲ. 10 ಗಂಟೆಗಳ ಕೆಲಸ. ಸರಿಯಾದ ಶೌಚಾಲಯದ ವ್ಯವಸ್ಥೆ ಇಲ್ಲ. ಮೂತ್ರವನ್ನು ತಡೆದುಕೊಳ್ಳುವುದರಿಂದ ಮೂತ್ರದ ಸೋಂಕು ಸಾಮಾನ್ಯ. ಮುಟ್ಟಿನ ಸಂದರ್ಭದಲ್ಲಿ ಪ್ಯಾಡ್ ಅನ್ನು ದೀರ್ಘಕಾಲ ಬಳಸುವುದರಿಂದ ತೊಂದರೆ ಯಾಗುತ್ತದೆ. ಸದಾ ನಿಂತು ಕೆಲಸ ಮಾಡುವುದರಿಂದ ಗರ್ಭಪಾತವಾಗುವ ಸಂಭವವಿದೆ. ಹಾಲು ಕುಡಿಯುವ ಹಸುಗೂಸಿನ ಪಾಲನೆಗಾಗಿ ಎರಡು ತಿಂಗಳ ಕಾಲ ಹೆಚ್ಚಿನ ಸಮಯದ ಕೆಲಸ ಕೊಡಬೇಡಿ ಎಂದು ಕೇಳಿಕೊಂಡವರಿಗೆ, ಮಗುವಿನ ನೆಪದಲ್ಲಿ ಕೆಲಸ ತಪ್ಪಿಸಿಕೊಳ್ಳುತ್ತಾರೆಂದು ಟೀಕೆ.

ನಗರ ಸಾರಿಗೆಯಲ್ಲಿನ ನಿರ್ವಾಹಕಿಯರು, ಪ್ರತಿದಿನ ಸುಮಾರು 1,000 ಜನರೊಂದಿಗೆ ಒಡನಾಡಬೇಕು. ಕಂಡಕ್ಟರ್ ಕೆಲಸ, ಶೌಚಕ್ಕೂ ಪುರಸತ್ತು ದೊರೆಯದಷ್ಟು ಒತ್ತಡದ್ದು. ನೀರು ಸರಿಯಾಗಿ ಕುಡಿಯದಿರುವುದರಿಂದಾಗಿ ಕೆಲವು ಚಾಲಕಿಯರು ಕಿಡ್ನಿ ಸ್ಟೋನ್ ಸಮಸ್ಯೆ ಎದುರಿಸುತ್ತಿದ್ದಾರೆ. ಮಹಿಳೆಯರು ದುಡಿಯುವ ಬಹುತೇಕ ಕಡೆಗಳಲ್ಲಿ ಅಸಮರ್ಪಕ ಶೌಚಾಲಯ ವ್ಯವಸ್ಥೆಯಿದ್ದರೆ, ಕೆಲವು ಸ್ಥಳಗಳಲ್ಲಿ ಶೌಚಾಲಯಗಳೇ ಇಲ್ಲ. ದೇಹಬಾಧೆ ತೀರಿಸಿಕೊಳ್ಳಲು ಖಾಲಿ ನಿವೇಶನ ಹುಡುಕಿ ಹೋಗುವ ಅಥವಾ ಮರ- ಗಿಡಗಳು, ವಾಹನಗಳ ಮರೆಯಲ್ಲಿ ನಿರಾಳವಾಗುವ ದುರವಸ್ಥೆ ಕೆಲವರದು. ಐವತ್ತಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದರೂ ಶೌಚಾಲಯ ಇಲ್ಲದ ಫ್ಯಾಕ್ಟರಿಯೂ ಇದೆ.

ಕೆಲವು ಕಾರ್ಖಾನೆಗಳು ವಿಚಿತ್ರ ನಿಯಮಗಳನ್ನು ರೂಪಿಸಿಕೊಂಡಿರುತ್ತವೆ. ದೇಹದ ತೂಕ 40 ಕೆ.ಜಿ.ಗಿಂತ ಹೆಚ್ಚಿದ್ದರೆ ಕೆಲಸಕ್ಕೆ ತೆಗೆದುಕೊಳ್ಳದ ನಿಯಮ ಫ್ಯಾಕ್ಟರಿಯೊಂದರಲ್ಲಿತ್ತು. ವಿವಾಹಿತರನ್ನು ಉದ್ಯೋಗಕ್ಕೆ ತೆಗೆದುಕೊಳ್ಳದ ಫ್ಯಾಕ್ಟರಿಗಳೂ ಇದ್ದವು. ಶೌಚಕ್ಕೆ ಹೋಗಬೇಕೆಂದರೆ, ರಿಜಿಸ್ಟರ್‌ನಲ್ಲಿ ಬರೆದು ಸಹಿ ಮಾಡಿ ಹೋಗುವ ಪದ್ಧತಿಯೂ ಕೆಲವೆಡೆ ಇದೆ.

ಆಶಾ ಕಾರ್ಯಕರ್ತೆಯರ ಪರಿಸ್ಥಿತಿಯೂ ಉತ್ತಮವಾಗಿಲ್ಲ. ಅವರಿಗೆ ಸಿಗುವ ವೇತನ, ಪ್ರೋತ್ಸಾಹಧನ ಕಡಿಮೆ. ಸೊಳ್ಳೆ ಲಾರ್ವಾ ಸಮೀಕ್ಷೆಗಾಗಿ ಮನೆಯೊಂದರ ಬಾತ್ ರೂಮಿನಿಂದ ಹಿಡಿದು ಟ್ಯಾಂಕ್‌ವರೆಗೂ ಪರಿಶೀಲಿಸಿದರೆ ₹1 ಪ್ರೋತ್ಸಾಹಧನ ದೊರೆಯುತ್ತದೆ. ಕುಟುಂಬದ ಸದಸ್ಯರೆಲ್ಲರೂ ರಜೆಯ ದಿನದಂದು ಸಿಗುವುದರಿಂದ, ರಜೆ ದಿನಗಳಲ್ಲಿ ಮನೆ ಮನೆಗೆ ಹೋಗಿ ಅವರ ಅನಾರೋಗ್ಯದ ವಿವರಗಳನ್ನು ದಾಖಲಿಸಬೇಕಾಗಿದೆ.

ರಾತ್ರಿ ಪಾಳಿಯಿಂದ ನಿದ್ದೆ ಏರುಪೇರಾಗಿ ಮಹಿಳೆಯರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುವುದಿದೆ; ಪಿಸಿಓಡಿ (Poly-cystic Ovarian Disease) ಸಮಸ್ಯೆ ಸಾಮಾನ್ಯ ಎನ್ನುವಂತಾಗಿದೆ. ಗರ್ಭಕೋಶದ ಸಮಸ್ಯೆಗಳು ಕೆಲವರಲ್ಲಿ ಕಾಣಿಸಿಕೊಳ್ಳುತ್ತಿವೆ. ಮನಃಶಾಸ್ತ್ರಜ್ಞರ ಪ್ರಕಾರ, ರಾತ್ರಿ ಪಾಳಿಯಲ್ಲಿ ನಿದ್ದೆಗೆಡುವುದರಿಂದಾಗಿ ಹಾರ್ಮೋನ್‌ಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ; ಇದು ಮಹಿಳೆಯರ ಒಟ್ಟಾರೆ ಆರೋಗ್ಯದ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಪ್ರಜನನ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಹಾನಿಯಾಗುತ್ತದೆ. ದುಡಿಮೆಗೆ ಮೆಚ್ಚುಗೆಯ ಬದಲು ಟೀಕೆ, ಬೈಗುಳಗಳೇ ಹೆಚ್ಚಾದಾಗ ಮಹಿಳೆಯರಲ್ಲಿ ಖಿನ್ನತೆ, ಭೀತಿ, ಕಿರಿಕಿರಿ, ಸಿಡುಕು ಹೆಚ್ಚಾಗುತ್ತದೆ; ಆತ್ಮಹತ್ಯೆಯ ಯೋಚನೆಯನ್ನೂ ಕೆಲವರು ಮಾಡಬಹುದು.

ಉದ್ಯೋಗ, ವೇತನ ಹಾಗೂ ಸಾಮಾಜಿಕ ಭದ್ರತೆ ಇಲ್ಲದ ಅಸಂಘಟಿತ ಕ್ಷೇತ್ರದಲ್ಲಿ ಶೇ 94ರಷ್ಟು ಮಹಿಳೆಯರು ದುಡಿಯುತ್ತಿರುವುದು ಸಮಸ್ಯೆಯ ಬೃಹತ್ ಸ್ವರೂಪವನ್ನು ಸೂಚಿಸುವಂತಿದೆ. ಶೇ 6ರಷ್ಟು ಮಹಿಳೆಯರಷ್ಟೇ ಸುರಕ್ಷಿತ- ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) ಅಂಕಿ-ಅಂಶಗಳ ಪ್ರಕಾರ, 2020ರಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳ ಸಂಖ್ಯೆ 3,71,503. ಈ ಪ್ರಮಾಣ 2021ರಲ್ಲಿ 4,28,278 ಹಾಗೂ 2022ರಲ್ಲಿ 4,45,256 ಇತ್ತು. ದಮನ ಮತ್ತು ತಾರತಮ್ಯವನ್ನೇ ತಂತ್ರವಾಗಿಸಿಕೊಂಡಿರುವ ಪಿತೃ ಸಂಸ್ಕೃತಿಯ ಆಳ್ವಿಕೆ ಮನೆಯ ಒಳಗೂ ಹೊರಗೂ ಜಾರಿಯಲ್ಲಿರುವುದನ್ನು ಮಹಿಳೆಯರ ಮೇಲಿನ ದೌರ್ಜನ್ಯಗಳ ಹೆಚ್ಚಳ ಸೂಚಿಸುವಂತಿದೆ.

ಒಳಗೂ ಹೊರಗೂ ಸಮಸ್ಯೆಗಳ ಚಕ್ರವ್ಯೂಹದಲ್ಲಿ ಸಿಲುಕಿದ್ದರೂ ಘನತೆಯ ಬದುಕಿಗಾಗಿ ಮಹಿಳಾ ನೌಕರರು ನಿರಂತರವಾಗಿ ಹೋರಾಡುತ್ತಿದ್ದಾರೆ. ಭವಿಷ್ಯ ನಿಧಿ (ಪಿ.ಎಫ್) ಆಪದ್ಧನಕ್ಕೆ ಸರ್ಕಾರ ಕೈಯಿಕ್ಕಿದಾಗ ಉಕ್ಕಿ ಹರಿದ ಗಾರ್ಮೆಂಟ್ಸ್ ಮಹಿಳೆಯರ ಆಕ್ರೋಶ ಈ ದೇಶದ ಕಾರ್ಮಿಕ ಚಳವಳಿಯ ಉಜ್ವಲ ಅಧ್ಯಾಯ. ಇಪ್ಪತ್ತು ವರ್ಷಗಳ ಕಾಲ ಹೋರಾಡಿ ಉದ್ಯೋಗ ಕಾಯಂ ಮಾಡಿಕೊಂಡ ಪೌರಕಾರ್ಮಿಕ ಮಹಿಳೆಯರು, ಹತ್ತು ದಿನಗಳು ಬೀದಿಯಲ್ಲಿ ಹೋರಾಡಿದ ಅಂಗನವಾಡಿ ಕಾರ್ಯಕರ್ತೆಯರು, ಡಿಸೆಂಬರ್ ಚಳಿಯಲ್ಲೂ ಆಶಾ ಕಾರ್ಯಕರ್ತೆಯರು ನಡೆಸಿದ ನಾಲ್ಕು ದಿನಗಳ ಹೋರಾಟ- ಇವೆಲ್ಲವೂ ಮಹಿಳಾ ಕಾರ್ಮಿಕರ ಹೋರಾಟದ ಚೈತನ್ಯಕ್ಕೆ ಸಾಕ್ಷಿ.

ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತಂದು ನಾಲ್ಕು ಸಂಹಿತೆಗಳಾಗಿ ಜಾರಿಗೊಳಿಸುವ ಪ್ರಯತ್ನದ ವಿರುದ್ಧ ಮಹಿಳಾ ಕಾರ್ಮಿಕರು ಪ್ರಸ್ತುತ ಧ್ವನಿ ಎತ್ತಿರುವುದು, ಒಗ್ಗೂಡಿರುವುದು ಒಂದು ಐತಿಹಾಸಿಕ ಹೆಜ್ಜೆಯಾಗಿದೆ. ಇಂತಹ ನಡೆಗಳು ಕಾರ್ಮಿಕ ಸಂಘಟನೆಗಳ ಚಳವಳಿಗೆ ಹೊಸದಿಕ್ಕು ನೀಡಬಲ್ಲವು.

ಚುರುಮುರಿ



ಸುದ್ದಿ, ಗದ್ಲ!

• ಬಿ.ಎನ್. ಮಲ್ಲೇಶ್

‘**ಕೋಡಗನ** ಕೋಳಿ ನುಂಗಿತ್ತಾ ನೋಡವ್ವ ತಂಗಿ, ಉಗ್ರರನ್ನ ಯುದ್ಧ ನುಂಗಿ, ಯುದ್ಧಾನ ತಮನ್ನಾ ನುಂಗಿ, ತಮನ್ನಾನ ಬುಕರ್ ನುಂಗಿ, ಆಡಲು ಬಂದ ಕಮಲ್‌ನನ್ನ ಆರ್‌ಸಿಬಿ ನುಂಗಿತ್ತಾ ತಂಗಿ...’ ಹರಟೆ ಕಟ್ಟೆಗೆ ಹಾಡುತ್ತಾ ಬಂದ ಗುಡ್ಡೆ.

‘ಏನೋ ಗುಡ್ಡೆ, ಯಾವುದೋ ಹೊಸ ಹಾಡು ಹೊಸದಂಗೈತಿ?’ ಚಾದಂಗಡಿ ಮಂಜಮ್ಮ ಕೇಳಿದಳು.

‘ಸುಮ್ನೆ ತಮಾಷೆಗೆ ಮಂಜಮ್ಮ, ಒಂದು ಹೊಸ ಸುದ್ದಿ ಬರ್ತಿದ್ದಂಗೆ ಹಳೇದು ಹೆಂಗೆ ಮರೆತೋಗುತ್ತೆ ಅಂತ. ಮೊನ್ನೆ ಮೊನ್ನೇದು ಮಳೆ ಅವಾಂತರ, ಜಾತಿ ಜನಗಣತಿ ಗದ್ಲ ಎಲ್ಲ ಮರೆತೇ ಹೋತು ನೋಡು...’ ಗುಡ್ಡೆ ನಕ್ಕ.

‘ನೆನಪು ಮಾಡಾಕೆ ನಮ್ ತೆಪರನ ಟೀವಿ ಐತಲ್ಲ ಬಿಡೋ, ನಾವ್ ಬ್ಯಾಡ ಅಂದ್ರೂ ಅವರೇನ್ ಸುಮ್ನಿರ್ತಾರಾ?’

‘ಮರೀಬೇಕು ಮಂಜಮ್ಮ, ಮರೆವು ವರ ಇದ್ದಂಗೆ. ಹಳೇವೆಲ್ಲ ಹಂಗೇ ನೆನಪಿದ್ರೆ ನಮ್ ತೆಲಿ ಢಮಾರ್ ಅಷ್ಟೇ...’ ದುಬ್ಬೀರ ಹೇಳಿದ.

‘ಕರೆಕ್ಟ್ ದುಬ್ಬೀರ, ನನ್ ಉದ್ರಿ ಬಾಕಿನೂ ಹಂಗೇ ಮರೀಬೇಕು ಮಂಜಮ್ಮ, ನೆನಪಿಟ್ಕಂಡು ಕೊರಗಬಾರ್ದು...’ ಗುಡ್ಡೆ ನಗುತ್ತಾ ಹೇಳಿದಾಗ, ‘ಅದೆಲ್ಲ ನನ್ನತ್ರ ನಡೆಯಲ್ಲ, ಕಂಬಕ್ಕೆ ಕಟ್ಟಿ ವಸೂಲಿ ಮಾಡ್ತೀನಿ...’ ಮಂಜಮ್ಮ ಗರಂ ಆದಳು.

‘ಹೋಗ್ಲಿ ಬಿಡು, ಈಗ ಈ ಭಾಷೆ ಗದ್ಲ ಎಲ್ಲಿಗೆ ಬಂತೋ ತೆಪರ?’ ಗುಡ್ಡೆ ಕೇಳಿದ. ತೆಪರೇಸಿ ಮಾತಾಡಲಿಲ್ಲ.

‘ಅವ್ನು ಮಾತಾಡಲ್ಲ ಬಿಡೋ...’ ಎಂದ ದುಬ್ಬೀರ.

‘ಯಾಕೆ?’

‘ಮೊನ್ನೆ ಆರ್‌ಸಿಬಿ ವಿಜಯೋತ್ಸವ ನೋಡ್ಕಂಡು ಕಪ್ ನಮ್ದೇ, ಕಪ್ ನಮ್ದೇ ಅಂತ ಕುಣ್ಕೋತ ಮನಿಗೆ ಬಂದ್ನಂತೆ. ಅವನೆಂಡ್ತಿ ಪಮ್ಮಿ ಕಪಾಳಕ್ಕೊಂದು ಬಿಗಿದು, ‘ಕಪ್ ಒಂದೇ ಅಲ್ಲ, ಈ ತಟ್ಟೆ, ಚೊಂಬು, ಪಾತ್ರೆ ಎಲ್ಲ ನಿಮ್ದೇ, ಚೆನ್ನಾಗಿ ತೊಳೆದಿಡಿ’ ಅಂದ್ಲಂತೆ!’

ದುಬ್ಬೀರನ ಮಾತು ಕೇಳಿ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಪ್ರವಾಸ: ಮೈ ಮರೆವು, ನಿರ್ಲಕ್ಷ್ಯ ಸಲ್ಲ

ಉಡಾಫೆ ಅಥವಾ ನಿರ್ಲಕ್ಷ್ಯ ಸಾವಿನಲ್ಲಿ ಕೊನೆಗೊಳ್ಳಬಹುದು

• ದೀಪಾ ಹಿರೇಗುತ್ತಿ

ಮಧ್ಯಪ್ರದೇಶದ ರಾಜಾ ರಘುವಂಶಿ ಹಾಗೂ ಸೋನಮ್ ದಂಪತಿ ಇತ್ತೀಚೆಗೆ ಮೇಘಾಲಯದಲ್ಲಿ ನಾಪತ್ತೆಯಾಗಿದ್ದರು. ಅವರಲ್ಲಿ, ರಾಜಾ ರಘುವಂಶಿ ಅವರ ಮೃತದೇಹ ಕಿರು ಕಣಿವೆಯೊಂದರಲ್ಲಿ ಪತ್ತೆಯಾಗಿದೆ. ಸೋನಮ್‌ಗಾಗಿ ಹುಡುಕಾಟ ಮುಂದುವರಿದಿದೆ.

ಇತ್ತೀಚೆಗಷ್ಟೇ ಮದುವೆಯಾಗಿದ್ದ ಈ ಜೋಡಿ, ಮಧುಚಂದ್ರಕ್ಕೆಂದು ಈಶಾನ್ಯ ರಾಜ್ಯಗಳಿಗೆ ಮೇ 20ರಂದು ಬಂದಿತ್ತು. ಬೈಕ್ ಬಾಡಿಗೆಗೆ ಪಡೆದು ತಿರುಗಾಡುತ್ತ, ಮೇಘಾಲಯದ ಪ್ರಕೃತಿ ಸೌಂದರ್ಯವನ್ನು ಸವಿಯುವ ಆಸೆಯಿಂದ ಟ್ರೆಕ್ಕಿಂಗ್ ಹೊರಟಿದ್ದರು. ಚಿರಾಪುಂಜಿ ತಲುಪುವವರೆಗೆ ಕುಟುಂಬದ ಸಂಪರ್ಕದಲ್ಲಿದ್ದರು. ಅದಾದ ಮೇಲೆ, ಅಂದರೆ ಮೇ 23ರಿಂದ ನವದಂಪತಿಯ ಸಂಪರ್ಕ ಕುಟುಂಬದವರಿಗೆ ಸಿಕ್ಕಿರಲಿಲ್ಲ. ಕುಟುಂಬದವರು ಮಾಹಿತಿದಾರರಿಗೆ ₹5 ಲಕ್ಷ ಬಹುಮಾನವನ್ನೂ ಘೋಷಿಸಿದ್ದರು. ದುರದೃಷ್ಟವಶಾತ್ ಈಗ ಪತಿ ಶವವಾಗಿ ಸಿಕ್ಕರೆ, ಪತ್ನಿ ಇನ್ನೂ ಪತ್ತೆಯಾಗಿಲ್ಲ. ಇಂತಹ ಘಟನೆಗಳು ಪದೇ ಪದೇ ವರದಿಯಾಗುತ್ತಿರುವುದು ಕಳವಳಕಾರಿ.

ಇತ್ತೀಚಿನ ವರ್ಷಗಳಲ್ಲಿ ಪ್ರವಾಸದ ಹವ್ಯಾಸ ಜನರಲ್ಲಿ ಹೆಚ್ಚುತ್ತಿದೆ. ಟ್ರೆಕ್ಕಿಂಗ್ ಎನ್ನುವುದು ಈಗ ಜನಪ್ರಿಯ ಹವ್ಯಾಸ. ಅದೊಂದು ಫ್ಯಾಷನ್ ಆಗಿಯೂ ಮಾರ್ಪಡುತ್ತಿದೆ. ಕೆಲವರು ಬೇರೆ ಬೇರೆ ರಾಜ್ಯಗಳಿಗೆ ಟ್ರೆಕ್ಕಿಂಗ್ ಹೋಗಿ ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ- ವಿವರಗಳನ್ನು ಹಾಕುತ್ತಿದ್ದಾರೆ. ಆ ಮಾಹಿತಿ ನೋಡಿ ಟ್ರೆಕ್ಕಿಂಗ್ ಬಗ್ಗೆ ಏನೂ ತಿಳಿಯದ ಕೆಲವರು ಚಾರಣದ ಸಾಹಸಕ್ಕೆ ಮುಂದಾಗುತ್ತಿದ್ದಾರೆ.

ಮುನ್ನೆಚ್ಚರಿಕೆ ತೆಗೆದುಕೊಂಡು, ಸ್ಥಳೀಯರ ಸಹಾಯ ಪಡೆದು ಮುಂದುವರಿದರೆ ತೊಂದರೆಯಿಲ್ಲ. ಆದರೆ, ಬಹುತೇಕರು ತಮ್ಮಷ್ಟಕ್ಕೆ ತಾವೇ ಟ್ರೆಕ್ಕಿಂಗ್ ಹೊರಡುತ್ತಾರೆ. ಎಂಜಿನಿಯರಿಂಗ್, ವೈದ್ಯಕೀಯದಂತಹ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಂತೂ ವಾರಾಂತ್ಯದಲ್ಲಿ ಗುಂಪಾಗಿ ಪ್ರವಾಸ ಹೋಗುತ್ತಾರೆ. ಬಹುತೇಕ ಮಂದಿಯ ಆಯ್ಕೆ ನೀರಿರುವ ಸ್ಥಳಗಳು ಮತ್ತು ಗುಡ್ಡಗಾಡು ಪ್ರದೇಶಗಳು. ಅವರು ಎಲ್ಲಿಗೆ ಹೋಗುತ್ತಾರೆ ಎಂಬ ಸಣ್ಣ ಸುಳಿವೂ ಕುಟುಂಬದವರಿಗೆ ಇರುವುದಿಲ್ಲ. ಬೇಡ ಎನ್ನುತ್ತಾರೆಂಬ ಕಾರಣಕ್ಕೆ ಮನೆಯವರಿಂದ ವಿಚಾರ ಮುಚ್ಚಿಡುತ್ತಾರೆ.

ಪ್ರತಿ ವರ್ಷವೂ ಅದೆಷ್ಟೋ ಯುವಕ, ಯುವತಿಯರು ನೀರುಪಾಲಾಗುತ್ತಾರೆ. ಟ್ರೆಕ್ಕಿಂಗ್‌ನಲ್ಲಿ ಅದೆಷ್ಟೋ ಮಂದಿ ಮೃತಪಟ್ಟಿದ್ದಾರೆ, ದಾರಿ ತಪ್ಪಿಸಿಕೊಂಡು ಒದ್ದಾಡಿದ್ದಾರೆ. ದುರಂತದ ಸುದ್ದಿಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇರುತ್ತವೆ.

ಗೊತ್ತಿರದ ಜಾಗಕ್ಕೆ ಪ್ರವಾಸ ಹೋಗುವಾಗ ಮುನ್ನೆಚ್ಚರಿಕೆಯ ಕ್ರಮಗಳು ಮುಖ್ಯ. ಪರ್ವತಗಳ ಹವಾಮಾನದ ಬಗ್ಗೆ ಏನೇನೂ ಗೊತ್ತಿಲ್ಲದಿದ್ದರೂ ಕೆಲವರು ಚಾರಣಕ್ಕೆ ಹೊರಟುಬಿಡುತ್ತಾರೆ. ಹೋಗುವ ಜಾಗದ ಭೌಗೋಳಿಕ ಪರಿಸರದ ಅರಿವು ಬಹಳ ಮುಖ್ಯ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಕಳೆದ ವರ್ಷ ಉತ್ತರಾಖಂಡಕ್ಕೆ ಟ್ರೆಕ್ಕಿಂಗ್ ಹೋಗಿದ್ದ ಕರ್ನಾಟಕದ ಇಪ್ಪತ್ತೆರಡು ಮಂದಿಯಲ್ಲಿ ಒಂಬತ್ತು ಮಂದಿ ಹಿಮಪಾತಕ್ಕೆ ಬಲಿಯಾಗಿದ್ದರು. ಅವರೆಲ್ಲರೂ ಮಧ್ಯವಯಸ್ಕರು. ಪರ್ವತದ ತುದಿಯಲ್ಲಿ ಅವರ ಜತೆ ಗೈಡ್‌ಗಳು ಇರಲಿಲ್ಲ. ಆ ದುರಂತಕ್ಕೆ ನಿರ್ಲಕ್ಷ್ಯವೇ ಕಾರಣ ಎಂದು ಉತ್ತರಕಾಶಿಯ ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದರು. ಹಿಮಪಾತವಾದಾಗ ದೊಡ್ಡದೊಂದು ಬಂಡೆಯ ಕೆಳಗೆ ಅವರು ಆಶ್ರಯ ಪಡೆದಿದ್ದರು. ಆದರೆ, ದಣಿವು, ದೇಹದ ಉಷ್ಣತೆಯ ಕುಸಿತ ಮತ್ತು ಆಮ್ಲಜನಕದ ಕೊರತೆಯಿಂದ ಒಂಬತ್ತು ಮಂದಿ ಮೃತಪಟ್ಟಿದ್ದರು. ದುರ್ಗಮ ವಾತಾವರಣದಲ್ಲೂ ಬಚಾವಾದ ಹದಿಮೂರು ಮಂದಿ, ತಮ್ಮ ಸ್ನೇಹಿತರ ಶವಗಳೊಂದಿಗೇ ಒಂದೂವರೆ ದಿನ ಕಳೆದಿದ್ದರು!

ಅಷ್ಟು ದೂರ ಏಕೆ, ಕೆಲವು ವರ್ಷಗಳ ಹಿಂದೆ ಇದೇ ನಮ್ಮ ಕೊಪ್ಪ- ಶೃಂಗೇರಿ ರಸ್ತೆಯಲ್ಲಿ ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ದೊಡ್ಡ ಕುಟುಂಬವೊಂದು ದುರಂತ ಎದುರಿಸಿತ್ತು. ಮೊಮ್ಮಗುವನ್ನು ಎತ್ತಿಕೊಂಡು ಹಿರಿಯರೊಬ್ಬರು ಬಸ್‌ನಲ್ಲಿ ಮತ್ತೊಂದು ಕಡೆ ಕೂರಲು ಪ್ರಯತ್ನಿಸುತ್ತಿದ್ದರು. ಕಡಿದಾದ ತಿರುವೊಂದರಲ್ಲಿ ಬಸ್ ತಿರುಗಿದಾಗ ಆಯತಪ್ಪಿ ತೆರೆದೇ ಇದ್ದ ಬಾಗಿಲಿಂದ ಕೆಳಗೆ ಬಿದ್ದು, ಸ್ಥಳದಲ್ಲೇ ಮೃತಪಟ್ಟರು. ಅಜ್ಜ ತಬ್ಬಿ ಹಿಡಿದಿದ್ದ ಕಾರಣ ಮಗು ಬಚಾವಾಯಿತು. ಇಷ್ಟೆಲ್ಲ ದುರಂತಗಳು ನಡೆದರೂ ತಮಗೇನೂ ಆಗದು ಎಂಬ ಹುಂಬತನವೇ ಸಾವುಗಳಿಗೆ ಕಾರಣ.



ಯಾವುದೇ ಪ್ರವಾಸ ಕೈಗೊಳ್ಳುವಾಗ ಸೂಕ್ತ ತಯಾರಿ ಅತ್ಯಗತ್ಯ. ಹೋಗುವುದಕ್ಕೂ ಮುನ್ನ ಅಲ್ಲಿನ ಹವಾಮಾನದ ಪರಿಸ್ಥಿತಿ ಹೇಗಿದೆ? ಹವಾಮಾನ ಇಲಾಖೆಯಿಂದ ಅಪಾಯದ ಮುನ್ನೆಚ್ಚರಿಕೆ ಏನಾದರೂ ಬಂದಿದೆಯೇ ಎಂಬುದನ್ನು ಗಮನಿಸಬೇಕು. ಚಳಿಯಿದ್ದರೆ ಸೂಕ್ತ ಉಡುಗೆ ತೊಡುಗೆ, ಎತ್ತರದ ಪ್ರದೇಶವಾದರೆ ಅದಕ್ಕೆ ಹೊಂದಿಕೊಳ್ಳಲು ಬೇಕಾದ ತರಬೇತಿ, ಹಿಮಪಾತದಂತಹ ಸಂಕಷ್ಟಗಳು ಎದುರಾದರೆ ಏನು ಮಾಡಬೇಕು ಎಂಬ ಪ್ರಾಥಮಿಕ ಮಾಹಿತಿ ಬಹಳ ಮುಖ್ಯ.

ಪ್ರವಾಸಿಗರು ತಮ್ಮ ಆರೋಗ್ಯ ತಪಾಸಣೆಯನ್ನು ತಪ್ಪದೇ ಮಾಡಿಸಿಕೊಳ್ಳಬೇಕು. ಸ್ಥಳೀಯ ಮಾರ್ಗದರ್ಶಕರನ್ನು ಹೊಂದಿರುವುದು ಮತ್ತು ಅವರ ಮಾರ್ಗದರ್ಶನದಲ್ಲೇ ಚಾರಣ ಮಾಡುವುದೂ ಮುಖ್ಯವಾದ ಸಂಗತಿ. ಹಾಗೆಯೇ, ತಾವೆಲ್ಲಿ ಹೋಗುತ್ತೇವೆಂಬುದನ್ನು ಯುವಕರು ಯಾರಿಗಾದರೂ ಹೇಳಿ ಹೋಗಬೇಕು.

ಪ್ರವಾಸವೆಂಬುದು ನಮ್ಮ ಬದುಕಿನ ಅಚ್ಚಳಿಯದ ಸವಿನೆನಪಾಗಬೇಕೇ ವಿನಾ ದುಃಸ್ವಪ್ನ ಆಗಬಾರದು. ನಮ್ಮ ತಪ್ಪಿಗೆ ಕುಟುಂಬದವರು ಬೆಲೆ ತೆರುವಂತಾಗಬಾರದು.

ವಾಚಕರ ವಾಣಿ

ಕೆರೆಯಲ್ಲಿ ತೇಲುವ ಸೌರ ಘಟಕ: ಮಾದರಿ ಯೋಜನೆ

ಕೋಲಾರ ತಾಲ್ಲೂಕಿನ ಸುಗಟೂರು ಹೋಬಳಿಯ ಸೋಮಾಂಬುಧಿ ಅಗ್ರಹಾರ ಕೆರೆ ನೀರಿನ ಮೇಲೆ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸುವ ಪ್ರಾಯೋಗಿಕ ಯೋಜನೆಗೆ ರಾಜ್ಯ ಸರ್ಕಾರ ಮುಂದಾಗಿದೆ (ಪ್ರ.ವಾ., ಜೂನ್ 5). ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹ. ಜೊತೆಗೆ, ಇಂತಹ ಯೋಜನೆಗಳು ಕೆರೆಗಳ ಸಮಗ್ರ ಅಭಿವೃದ್ಧಿಗೂ ಸಹಕಾರಿ.

ಗ್ರಾಮೀಣರ ಬದುಕನ್ನು ಹಸನುಗೊಳಿಸುವ ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸುವುದು ಉತ್ತಮ. ಇದರಿಂದ ಹಲವು ಪ್ರಯೋಜನಗಳಿವೆ. ಮೊದಲಿಗೆ ಸೌರ ವಿದ್ಯುತ್ ಉತ್ಪಾದನೆಗೆ ಫಲವತ್ತಾದ ಕೃಷಿ ಭೂಮಿಯ ಬಳಕೆ ತಪ್ಪಲಿದೆ.

ಕೆರೆಗಳಲ್ಲಿ ಸಂಗ್ರಹಗೊಂಡ ನೀರು ಸೌರಫಲಕ ಅಳವಡಿಕೆಯಿಂದ ಆವಿಯಾಗುವುದು ಕಡಿಮೆಯಾಗಲಿದೆ. ಒಂದು ಹೆಕ್ಟೇರ್‌ನಲ್ಲಿ ವಾರ್ಷಿಕ ಎರಡು ಕೋಟಿ ಲೀಟರ್ ನೀರು ಸಂಗ್ರಹವಾಗಲಿದ್ದು, ಕೃಷಿ ಚಟುವಟಿಕೆಗಳಿಗೆ ಅನುಕೂಲ ಆಗಲಿದೆ. ಇದರಿಂದ ಅಂತರ್ಜಲ ಮಟ್ಟವೂ ಹೆಚ್ಚಲಿದೆ. ಸೌರ ವಿದ್ಯುತ್ ಉತ್ಪಾದನೆಯಿಂದ ಪರಿಸರ ಮಾಲಿನ್ಯ ಕಡಿಮೆಯಾಗಲಿದೆ. ಜೊತೆಗೆ, ಹಳ್ಳಿಗಳಲ್ಲಿ ದಿನದ 24 ತಾಸೂ ವಿದ್ಯುತ್ ದೊರೆಯಲಿದೆ. ಕೆರೆಯಲ್ಲಿ ದೀರ್ಘಕಾಲ ನೀರು ನಿಲ್ಲುವುದರಿಂದ ಒಳನಾಡು ಮೀನುಗಾರಿಕೆಯೂ ಬಲವರ್ಧನೆಯಾಗಲಿದೆ.

ಎಚ್.ಆರ್. ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ಹೆಚ್ಚುವರಿ ಶಿಕ್ಷಕರು: ಮಾನದಂಡ ಬದಲಾಗಲಿ

ಪ್ರಸ್ತುತ ರಾಜ್ಯ ಸರ್ಕಾರವು ಸರ್ಕಾರಿ ಶಾಲೆಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಆರಂಭಿಸಿದೆ. ಶಿಕ್ಷಕರ ವರ್ಗಾವಣೆಗೂ ಮೊದಲು ಆಯಾ ಶಾಲೆಯಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ, ಅಗತ್ಯ ಇರುವ ಶಾಲೆಗಳಿಗೆ ಅಂತಹ ಶಿಕ್ಷಕರನ್ನು ಮರು ಹೊಂದಾಣಿಕೆ ಮಾಡುವ ಪ್ರಕ್ರಿಯೆಯನ್ನು, ವರ್ಗಾವಣೆಗೂ ಮೊದಲು ಪ್ರತಿವರ್ಷ ಸರ್ಕಾರ ಮಾಡುತ್ತಾ ಬಂದಿದೆ.

ಶಾಲೆಯಲ್ಲಿರುವ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವಾಗ ಆಯಾ ಶಾಲೆಯಲ್ಲಿ ಕಳೆದ ವರ್ಷದ ಡಿಸೆಂಬರ್ ಅಂತ್ಯಕ್ಕೆ ಇದ್ದ ಮಕ್ಕಳ ದಾಖಲಾತಿಯನ್ನು ಮಾನದಂಡವನ್ನಾಗಿ ಇಟ್ಟುಕೊಂಡಿದೆ. ಅದರಂತೆ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ (1ರಿಂದ 5ನೇ ತರಗತಿ) 11ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಇಬ್ಬರು ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ (6ರಿಂದ 7ನೇ ತರಗತಿ) 11ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಇಬ್ಬರು ಶಿಕ್ಷಕರು, ಒಂದು ವೇಳೆ ಮಕ್ಕಳ ಸಂಖ್ಯೆ 11ಕ್ಕಿಂತ ಕಡಿಮೆ ಇದ್ದರೆ ಒಬ್ಬರೇ ಶಿಕ್ಷಕರು ಎಂಬ ನಿಯಮ ರೂಪಿಸಲಾಗಿದೆ.

ಆದರೆ, ಈ ತಿಂಗಳಲ್ಲಿ ನಡೆಯುವ ದಾಖಲಾತಿ ಸಮಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಲಿದೆ. ಹಾಗಾಗಿ, ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಗೆ ಕಳೆದ ವರ್ಷದ ಮಕ್ಕಳ ದಾಖಲಾತಿಯನ್ನು ಕೈಬಿಟ್ಟು ಜೂನ್ ತಿಂಗಳ ಮಕ್ಕಳ ದಾಖಲಾತಿಯನ್ನು ಮಾನದಂಡವಾಗಿ ಪರಿಗಣಿಸಬೇಕಿದೆ. ಅದರಂತೆ ಸರ್ಕಾರವು ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿದರೆ ರಾಜ್ಯದ ವಿವಿಧೆಡೆ ಸರ್ಕಾರಿ ಶಾಲೆಗಳಲ್ಲಿರುವ ಸಾವಿರಾರು ಶಿಕ್ಷಕರು ಹೆಚ್ಚುವರಿ ಪ್ರಕ್ರಿಯೆಯಿಂದ ದೂರ ಉಳಿದು ಆಯಾ ಶಾಲೆಯಲ್ಲಿಯೇ ಕರ್ತವ್ಯ ನಿರ್ವಹಿಸಲು ಸಹಕಾರಿಯಾಗಲಿದೆ. ಈ ಬಗ್ಗೆ ಸರ್ಕಾರ ಗಮನ ಹರಿಸಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಮಾನದಂಡದಲ್ಲಿ ಬದಲಾವಣೆ ಮಾಡಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಕ(ತ)ಪ್ಪೂ... ನಮ್ದೆ!

ನನಸಾಯಿತು
ಈ ಸಲ ಕಪ್ ನಮ್ದೆ!
ಎಂಬ ಆರ್‌ಸಿಬಿ
ಅಭಿಮಾನಿಗಳ ಕನಸು,
ಅತಿಯಾದರೆ,
ಅಮೃತವೂ ವಿಷವಾದೀತು
ಎಂಬುದನ್ನು ಅರಿಯಬೇಕಿದೆ
ಹುಚ್ಚು ಮನಸು!

ಮ.ಗು. ಬಸವಣ್ಣ
ಮೈಸೂರು

ಸರ್ಕಾರದ ಹೊಣೆಯೂ ಹೌದು, ಜನರ ಹೊಣೆಯೂ ಹೌದು

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ಸಂಪೂರ್ಣ ಹೊಣೆಯನ್ನು ಸರ್ಕಾರವೇ ಹೊರಬೇಕು ಎಂಬ ಆಗ್ರಹವು ನೈತಿಕವಾಗಿ ಸರಿ; ವ್ಯಾವಹಾರಿಕವಾಗಿ ಅಲ್ಲ! ಇಂತಹ ಅವಘಡಗಳು ಬೆಂಗಳೂರಿನಂತಹ ನಾಗರಿಕ ಪರಿಸರಕ್ಕೆ ಹೊಸತೇನೂ ಅಲ್ಲ. ಆದರೆ, ದೇಶದ ಅನೇಕ ಪರ್ಯಟನಾ ಸ್ಥಳಗಳಲ್ಲಿ ಇಂತಹ ಬರ್ಬರ ಘಟನೆಗಳು ಸರ್ವೇಸಾಮಾನ್ಯ ಎಂಬಂತೆ ನಡೆಯುತ್ತಿವೆ. ಜನರು ನಶೆಯೇರಿದ ಕಾಡುಪ್ರಾಣಿಗಳಂತೆ ವರ್ತಿಸಿದರೆ, ಅಂತಹ ಸಮೂಹವನ್ನು ಯಾವುದೇ ಸರ್ಕಾರ ಪಾರು ಮಾಡಲು ಸಾಧ್ಯವಿಲ್ಲ.

ಧರ್ಮ, ದೈವಭಕ್ತಿ, ಕ್ರಿಕೆಟ್, ಪರ್ಯಟನಾದಿ ಹವ್ಯಾಸ, ಜೀವಭಯ, ತಕ್ಷಣದ ತರ್ಕಕ್ಕೆ ಸಿಗದ ನಂಬಿಕೆ- ಆಚರಣೆಗಳಂತಹವು ಅವರವರ ಸ್ವಂತದ ಚಿಂತನಾ ಮಿತಿಯಲ್ಲಿ ಇರುವವರೆಗೆ ಯಾವುದೂ ನಶೆಯಲ್ಲ. ಆದರೆ, ನಮ್ಮಲ್ಲಿ ಸಹಜ ಹಸಿವೆ, ದಾಹ, ಮೈಥುನವನ್ನೂ ನಶೆಯಾಗಿಸುವ ಪ್ರತ್ಯೇಕವಾದದೊಂದು ಉದ್ಯಮ ಸಮೂಹವೇ ಗುಪ್ತವಾದ ಹೆಮ್ಮರವಾಗಿ ಹರಡಿ ನಿಂತಿರುವುದು ನಮಗೆ ಮನದಟ್ಟಾಗುತ್ತಿಲ್ಲ.

ಆದರೆ, ಈ ಹೆಮ್ಮರದ ಒಳಭೂತ ಜನರನ್ನು ಅಜ್ಞಾನದಲ್ಲೇ ಇಟ್ಟಿರುತ್ತದೆ. ಸರ್ಕಾರ ಎನ್ನುವುದು ನಾಗರಿಕವಾದಾಗ ಮಾತ್ರ ಪರಿಹಾರ ಸಾಧ್ಯವಾಗಬಹುದು.

ಆರ್.ಕೆ. ದಿವಾಕರ, ಬೆಂಗಳೂರು

ಮೊಟ್ಟೆ ನೀಡುವುದು ಒಳ್ಳೆಯ ನಿರ್ಧಾರ

ಇಂದಿರಾ ಕ್ಯಾಂಟೀನ್‌ಗಳಲ್ಲಿ ಸದ್ಯ ಮೊಟ್ಟೆ ಪೂರೈಸುವ ಪ್ರಸ್ತಾವ ಸರ್ಕಾರದ ಮುಂದಿದೆ (ಪ್ರ.ವಾ., ಜೂನ್ 5) ಎಂದು ಪೌರಾಡಳಿತ ಸಚಿವರು ಹೇಳಿರುವುದು ವರದಿಯಾಗಿದೆ. ಸರ್ಕಾರದ ಈ ನಿರ್ಧಾರ ಉತ್ತಮವಾದುದು. ಆದರೆ, ಬೆಂಗಳೂರಿನ ತೀರಾ ಹಿಂದುಳಿದ ಪ್ರದೇಶಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಸಚಿವರು ಮತ್ತು ಅಧಿಕಾರಿಗಳು ಗೋಪ್ಯವಾಗಿ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಮತ್ತು ಆಹಾರದ ಗುಣಮಟ್ಟವನ್ನು ಪರಿಶೀಲಿಸಬೇಕಿದೆ.

ಈ ಕ್ಯಾಂಟೀನ್‌ಗಳಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಇವುಗಳನ್ನೇ ನಂಬಿರುವ ಶ್ರಮಿಕ ವರ್ಗ ತೊಂದರೆಗೆ ಸಿಲುಕಿದೆ. ಗುಣಮಟ್ಟದ ಆಹಾರ ಪೂರೈಕೆ ಬಗ್ಗೆ ಸರ್ಕಾರ ಗಮನಹರಿಸಬೇಕಿದೆ.

ಸಂಜೀವ ಆಲದಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭೂ ಗ್ಯಾರಂಟಿ: ಆಸ್ತಿ ಸಮಸ್ಯೆಗೆ ಪರಿಹಾರ

• ಜಯಸಿಂಹ ಆರ್.

ರಾಜ್ಯ ಕಂದಾಯ ಇಲಾಖೆಯು ತನ್ನ ವಿವಿಧ ಪೋರ್ಟಲ್‌ಗಳಲ್ಲಿ ಇರುವ ದತ್ತಾಂಶ ಮತ್ತು ದಾಖಲೆಗಳನ್ನು, ಬೇರೆ ಇಲಾಖೆಗಳ ಬಳಿ ಇರುವ ದಾಖಲೆಗಳ ಜತೆಗೆ ಸಂಯೋಜಿಸಿ ಡಿಜಿಟಲ್ ದತ್ತಾಂಶಗಳ ಒಂದು ಬೃಹತ್ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ. ಈ ಕ್ರೋಢೀಕೃತ ದತ್ತಾಂಶವನ್ನು ಬಳಸಿಕೊಂಡು ಇ–ಆಡಳಿತ ವ್ಯವಸ್ಥೆಯನ್ನು ರೂಪಿಸಲು ಇಲಾಖೆ ಮುಂದಾಗಿದೆ. ಭೂಮಿ, ಅದರ ಹಕ್ಕು ಮತ್ತು ಮಾಲೀಕತ್ವ ಸಂಬಂಧಿತ ಗೊಂದಲ ನಿವಾರಿಸಿ, ನೈಜ ಮಾಲೀಕರಿಗೆ ಮಾಲೀಕತ್ವ ಒದಗಿಸಿಕೊಡುವ ಉದ್ದೇಶದಿಂದ ಕೈಗೊಂಡಿರುವ ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರವು ‘ಭೂ ಗ್ಯಾರಂಟಿ’ ಎಂದು ಹೆಸರಿಟ್ಟಿದೆ.

ಭೂಮಿ, ಕಾವೇರಿ, ಕುಟುಂಬ, ಫ್ರೂಟ್, ಎಜಿಎಸ್‌ಕೆ ತಂತ್ರಾಂಶ ಮತ್ತು ಪೋರ್ಟಲ್‌ಗಳಲ್ಲಿ ಇರುವ ಅಪಾರ ಪ್ರಮಾಣದ ದತ್ತಾಂಶಗಳನ್ನು ಸಂಯೋಜಿಸಲಾಗುತ್ತಿದೆ. ಈ ಪೋರ್ಟಲ್‌ಗಳಲ್ಲಿ ಇರುವ ದತ್ತಾಂಶಗಳನ್ನು ಪರಸ್ಪರ ತಾಳೆ ನೋಡಿ, ವಿವರ ಸರಿಪಡಿಸಲಾಗುತ್ತಿದೆ. ಇದಕ್ಕೆ ಆಧಾರ್ ಆಧಾರಿತ ಇ–ಕೆವೈಸಿ ವ್ಯವಸ್ಥೆಯನ್ನು ಜೋಡಿಸಲಾಗುತ್ತಿದೆ. ಹೀಗೆ ಲಭ್ಯವಾದ ಕ್ರೋಢೀಕೃತ ದತ್ತಾಂಶದ ಮೂಲಕ ಕಂದಾಯ ಇಲಾಖೆಯ ಎಲ್ಲ ಕಾರ್ಯಚಟುವಟಿಕೆಗಳನ್ನು ಡಿಜಿಟಲೀಕರಣಗೊಳಿಸುವ ಮತ್ತು ಕಾಗದ ರಹಿತ ಆಡಳಿತ ನಡೆಸುವ ಗುರಿ ಹಾಕಿಕೊಳ್ಳಲಾಗಿದೆ.

ಭೂ ಗ್ಯಾರಂಟಿ ಯೋಜನೆ ಅಡಿ ನನ್ನ ಭೂಮಿ, ನನ್ನ ಹಕ್ಕು, ಭೂ ಸುರಕ್ಷಾ, ಇ–ಪೌತಿ, ಪೋಡಿ ಮುಕ್ತ ಗ್ರಾಮ, ಪಹಣಿ–ಆಧಾರ್ ಜೋಡಣೆ, ಸ್ವಯಂಚಾಲಿತ ಮ್ಯುಟೇಷನ್ ಸೇರಿ ಹತ್ತಾರು ಉಪ ಕಾರ್ಯಕ್ರಮ ಮತ್ತು ಆಂದೋಲನಗಳನ್ನು ಕಂದಾಯ ಇಲಾಖೆ ಆರಂಭಿಸಿದೆ. ಇವುಗಳಲ್ಲಿ ಹಲವು ಕಾರ್ಯಕ್ರಮಗಳು ಈ ಹಿಂದೆಯೇ ಜಾರಿಯಲ್ಲಿದ್ದವು. ಕೆಲವನ್ನು ಹೊಸತಾಗಿ ಆರಂಭಿಸಲಾಗಿದೆ. ಈ ಎಲ್ಲವನ್ನೂ ಒಟ್ಟುಗೂಡಿಸಿ ‘ಭೂ ಗ್ಯಾರಂಟಿ’ ಎಂದು ಕರೆಯಲಾಗಿದೆ. ಇಂತಹ ಅಭಿಯಾನಗಳ ಕಾರ್ಯನಿರ್ವಹಣಾ ವಿಧಾನ, ಅವುಗಳಿಂದ ರೈತರಿಗೆ ಆಗುವ ಅನುಕೂಲಗಳ ವಿವರ ಈ ಮುಂದಿನಂತಿವೆ.

ಭೂ ಸುರಕ್ಷಾ ಮತ್ತು ಇ-ದಾಖಲೆ

ರಾಜ್ಯದ ಪ್ರತಿ ಕೃಷಿ ಜಮೀನಿನ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡುವ ಕಾರ್ಯಕ್ರಮ ಇದು. ಭೂಮಿಯ ಮೂಲ ಪಟ್ಟಾ, ಮೂಲ ಆಕಾರಬಂದು, ಸರ್ವೆ ಟಿಪ್ಪಣಿ, ಕೇಸವಾರು, ಭೂ ವ್ಯಾಜ್ಯ ತೀರ್ಪಿನ ಪ್ರತಿ ಮೊದಲಾದ ದಾಖಲೆಗಳು ಈಗ ಕಂದಾಯ ಇಲಾಖೆಯ ರೆಕಾರ್ಡ್ ರೂಂಗಳಲ್ಲಿ ಇರುತ್ತವೆ. ಅವುಗಳನ್ನು ಸ್ಕ್ಯಾನ್ ಮಾಡಿ, ‘ಭೂ ಸುರಕ್ಷಾ’ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಈವರೆಗೆ 22 ಕೋಟಿಗೂ ಹೆಚ್ಚು ದಾಖಲೆಗಳನ್ನು ಹೀಗೆ ಅಪ್‌ಲೋಡ್ ಮಾಡಲಾಗಿದೆ. ಉಳಿದ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

ಯಾವುದೇ ನಾಗರಿಕ ‘ಭೂ ಸುರಕ್ಷಾ’ ಪೋರ್ಟಲ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆ, ಹೆಸರು, ವಿಳಾಸ ನಮೂದಿಸಿ ನೋಂದಣಿ ಮಾಡಿಕೊಳ್ಳಬೇಕು. ನಂತರ ತಮ್ಮ ಜಮೀನಿನ ವಿವರ ನಮೂದಿಸಿ, ಅವುಗಳ ದಾಖಲೆಗಳನ್ನು ಪಡೆಯಬಹುದಾಗಿದೆ. ಯಾವ ಉದ್ದೇಶಕ್ಕೆ ದಾಖಲೆ ಅಗತ್ಯವಿದೆ ಎಂಬುದನ್ನು ನಮೂದಿಸಬೇಕು. ನ್ಯಾಯಾಲಯದ ಕೆಲಸಕ್ಕೆ ಅಗತ್ಯವಿದ್ದರೆ ಭೂ ಸುರಕ್ಷಾ ಪೋರ್ಟಲ್‌ನಿಂದ ನ್ಯಾಯಾಲಯಕ್ಕೆ, ಮಾರಾಟಕ್ಕಾಗಿ ಬೇಕಿದ್ದರೆ ಕಾವೇರಿ ಪೋರ್ಟಲ್‌ಗೆ ದಾಖಲೆ ರವಾನೆಯಾಗುತ್ತದೆ. ಅರ್ಜಿ ಸಲ್ಲಿಸಿದವರಿಗೂ ಒಂದು ಪ್ರತಿ ರವಾನೆಯಾಗುತ್ತದೆ.

ದಾಖಲೆಗಳನ್ನು ಸಂಪೂರ್ಣವಾಗಿ ಕಾಗದರಹಿತಗೊಳಿಸುವ ಮತ್ತು ಯಾವುದೇ ದಾಖಲೆ ಪಡೆಯಲು ಜನರು ಕಂದಾಯ ಇಲಾಖೆಯ ಯಾವುದೇ ಕಚೇರಿಗೆ ಬರುವುದನ್ನು ಈ ಉಪಕ್ರಮಗಳು ತಪ್ಪಿಸುತ್ತವೆ.

ಪೋಡಿಮುಕ್ತ ಗ್ರಾಮ ಅಭಿಯಾನ

ರಾಜ್ಯದ ಎಲ್ಲ ಗ್ರಾಮಗಳ, ಎಲ್ಲ ಕೃಷಿ ಜಮೀನಿನ ಪೋಡಿ ಕಾರ್ಯವನ್ನು ಪೂರ್ಣಗೊಳಿಸುವ ಕಾರ್ಯವಿದು. ಪೋಡಿ ಮುಕ್ತ ಗ್ರಾಮ ಹಳೆಯ ಯೋಜನೆಯಾದರೂ ಕೆಲ ವರ್ಷಗಳಿಂದ ಸ್ಥಗಿತವಾಗಿತ್ತು. ಈಗ ಈ ಕಾರ್ಯಕ್ರಮಕ್ಕೆ ಮರುಚಾಲನೆ ನೀಡಲಾಗಿದೆ. ಸರ್ವೆ ಅಧಿಕಾರಿಗಳೇ ಪೋಡಿ ಅಗತ್ಯವಿರುವ ಜಮೀನುಗಳಿಗೆ ಭೇಟಿ ನೀಡಿ, ಸರ್ವೆ ಕಾರ್ಯ ನಡೆಸುತ್ತಾರೆ. ಪೋಡಿ ರಚಿಸಿ, ಅದನ್ನು ಡಿಜಿಟಲ್ ಸ್ವರೂಪದಲ್ಲಿ ಅಪ್‌ಲೋಡ್ ಮಾಡಿ, ಸಂಬಂಧಿತ ರೈತರಿಗೆ ಆ ಬಗ್ಗೆ ಮಾಹಿತಿ ನೀಡುತ್ತಾರೆ. ರೈತ ಮಂದಿ ತಮ್ಮ ಜಮೀನಿನ ಪೋಡಿ ಮಾಡಿಸಲು ಅರ್ಜಿ ಸಲ್ಲಿಸುವ, ಪೋಡಿ ಕಾರ್ಯಕ್ಕೆ ಶುಲ್ಕ ಪಾವತಿಸುವ ಹಲವು ಹಂತಗಳ ಕಾಯುವ ಅಗತ್ಯವಿರುವುದಿಲ್ಲ. ಈ ಅಭಿಯಾನದ ಅಡಿ ಉಚಿತವಾಗಿಯೇ ಪೋಡಿ ಕಾರ್ಯ ನಡೆಸುವ ಕಾರಣ, ರೈತ ಮಂದಿಗೆ ಈ ಹಿಂದೆ ಆಗುತ್ತಿದ್ದ ಶುಲ್ಕದ ಹೊರೆಯೂ ತಪ್ಪುತ್ತದೆ.

ಸ್ವಯಂಚಾಲಿತ ಮ್ಯುಟೇಷನ್

ಕಂದಾಯ ಇಲಾಖೆಯ ವಿವಿಧ ತಂತ್ರಾಂಶ–ಪೋರ್ಟಲ್‌ಗಳಲ್ಲಿ ಲಭ್ಯವಿರುವ ದತ್ತಾಂಶ ಮತ್ತು ದಾಖಲೆಗಳನ್ನು ಆಧರಿಸಿ ಸ್ವಯಂಚಾಲಿತವಾಗಿ ಮ್ಯುಟೇಷನ್ ಮಾಡುವ ಕಾರ್ಯಕ್ರಮ ಇದು. ಈವರೆಗೆ ಕಂದಾಯ ನಿರೀಕ್ಷಕರ ಸಹಿ ಪಡೆದು ಮ್ಯುಟೇಷನ್ ಕಾರ್ಯ ಪೂರ್ಣಗೊಳಿಸುವ ಪದ್ಧತಿ ಜಾರಿಯಲ್ಲಿತ್ತು. ಈಗ ಮಾನವ ಹಸ್ತಕ್ಷೇಪವಿಲ್ಲದೆ, ಸರ್ವರ್ ಆಧಾರಿತ ಅನುಮೋದನೆ ಪಡೆದು ಮ್ಯುಟೇಷನ್ ಪೂರ್ಣಗೊಳಿಸಲಾಗುತ್ತಿದೆ. ಪರಿಣಾಮವಾಗಿ ಮ್ಯುಟೇಷನ್ ಕಾರ್ಯಕ್ಕೆ ತಗಲುತ್ತಿದ್ದ 5 ದಿನಗಳ ಬದಲು ಈಗ 12 ತಾಸಿಗೆ ಇಳಿದಿದೆ.

ಪೋಡಿ, ಹಕ್ಕು ಮತ್ತು ಋಣ ಬದಲಾವಣೆ, ಭೂಪರಿವರ್ತನೆ, ಭೂಸ್ವಾಧೀನ, ಕಂದಾಯ ನ್ಯಾಯಾಲಯದ ಆದೇಶ, ಪಹಣಿ ವರ್ಗಾವಣೆ, ಪಹಣಿ ಬದಲಾವಣೆ, ನ್ಯಾಯಾಲಯದ ಆದೇಶಗಳು ಮೊದಲಾದ ಪ್ರಕ್ರಿಯೆಗಳು ಸಂಬಂಧಿತ ಪೋರ್ಟಲ್‌ಗಳಲ್ಲಿ ಅಪ್‌ಲೋಡ್ ಆಗುತ್ತಿದ್ದಂತೆಯೇ ಮ್ಯುಟೇಷನ್ ಕಾರ್ಯ ಸ್ವಯಂಚಾಲಿತವಾಗಿ ನಡೆಯುತ್ತದೆ. ಅತ್ಯಂತ ತ್ವರಿತವಾಗಿ ಮ್ಯುಟೇಷನ್ ಪ್ರಕ್ರಿಯೆ ನಡೆಯುತ್ತದೆ. ಹೀಗಾಗಿ ಈ ಕಾರ್ಯಕ್ರಮ ಆರಂಭವಾದಾಗಿನಿಂದ 19 ಲಕ್ಷಕ್ಕೂ ಹೆಚ್ಚು ಆಸ್ತಿಗಳಿಗೆ ಸ್ವಯಂಚಾಲಿತ ಮ್ಯುಟೇಷನ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ.

ಪಹಣಿ–ಆಧಾರ್ ಜೋಡಣೆ

ರಾಜ್ಯದ ಎಲ್ಲ ರೈತರ ಪಹಣಿಗಳಿಗೆ ಅವರ ಆಧಾರ್ ಸಂಖ್ಯೆಯನ್ನು ಜೋಡಿಸುವ ಯೋಜನೆ ಇದು. ಗ್ರಾಮ ಆಡಳಿತಾಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮಗಳ ಕೃಷಿ ಜಮೀನಿನ ಪಹಣಿಗಳ ವಿವರಗಳನ್ನು ತೆಗೆದುಕೊಳ್ಳುತ್ತಾರೆ. ಆನಂತರ ಪಹಣಿಗಳಲ್ಲಿ ಇರುವ ಪ್ರತಿ ರೈತರ ಮನೆಗೆ ಹೋಗಿ, ಅವರ ಆಧಾರ್ ಸಂಖ್ಯೆಯನ್ನು ಪಡೆದುಕೊಳ್ಳುತ್ತಾರೆ. ಅದನ್ನು ಅಪ್‌ಲೋಡ್ ಮಾಡುವ ಮೂಲಕ ಪಹಣಿ ಮತ್ತು ಆಧಾರ್ ಜೋಡಣೆ ಮಾಡುತ್ತಾರೆ.

ಈ ಕಾರ್ಯಕ್ರಮ ಆರಂಭವಾದಾಗಿನಿಂದ 73.5 ಲಕ್ಷ ಆಧಾರ್–ಪಹಣಿಯನ್ನು ಸೃಜಿಸಲಾಗಿದೆ. ಅಭಿಯಾನದ ವೇಳೆ 55 ಲಕ್ಷ ಜಮೀನುಗಳ ಪೌತಿ ಖಾತೆಯಾಗದೇ ಇರುವುದು ಪತ್ತೆಯಾಗಿದೆ. ಈ ಎಲ್ಲರಿಗೂ ಇಲಾಖೆಯ ವತಿಯಿಂದಲೇ ‘ಇ–ಪೌತಿ’ ಖಾತೆಯನ್ನು ಮಾಡಿಕೊಡಲು ಕ್ರಮವಹಿಸಲಾಗಿದೆ. ಪಹಣಿಗೆ ಆಧಾರ್ ಜೋಡಣೆ ವೇಳೆ, ಮಾಲೀಕ ಮೃತಪಟ್ಟು ವಾರಸುದಾರರಿಗೆ ಪೌತಿಯಾಗಿರುವುದು ಪತ್ತೆಯಾದರೆ ಪೌತಿ ಖಾತೆಗೆ ಕ್ರಮ ವಹಿಸಲಾಗುತ್ತದೆ. ಆಧಾರ್ ಜೋಡಣೆಯಿಂದ ಪಹಣಿಯಲ್ಲಿ ಯಾವುದೇ ಬದಲಾವಣೆ, ಭೂಮಿ ಮಾರಾಟದ ಸಂದರ್ಭದಲ್ಲಿ ಮಾಲೀಕನಿಗೆ ಒಟಿಪಿ ರವಾನೆಯಾಗಲಿದೆ. ಒಟಿಪಿ ಇಲ್ಲದೆ ಯಾವುದೇ ಹಕ್ಕು ಬದಲಾವಣೆ ಕಾರ್ಯ ನಡೆಯುವುದಿಲ್ಲ. ನೈಜ ಮಾಲೀಕನಿಗೆ ವಂಚಿಸಿ, ಆತನ ಹೆಸರಿನಲ್ಲಿ ಮತ್ಯಾರೋ ಭೂಮಿ ಮಾರಾಟ ಮಾಡುವುದನ್ನು ಈ ಇ–ಕೆವೈಸಿ ವ್ಯವಸ್ಥೆ ತಡೆಯಲಿದೆ.

ಇ–ಪೌತಿ ಆಂದೋಲನ

ರಾಜ್ಯದಲ್ಲಿ 51 ಲಕ್ಷಕ್ಕೂ ಹೆಚ್ಚು ಜಮೀನುಗಳು ಮೃತ ರೈತರ ಹೆಸರಿನಲ್ಲಿಯೇ ಇವೆ. ವಾರಸುದಾರರ ಹೆಸರಿಗೆ ಈ ಜಮೀನುಗಳು ಖಾತೆಯಾಗದೇ ಇರುವ ಕಾರಣಕ್ಕೆ ಸಾಲ, ಸಹಾಯಧನ, ಕೃಷಿಹೊಂಡ ನಿರ್ಮಾಣ ಸೇರಿ ಕೃಷಿ ಮತ್ತು ನೀರಾವರಿ ಇಲಾಖೆಯ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿಲ್ಲ. ಜತೆಗೆ ಭೂಪರಿವರ್ತನೆ ಮಾಡುವುದು ಅಥವಾ ಮಾರಾಟವೂ ಸಾಧ್ಯವಿಲ್ಲ. ಇಂತಹ ಜಮೀನುಗಳನ್ನು ಪತ್ತೆ ಮಾಡಿ, ವಾರಸುದಾರರಿಗೆ ಜಮೀನಿನ ಪೌತಿ ಖಾತೆಯನ್ನು ಮಾಡಿಕೊಡುವ ಆಂದೋಲನವಿದು.

ರೈತರ ಮನೆಗೆ ಗ್ರಾಮ ಆಡಳಿತಾಧಿಕಾರಿಗಳು ಭೇಟಿ ನೀಡಿ, ವಾರಸುದಾರರ ಮಾಹಿತಿ ಕಲೆ ಹಾಕಿ ಪೌತಿ ಖಾತೆ ಪ್ರಕ್ರಿಯೆ ಆರಂಭಿಸುತ್ತಾರೆ. ಈ ಎಲ್ಲ ಪ್ರಕ್ರಿಯೆ ಆಧಾರ್ ಆಧಾರಿತ ಇ–ಕೆವೈಸಿ ಮೂಲಕ ನಡೆಯುತ್ತದೆ. ಪೌತಿ ಖಾತೆಗಾಗಿ ವಾರಸುದಾರರು ಅರ್ಜಿ ಸಲ್ಲಿಸಿ, ಅಲೆದಾಡುವ ಸ್ಥಿತಿ ಇರುವುದಿಲ್ಲ. ಜತೆಗೆ ಈ ಕೆಲಸವನ್ನು ಕಂದಾಯ ಇಲಾಖೆ ಸಂಪೂರ್ಣವಾಗಿ ಉಚಿತವಾಗಿಯೇ ಮಾಡಿಕೊಡುತ್ತದೆ.

ರಜೆಯಂದೂ ನೋಂದಣಿ

ಜಮೀನು ನೋಂದಣಿ ಮಾಡಿಸಲು ಕೆಲಸಕ್ಕೆ ರಜೆ ಹಾಕಿ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಬೇಕಾದ ಅನಿವಾರ್ಯವನ್ನು ತಪ್ಪಿಸಲು ಈ ಉಪಕ್ರಮ ಜಾರಿಗೆ ತರಲಾಗಿದೆ. ರಾಜ್ಯದ ಎಲ್ಲ ಜಿಲ್ಲಾ ನೋಂದಣಾಧಿಕಾರಿ ವ್ಯಾಪ್ತಿಯ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ, ಒಂದು ಕಚೇರಿ ರಜಾದಿನದಂದು ಕಾರ್ಯನಿರ್ವಹಿಸಲಿದೆ. ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಸ್ವತ್ತನ್ನು, ಆ ಜಿಲ್ಲಾ ನೋಂದಣಾಧಿಕಾರಿ ಕಚೇರಿ ಅಧೀನದಲ್ಲಿರುವ ಯಾವುದೇ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಬಹುದಾಗಿದೆ.

ಎರಡನೇ ಶನಿವಾರ, ನಾಲ್ಕನೇ ಶನಿವಾರ ಮತ್ತು ಪ್ರತಿ ಭಾನುವಾರ ಈ ಕಚೇರಿಗಳು ಕಾರ್ಯನಿರ್ವಹಿಸಲಿವೆ. ಹೀಗಾಗಿ ನೌಕರರು ರಜಾ ದಿನಗಳಂದು ನೋಂದಣಿ ಪ್ರಕ್ರಿಯೆಯಲ್ಲಿ ಭಾಗಿಯಾಗಬಹುದಾಗಿದೆ. ರಜಾದಿನಗಳಲ್ಲಿ ಕಾರ್ಯನಿರ್ವಹಿಸುವ ಉಪ ನೋಂದಣಾಧಿಕಾರಿಗಳ ಕಚೇರಿಗೆ ನಂತರದ ವಾರದ ದಿನದಲ್ಲಿ ರಜೆ ನೀಡಲಾಗುತ್ತದೆ. ಇದೇ ಜೂನ್ 1ರಿಂದ ಈ ಕಾರ್ಯಕ್ರಮ ಜಾರಿಯಾಗಿದೆ.

ನನ್ನ ಭೂಮಿ: ದರ್ಖಾಸ್ತು ಪೋಡಿ

ರಾಜ್ಯ ಸರ್ಕಾರವು ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ 1960ರಿಂದ 2000ರದ ನಡುವೆ ಲಕ್ಷಾಂತರ ರೈತರಿಗೆ ಜಮೀನು ಮಂಜೂರು ಮಾಡಿದೆ. ಈ ಜಮೀನುಗಳಲ್ಲಿ ರೈತರು, ಅವರ ವಾರಸುದಾರರು ಸಾಗುವಳಿ ಮಾಡುತ್ತಿದ್ದಾರೆ. ಆದರೆ ಜಮೀನಿನ ಪೋಡಿ ಮಾಡಿ, ಹಕ್ಕು ಬದಲಾವಣೆ ಮಾಡಿಕೊಡದೇ ಇರುವ ಕಾರಣಕ್ಕೆ, ಫಲಾನುಭವಿಗಳಿಗೆ ಅದರ ಮಾಲೀಕತ್ವ ಲಭ್ಯವಾಗಿರಲಿಲ್ಲ. ಈ ಕಾರಣದಿಂದ ಜಮೀನಿನ ಅಭಿವೃದ್ಧಿ, ಭೂ ಪರಿವರ್ತನೆ, ವಿಭಾಗ ಅಥವಾ ಮಾರಾಟ ಮಾಡಲು ಸಾಧ್ಯವಿರಲಿಲ್ಲ. ಜತೆಗೆ ಸಾಲ, ಸಹಾಯಧನ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳ ಪ್ರಯೋಜನ ಪಡೆಯಲೂ ಸಾಧ್ಯವಿಲ್ಲ.

ಇಂತಹ ಜಮೀನುಗಳಿಗೆ ದರ್ಖಾಸ್ತು ಪೋಡಿ ಮಾಡಿಕೊಟ್ಟು, ಫಲಾನುಭವಿಗಳಿಗೆ ಮಾಲೀಕತ್ವ ಒದಗಿಸಿಕೊಡುವ ಕಾರ್ಯಕ್ರಮವಿದು. ಒಬ್ಬ ರೈತನಿಗೆ ಮಂಜೂರಾದ ಜಮೀನಿನ ದರ್ಖಾಸ್ತು ಪೋಡಿ ಮಾಡುವಾಗ, ಆಯಾ ಸರ್ವೆ ಸಂಖ್ಯೆಯಲ್ಲಿರುವ ಎಲ್ಲ ಜಮೀನುಗಳಿಗೂ ಪೋಡಿ ಕಾರ್ಯ ನಡೆಸಲಾಗುತ್ತದೆ. ಇದಕ್ಕಾಗಿ ರೈತರು ಯಾವುದೇ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಸರ್ಕಾರವು ಮಂಜೂರು ಮಾಡಿರುವ ಮೂಲ ದಾಖಲೆಗಳನ್ನು, ಸಾಗುವಳಿ ಚೀಟಿಗಳನ್ನು ಆಧಾರವಾಗಿ ಇರಿಸಿಕೊಂಡು ಕಂದಾಯ ಇಲಾಖೆಯು ಉಚಿತವಾಗಿ ಈ ಕೆಲಸ ಮಾಡಲಿದೆ. ಭೂಮಿ ಮಂಜೂರಾದ ಫಲಾನುಭವಿ ಮೃತಪಟ್ಟಿದ್ದರೆ, ವಾರಸುದಾರರಿಗೆ ಪೋಡಿ ಮಾಡಿಕೊಡಲಾಗುತ್ತದೆ.

ಬಹುತೇಕ ಕಾರ್ಯಗಳು ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಸರ್ವೆ ಮತ್ತು ಪೋಡಿ ವಿವರಗಳನ್ನೂ ಡಿಜಿಟಲ್ ರೂಪದಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಪೋಡಿ ಆದನಂತರ ರೈತರ ಹೆಸರಿನಲ್ಲಿ ಪಹಣಿ ಸೃಜಿಸಲಾಗುತ್ತದೆ. ಆ ಪಹಣಿಗೆ ಆಧಾರ್ ಜೋಡಣೆಯಾಗಿರಲಿದೆ.

‘ನೆಮ್ಮದಿ ಒದಗಿಸುವ ಒತ್ತಾಸೆ’



‘ಭೂಮಿ ಇಲ್ಲದವರಿಗೆ ಅದನ್ನು ಒದಗಿಸಿಕೊಡುವ, ವ್ಯಾಜ್ಯಗಳಲ್ಲಿ ಸಿಲುಕಿ ಒದ್ದಾಡುತ್ತಿರುವ ರೈತರಿಗೆ ನೆಮ್ಮದಿ ಒದಗಿಸುವುದೇ ಭೂ ಗ್ಯಾರಂಟಿ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ತಮ್ಮ ಸರ್ಕಾರದ ನೂತನ ಯೋಜನೆಯ ಉದ್ದೇಶವನ್ನು ‘ಪ್ರಜಾವಾಣಿ’ಯ ಸಂದರ್ಶನದಲ್ಲಿ ಹಂಚಿಕೊಂಡರು

• **ಈ ಕಾರ್ಯಕ್ರಮಕ್ಕೆ ‘ಭೂ ಗ್ಯಾರಂಟಿ’ ಎಂದು ಹೆಸರಿಟ್ಟಿದ್ದೀರಿ. ಇತರ ಗ್ಯಾರಂಟಿಗಳಿಗೆ ಹೋಲಿಸಿದರೆ ಇದರ ಮಹತ್ವ ಎಂಥದ್ದು?**

ಸಚಿವ: ನಮ್ಮ ಸರ್ಕಾರದ ಇತರ ಎಲ್ಲ ಗ್ಯಾರಂಟಿಗಳು ಜನಜೀವನವನ್ನು ಮೇಲಕ್ಕೆ ಎತ್ತುವ ಉಪಕ್ರಮಗಳಾಗಿವೆ. ಒಬ್ಬ ಮನುಷ್ಯನಿಗೆ ಅತನದ್ದೇ ಒಂದು ತುಂಡು ನೆಲ ಅಥವಾ ಭೂಮಿ ಕೊಡುವಷ್ಟು ನೆಮ್ಮದಿ ಹಾಗೂ ಧೈರ್ಯ ಬೇರೇನೂ ನೀಡದು. ಭೂಮಿಯೇ ಇಲ್ಲದ ಲಕ್ಷಾಂತರ ಕುಟುಂಬಗಳು ನಮ್ಮಲ್ಲಿವೆ. ಭೂಮಿ ಇದ್ದೂ, ಅದರ ಮಾಲೀಕತ್ವ ಇಲ್ಲದ ಲಕ್ಷಾಂತರ ರೈತರು ನಮ್ಮ ಮಧ್ಯೆ ಇದ್ದಾರೆ. ಜತೆಗೆ ದಾಖಲೆಗಳು ಸರಿಯಾಗಿ ಇಲ್ಲದ ಕಾರಣ ಭೂಮಿಯನ್ನು ಅನುಭವಿಸಲು ಸಾಧ್ಯವಿರದವರೂ ಇದ್ದಾರೆ. ಈ ಎಲ್ಲರಲ್ಲಿ ಕೆಲವರಿಗಾದರೂ ಭೂಮಿಯ ಹಕ್ಕು ಮತ್ತು ಮಾಲೀಕತ್ವ ಒದಗಿಸಿಕೊಡುವ ಮೂಲಕ ನೆಮ್ಮದಿ ನೀಡುವ ಗ್ಯಾರಂಟಿ ಇದು. ಈ ಎಲ್ಲದರಿಂದ ವಂಚಿತರಾಗಿರುವ ಜನರಿಗೆ ನೆಲೆ ಕಲ್ಪಿಸುವ ಮೂಲಕ ನೆಮ್ಮದಿ ನೀಡುವುದು ನಮ್ಮ ಸರ್ಕಾರದ ಉದ್ದೇಶ. ಇದಕ್ಕಾಗಿ ಕಂದಾಯ ಇಲಾಖೆಯ ಕಾರ್ಯಸ್ವರೂಪ ಮತ್ತು ವ್ಯವಸ್ಥೆಯಲ್ಲಿ ಗಣನೀಯ ಸುಧಾರಣೆ ತರಲಾಗುತ್ತಿದೆ.

• **ಭೂಮಿಯ ನೈಜ ಹಕ್ಕು–ಮಾಲೀಕತ್ವ ಒದಗಿಸುವ ಉದ್ದೇಶದ ಈ ಯೋಜನೆಯನ್ನು ‘ಎರಡನೇ ಭೂಸುಧಾರಣಾ ಚಳವಳಿ’ ಎನ್ನಬಹುದೇ?**

ಭೂ ಸುಧಾರಣೆ ಹೆಸರಿನಲ್ಲಿ ಲಕ್ಷಾಂತರ ಜನರಿಗೆ ಭೂಮಿ ಮಂಜೂರು ಮಾಡಲಾಗಿದೆ. ಆದರೆ ಅಗತ್ಯ ದಾಖಲೆಗಳನ್ನು ಒದಗಿಸದೆ, ಅವರಿಗೆ ಪೂರ್ಣ ಪ್ರಮಾಣದ ಮಾಲೀಕತ್ವ ದೊರೆತಿಲ್ಲ. ಭೂ ಸುಧಾರಣೆ ಎಂದೊಡನೆ ರೈತರ ಮನಸ್ಸಿನಲ್ಲಿ ಈ ಅಂಶವೇ ಬರುತ್ತದೆ. ಭೂಮಿ ಮಂಜೂರು ಮಾಡಿ, ಪ್ರಚಾರ ಪಡೆದುಕೊಳ್ಳುವುದಕ್ಕೆ ಇದು ಸೀಮಿತವಾಗಬಾರದು. ಬದಲಿಗೆ ಸಮಸ್ಯೆಗಳನ್ನು ನಿವಾರಿಸಿ, ಎಲ್ಲರಿಗೂ ಭೂಮಿಯ ಹಕ್ಕು ಮತ್ತು ಮಾಲೀಕತ್ವ ಒದಗಿಸಿಕೊಡಬೇಕು ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ನನ್ನ ಒತ್ತಾಸೆಯಾಗಿತ್ತು. ಈ ಎಲ್ಲವನ್ನು ಗಮನದಲ್ಲಿ ಇರಿಸಿಕೊಂಡೇ ಈ ಕಾರ್ಯಕ್ರಮವನ್ನು ಅತ್ಯಂತ ವ್ಯವಸ್ಥಿತವಾಗಿ ರೂಪಿಸಲಾಗಿದೆ.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಭೂಮಿ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸಾವಿರಾರು ಪ್ರಕರಣಗಳಿವೆ. ಲಕ್ಷಾಂತರ ಮಂದಿ ನ್ಯಾಯಾಲಯಗಳಿಗೆ ಅಲೆಯುತ್ತಿದ್ದಾರೆ, ಹಣ ಖರ್ಚು ಮಾಡುತ್ತಿದ್ದಾರೆ. ಈ ಸಮಸ್ಯೆಗಳನ್ನು ನಿವಾರಿಸಿದರೆ, ಆ ಸ್ವತ್ತು ಮತ್ತು ಮಾನವ ಸಂಪನ್ಮೂಲವನ್ನು ಉತ್ಪಾದಕತೆಗೆ ಬಳಸಿಕೊಳ್ಳಬಹುದು. ಇದರಿಂದ ರೈತರ ಜೀವನಮಟ್ಟ ಸುಧಾರಿಸುತ್ತದೆ, ಅವರ ಬದುಕು ಹಸನಾಗುತ್ತದೆ. ಈ ದಿಸೆಯಲ್ಲಿ ಈ ಕಾರ್ಯಕ್ರಮವನ್ನು ಭೂ ಸುಧಾರಣೆ ಎಂದೂ ಕರೆಯಬಹುದು.

• **ಭೂ ಗ್ಯಾರಂಟಿ ಅಡಿಯ ಎಲ್ಲ ಉಪಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಕಾಲಮಿತಿ ಹಾಕಿಕೊಳ್ಳಲಾಗಿದೆಯೇ?**

ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದು ಹಲವು ತಿಂಗಳ ನಂತರ ಈ ಕಾರ್ಯಕ್ರಮಗಳನ್ನು ಆರಂಭಿಸಿದ್ದೇವೆ. ಆರಂಭದಲ್ಲಿ ನಿರೀಕ್ಷಿತ ವೇಗದಲ್ಲಿ ಕೆಲಸ ಆಗುತ್ತಿರಲಿಲ್ಲ. ಆದರೆ ಪ್ರತಿ ವಾರವೂ ಪ್ರಗತಿಯ ಬಗ್ಗೆ ವರದಿ ಪಡೆದು, ಸೂಚನೆ ನೀಡಲಾಗುತ್ತಿದೆ. ಹೀಗಾಗಿ ಒಂದು ವರ್ಷದಲ್ಲಿ ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿದೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಕೆಲವು ಮುಂದಿನ ಒಂದು ವರ್ಷದಲ್ಲಿ, ಇನ್ನೂ ಕೆಲವು ಎರಡು ವರ್ಷದ ಒಳಗೆ ಪೂರ್ಣವಾಗಲಿವೆ. ಅದನ್ನು ಪಟ್ಟು ಹಿಡಿದು ಸಾಧಿಸುತ್ತೇವೆ. ಈ ಎಲ್ಲ ಪ್ರಯತ್ನಗಳ ಒಟ್ಟು ಫಲ ನಮಗೆ ಕಾಣಲು ಒಂದೆರಡು ವರ್ಷಗಳು ಬೇಕಾಗುತ್ತವೆ.

• **ಕಾವೇರಿ ತಂತ್ರಾಂಶವು ಪದೇ–ಪದೇ ಸರ್ವರ್ ಸಮಸ್ಯೆ ಎದುರಿಸುವ ಬಗ್ಗೆ ದೂರುಗಳಿವೆ. ಕಂದಾಯ ಇಲಾಖೆಯ ಬಹುತೇಕ ಸೇವೆಗಳನ್ನು ಡಿಜಿಟಲೀಕರಣ ಮಾಡುತ್ತಿದ್ದೀರಿ. ಸರ್ವರ್ ಸಮಸ್ಯೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ?**

ಕಾವೇರಿ ತಂತ್ರಾಂಶದಲ್ಲಿ ಸರ್ವರ್ ಸಮಸ್ಯೆ ಇರುವುದರ ಬಗ್ಗೆ ಆಗಾಗ ದೂರುಗಳು ಬರುತ್ತಿವೆ. ಹೀಗಿದ್ದೂ ಪ್ರತಿದಿನ 9,000ದಿಂದ 14,000ದಷ್ಟು ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಸಂಪೂರ್ಣ ಡಿಜಿಟಲೀಕರಣದಿಂದ ಸರ್ವರ್‌ಗಳ ಮೇಲಿನ ಒತ್ತಡ ಹೆಚ್ಚಬಹುದು. ಅದನ್ನು ಗಮನದಲ್ಲಿ ಇರಿಸಿಕೊಂಡೇ ಹಲವು ಸಭೆ ನಡೆಸಲಾಗಿದೆ. ನಿಜವಾಗಿಯೂ ಯಾವ ಹಂತದಲ್ಲಿ ಸಮಸ್ಯೆ ಆಗುತ್ತಿದೆ ಎಂಬುದನ್ನು ಪತ್ತೆ ಮಾಡಿ, ಅದನ್ನು ನಿವಾರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ, ಮತ್ತೆ ಈ ಬಗ್ಗೆ ದೂರು ಬರಬಾರದು ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದೇನೆ.

• **ರೈತರು ಈವರೆಗೆ ಕಚೇರಿಗೆ ಬಂದು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಈಗ ಅಧಿಕಾರಿ ಮತ್ತು ಸಿಬ್ಬಂದಿಯೇ ರೈತರ ಮನೆಬಾಗಿಲಿಗೆ ಹೋಗಬೇಕು ಎಂದಿದ್ದೀರಿ. ಈ ಬದಲಾವಣೆಗೆ ಎದುರಾದ ಸವಾಲುಗಳೇನು?**

ಇದೊಂದು ಮಹತ್ವದ ಬದಲಾವಣೆ. ಇಲಾಖೆಯ ಎಲ್ಲ ಸಿಬ್ಬಂದಿ ಒಂದೇ ರೀತಿ ಇರುವುದಿಲ್ಲ. ಶೇ 30ರಷ್ಟು ಮಂದಿ ಈ ಬದಲಾವಣೆಯನ್ನು ಬಹಳ ಸಂತಸದಿಂದ ಒಪ್ಪಿಕೊಂಡು ಕಾರ್ಯರೂಪಕ್ಕೆ ತಂದಿದ್ದಾರೆ. ಇನ್ನು ಶೇ 30–35ರಷ್ಟು ಮಂದಿ ಸೂಚನೆ ಮತ್ತು ಎಚ್ಚರಿಕೆಗಳ ನಂತರ ಕಾರ್ಯರೂಪಕ್ಕೆ ತಂದಿದ್ದಾರೆ. ಜನರ ಬಳಿಗೇ ಹೋಗಿ ಕೆಲಸ ಮಾಡಿಕೊಟ್ಟಾಗ, ಜನರಿಂದ ವ್ಯಕ್ತವಾಗುವ ಧನ್ಯತಾ ಭಾವ ಸಿಬ್ಬಂದಿಗೆ ಉತ್ಸಾಹ ನೀಡಿದೆ. ಇಂತಹ ಅಧಿಕಾರಿ ಮತ್ತು ಸಿಬ್ಬಂದಿಯ ಕಾರಣದಿಂದಲೇ ಪ್ರಗತಿ ಸಾಧಿಸಲು ಸಾಧ್ಯವಾಗಿದೆ. ಈ ಬದಲಾವಣೆಗೆ ಒಗ್ಗಿಕೊಳ್ಳದ ಸಿಬ್ಬಂದಿಯೂ ಇದ್ದಾರೆ. ಆದರೆ ಅನಿವಾರ್ಯವಾಗಿ ಜನರ ಬಳಿಗೆ ಹೋಗಲೇಬೇಕಿದೆ. ❖

ಗುಂಡಣ್ಣ

ಎಂಥಾ ತಟ್ಟೆಯಲ್ಲಿ ಮುದ್ದೆ ತಿನ್ನಬೇಕು?

ನುಡಿ ಬೆಳಗು

ದಯಾ ಗಂಗನಘಟ್ಟ

ಕೆಲವೊಮ್ಮೆ ಕೆಲವರ ವ್ಯಕ್ತಿತ್ವ ಮತ್ತು ಮಾತುಗಳು ಸೋತ ಬದುಕಿಗೆ ಸಂಜೀವಿನಿಯಂತೆ ದಕ್ಕಿ ಯೋಚನೆಯ ದಿಕ್ಕನ್ನೇ ಬದಲಿಸಿಕೊಂಡು ಹೊಸ ದಾರಿಯಲ್ಲಿ ಸಾಗಲು ಸಹಾಯ ಮಾಡುತ್ತವೆ. ಅವು ದೊಡ್ಡ ತತ್ವಗಳೋ, ಆಧ್ಯಾತ್ಮಿಕ ಪಾಂಡಿತ್ಯದ ಮಾತುಗಳೋ ಆಗಬೇಕಿಲ್ಲ. ಸರಳವಾದ ಜೀವನಾನುಭವಗಳಾಗಿದ್ದರೂ ಸಾಕು.

ಗಂಗನಘಟ್ಟ ಎಂಬ ಊರಿನಲ್ಲಿ ಇದ್ದ ಜಮೀನ್ದಾರ ಮಂಜಪ್ಪನ ಜೊತೆ ಯಾವಾಗಲೂ ಇರುತ್ತಿದ್ದ ಅಮಾಸಯ್ಯ ನೋಡಲು ಬಹಳ ಸರಳವಾಗಿದ್ದ ವ್ಯಕ್ತಿ. ಅವರ ಮೈಬಣ್ಣವೇ ಆಗಿ, ತೊಟ್ಟಿದ್ದನ್ನೂ ಮರೆತುಬಿಟ್ಟಂತೆ ಅವರಿಗೆ ಅಂಟಿಕೊಂಡಿದ್ದ ಒಂದು ಖಾಕಿ ಬಣ್ಣದ ಮಾಸಲು ಚಡ್ಡಿ ಅಷ್ಟೇ ಅವರ ಯಾವತ್ತಿನ ಬಟ್ಟೆ. ಬೆಳಿಗ್ಗೆ ಎದ್ದೇಟಿಗೆ ಕುಡಿಯುತ್ತಿದ್ದ ದೊಡ್ಡ ಲೋಟದ ಟೀ ಮತ್ತು ಒಪ್ಪತ್ತು ಏರಿದ ಮೇಲೆ ತಿನ್ನುತ್ತಿದ್ದ ಎರಡು ರಾಗಿ ರೊಟ್ಟಿ ಇಲ್ಲವೇ ಮುದ್ದೆ, ಅಪರೂಪಕ್ಕೆ ಸಿಗುತ್ತಿದ್ದ ಮಾಂಸದೂಟ ಇವಿಷ್ಟೇ ಜೀವನದುದ್ದಕ್ಕೂ ಅವರು ತಿಂದ ಊಟ. ಜಮೀನ್ದಾರರ ಮನೆಯ ಯಾವ ಆಡಂಬರದ ಆಚರಣೆ, ಉಡುಗೆ, ಅಡುಗೆಗಳೂ ಅವರಿಗೆ ವ್ಯತ್ಯಾಸವಾಗಿ ಕಂಡದ್ದೇ ಇಲ್ಲ. ಸದಾ ನಗುವ ಮುಖ, ಕೆಲಸದಲ್ಲಿ ಮುಳುಗಿದ ಕೈಕಾಲು.

ಒಂದು ದಿನ ಯಾವುದೋ ಕೈಕೊಟ್ಟ ವ್ಯವಹಾರ ಮತ್ತು ಅದರಿಂದಾದ ಒತ್ತಡದಿಂದ ಬೇಸತ್ತ ಮಂಜಪ್ಪ ಹೊಲಕ್ಕೆ ಹೋದವರು ದಿಕ್ಕುತಪ್ಪಿದವರಂತೆ ಮೈಮೇಲೆ ಗ್ಯಾನವಿಲ್ಲದೇ ಕುಳಿತುಬಿಟ್ಟಿದ್ದಾರೆ. ಕತ್ತಲಾದರೂ ಮನೆಗೆ ಬಂದೇ ಇಲ್ಲ. ಅಮಾಸಯ್ಯ ಹುಡುಕಿಕೊಂಡು ಹೋದರೆ ಬಾವಿಯ ಕಟ್ಟೆ ಮೇಲೆ ಕೂತಿದ್ದರಂತೆ.

‘ಯಾಕೋ ಮಂಜಪ್ಪಾ ಇಲ್ ಕುಂತಿದಿಯ’ ಅಂತ ಕೇಳಿದ್ದಕ್ಕೆ ‘ಏ.. ಆಗಲ್ಲ ಕಣೋ ಅಮಾಸಯ್ಯ, ಸಾಕಾಯ್ತು ಜೀವನ ಏನೂಂತ ನಿಭಾಯ್ಸದು. ಸತ್ರೆ ಒಳ್ಳೆದು’ ಅಂದ್ರಂತೆ. ಅಮಾಸಯ್ಯ ಏನೂ ಹೆಚ್ಚು ಹೇಳದೆ, ‘ಇರ್ಲಿ ದಾರಿಲಿ ಹೋಗ್ತಾ ಮಾತಾಡನ ಬಾ’ ಅಂತ ಹೊರಡಿಸಿಕೊಂಡು ಬಂದಿದಾರೆ. ಬರ್ತಾ ದಾರಿಯಲ್ಲಿ ‘ಮಂಜಪ್ಪಾ ನೀನು ದಿನಾ ಊಟ ಏನ್ ತಿಂತಿಯಾ? ಎಂದರಂತೆ. ಅವರು ‘ಮುದ್ದೆ ಊಟ’ ಅಂದಿದಾರೆ. ‘ನಾನೂ ಅದೇ ಮುದ್ದೆನೇ ತಿಂತಿನಿ ಅಲ್ವಾ!’ ಹು. ‘ಇಬ್ರೂ ಹೊಟ್ಟೆಗೆ ತಿನ್ನೋದು ಮುದ್ದೆನೇ ಮಂಜಪ್ಪ. ಆದರೆ ಒಂದು ವ್ಯತ್ಯಾಸ ಏನಂದ್ರೆ, ನಾನು ಮುದ್ದೆನ ಹಸಿವು ನೀಗಿಸಿಕಳಕ್ಕೆ ಮಾತ್ರ ತಿಂತೀನಿ. ನೀನು ಹಸಿವಷ್ಟನ್ನ ಗಮನಿಸದೆ ಆ ಮುದ್ದೆಯನ್ನ ಎಂಥಾ ತಟ್ಟೆಯಲ್ಲಿ ತಿನ್ನಬೇಕು, ತಟ್ಟೆ ಸ್ಟೀಲಿನದಾದರೆ ಎಷ್ಟು ಬೆಲೆ, ಬೆಳ್ಳಿಯದಾದರೆ ಹೇಗೆ ಅನ್ನೋದಕ್ಕೆ ಹೆಚ್ಚಿನ ಗಮನ ಕೊಡ್ತೀಯಾ ಅಷ್ಟೆ’ ಅಂತ ಹೇಳಿ ಮನೆಯವರೆಗೆ ಅವರನ್ನ ಬಿಟ್ಟು ಹೊರಟು ಹೋದರಂತೆ. ‘ಹೌದಲ್ವಾ ನನ್ನ ಹೆಚ್ಚಿನ ಸಮಸ್ಯೆಗಳು ಸಲ್ಲದ ಹೆಚ್ಚುವರಿ ಅಗತ್ಯಗಳಿಂದಲೇ ಹುಟ್ಟಿದ್ದಲ್ವಾ’ ಅಂತ ಯೋಚಿಸಿದ ಮಂಜಪ್ಪ, ತಮ್ಮನ್ನ ತಾವು ಮುಂದೆ ಸಾಕಷ್ಟು ಸರಿಪಡಿಸಿಕೊಂಡರಂತೆ.

ಆಯುಧಕ್ಕೆ ಗುರಿ ಗೊತ್ತಿರುವುದಿಲ್ಲ, ಅದನ್ನು ಬಳಸುವ ಕೈಗಳಿಗೆ ಗೊತ್ತಿರುತ್ತದೆ. ಯೋಚನೆಗಳೂ ಆಯುಧಗಳಂತೆ. ಬುದ್ಧಿಯನ್ನು ಅವುಗಳ ಕೈಗೆ ಕೊಡಬಾರದು. ಅವತ್ತು ಅಮಾಸಯ್ಯ ಆಡಿದ ಆ ಮಾತು ಇವತ್ತಿಗೂ ನಾವೂ ನೀವೂ ಒಮ್ಮೆ ಕುಳಿತು ಯೋಚಿಸಬೇಕಾದ ಮಾತುಗಳೇ ಅಲ್ಲವೇ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 6, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಏಕಾದಶಿ ಗಂ. 28-49 ನಕ್ಷತ್ರ: ಹಸ್ತ ಗಂ. 6-34 ಯೋಗ: ವ್ಯತೀಪಾತ ಗಂ. 10-13 ಕರಣ: ವಣಜೆ ಗಂ. 15-32, ವೃಷಭ ಮಾಸದ 23 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-06 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 09 ಜುಲ್‌ಹಿಜಾ , ಮಳೆ ನಕ್ಷತ್ರ: ರೋಹಿಣಿ ನಾಲ್ಕನೇ ಪಾದ.
ಅದೃಷ್ಟ ಸಂಖ್ಯೆ : 4, 6

ಮೇಷ: ಹೊಸದಾಗಿ ಲೇವಾದೇವಿ ವ್ಯವಹಾರವನ್ನು ಆರಂಭಿಸುವ ಆಲೋಚನೆ ಹೊಂದಿದವರಿಗೆ ಅಧಿಕೃತ ಆರಂಭ ದಿನ. ಆರ್ಥಿಕ ವ್ಯವಸ್ಥೆ ನೋಡಿಕೊಳ್ಳುವವರಿಗೆ ಅಧಿಕಾರಿಗಳಿಂದ ಆದೇಶವಾಗುವುದು.

ವೃಷಭ: ಸಾಂಸಾರಿಕವಾಗಿ ಹಾಗೂ ಸಾಮಾಜಿಕವಾಗಿ ವರ್ತನೆಯಲ್ಲಿ ಸಮತೋಲನವನ್ನು ಹಾಗೂ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಉತ್ತಮವೆಂದು ಅನಿಸುವುದು. ಸಣ್ಣ ವ್ಯಾಪಾರಿಗಳಿಗೆ ಉತ್ತಮ ಆದಾಯ.

ಮಿಥುನ: ಸಕಾರಾತ್ಮಕ ಭಾವನೆಗಳ ಕುರಿತು ಮಡದಿಯೊಂದಿಗೆ ಚರ್ಚೆ ನಡೆಸಿ ಸಮಸ್ಯೆ ಪರಿಹಾರವಾಗುತ್ತದೆ. ಮನೋಬಲದಿಂದ ನಡೆಯಬೇಕಾದ ಕೆಲಸ ಕಾರ್ಯಗಳು ಚುರುಕಾಗಿ ಮತ್ತು ಅಚ್ಚುಕಟ್ಟಾಗಿ ನಡೆಯುವುದು.

ಕರ್ಕಾಟಕ: ವಿಪರೀತ ಭಿನ್ನಾಭಿಪ್ರಾಯಗಳಿಂದ ಮುಂದೂಡಿದ್ದ ಸ್ವತ್ತು ವಿವಾದಗಳು ನಿರ್ಣಯವಾಗುವುದು. ಹಲವು ಕಾರ್ಯಗಳಲ್ಲಿ ಆಪ್ತೇಷ್ಟರ ಸಹಕಾರವಿರುವುದು. ವಿವಾಹ ಸಂಬಂಧದ ಮಾತುಕತೆ ತೃಪ್ತಿಕರ.

ಸಿಂಹ: ದೈಹಿಕವಾಗಿ ಕೆಲಸ ಮಾಡುವವರಿಗೆ ಅಧಿಕ ದೇಹಾಯಾಸವಾಗುವ ಸಂಭವವಿದೆ. ಸರ್ಕಾರಿ ನೌಕರರಿಗೆ ಇತರೆ ಕಾರ್ಯಗಳಿಂದ ಅಧಿಕ ಒತ್ತಡ ಉಂಟಾಗಬಹುದು. ಗಮನವಿಟ್ಟು ಕೆಲಸ ಮಾಡಿದರೆ ಯಶಸ್ಸನ್ನು ಸಾಧಿಸುವಿರಿ.

ಕನ್ಯಾ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ಜೀವನದಲ್ಲಿ ನಡೆಯಲಿದೆ. ಧರ್ಮಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ. ಬುದ್ಧಿವಂತಿಕೆಯಿಂದ ಬದುಕಬೇಕಾದ ದಿನ.

ತುಲಾ: ಪರಿಶ್ರಮದ ಜತೆ ಅಧಿಕ ಸಮಯವನ್ನು ವೃತ್ತಿಗೆ ಮೀಸಲಿಡಿ. ಪ್ರೇಮ ವಿವಾಹಕ್ಕಾಗಿ ಕಾಯುತ್ತಿರುವವರು ಕಾಯಬೇಕಾಗಬಹುದು. ಮನೆಯ ಸಮೀಪದ ಶಿವಾಲಯಕ್ಕೆ ಭೇಟಿ ನೀಡಿ ಶುಭವಾಗುತ್ತದೆ.

ವೃಶ್ಚಿಕ: ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕಿರುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವುದರಿಂದ ನಕಾರಾತ್ಮಕ ಅಂಶಗಳು ದೂರ.

ಧನು: ಪ್ರಶ್ನೆಗಳಿಗೆ ವೃತ್ತಿರಂಗದ ಸ್ನೇಹಿತರಿಂದ ಉತ್ತಮ ಸಲಹೆಗಳು ದೊರಕಲಿವೆ. ಹಿರಿಯರ ಆರೋಗ್ಯದ ಬಗ್ಗೆ ಗಮನ ಇಡುವುದು ಉತ್ತಮ. ಶಸ್ತ್ರ ಚಿಕಿತ್ಸರಿಗೆ ಅಪರೂಪದ ಅನುಭವ ಸಿಗುವುದು.

ಮಕರ: ನೌಕರಿ ಬದಲಾವಣೆಯಿಂದ ಅಧಿಕ ಲಾಭ ಪಡೆಯುವ ಸಂಭವವಿದೆ. ಹೊರದೇಶದಲ್ಲಿರುವ ಮಗನ ಯಶಸ್ಸಿನಿಂದ ಮನೆಯಲ್ಲಿ ಸಂತಸದ ವಾತಾವರಣವಿರುತ್ತದೆ. ವಾದ ವಿವಾದಗಳು ದೂರಾಗಲಿವೆ.

ಕುಂಭ: ದವಸ ಧಾನ್ಯಗಳ ಸಗಟು ವ್ಯಾಪಾರಿಗಳು ಹಾಗೂ ದಲ್ಲಾಳಿಗಳು ಅನುಕೂಲವನ್ನು ಪಡೆಯುವರು. ವೈದ್ಯಕೀಯ ರಂಗದವರ ಪ್ರಗತಿಗೆ ಉತ್ತಮ ಅವಕಾಶಗಳು ದೊರೆಯಲಿವೆ. ದಾಂಪತ್ಯ ಜೀವನ ಸುಖಮಯವಾಗಿರುವುದು.

ಮೀನ: ಅಧ್ಯಾಪಕರು , ರಂಗಕರ್ಮಿಗಳಿಗೆ ಒಳ್ಳೆಯ ಅವಕಾಶಗಳು ದೊರೆಯಲಿವೆ. ಅನಿರೀಕ್ಷಿತವಾಗಿ ಎದುರಾಗುವ ಎಡರು ತೊಡರುಗಳಿಂದ ಧೈರ್ಯ ಹೆಚ್ಚುತ್ತದೆ. ಮಾತೃವರ್ಗದವರ ನೆರವಿನಿಂದ ಸಂತೋಷವಾಗಲಿದೆ.

ಪದಬಂಧ 6065

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮಾದ ಎಸಗಿದ ತಪ್ಪು (3)
5. ಹಸನ್ಮುಖ ವದನ (4)
6. ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8. ಹಿಂಜರಿಕೆ ಏಕೆ? ಇದು ಮುಸಲ್ಮಾನರ ಕಾಲಗಣನೆ (3)
11. ಕುದುರೆಯನ್ನೇರುವ ಬಳೆ (3)
13. ಸೂರ್ಯನ ಇನ್ನೊಂದು ಹೆಸರು (4)
17. ಯಕ್ಷಿಣಿಗಾರನಿಲ್ಲಿ ತಿರುಗಿದ್ದಾನೆ (4)
18. ಯೋಗವಿರುವ ಅದೃಷ್ಟ! (3)

ಮೇಲಿಂದ ಕೆಳಕ್ಕೆ
1. ಇದು ಕನ್ನಡಿಗನ ಎಕ್ಸ್ಪರಿಮೆಂಟ್! (3)
2. ಈತ ದನಗಳನ್ನು ಕಾಯುವವನು (4)
3. ಯುದ್ಧವನ್ನು ಹೀಗೂ ಹೇಳುತ್ತಾರೆ (3)
4. ಕಾವ್ಯದ ನವರಸಗಳಲ್ಲಿ ಒಂದು (3)
7. ವರ್ಣದಿಂದ ಬಂದಿರುವ ವಿಸ್ತಾರವಾದ ನಿರೂಪಣೆ (3)
9. ದುರಸ್ತಿಯನ್ನು ಹೀಗೆನ್ನಿ (3)
10. ವಿಷಯದ ಕ್ರಮಬದ್ಧವಾದ ನಿರೂಪಣೆ (3)
12. ಚಿಲ್ಲರೆ ಹಣವಿದು (4)
14. ಹಿತವಾದ ಮಾತು (3)
15. ಗೋಜಾತಿಯ ಪ್ರಾಣಿಗಳ ತ್ಯಾಜ್ಯಉತ್ಪನ್ನ ಉಲ್ಟಾ ಆಗಿದೆ (3)
16. ಹೂವಿನಲ್ಲಿರುವ ಹುಡಿ ಇಲ್ಲಿದೆ (3)



6064ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿವೇಶನ 3.ಕಸುಗಾಯಿ
5.ವಾಚಕ 6.ಪತಿ
8.ವರಾತ 10.ಕೆಲಸ
13.ಹರ 15.ಕಾದಲ
16.ಮೃಗಜಲ 17.ಸೆರೆಮನೆ

ಮೇಲಿಂದ ಕೆಳಕ್ಕೆ:
1.ನಿಕ್ಷೇಪ 2.ನವಾಬ
3.ಕಕವ 7.ತಿಳಿವಳಿಕೆ
9.ತಲೆಬರಹ 11.ಸಕಾಲ
12.ವಲಸೆ 14.ರವಾನೆ

ಸುಡೊಕು 6449

		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6448 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಷೇರುಪೇಟೆ ವಹಿವಾಟು 443



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,620
ಇಂದಿನ ಅಂತ್ಯ	24,750
▲	130
ದಿನದ ಗರಿಷ್ಠ	24,899

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹605
	12 ಕ್ಕೆ	₹80
ಮೈಸೂರು	100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹241-516
ದ್ವಿತಳಿ (ಬಿ.ವಿ)	₹422-679

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193.50
ಆರ್‌ಎಸ್‌ಎಸ್-5	₹188.50
ಗುಡ್ ಲಾಟ್	₹178.50

(ಪ್ರತಿ ಕೆಜಿಗೆ)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹10500-21000
ತಿಪಟೂರು	₹19500-21100
ತುಮಕೂರು	₹14200-16200

ಭಾರತದಲ್ಲೇ ತಯಾರಾಗಲಿದೆ ರಫೇಲ್ ಯುದ್ಧವಿಮಾನದ ಚೌಕಟ್ಟು

ಹೈದರಾಬಾದ್ (ಪಿಟಿಐ): ರಫೇಲ್ ಯುದ್ಧ ವಿಮಾನಗಳ ಚೌಕಟ್ಟಿನ ಮುಖ್ಯ ಭಾಗಗಳನ್ನು ಭಾರತದಲ್ಲಿಯೇ ತಯಾರಿಸಲು ಟಾಟಾ ಸಮೂಹಕ್ಕೆ ಸೇರಿರುವ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಮತ್ತು ಫ್ರಾನ್ಸ್‌ನ ಡಾಸೊ ಏವಿಯೇಷನ್ ಒಪ್ಪಂದ ಮಾಡಿಕೊಂಡಿವೆ.

ಈ ಒಪ್ಪಂದದ ಭಾಗವಾಗಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಕಂಪನಿಯು ಹೈದರಾಬಾದ್‌ನಲ್ಲಿ ಅತ್ಯಾಧುನಿಕ ಉತ್ಪಾದನಾ ಘಟಕವನ್ನು ಸ್ಥಾಪಿಸಲಿದೆ. ರಫೇಲ್ ಯುದ್ಧ ವಿಮಾನದ ಕೆಲವು ಪ್ರಮುಖ ಭಾಗಗಳು ಈ ಘಟಕದಲ್ಲಿ ತಯಾರಾಗಲಿವೆ ಎಂದು ಎರಡೂ ಕಂಪನಿಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿವೆ.

ಮೊದಲ ಭಾಗಗಳು 2028ನೆಯ ಆರ್ಥಿಕ ವರ್ಷದಲ್ಲಿ ತಯಾರಾಗುವ ನಿರೀಕ್ಷೆ ಇದೆ. ಘಟಕವು ಪ್ರತಿ ತಿಂಗಳು ಈ ಯುದ್ಧ ವಿಮಾನದ ಎರಡು ಚೌಕಟ್ಟುಗಳನ್ನು ತಯಾರಿಸುವ ನಿರೀಕ್ಷೆ ಇದೆ. ರಫೇಲ್ ಯುದ್ಧ ವಿಮಾನದ ಚೌಕಟ್ಟುಗಳು ಫ್ರಾನ್ಸ್ ಹೊರಗಡೆ ತಯಾರಾಗಲಿರುವುದು ಇದೇ ಮೊದಲು.

'ಭಾರತದಲ್ಲಿ ನಮ್ಮ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಇದು ನಿರ್ಣಾಯಕ ಹೆಜ್ಜೆ' ಎಂದು ಡಾಸೊ ಏವಿಯೇಷನ್ ಕಂಪನಿಯ ಸಿಇಒ ಎರಿಕ್ ಟ್ರಾಪಿಯರ್ ಹೇಳಿದ್ದಾರೆ.

ಹೈದರಾಬಾದ್‌ನ ತಯಾರಿಕಾ ಘಟಕವು ಭಾರತದ ರಕ್ಷಣಾ ಅಗತ್ಯಗಳನ್ನು ಪೂರೈಸುವುದಷ್ಟೇ ಅಲ್ಲದೆ, ರಫೇಲ್ ಯುದ್ಧವಿಮಾನಗಳಿಗೆ ಜಾಗತಿಕವಾಗಿ ಇರುವ ಮಾರುಕಟ್ಟೆಗಳಿಗೂ ಪ್ರಮುಖ ಪೂರೈಕೆದಾರ ಆಗಲಿದೆ.

ಆರ್‌ಬಿಐನಿಂದ ಅನುಮತಿ ಪಡೆದ ದೇಶದ ಮೊದಲ ಇ–ಕಾಮರ್ಸ್ ದೈತ್ಯ

ಫ್ಲಿಪ್‌ಕಾರ್ಟ್: ಸಾಲ ನೀಡಲು ಅಸ್ತು

ಮುಖ್ಯಾಂಶಗಳು

- ನೇರವಾಗಿ ಗ್ರಾಹಕರಿಗೆ, ಮಾರಾಟಗಾರರಿಗೆ ಸಾಲ
- ಸಾಲ ನೀಡಿಕೆ ಕೆಲವೇ ತಿಂಗಳಲ್ಲಿ ಆರಂಭ ಸಾಧ್ಯತೆ
- ಫ್ಲಿಪ್‌ಕಾರ್ಟ್‌ನಲ್ಲಿ ವಾಲ್‌ಮಾರ್ಟ್ ಶೇಕಡ 80ರಷ್ಟು ಪಾಲು

ಬೆಂಗಳೂರು (ರಾಯಿಟರ್ಸ್): ದೇಶದ ಪ್ರಮುಖ ಇ–ಕಾಮರ್ಸ್ ವೇದಿಕೆ ಫ್ಲಿಪ್‌ಕಾರ್ಟ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ಬ್ಯಾಂಕೇತರ ಹಣಕಾಸು ಕಂಪನಿ (ಎನ್‌ಬಿಎಫ್‌ಸಿ) ಪರವಾನಗಿ ದೊರೆತಿದೆ. ಅಮೆರಿಕದ ವಾಲ್‌ಮಾರ್ಟ್ ಕಂಪನಿಯು ಫ್ಲಿಪ್‌ಕಾರ್ಟ್‌ನಲ್ಲಿ ಶೇಕಡ 80ರಷ್ಟು ಪಾಲು ಹೊಂದಿದೆ.

ಈ ಪರವಾನಗಿ ದೊರೆತಿರುವ ಕಾರಣದಿಂದಾಗಿ ಫ್ಲಿಪ್‌ಕಾರ್ಟ್‌ಗೆ ತನ್ನ ವೇದಿಕೆಯ ಮೂಲಕ ಗ್ರಾಹಕರು ಮತ್ತು ಮಾರಾಟಗಾರರಿಗೆ ಸಾಲ ನೀಡಲು ಸಾಧ್ಯವಾಗಲಿದೆ. ಆದರೆ, ಠೇವಣಿ ಸ್ವೀಕರಿಸುವ ಅಧಿಕಾರ ಫ್ಲಿಪ್‌ಕಾರ್ಟ್‌ಗೆ ಇರುವುದಿಲ್ಲ.

ಪರವಾನಗಿ ದೊರೆತಿರುವುದನ್ನು ಕಂಪನಿಯ ವಕ್ತಾರರೊಬ್ಬರು ರಾಯಿಟರ್ಸ್‌ಗೆ ಖಚಿತಪಡಿಸಿದ್ದಾರೆ. ದೇಶದಲ್ಲಿ ದೊಡ್ಡ ಇ–ಕಾಮರ್ಸ್ ಕಂಪನಿಯೊಂದಕ್ಕೆ ಎನ್‌ಬಿಎಫ್‌ಸಿ ಪರವಾನಗಿಯು ಆರ್‌ಬಿಐ ಕಡೆಯಿಂದ ಸಿಕ್ಕಿರುವುದು ಇದೇ ಮೊದಲು. ಈಗ ಬಹುತೇಕ ಇ–ಕಾಮರ್ಸ್ ವೇದಿಕೆಗಳು, ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು ಗ್ರಾಹಕರಿಗೆ ಸಾಲ ನೀಡುತ್ತಿವೆ. ಆದರೆ, ಫ್ಲಿಪ್‌ಕಾರ್ಟ್ ತಾನೇ ನೇರವಾಗಿ ಸಾಲ ಕೊಡುವ ಪರವಾನಗಿ ಪಡೆದಿದೆ.

ಫ್ಲಿಪ್‌ಕಾರ್ಟ್ ಈ ಪರವಾನಗಿಗಾಗಿ 2022ರಲ್ಲಿ ಅರ್ಜಿ ಸಲ್ಲಿಸಿತ್ತು. ಈ ವರ್ಷದ ಮಾರ್ಚ್ 13ರಂದು ಆರ್‌ಬಿಐ ಅನುಮೋದನೆ ಪತ್ರವನ್ನು ಫ್ಲಿಪ್‌ಕಾರ್ಟ್‌ಗೆ ನೀಡಿದೆ.

ಶೀಘ್ರ ಕಾರ್ಯಾಚರಣೆ?: ಫ್ಲಿಪ್‌ಕಾರ್ಟ್ ಕಂಪನಿಯು ಸಾಲ ನೀಡುವ ಪ್ರಕ್ರಿಯೆಯನ್ನು ಕೆಲವೇ ತಿಂಗಳುಗಳಲ್ಲಿ ಆರಂಭಿಸುವ ನಿರೀಕ್ಷೆಯಿದೆ. ಇದಲ್ಲದೆ, ಮೊದಲು ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸದಸ್ಯರ ನೇಮಕಾತಿ ಆಗಬೇಕಿದೆ. ಅಲ್ಲದೆ, ಸಾಲ ನೀಡುವ ವಹಿವಾಟನ್ನು ರೂಪಿಸಬೇಕಿರುವುದು ಅಂತಿಮಗೊಳ್ಳಬೇಕಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯು ತನ್ನದೇ ವೇದಿಕೆ ಮತ್ತು ಯುಪಿಐ ಸೇವೆಗಳನ್ನು ಒದಗಿಸುವ 'ಸೂಪರ್.ಮನಿ' ಆ್ಯಪ್ ಮೂಲಕ ಗ್ರಾಹಕರಿಗೆ ಸಾಲ ನೀಡಲು ಯೋಜಿಸಿದೆ ಎಂದು ಗೊತ್ತಾಗಿದೆ. ಪ್ರಸ್ತುತ ಫ್ಲಿಪ್‌ಕಾರ್ಟ್, ಗ್ರಾಹಕರಿಗೆ ವೈಯಕ್ತಿಕ ಸಾಲವನ್ನು ಎಕ್ಸಿಸ್ ಬ್ಯಾಂಕ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಕ್ರೆಡಿಟ್ ಸೈಸನ್ ಮೂಲಕ ನೀಡುತ್ತಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 443 ಅಂಶ ಹೆಚ್ಚಳ



ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಳ ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದ ದೇಶದ ಷೇರು ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಏರಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 443 ಅಂಶ ಹೆಚ್ಚಳವಾಗಿ, 81,442ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ನಡುವೆ 912 ಅಂಶದವರೆಗೂ ಸೆನ್ಸೆಕ್ಸ್ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 130 ಅಂಶ ಏರಿಕೆಯಾಗಿ, 24,750ಕ್ಕೆ ಅಂತ್ಯಗೊಂಡಿತು.

ಎಟರ್ನಲ್, ಪವರ್ ಗ್ರಿಡ್, ಐಸಿಐಸಿಐ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಅಲ್ಟ್ರಾ ಟೆಕ್ ಸಿಮೆಂಟ್, ಅದಾನಿ ಪೋರ್ಟ್ಸ್, ಸನ್ ಫಾರ್ಮಾ, ಐಟಿಸಿ ಮತ್ತು ಹಿಂದೂಸ್ತಾನ್ ಯುನಿಲಿವರ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಇಂಡಸ್‌ಇಂಡ್ ಬ್ಯಾಂಕ್, ಎಚ್‌ಸಿಎಲ್ ಟೆಕ್, ಬಜಾಜ್ ಫಿನ್‌ಸರ್ವ್ ಮತ್ತು ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬುಧವಾರದ ವಹಿವಾಟಿನಲ್ಲಿ ₹1,076 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಇಂದು ರೆಪೊ ದರ ನಿರ್ಧಾರ ಪ್ರಕಟ: ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಶುಕ್ರವಾರ ರೆಪೊ ದರ ನಿರ್ಧಾರ ಪ್ರಕಟಿಸಲಿದ್ದಾರೆ.

₹75 ಸಾವಿರ ಕೋಟಿ ತೆರಿಗೆ ಪಾವತಿಸಿದ ಅದಾನಿ ಸಮೂಹ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ ಅದಾನಿ ಸಮೂಹದ ಕಂಪನಿಗಳು ಒಟ್ಟು ₹74,945 ಕೋಟಿ ತೆರಿಗೆ ಪಾವತಿಸಿವೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಗಳು ಒಟ್ಟು ₹58,104 ಕೋಟಿ ತೆರಿಗೆ ಪಾವತಿಸಿದ್ದವು. ಈ ಪಾವತಿಗೆ ಹೋಲಿಸಿದರೆ ಈ ಬಾರಿ ಶೇ 29ರಷ್ಟು ಏರಿಕೆಯಾಗಿದೆ ಎಂದು ಸಮೂಹವು ಗುರುವಾರ ತಿಳಿಸಿದೆ.

ಈ ತೆರಿಗೆಯಲ್ಲಿ ₹28,720 ಕೋಟಿ ನೇರ ತೆರಿಗೆ ಮತ್ತು ₹45,407 ಕೋಟಿ ಪರೋಕ್ಷ ತೆರಿಗೆ ಸೇರಿದೆ. ಇತರೆ ₹818 ಕೋಟಿ ಇದೆ ಎಂದು ತಿಳಿಸಿದೆ.

ಬ್ಯಾಂಕ್ ಸಿಬ್ಬಂದಿಗೆ ರಕ್ಷಣೆ ರಾಜ್ಯಗಳಿಗೆ ಕೇಂದ್ರ ಸೂಚನೆ

ರಾಜ್ಯಗಳಿಗೆ ಸೂಚನೆ

- ಬ್ಯಾಂಕ್ ಶಾಖೆಗಳಲ್ಲಿ ಇಂತಹ ಘಟನೆಗಳು ನಡೆಯುವುದನ್ನು ತಡೆಯಲು ಸ್ಥಳೀಯ ಪೊಲೀಸರನ್ನು ನಿಯೋಜಿಸುವುದು, ವಹಿವಾಟು ಹೆಚ್ಚಿರುವ ಸಂದರ್ಭದಲ್ಲಿ ಗಸ್ತು ನಡೆಸುವುದು ಸೇರಿದಂತೆ ಎಲ್ಲ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಇಂತಹ ಘಟನೆಗಳ ಬಗ್ಗೆ ದೂರು ಬಂದಾಗ ಸಂಬಂಧಪಟ್ಟ ಕಾನೂನು ಜಾರಿ ಸಂಸ್ಥೆಗಳಿಂದ ಪರಿಣಾಮಕಾರಿ ಪ್ರತಿಕ್ರಿಯೆ ಇರುವಂತೆ ನೋಡಿಕೊಳ್ಳಬೇಕು.

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯ ರಕ್ಷಣೆ ಖಾತರಿಪಡಿಸಬೇಕು, ಬ್ಯಾಂಕಿಂಗ್ ಸೇವೆಗಳು ಸಾರ್ವಜನಿಕರಿಗೆ ಅಡಚಣೆ ಇಲ್ಲದೆ ಲಭ್ಯವಾಗುವಂತೆ ಮಾಡಬೇಕು ಎಂದು ಕೇಂದ್ರ ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ಅವರು ಎಲ್ಲ ರಾಜ್ಯಗಳ, ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.

'ಸಮಾಜ ವಿರೋಧಿ ಶಕ್ತಿಗಳು ಬ್ಯಾಂಕ್ ಸಿಬ್ಬಂದಿಯ ಜೊತೆ ಬ್ಯಾಂಕ್ ಆವರಣದಲ್ಲಿ ಈಚೆಗೆ ಒರಟಾಗಿ ವರ್ತಿಸಿರುವ ಆತಂಕಕಾರಿ ಘಟನೆಗಳನ್ನು ಮಾಧ್ಯಮ ವರದಿಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್‌ಗಳು ತೋರಿಸಿಕೊಟ್ಟಿವೆ. ಈ ಘಟನೆಗಳ ವೇಳೆ ನಿಂದನಾತ್ಮಕ ಮಾತುಗಳು ಕೇಳಿಬಂದಿವೆ, ದೈಹಿಕ ಹಲ್ಲೆ ಆಗಿದೆ ಮತ್ತು ಕೆಲಸಗಳಿಗೆ ಅಡ್ಡಿ ಉಂಟುಮಾಡುವುದು ಕೂಡ ನಡೆದಿದೆ' ಎಂದು ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಬರೆದಿರುವ ಪತ್ರದಲ್ಲಿ ಹೇಳಲಾಗಿದೆ.

ಇವೆಲ್ಲ ಕಾನೂನುಬಾಹಿರವಾದ ಕೃತ್ಯಗಳು, ಇವು ಬ್ಯಾಂಕ್ ಸಿಬ್ಬಂದಿಯ ನೈತಿಕ ಸ್ಥೈರ್ಯವನ್ನು ಕುಂದಿಸುತ್ತವೆ ಎಂದು ಅವರು ಹೇಳಿದ್ದಾರೆ. 'ಇಂತಹ ಕೃತ್ಯಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು, ಬ್ಯಾಂಕ್ ಸಿಬ್ಬಂದಿಗೆ ರಕ್ಷಣೆ ನೀಡುವ ದಿಸೆಯಲ್ಲಿ ಹಾಗೂ ಸಾರ್ವಜನಿಕರಿಗೆ ಬ್ಯಾಂಕಿಂಗ್ ಸೇವೆಗಳು ಯಾವುದೇ ಅಡ್ಡಿ ಇಲ್ಲದೆ ಲಭ್ಯವಾಗುವಂತೆ ಮಾಡಲು ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ನಾಗರಾಜು ಅವರು ಸೂಚಿಸಿದ್ದಾರೆ.

ಈ ಕ್ರಮಗಳನ್ನು ಕೈಗೊಂಡರೆ ಸಾರ್ವಜನಿಕರು ಇರಿಸಿರುವ ವಿಶ್ವಾಸವು ಹೆಚ್ಚಾಗುತ್ತದೆ, ಬ್ಯಾಂಕ್ ಸಿಬ್ಬಂದಿ ಕೆಲಸ ಮಾಡುವ ಸ್ಥಳದಲ್ಲಿ ಸುರಕ್ಷತೆ ಮೂಡುತ್ತದೆ, ಬ್ಯಾಂಕಿಂಗ್ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವುದಕ್ಕೆ ನೆರವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಬ್ಯಾಂಕ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಯುವುದು ಹೆಚ್ಚಾಗುತ್ತಿದೆ ಎಂದು ಹೇಳಿದ್ದ ಬ್ಯಾಂಕ್ ಕಾರ್ಮಿಕರ ಒಕ್ಕೂಟಗಳು, ಶಾಖೆಗಳಲ್ಲಿ ಭದ್ರತೆಯನ್ನು ಹೆಚ್ಚಿಸಬೇಕು ಎಂದು ಹಿರಿಯ ಅಧಿಕಾರಿಗಳನ್ನು ಕೋರಿದ್ದವು. ಕೆಲವು ಪ್ರಕರಣಗಳಲ್ಲಿ ಬ್ಯಾಂಕ್‌ನ ಮಹಿಳಾ ಸಿಬ್ಬಂದಿ ಕೂಡ ಗ್ರಾಹಕರಿಂದ ಕಿರುಕುಳಕ್ಕೆ ತುತ್ತಾಗಿದ್ದರು ಎನ್ನಲಾಗಿದೆ.

ಮುಂಬೈ ಧಾರಣೆ

ಶೇಂಗಾ

05-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1360)
ಒಂದು ವಾರದ ಡೆಲಿವರಿ	1370 (1355)
ಪಾಮ್ ವಾರದ ಡೆಲಿವರಿ	1143 (1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹**97,800** (96,250)

ಬೆಳ್ಳಿ ಕೆ.ಜಿ ₹**1,04,700** (1,01,000)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಕೆ.ಜಿ ಬೆಳ್ಳಿ ದರ ₹1.04 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹2 ಸಾವಿರ ಹೆಚ್ಚಳವಾಗಿ, ₹1.04 ಲಕ್ಷದಂತೆ ಮಾರಾಟವಾಗಿದೆ. ಮಾರ್ಚ್ 19ರಂದು ಕೆ.ಜಿ ಬೆಳ್ಳಿ ದರವು ₹1.03 ಲಕ್ಷ ಆಗಿತ್ತು.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹430 ಏರಿಕೆಯಾಗಿ, ₹99,690 ಆಗಿದೆ.

ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹400 ಹೆಚ್ಚಳವಾಗಿ, ₹99,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಕೈಗಾರಿಕೆಗಳಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಜಾಗತಿಕವಾಗಿ ಬೆಳ್ಳಿ ಪೂರೈಕೆಯಲ್ಲಿ ಇಳಿಕೆಯಾಗಿದೆ. ಇದು ದರ ಏರಿಕೆಗೆ ಕಾರಣವಾಗಿವೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

'ರಾಮ್ಸರ್' ಪಟ್ಟಿ: ಮತ್ತೆರಡು ಜೌಗುಪ್ರದೇಶಗಳ ಸೇರ್ಪಡೆ

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಪ್ರಾಮುಖ್ಯ ಹೊಂದಿರುವ ಜೌಗು ಪ್ರದೇಶಗಳ ಪಟ್ಟಿಗೆ ಭಾರತದ ಮತ್ತೆರಡು ಪ್ರದೇಶಗಳು ಸೇರ್ಪಡೆಯಾಗುವ ಮೂಲಕ ಒಟ್ಟು ಸ್ಥಳಗಳ ಸಂಖ್ಯೆ 91ಕ್ಕೆ ಏರಿಕೆಯಾಗಿದೆ.

ರಾಜಸ್ಥಾನದ ಫಲೋಡಿಯ ಖೀಚನ್ ಹಾಗೂ ಉದಯ್‌ಪುರದ 'ಮೇನಾರ್' ಅನ್ನು 'ರಾಮ್ಸರ್' ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಜೌಗು ಪ್ರದೇಶಗಳನ್ನು ಸಂರಕ್ಷಿಸುವ ದೃಷ್ಟಿಯಿಂದ 1971ರಲ್ಲಿ ಇರಾನ್‌ನ 'ರಾಮ್ಸರ್' ಪಟ್ಟಣದಲ್ಲಿ ನಡೆದ ಜಾಗತಿಕ ಸಮಾವೇಶದಲ್ಲಿ ಒಪ್ಪಂದ ಏರ್ಪಟ್ಟಿತ್ತು. ಅಲ್ಲಿಂದ ಸಂರಕ್ಷಿತ ಜೌಗು ಪ್ರದೇಶಗಳನ್ನು 'ರಾಮ್ಸರ್' ಎಂದು ಗುರುತಿಸಲಾಗುತ್ತದೆ.

ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ,'ಶುಭ ಸುದ್ದಿ. ಪರಿಸರ ಸಂರಕ್ಷಣೆ ಕೆಲಸಗಳು ಅತ್ಯಂತ ವೇಗದಲ್ಲಿ ನಡೆಯುತ್ತಿದ್ದು, ಸಾರ್ವಜನಿಕ ಸಹಭಾಗಿತ್ವದಿಂದ ಸಾಕಾರವಾಗುತ್ತಿದೆ' ಎಂದು ತಿಳಿಸಿದ್ದಾರೆ.

ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಕೂಡ ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಹೆಚ್ಚುವರಿಯಾಗಿ ಎರಡು ಸ್ಥಳಗಳ ಸೇರ್ಪಡೆಯಿಂದ 91ಕ್ಕೆ ಏರಿಕೆಯಾಗಿದೆ. ಈ ಸಾಧನೆಯು ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಕೈಗೊಂಡಿರುವ ಕ್ರಮಗಳಿಗೆ ಮತ್ತೊಂದು ಪುರಾವೆಯಾಗಿದೆ. ಈ ಮೂಲಕ ಮುಂದಿನ ದಿನಗಳಲ್ಲಿ ದೇಶದ ಹಸಿರೀಕರಣದ ನಿಟ್ಟಿನಲ್ಲಿ ನೆರವಾಗಲಿದೆ' ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	53100-53500
ಬೆಟ್ಟೆ	29600-30000
ಕೆಂಪುಗೋಟು	20600-21000
ರಾಶಿ	52600-53000
ಕುಮಟ	
ಚಾಲಿ	30671-42098
ಚಿಪ್ಪು	15799-32399
ಕೋಕ	5077-22671
ಹೊಸಚಾಲಿ	30670-43249
ಸಾಗರ	
ಬಿಳಿಗೋಟು	8099-26299
ಚಾಲಿ	21300-39009
ಕೋಕ	7299-25011
ಕೆಂಪುಗೋಟು	15099-28699
ರಾಶಿ	20899-57599
ಸಿಪ್ಪೆಗೋಟು	5699-18289
ಶಿವಮೊಗ್ಗ	
ಬೆಟ್ಟೆ	50772-59019
ಗೊರಬಲು	18205-33330
ರಾಶಿ	46366-59099
ಸರಕು	51100-96996
ಸಿದ್ದಾಪುರ	
ಬಿಳಿಗೋಟು	24399-31199
ಚಾಲಿ	35099-41599
ಕೋಕ	15619-26799
ಕೆಂಪುಗೋಟು	19600-22500
ರಾಶಿ	44199-46299
ತಟ್ಟಿಬೆಟ್ಟೆ	27600-32099
ಶಿರಸಿ	
ಬೆಟ್ಟೆ	28721-42299
ಬಿಳಿಗೋಟು	18511-31423
ಚಾಲಿ	36218-42900
ಕೆಂಪುಗೋಟು	13999-23021
ರಾಶಿ	42208-47908
ಯಲ್ಲಾಪುರ	
ಬಿಳಿಗೋಟು	16800-32800
ಚಾಲಿ	33099-43950
ಕೋಕ	8899-16899
ಕೆಂಪುಗೋಟು	15706-25399
ರಾಶಿ	38600-54689
ತಟ್ಟಿಬೆಟ್ಟೆ	27806-38009

ನೇಪಾಳದ ಮಾಜಿ ಪ್ರಧಾನಿ ವಿರುದ್ಧ ಆರೋಪಪಟ್ಟಿ

ಕಠ್ಮಂಡು (ಪಿಟಿಐ): ಜಮೀನು ದುರ್ಬಳಕೆ ಆರೋಪದಡಿ ನೇಪಾಳದ ಮಾಜಿ ಪ್ರಧಾನಿ, ಪಿಪಿಎನ್–ಯುನಿಫೈಡ್ ಸೋಷಿಯಲಿಸ್ಟ್ ಅಧ್ಯಕ್ಷ, ಮಾಧವ ಕುಮಾರ್ ನೇಪಾಳ ವಿರುದ್ಧ ಅಲ್ಲಿನ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಆರೋಪಪಟ್ಟಿ ದಾಖಲಿಸಿದೆ.

ಅಧಿಕಾರ ದುರ್ಬಳಕೆ ವಿರುದ್ಧದ ತನಿಖಾ ಸಮಿತಿಯು (ಸಿಐಎಎ) ಮಾಧವ ಕುಮಾರ್ ನೇಪಾಳ ಸೇರಿ 92 ಆರೋಪಿಗಳ ವಿರುದ್ಧ ಪತಂಜಲಿ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿತ್ತು.

ಮಾಧವ ನೇಪಾಳ ನೇತೃತ್ವದ ಸರ್ಕಾರದ ಅವಧಿಯಲ್ಲಿ 2010ರಲ್ಲಿ ಪತಂಜಲಿ ಸಂಸ್ಥೆಯು, ಸಂಪುಟದ ಒಪ್ಪಿಗೆ ಪಡೆದು ಕಾವರೆಪಾಲಂಚೋಕ್ ಜಿಲ್ಲೆಯಲ್ಲಿ ಜಮೀನು ಖರೀದಿಸಿತ್ತು. ಈ ಖರೀದಿ ಪ್ರಕ್ರಿಯೆಯಲ್ಲಿ ಭೂ ಒಡೆತನದ ಮಿತಿಯಿಂದ ವಿನಾಯಿತಿ ನೀಡಲಾಗಿತ್ತು. ಸರ್ಕಾರದಿಂದ ರಿಯಾಯಿತಿ ಪಡೆದು ಖರೀದಿಸಿದ ಜಮೀನನ್ನು ನಂತರ ಮಾರಾಟ ಮಾಡಲಾಗಿತ್ತು ಎಂದು ಸಿಐಎಎ ಆರೋಪಿಸಿತ್ತು.

ನೇಪಾಳದ ಮಾಜಿ ಕಾನೂನು ಸಚಿವ ಪ್ರೇಮ್ ಬಹದ್ದೂರ್ ಸಿಂಗ್, ಮಾಜಿ ಭೂ ಸುಧಾರಣಾ ಸಚಿವ ದಂಬರ್ ಶ್ರೇಷ್ಠಾ, ಮಾಜಿ ಮುಖ್ಯ ಕಾರ್ಯದರ್ಶಿ ಮಾಧವ ಪ್ರಸಾದ್ ಗಿಮಿರೆ ಸೇರಿ 90ಕ್ಕೂ ಹೆಚ್ಚು ವ್ಯಕ್ತಿಗಳ ವಿರುದ್ಧ ಸಿಐಎಎ ಮೊಕದ್ದಮೆ ದಾಖಲಿಸಿತ್ತು. ಆರೋಪ ಪಟ್ಟಿ ಸಲ್ಲಿಕೆಯಾದ ಬೆನ್ನಲ್ಲೇ, ಮಾಧವ ಕುಮಾರ್ ತಮ್ಮ ಸಂಸದೀಯ ಸ್ಥಾನ ಕಳೆದುಕೊಂಡಿದ್ದಾರೆ.

ಜಪಾನ್: ಜನನ ಪ್ರಮಾಣ ತೀವ್ರ ಕುಸಿತ

ಟೋಕಿಯೊ (ಎಪಿ): ಜಪಾನ್‌ನಲ್ಲಿ ಜನನ ಪ್ರಮಾಣವು ನಿರೀಕ್ಷೆಗಿಂತ ವೇಗವಾಗಿ ಕುಸಿಯುತ್ತಿದೆ. ಕಳೆದ ವರ್ಷದ ವಾರ್ಷಿಕ ಜನನ ಪ್ರಮಾಣವು ಕನಿಷ್ಠ ಮಟ್ಟವನ್ನು ದಾಖಲಿಸಿದೆ ಎಂದು ಬುಧವಾರ ಸರ್ಕಾರ ಬಿಡುಗಡೆ ಮಾಡಿದ ವರದಿಯಲ್ಲಿ ತಿಳಿಸಿದೆ.

2024ರಲ್ಲಿ ದೇಶದಲ್ಲಿ 6,86,061 ಶಿಶುಗಳು ಜನಿಸಿವೆ. 2023ಕ್ಕೆ ಹೋಲಿಸಿದರೆ ಜನನ ಪ್ರಮಾಣ ಶೇಕಡ 5.7ರಷ್ಟು ಕುಸಿತವಾಗಿದೆ. 1899ರ ಬಳಿಕ ಇದೇ ಮೊದಲಿಗೆ ವರ್ಷವೊಂದರಲ್ಲಿ 7 ಲಕ್ಷಕ್ಕಿಂತ ಕಡಿಮೆ ಶಿಶುಗಳು ಜನಿಸಿವೆ. ಇದರೊಂದಿಗೆ ಸತತ 16ನೇ ವರ್ಷವೂ ಜನನ ಪ್ರಮಾಣ ಕುಸಿತ ಮುಂದುವರಿದಿದೆ. ಕುಸಿಯುತ್ತಿರುವ ಜನನ ಪ್ರಮಾಣ ಮತ್ತು ಹೆಚ್ಚು ವೃದ್ಧರ ಸಂಖ್ಯೆ ಇರುವ ಪೂರ್ವ ಏಷ್ಯಾದ ರಾಷ್ಟ್ರಗಳಲ್ಲಿ ಜಪಾನ್ ಕೂಡ ಒಂದಾಗಿದೆ.

ಪರಿಸ್ಥಿತಿ ಕುರಿತು ಪ್ರಧಾನಿ ಶಿಗೆರು ಇಶಿಬಾ ಕಳವಳ ವ್ಯಕ್ತಪಡಿಸಿದ್ದಾರೆ. 'ಕೆಲಸ ಮತ್ತು ಮಕ್ಕಳ ಪಾಲನೆಯನ್ನು ಸರಿದೂಗಿಸಲು ವಿವಾಹಿತರಿಗೆ ಅನುಕೂಲವಾಗುವಂತೆ ಕೆಲಸದ ವಾತಾವರಣ ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಜಪಾನ್‌ನಲ್ಲಿ ಸದ್ಯ 12.40 ಕೋಟಿ ಜನಸಂಖ್ಯೆ ಇದ್ದು, 2070ರ ವೇಳೆಗೆ ಅದು 8.7 ಕೋಟಿಗೆ ಕುಸಿಯಲಿದೆ ಎಂದು ಅಂದಾಜಿಸಲಾಗಿದೆ.

'ಅಮೆರಿಕ ಅಧ್ಯಕ್ಷರ ಬಗ್ಗೆ ಗೌರವವಿದೆ'

ಭಾರತವು ಯಾರ ಮನವೊಲಿಸಬೇಕಾಗಿಲ್ಲ: ಶಶಿ ತರೂರ್

ಶಶಿ ತರೂರ್

ವಾಷಿಂಗ್ಟನ್ (ಪಿಟಿಐ): 'ಭಾರತ ಮತ್ತು ಶ್ವೇತಭವನದ ಸಂಬಂಧದಲ್ಲಿ ಬಿರುಕು ಮೂಡುವಂತೆ ಮಾಡಲು ನಾನು ಇಲ್ಲಿ ಇಲ್ಲ. ಈ ಬಗ್ಗೆ ಪ್ರತಿಕ್ರಿಯಿಸಲೇಬೇಕು ಎಂದೂ ಇಲ್ಲ. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಮತ್ತು ಅಧ್ಯಕ್ಷರ ಬಗೆಗೆ ನಮಗೆ ಅಪಾರ ಗೌರವವಿದೆ. ಪಾಕಿಸ್ತಾನಕ್ಕೆ ಟ್ರಂಪ್ ಅವರ ಅಧಿಕಾರಿಗಳು ಏನು ಹೇಳಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ' ಎಂದು ಸರ್ವ ಪಕ್ಷದ ನಿಯೋಗವೊಂದರ ನೇತೃತ್ವ ವಹಿಸಿರುವ ಶಶಿ ತರೂರ್ ಹೇಳಿದರು.

'ತಾವು ಮಧ್ಯಸ್ಥಿಕೆ ವಹಿಸಿ ಭಾರತ ಮತ್ತು ಪಾಕಿಸ್ತಾನದ ಮಧ್ಯದ ಸಂಘರ್ಷವನ್ನು ಅಂತ್ಯಗೊಳಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪದೇ ಪದೇ ಹೇಳಿಕೆ ನೀಡುತ್ತಿದ್ದಾರಲ್ಲ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು' ಎಂದು ಪಿಟಿಐ ಸುದ್ದಿ ಸಂಸ್ಥೆ ಬುಧವಾರ ನಡೆಸಿದ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗೆ ತರೂರ್ ಉತ್ತರಿಸಿದರು.

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ನಂತರದಲ್ಲಿ ಭಾರತ–ಪಾಕಿಸ್ತಾನ ದೇಶಗಳ ಮಧ್ಯೆ ನಡೆದ ಸೇನಾ ಸಂಘರ್ಷದ ಕುರಿತ ವಾಸ್ತವಿಕ ಸಂಗತಿಗಳನ್ನು ಮನವರಿಕೆ ಮಾಡುವುದಕ್ಕಾಗಿ ತರೂರ್ ಅವರ ನೇತೃತ್ವದ ನಿಯೋಗವು ಸದ್ಯ ಅಮೆರಿಕದಲ್ಲಿದೆ.

'ಯಾರನ್ನೂ ಮನವೊಲಿಸಬೇಕಾಗಿಲ್ಲ. ಯಾಕೆಂದರೆ, ಮೊದಲ ದಿನದಿಂದಲೇ ನಮ್ಮ ನಿಲುವು ಒಂದೇ ಇತ್ತು. ಪಾಕಿಸ್ತಾನವು ದಾಳಿ ನಡೆಸಿದರೆ, ನಾವು ತೀವ್ರ ರೀತಿಯಲ್ಲಿ ಪ್ರತಿದಾಳಿ ನಡೆಸುತ್ತೇವೆ. ಅವರು ದಾಳಿಯನ್ನು ನಿಲ್ಲಿಸಿದರೆ, ನಾವೂ ನಿಲ್ಲಿಸುತ್ತೇವೆ. ಮೊದಲ ದಿನವೂ ಇದನ್ನೇ ಹೇಳಿದ್ದೇವೆ. ಕೊನೆಯ ದಿನವೂ ಇದನ್ನೇ ಹೇಳಿದ್ದೇವೆ' ಎಂದರು.

'ಈ ಕಾರಣದಿಂದ ಸಂಘರ್ಷ ನಿಲ್ಲಿಸುವಂತೆ ನಮಗೆ ಯಾರೂ ಹೇಳಬೇಕಾಗಿ ಬರುವುದಿಲ್ಲ. ಪಾಕಿಸ್ತಾನದೊಂದಿಗೆ ಅಮೆರಿಕದವರು ಹಲವು ವಿಚಾರಗಳ ಬಗ್ಗೆ ಮಾತನಾಡಿರಬಹುದು. ಅವರ ಮಧ್ಯೆ ಏನು ಮಾತುಕತೆ ನಡೆದಿದೆ ಎಂದು ನಮಗೆ ತಿಳಿಯುವುದಿಲ್ಲ. ಯಾಕೆಂದರೆ ನಾನು ಪಾಕಿಸ್ತಾನದವನೂ ಅಲ್ಲ, ಅಮೆರಿಕದವನೂ ಅಲ್ಲ' ಎಂದು ಹೇಳಿದರು.

ತಮ್ಮ ಹೇಳಿಕೆಗಳ ಕುರಿತು ಕಾಂಗ್ರೆಸ್ ನಾಯಕರ ಆಕ್ಷೇಪಗಳ ಬಗ್ಗೆ ಕೇಳಿದಾಗ, 'ರಾಷ್ಟ್ರದ ಹಿತದೃಷ್ಟಿಯಿಂದ ಕೆಲಸ ಮಾಡುವುದು ಪಕ್ಷ ವಿರೋಧಿ ಚಟುವಟಿಕೆ ಎಂದು ಯಾರಾದರೂ ಅಂದುಕೊಂಡರೆ, ನಿಜವಾಗಿಯೂ ಅವರು ತಮ್ಮೊಳಗೆ ಒಮ್ಮೆ ಇಳಿದು ನೋಡಿಕೊಳ್ಳಬೇಕು. ನಮ್ಮನ್ನು ಪ್ರಶ್ನಿಸುವುದಲ್ಲ. ದೇಶದ ಕೆಲಸ ಮಾಡುವವನು ತನ್ನ ವಿರುದ್ಧದ ಮಾತುಗಳಿಗೆ ತಲೆಕೆಡಿಸಿಕೊಳ್ಳಬಾರದು' ಎಂದರು. 'ನಾನು ಸಂಸದನಾಗಿ ಆಯ್ಕೆ ಆಗಿದ್ದೇನೆ. ನನ್ನ ಅವಧಿ ಮುಗಿಯುವುದಕ್ಕೆ ಇನ್ನೂ ನಾಲ್ಕು ವರ್ಷಗಳಿವೆ. ಇಂಥ ಪ್ರಶ್ನೆಗಳನ್ನು ಯಾಕಾಗಿ ಕೇಳುತ್ತೀರಿ' ಎಂದು ಬಿಜೆಪಿ ಸೇರ್ಪಡೆ ಕುರಿತ ಸುದ್ದಿಗಳಿಗೆ ಪ್ರತಿಕ್ರಿಯಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

I SNAGEETA, R/0 3rd main, Kattigenahalli, Yelhanka, Bangalore, changed the name as SANGEETA PARAMESHWAR SANGANI as per the document affidavit dated 4/06/2025.

ಪ್ರವಾಸ

Travel

ಅಷ್ಟ ಜ್ಯೋತಿರ್ಲಿಂಗಯಾತ್ರೆ 12ದಿನಗಳು ಚಾರ್‌ಧಾಮ್ ಯಾತ್ರೆ 14 ದಿನಗಳು. ಕಾಶಿ,ಕಲ್ಕತ್ತಾ ಭುವನೇಶ್ವರ್ ಯಾತ್ರೆ 10ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್, ಮಲ್ಲೇಶ್ವರಂ ಬೆಂಗಳೂರು.3. 9448294477 9845311899

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಹೆಸರು ಬದಲಾವಣೆ

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

@50/-* PER WORDS

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 7795158424

+91 9731810277 | +91 9900428036

*Conditions apply

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯಲಹಂಕ ವಿಭಾಗ, ಬೆಂಗಳೂರು – 560064.

ಸಂಖ್ಯೆ: ಬಿಬಿಎಂಪಿ/ಕಾಅ/ಯ–ವಿ/ಕೆಪಿಪಿಪಿ/04/2025–26 ದಿನಾಂಕ: 05–06–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–04**)

ಕ್ರ. ಸಂ.	ಕಾಮಗಾರಿಯ ಹೆಸರು
1	ಕೆಂಪೇಗೌಡ ವಾರ್ಡ್ ಸಂಖ್ಯೆ. 01, ಪಾಪಣ್ಣ ಲೇಔಟ್, ಮುನಿತಿಮ್ಮಯ್ಯ ಲೇಔಟ್, ಕುರ್ಲಪ್ಪ ಲೇಔಟ್ ಮತ್ತು ಭದ್ರಪ್ಪ ಲೇಔಟ್‌ನ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿನ ರಸ್ತೆಗಳು ಹಾಗೂ ಚರಂಡಿಗಳು ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.00**
2	ಚೌಡೇಶ್ವರಿ ವಾರ್ಡ್ ಸಂಖ್ಯೆ. 02, ಮುಖ್ಯ ಕೊಂಡಪ್ಪ ಲೇಔಟ್‌ನ ವಿಜಯ ಜ್ಯೋತಿ ಶಾಲೆಯಿಂದ 27ನೇ ಯಿಂದ 30ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು, ಕಾಮಾಕ್ಷಮ್ಮ ಲೇಔಟ್‌ನ 1ನೇ ಯಿಂದ 12ನೇ ಮುಖ್ಯರಸ್ತೆ ಇಲ್ಲಿನ ರಸ್ತೆಗಳು ಹಾಗೂ ಚರಂಡಿಗಳು ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 4.50**
3	ಅಟ್ಟೂರು ವಾರ್ಡ್ ಸಂಖ್ಯೆ. 03, ಅಟ್ಟೂರು ಲೇಔಟ್ ಮತ್ತು ಎಸ್ಕಾರ್ಟ್ ಇಂಜಿನಿಯರಿಂಗ್ ಲೇಔಟ್ ಹಾಗೂ ಎಸ್ಕಾರ್ಟ್ ಲೇಔಟ್, ಬಿಹೆಚ್‌ಇಎಲ್ ಲೇಔಟ್, ಹರಿರಾಜ ಲೇಔಟ್, ಅಯ್ಯಪ್ಪ ಲೇಔಟ್ ಇಲ್ಲಿನ ರಸ್ತೆಗಳು ಹಾಗೂ ಚರಂಡಿಗಳು ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 4.50**
4	ಯಲಹಂಕ ನ್ಯೂ ಟೌನ್ ವಾರ್ಡ್ ಸಂಖ್ಯೆ. 04, ಚಿಕ್ಕಬೊಮ್ಮಸಂದ್ರ ಸ್ಯಾನಿಟರಿ ಕೋರ್ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಇಲ್ಲಿನ ರಸ್ತೆಗಳು ಹಾಗೂ ಚರಂಡಿಗಳು ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.00**
5	ಕೆಂಪೇಗೌಡ ವಾರ್ಡ್ ಸಂಖ್ಯೆ. 01, ಹಾರೋಹಳ್ಳಿ, ಕೆಂಚೇನಹಳ್ಳಿ ಇಲ್ಲಿನ ಎಸ್.ಸಿ / ಎಸ್.ಟಿ ರುದ್ರಭೂಮಿಯ ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 250.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.75**
6	ಚೌಡೇಶ್ವರಿ ವಾರ್ಡ್ ಸಂಖ್ಯೆ. 02, ಪುಟ್ಟೇನಹಳ್ಳಿಯ ಎಸ್.ಸಿ / ಎಸ್.ಟಿ ಕಾಲೋನಿ ಇಲ್ಲಿನ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳು ಹಾಗೂ ಎಸ್.ಸಿ / ಎಸ್.ಟಿ ರುದ್ರಭೂಮಿಯ ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 250.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.75**
7	ಯಲಹಂಕ ನ್ಯೂ ಟೌನ್ ವಾರ್ಡ್ ಸಂಖ್ಯೆ. 04, ಅಂಬೇಡ್ಕರ್‌ನಗರ, ಕನ್ನಕನಗರ, ಎಲ್‌ಬಿಎಸ್ ನಗರ ಮತ್ತು ಅಲ್ಲಾಳಸಂದ್ರ ಎಸ್.ಸಿ / ಎಸ್.ಟಿ ಪ್ರದೇಶಗಳು ಇಲ್ಲಿನ ರಸ್ತೆಗಳು ಹಾಗೂ ಚರಂಡಿಗಳು ಸುಧಾರಣೆಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 4.50**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **18–06–2025 ರಂದು 16.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಯಲಹಂಕ ವಿಭಾಗ) ಇಲ್ಲಿ ನಡೆಸಲಾಗುವುದು.** 3) ಟೆಂಡರ್‌ಗಳನ್ನು ಆನ್‌ಲೈನ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **27–06–2025 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30–06–2025 ರಂದು 16.00 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬಿಬಿಎಂಪಿ.

ರಷ್ಯಾದ ಮಧ್ಯಸ್ಥಿಕೆಗೆ ಪಾಕಿಸ್ತಾನದ ಮನವಿ

ಭಾರತ-ಪಾಕ್ ಸಂಘರ್ಷ: ಟ್ರಂಪ್– ಪುಟಿನ್ ಚರ್ಚೆ

ವ್ಲಾಡಿಮಿರ್ ಪುಟಿನ್

ಡೊನಾಲ್ಡ್ ಟ್ರಂಪ್

ಮಾಸ್ಕೊ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಸೇನಾ ಸಂಘರ್ಷದ ಕುರಿತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ದೂರವಾಣಿ ಮೂಲಕ ಚರ್ಚಿಸಿದ್ದಾರೆ. ಉಭಯ ದೇಶಗಳ ನಡುವೆ ಕದನ ವಿರಾಮ ಘೋಷಣೆಯಲ್ಲಿ ಟ್ರಂಪ್ ವಹಿಸಿದ್ದ ಪಾತ್ರದ ಬಗ್ಗೆಯೂ ಪ್ರಸ್ತಾಪವಾಗಿದೆ' ಎಂದು ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

'ಇಬ್ಬರೂ ನಾಯಕರ ಮಧ್ಯೆ ನಡೆದ ದೂರವಾಣಿ ಸಂಭಾಷಣೆಯಲ್ಲಿ ಹಲವು ವಿಷಯಗಳ ಪ್ರಸ್ತಾಪವಾಗಿದೆ. ಮಧ್ಯ ಏಷ್ಯಾದಲ್ಲಿ ಭಾರತ– ಪಾಕಿಸ್ತಾನದ ನಡುವಿನ ಸಂಘರ್ಷದ ಬಗ್ಗೆಯೂ ಚರ್ಚಿಸಲಾಗಿದೆ. ಉಕ್ರೇನ್‌ಗೆ ಸಂಬಂಧಿಸಿದಂತೆಯೂ ಚರ್ಚೆ ನಡೆದಿದೆ' ಎಂದು ಕ್ರೆಮ್ಲಿನ್‌ನ ಅಧಿಕಾರಿ ಯೂರಿ ಉಷಕೋವ್ ಅವರನ್ನು ಉಲ್ಲೇಖಿಸಿ ರಷ್ಯಾದ ಸರ್ಕಾರಿ ಸುದ್ದಿಸಂಸ್ಥೆ ಟಾಸ್ ವರದಿ ಮಾಡಿದೆ.

ಈ ಮಧ್ಯೆ, ಭಾರತದ ಜೊತೆಗಿನ ಸಂಘರ್ಷ ಅಂತ್ಯಗೊಳಿಸಲು ನೆರವಾಗುವಂತೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ಪುಟಿನ್ ಅವರನ್ನು ಕೋರಿದ್ದಾರೆ ಎಂದು ಪಾಕಿಸ್ತಾನದ ಪ್ರಧಾನಿಯವರ ವಿಶೇಷ ಅಧಿಕಾರಿ ಸೈಯದ್ ತಾರೀಖ್ ಫತೇಮಿ ತಿಳಿಸಿದ್ದಾರೆ.

ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೋವ್ ಅವರನ್ನು ಮಾಸ್ಕೊದಲ್ಲಿ ಮಂಗಳವಾರ ಭೇಟಿಮಾಡಿದ್ದ ಫತೇಮಿ, ಪುಟಿನ್ ಅವರಿಗೆ ಶೆಹಬಾಜ್ ಷರೀಫ್ ಅವರು ಬರೆದಿರುವ ಪತ್ರವನ್ನು ಹಸ್ತಾಂತರಿಸಿದ್ದಾರೆ.

ಡಿಎಂಕೆ ಸಂಸದೆ ಕನಿಮೊಳಿ ಕರುಣಾನಿಧಿ ನೇತೃತ್ವದ ವಿವಿಧ ಪಕ್ಷಗಳ ಭಾರತೀಯ ನಿಯೋಗವು ರಷ್ಯಾಕ್ಕೆ ಭೇಟಿನೀಡಿ, ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ನಂತರದಲ್ಲಿ ಭಾರತ– ಪಾಕಿಸ್ತಾನದ ಮಧ್ಯೆ ನಡೆದ ಸೇನಾ ಸಂಘರ್ಷದ ಕುರಿತು ವಾಸ್ತವಿಕ ಸಂಗತಿಗಳನ್ನು ಮನವರಿಕೆ ಮಾಡಿಕೊಟ್ಟಿತ್ತು. ಭಯೋತ್ಪಾದನೆ ವಿರುದ್ಧ ಭಾರತ ತಳೆದಿರುವ ಶೂನ್ಯಸಹನೆ ನೀತಿಯನ್ನು ರಷ್ಯಾ ಬೆಂಬಲಿಸಿತ್ತು. ಅದರ ಬೆನ್ನಲ್ಲೇ ಫತೇಮಿ ರಷ್ಯಾ ಪ್ರವಾಸ ಕೈಗೊಂಡಿದ್ದರು.

'ರಷ್ಯಾದ ವಿದೇಶಾಂಗ ಸಚಿವ ಲಾವ್ರೋವ್ ಅವರನ್ನು ನಾನು ಭೇಟಿ ಮಾಡಿದ್ದೇನೆ. ನಮ್ಮ ಪ್ರಧಾನಿಯವರು ಪುಟಿನ್ ಅವರಿಗೆ ಬರೆದಿರುವ ಪತ್ರವನ್ನು ಹಸ್ತಾಂತರ ಮಾಡಿದ್ದೇನೆ. ಭಾರತ–ಪಾಕಿಸ್ತಾನ ಒಟ್ಟಾಗಿ ಕುಳಿತು ಚರ್ಚಿಸಲು ಹಾಗೂ ಸಮಸ್ಯೆಗೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳಲು ಅವರ ಪ್ರಭಾವವನ್ನು ಬಳಸುವಂತೆ ಕೋರಿದ್ದೇವೆ' ಎಂದು ಫತೇಮಿ ಬುಧವಾರ ತಿಳಿಸಿದರು.

ಭಾರತದ ಜೊತೆಗಿನ ಸಂಘರ್ಷ ತಿಳಿಗೊಳಿಸಲು ರಷ್ಯಾ ಮುಂದಾಗಲಿದೆ ಎಂಬುದನ್ನು ಪಾಕಿಸ್ತಾನವು ನಿರೀಕ್ಷಿಸುತ್ತಿದೆ ಎಂದು ಫತೇಮಿ ಹೇಳಿರುವುದಾಗಿ ಟಾಸ್ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

'ಸಂಘರ್ಷ ಕೊನೆಗೊಳಿಸಲು ನಾವು ರಷ್ಯಾದ ಬೆಂಬಲಕ್ಕಾಗಿ ಎದುರು ನೋಡುತ್ತಿದ್ದೇವೆ. ಪಾಕಿಸ್ತಾನ ಮತ್ತು ಭಾರತ ಒಟ್ಟಾಗಿ ಕುಳಿತು ಚರ್ಚಿಸಬೇಕು. ಅವರೊಂದಿಗೆ ಕುಳಿತು ಚರ್ಚಿಸಲು ನಾವು ಸಿದ್ಧರಾಗಿದ್ದೇವೆ. ಅವರು ಸಮಸ್ಯೆಯನ್ನು ಪರಿಹರಿಸಲಿ' ಎಂಬುದಾಗಿ ಹೇಳಿದ್ದಾರೆ ಎಂದು ಸುದ್ದಿಸಂಸ್ಥೆ ತಿಳಿಸಿದೆ.

ಅಮೆರಿಕದ ಅಧ್ಯಕ್ಷರಿಗೆ ಪಾಕ್ ಮನವಿ

ಇಸ್ಲಾಮಾಬಾದ್(ಪಿಟಿಐ): ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಸಂಘರ್ಷದ ವಾತಾವರಣ ತಿಳಿಗೊಳಿಸಿ, ಶಾಂತಿ ಸ್ಥಾಪನೆಗೆ ಅನುವು ಮಾಡಿಕೊಡಲು ವಿಸ್ತೃತವಾದ ಮಾತುಕತೆಗೆ ಮಧ್ಯಸ್ಥಿಕೆ ವಹಿಸುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹಾಗೂ ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಮುಖ್ಯಸ್ಥ ಬಿಲಾವಲ್ ಭುಟ್ಟೊ ಜರ್ದಾರಿ ಮನವಿ ಮಾಡಿದ್ದಾರೆ.

ಇಸ್ಲಾಮಾಬಾದ್‌ನಲ್ಲಿರುವ ಅಮೆರಿಕದ ರಾಯಭಾರಿ ಕಚೇರಿಯಲ್ಲಿ ಮಾತನಾಡಿದ ಶೆಹಬಾಜ್ ಷರೀಫ್, ವಾಷಿಂಗ್ಟನ್‌ನಲ್ಲಿ ಅಮೆರಿಕ ಮೂಲದ ಪಾಕಿಸ್ತಾನಿ ಪತ್ರಕರ್ತರೊಂದಿಗೆ ಬಿಲಾವಲ್ ಭುಟ್ಟೊ ಅವರು ಭಾರತ–ಪಾಕಿಸ್ತಾನದ ನಡುವಿನ ಸಂಘರ್ಷದ ಒತ್ತಡ ತಗ್ಗಿಸುವಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು ಎಂಬುದಾಗಿ ಮುಕ್ತಕಂಠದಿಂದ ಹೊಗಳಿದ್ದಾರೆ ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ.

'ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪಾಕಿಸ್ತಾನ ಕಾರಣ ಎಂಬ ಸುಳ್ಳು ಆರೋಪವನ್ನು ಹೊರಿಸಲಾಗಿತ್ತು ಎಂಬುದು ಇತ್ತೀಚೆಗೆ ನಡೆದ ನಾಲ್ಕು ದಿನಗಳ ಸೇನಾ ಸಂಘರ್ಷವು ಬಯಲು ಮಾಡಿದೆ. ಎರಡೂ ದೇಶಗಳ ಮಧ್ಯೆ ಕದನ ವಿರಾಮ ಘೋಷಣೆ ಮತ್ತು ಶಾಂತಿ ಸ್ಥಾಪನೆಯಲ್ಲಿ ಟ್ರಂಪ್ ಮಹತ್ವದ ಪಾತ್ರ ನಿರ್ವಹಿಸಿದ್ದರು ಎಂದು ಷರೀಫ್ ಹೇಳಿದ್ದಾರೆ' ಎಂಬುದಾಗಿ ಪತ್ರಿಕೆ ವರದಿಯಲ್ಲಿ ತಿಳಿಸಿದೆ.

ಸಿ.ಎ.ಗಳ ನೇಮಕ: ಮಹಾಲೇಖಪಾಲರ ನಿರ್ಧಾರಕ್ಕೆ ವ್ಯಾಪಕ ವಿರೋಧ

ಲೆಕ್ಕಪರಿಶೋಧನೆ ಹೊರಗುತ್ತಿಗೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂವಿಧಾನ ತತ್ವಗಳಿಗೆ ವಿರುದ್ಧ: ಅಸಮಾಧಾನ
- ಸಾಂವಿಧಾನಿಕ ಅಧಿಕಾರದ ಹೊರಗುತ್ತಿಗೆ: ಟೀಕೆ
- ಮಹಾಲೇಖಪಾಲ ಸಂಸ್ಥೆಯ ಸ್ವಾತಂತ್ರ್ಯಕ್ಕೆ ಧಕ್ಕೆ: ಕಳವಳ

ನವದೆಹಲಿ: ದೇಶದ ಸ್ವಾಯತ್ತ ಮತ್ತು ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಗಾಗಿ ಇದೇ ಮೊದಲ ಬಾರಿಗೆ ಚಾರ್ಟರ್ಡ್ ಅಕೌಂಟಂಟ್‌ಗಳನ್ನು (ಸಿ.ಎ) ನೇಮಕ ಮಾಡಿರುವ ಮಹಾಲೇಖಪಾಲರ (ಸಿಎಜಿ) ಕ್ರಮಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಿಪಿಎಂನ ಹಿರಿಯ ಸಂಸದರೊಬ್ಬರು ಸಿಎಜಿಯ ಈ ನಡೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. 'ಸಾಂವಿಧಾನಿಕ ಅಧಿಕಾರವೊಂದನ್ನು ಹೊರಗುತ್ತಿಗೆ ನೀಡುವುದಕ್ಕೆ ಪೂರ್ವಭಾವಿಯಾಗಿ ಇಂತಹ ಕ್ರಮಕ್ಕೆ ಮುಂದಾಗಿರುವುದು ಅಪಾಯಕಾರಿ. ಇಂತಹ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಈ ವರ್ಷದ ಜುಲೈನಿಂದ 2027ರ ಮಾರ್ಚ್‌ವರೆಗೆ ಸ್ವಾಯತ್ತ ಹಾಗೂ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಮಾಡುವುದಕ್ಕಾಗಿ ಸಿ.ಎ ಸಂಸ್ಥೆಗಳಿಂದ ಮೇ 27ರಂದು 'ಆಸಕ್ತಿ ವ್ಯಕ್ತಪಡಿಸುವಿಕೆ' (ಇಒಡಬ್ಲ್ಯು) ಆಹ್ವಾನಿಸಿದ್ದ ಸಿಎಜಿ, ಜೂನ್ 5ರ ಒಳಗಾಗಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿತ್ತು.

ಅದರಂತೆ, ಸಾರ್ವಜನಿಕ ವಲಯದ ಉದ್ದಿಮೆಗಳ ಪ್ರಾಥಮಿಕ ಲೆಕ್ಕ ಪರಿಶೋಧನೆ ನಡೆಸುವುದಕ್ಕಾಗಿ ಕೆಲ ಸಂಸ್ಥೆಗಳನ್ನು ನೇಮಕ ಮಾಡಲಾಗಿದೆ.

ಸ್ವಾಯತ್ತ ಮತ್ತು ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ವಿಳಂಬವಾಗುತ್ತಿರುವ ಕುರಿತು ಇತ್ತೀಚೆಗೆ ಸಂಸದೀಯ ಸಮಿತಿಯೊಂದು ಅಸಮಾಧಾನ ವ್ಯಕ್ತಪಡಿಸಿತ್ತು. ಇನ್ನೊಂದೆಡೆ, ಸಿಎಜಿಯಲ್ಲಿ ಸಿಬ್ಬಂದಿಯ ತೀವ್ರ ಕೊರತೆಯೂ ಇದೆ. ಈ ಎಲ್ಲ ಕಾರಣಗಳಿಂದ ಲೆಕ್ಕಪರಿಶೋಧನೆ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಡೆಸಲು ತೀರ್ಮಾನಿಸಿರಬಹುದು ಎಂದು ಆಲ್ ಇಂಡಿಯಾ ಆಡಿಟ್ ಆ್ಯಂಡ್ ಅಕೌಂಟ್ಸ್ ಆಫೀಸರ್ಸ್ ಅಸೋಸಿಯೇಷನ್ (ಎಐಎಎಒಎ) ಹೇಳಿದೆ.

ಪ್ರಸ್ತುತ, ಸ್ಥಳೀಯ ಸಂಸ್ಥೆಗಳ ಲೆಕ್ಕ-ಪರಿಶೋಧನೆಯನ್ನು ಇಂಡಿಯನ್ ಆಡಿಟ್ ಆ್ಯಂಡ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್ (ಐಎಎಡಿ) ಅಧಿಕಾರಿಗಳು ನಡೆಸುತ್ತಾರೆ.

ರಾಷ್ಟ್ರಪತಿ ಮುರ್ಮುಗೆ ಪತ್ರ

ಸಿಪಿಎಂನ ಮದುರೈ ಸಂಸದ ಎಸ್. ವೆಂಕಟೇಶನ್ ಅವರು ಈ ಕುರಿತು ಜೂನ್ 3ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದು, ಮಹಾಲೇಖಪಾಲರ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಈ ನಡೆಯು ಮಹಾಲೇಖಪಾಲ ಸಂಸ್ಥೆಯ ಸ್ವಾತಂತ್ರ್ಯ ಕಸಿದುಕೊಳ್ಳಲಿದೆ ಹಾಗೂ ಸಂವಿಧಾನದ ತತ್ವಗಳಿಗೆ ಧಕ್ಕೆ ಉಂಟುಮಾಡಲಿದೆ' ಎಂದಿದ್ದಾರೆ.

ಎಐಎಎಒಎ ಮಹಾ ಪ್ರಧಾನ ಕಾರ್ಯದರ್ಶಿ ಒ.ಎಸ್.ಸುಧಾಕರನ್ ಕೂಡ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಮಹಾಲೇಖಪಾಲ ಕೆ.ಸಂಜಯಮೂರ್ತಿ ಅವರಿಗೆ ಪತ್ರ ಬರೆದಿದ್ದಾರೆ. 'ಮಹಾಲೇಖಪಾಲ ಸಂಸ್ಥೆಯು ನಿರ್ವಹಿಸಬೇಕಾದ ಕಾರ್ಯಕ್ಕೆ ಸಿ.ಎ.ಗಳನ್ನು ನೇಮಕ ಮಾಡಿರುವುದು ಅಸಮರ್ಪಕ ನಡೆ. ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾದುದು' ಎಂದು ಸುಧಾಕರನ್ ಪತ್ರದಲ್ಲಿ ಹೇಳಿದ್ದಾರೆ.

'ವಿದೇಶಾಂಗ ನೀತಿ ವೈಫಲ್ಯ'

ಪಾಕ್‌ಗೆ ಭಯೋತ್ಪಾದನಾ ನಿಗ್ರಹ ಸಮಿತಿ ಉಪಾಧ್ಯಕ್ಷ ಸ್ಥಾನ

ನವದೆಹಲಿ (ಪಿಟಿಐ): ವಿಶ್ವಸಂಸ್ಥೆಯ 15 ಸದಸ್ಯರ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ ಉಪಾಧ್ಯಕ್ಷ ಸ್ಥಾನ ಹಾಗೂ ಮತ್ತೊಂದು ಸಮಿತಿಯ ಅಧ್ಯಕ್ಷ ಸ್ಥಾನವನ್ನು ಪಾಕಿಸ್ತಾನಕ್ಕೆ ನೀಡಿರುವುದು 'ದುರದೃಷ್ಟಕರ' ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ಪಕ್ಷವು ಈ ಬೆಳವಣಿಗೆಯನ್ನು 'ನಮ್ಮ ವಿದೇಶಾಂಗ ನೀತಿಯ ವೈಫಲ್ಯ'ದ ದುಃಖಕರ ಕಥೆ ಎಂದು ಬಣ್ಣಿಸಿದೆ. ಅದೇ ವೇಳೆ, ಭಯೋತ್ಪಾದನೆಗೆ ಪ್ರಾಯೋಜಕತ್ವ ವಹಿಸಿರುವ ಪಾಕಿಸ್ತಾನವನ್ನು ಜಾಗತಿಕ ಸಮುದಾಯವು ಒಪ್ಪಿಕೊಂಡಿರುವುದಾದರೂ ಹೇಗೆ ಎಂದೂ ಪ್ರಶ್ನಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜಾಗತಿಕ ಸಮುದಾಯವು ಭಾರತ ಮತ್ತು ಪಾಕಿಸ್ತಾನವನ್ನು ಸಮಾನವಾಗಿ ಕಾಣದಂತೆ ಮಾಡಲು ಸರ್ಕಾರವು ದೃಢ ರಾಜತಾಂತ್ರಿಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲಿಬಾನ್ ನಿರ್ಬಂಧದ ವಿಶ್ವಸಂಸ್ಥೆಯ ಸಮಿತಿಯ ಅಧ್ಯಕ್ಷ ಸ್ಥಾನ ಮತ್ತು ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ ಉಪಾಧ್ಯಕ್ಷ ಸ್ಥಾನವನ್ನು ಪಾಕಿಸ್ತಾನಕ್ಕೆ ವಹಿಸಿರುವ ಬೆಳವಣಿಗೆಗಳ ಬೆನ್ನಲ್ಲೇ ಖರ್ಗೆ ಅವರು ಹೇಳಿಕೆ ನೀಡಿದ್ದಾರೆ.

ಪಾಕಿಸ್ತಾನವನ್ನು ಅದು ಮಾಡಿರುವ ಪಾಪಗಳಿಗೆ ಹೊಣೆಗಾರರನ್ನಾಗಿ ಮಾಡುವುದು ಭಾರತಕ್ಕೆ ಮಾತ್ರವಲ್ಲ, ಜಾಗತಿಕ ಸಮುದಾಯದ ಹಿತಾಸಕ್ತಿಗಳಿಗೂ ಅಗತ್ಯ ಎಂದರು.

'ಪಾಕಿಸ್ತಾನವು ಭಯೋತ್ಪಾದನೆ ಕೃತ್ಯದಲ್ಲಿ ತೊಡಗಿದೆಯಾದರೆ, ಭಾರತವು ಭಯೋತ್ಪಾದನೆಯ ಬಲಿಪಶು. ಆದ್ದರಿಂದ, ಜಾಗತಿಕ ಸಮುದಾಯವು ಈ ಎರಡು ದೇಶಗಳನ್ನು ಸಮಾನವಾಗಿ ಕಾಣಲು ಸಾಧ್ಯವಿಲ್ಲ. ಇದಕ್ಕಾಗಿ ದೃಢವಾದ ರಾಜತಾಂತ್ರಿಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ನಾವು ಸರ್ಕಾರವನ್ನು ಒತ್ತಾಯಿಸುತ್ತೇವೆ' ಎಂದಿದ್ದಾರೆ.

'ಅದಾನಿ, ಚೀನಾಕ್ಕೆ ಮೋದಿ ಶರಣು'

ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಟೀಕೆ ಮುಂದುವರಿಸಿರುವ ಕಾಂಗ್ರೆಸ್, 'ಮೋದಿ ಅವರು ಗೌತಮ್ ಅದಾನಿ ಮತ್ತು ಚೀನಾ ಎದುರು ಶರಣಾಗಿದ್ದಾರೆ' ಎಂದು ಗುರುವಾರ ವಾಗ್ದಾಳಿ ಮಾಡಿದೆ.

ಮೋದಿ ಅವರು ಎಲ್ಲಿಗೇ ಹೋದರೂ ಉದ್ಯಮಿ ಅದಾನಿ ಅವರು ಬಯಸಿದ್ದನ್ನು ಮಾಡುವ ಮೂಲಕ ಅವರ ಹಿತ ಕಾಯುತ್ತಾರೆ. ಅವರು ತಮ್ಮ ಈ ಗೆಳೆಯನಿಗೆ ಬಂದರುಗಳು, ವಿಮಾನ ನಿಲ್ದಾಣಗಳು, ವಿದ್ಯುತ್, ಕಲ್ಲಿದ್ದಲು ಗಣಿಗಾರಿಕೆ ಮತ್ತು ಶಸ್ತ್ರಾಸ್ತ್ರಗಳ ಉದ್ಯಮದಲ್ಲಿ ಜಾಗತಿಕವಾಗಿ ವ್ಯಾಪಾರ ವಿಸ್ತರಿಸಲು ನೆರವಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ಅಜಯ್ ಕುಮಾರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಕಾಂಗ್ರೆಸ್‌ನ ಈ ಆರೋಪಗಳಿಗೆ ಸರ್ಕಾರ ಅಥವಾ ಅದಾನಿ ಗ್ರೂಪ್‌ನಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

'ಮತದಾನೋತ್ತರ ದತ್ತಾಂಶ ವರದಿಗೆ ಹೊಸ ವ್ಯವಸ್ಥೆ'

ನವದೆಹಲಿ (ಪಿಟಿಐ): 'ಮತದಾನ ನಂತರದಲ್ಲಿ ಚುನಾವಣಾ ಅಂಕಿ ಅಂಶ ಆಧಾರಿತ ವಿವಿಧ ಕೋಷ್ಟಕಗಳನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಲು ಹೊಸ ಹಾಗೂ ಸುಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ' ಎಂದು ಚುನಾವಣಾ ಆಯೋಗವು ಗುರುವಾರ ತಿಳಿಸಿದೆ.

ಈ ಹಿಂದೆ ಪಟ್ಟಿಗಳನ್ನು ಸಿಬ್ಬಂದಿಯೇ ಸಿದ್ಧಪಡಿಸುತ್ತಿದ್ದರು. ಹೆಚ್ಚು ಸಮಯ ತಗುಲುತ್ತಿದ್ದು, ಲೋಪಗಳಿಗೂ ಅವಕಾಶ ಇರುತ್ತಿತ್ತು. ಈಗ ಸ್ವಯಂಚಾಲಿತ ಅಂಕಿ–ಅಂಶ ವಿಶ್ಲೇಷಣೆಯಿಂದ ಕ್ಷಿಪ್ರಗತಿಯಲ್ಲಿ ಪಟ್ಟಿಗಳು ಸಿದ್ಧವಾಗಲಿದೆ ಎಂದು ವಿವರಿಸಿದೆ.

ನೂತನ ವ್ಯವಸ್ಥೆಯು ಕಾಗದ ರಹಿತವಾಗಿದೆ. ಚುನಾವಣಾ ನಂತರ ಮಾಹಿತಿ ರವಾನೆಗೆ ಹೊಸ ಮಾದರಿ ಅಭಿವೃದ್ಧಿಪಡಿಸಲಾಗಿದೆ. ಕ್ಷೇತ್ರವಾರು ಹಂತದಲ್ಲಿ ಚುನಾವಣಾ ಸಂಬಂಧಿತ ಅಗತ್ಯ ಮಾಹಿತಿಯನ್ನು ತ್ವರಿತಗತಿಯಲ್ಲಿ ಪಡೆಯಲು ನೂತನ ವ್ಯವಸ್ಥೆ ಸಹಕಾರಿ ಆಗಲಿದೆ ಎಂದು ತಿಳಿಸಿದೆ.

ಹೊಸ ವ್ಯವಸ್ಥೆಯಡಿ ಅಭ್ಯರ್ಥಿಗಳು, ಮತದಾರರು, ಚಲಾವಣೆಯಾದ ಮತ, ಮತಎಣಿಕೆ, ಪಕ್ಷ ಮತ್ತು ಅಭ್ಯರ್ಥಿವಾರು ಮತಗಳಿಕೆ ಪ್ರಮಾಣ, ಲಿಂಗಾಧಾರಿತ ಮತಹಕ್ಕು ಚಲಾವಣೆ ಮಾಹಿತಿ, ಪ್ರಾದೇಶಿಕವಾಗಿ ಇರುವ ವ್ಯತ್ಯಾಸ, ಪಕ್ಷಾವಾರು ಸಾಧನೆ ಕುರಿತ ಸೂಚ್ಯಂಕಗಳು ತ್ವರಿತವಾಗಿ ಸಿದ್ಧವಾಗಲಿವೆ. ಸುಧಾರಿತ ವ್ಯವಸ್ಥೆಯಡಿ ಲೋಕಸಭೆ ಕ್ಷೇತ್ರವಾರು ಅಂಕಿ ಅಂಶ ಆಧಾರಿತ 35 ವರದಿಗಳು, ವಿಧಾನಸಭಾ ಕ್ಷೇತ್ರವಾರು 14 ವರದಿಗಳು ಸಿದ್ಧವಾಗಲಿವೆ.

ಅಸ್ಸಾಂನ ಗುವಾಹಟಿಯ ಪ್ರವಾಹ ಪೀಡಿತ ಪ್ರದೇಶದಿಂದ ಸುರಕ್ಷಿತ ಜಾಗಕ್ಕೆ ತೆರಳಲು ಜನರು ಹರಸಾಹಸ ಪಟ್ಟರು –ಪಿಟಿಐ ಚಿತ್ರ

'ಈಶಾನ್ಯ'ದಲ್ಲಿ ತಗ್ಗದ ಪ್ರವಾಹ

ಇಟಾನಗರ/ಗುವಾಹಟಿ (ಪಿಟಿಐ): ಈಶಾನ್ಯ ರಾಜ್ಯಗಳಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಅರುಣಾಚಲ ಪ್ರದೇಶದಲ್ಲಿ ಗುರುವಾರವೂ ವ್ಯಾಪಕ ಮಳೆಯಾಗಿದ್ದು, 24 ಜಿಲ್ಲೆಗಳಲ್ಲಿ 33 ಸಾವಿರ ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ವರ್ಷ ಮುಂಗಾರು ಮಳೆ ಸಂಬಂಧಿತ ಅವಘಡಗಳಲ್ಲಿ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ. ನಾಪತ್ತೆಯಾದ ವ್ಯಕ್ತಿಗಳ ಪತ್ತೆಗೆ ಶೋಧ ನಡೆದಿದೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದ (ಎಸ್‌ಇಒಸಿ) ತಿಳಿಸಿದೆ.

214 ಹಳ್ಳಿಗಳು ಭೂಕುಸಿತ ಹಾಗೂ ಪ್ರವಾಹದಿಂದ ತೊಂದರೆಗೆ ಸಿಲುಕಿವೆ. ಪ್ರಮುಖ ನದಿ ಹಾಗೂ ಉಪನದಿಗಳು ಸಾಮಾನ್ಯ ಮಟ್ಟವನ್ನೂ ಮೀರಿ ಹರಿಯುತ್ತಿವೆ. ರಾಜ್ಯದಾದ್ಯಂತ 481 ಮನೆಗಳಿಗೆ ಹಾನಿಯಾಗಿದ್ದು, ಈವರೆಗೆ 432 ಜಾನುವಾರು ಮೃತಪಟ್ಟಿವೆ.

ಕಳೆದ 24 ಗಂಟೆಗಳಲ್ಲಿ ವಿವಿಧ ಜಿಲ್ಲೆಗಳಿಂದ ಭೂಕುಸಿತ ಹಾಗೂ ಪ್ರವಾಹ ಸಂಬಂಧಿ ಅವಘಡಗಳು ವರದಿಯಾಗಿವೆ. ಚಾಂಗ್‌ಲಾಂಗ್ ಅತಿ ಹೆಚ್ಚು ಬಾಧಿತವಾಗಿದ್ದು, ಆರು ಗ್ರಾಮಗಳು ಜಲಾವೃತಗೊಂಡಿವೆ. 2,231 ಮಂದಿ ನಿರಾಶ್ರಿತರಾಗಿದ್ದಾರೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಅಸ್ಸಾಂನಲ್ಲೂ ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು, 21 ಜಿಲ್ಲೆಗಳಲ್ಲಿನ 7 ಲಕ್ಷಕ್ಕೂ ಹೆಚ್ಚು ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆ ಸಂಬಂಧಿಸಿದ ಅವಘಡಗಳಲ್ಲಿ ಇದುವರೆಗೆ ಸಾವಿಗೀಡಾದವರ ಸಂಖ್ಯೆ 19ಕ್ಕೆ ಏರಿದೆ. ಬ್ರಹ್ಮಪುತ್ರ ಸೇರಿದಂತೆ ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಸಿಕ್ಕಿಂ:63 ಪ್ರವಾಸಿಗರ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯಿಂದ ಕಳೆದೊಂದು ವಾರದಿಂದ ಉತ್ತರ ಸಿಕ್ಕಿಂನ ಲಾಛೂಂಗ್ ಪ್ರದೇಶದಲ್ಲಿ ಸಿಲುಕಿಕೊಂಡಿದ್ದ 63 ಪ್ರವಾಸಿಗರನ್ನು ಹೆಲಿಕಾಪ್ಟರ್ ಮೂಲಕ ಗ್ಯಾಂಗ್ಟಕ್‌ಗೆ ಕರೆ ತರಲಾಯಿತು.

ಹವಾಮಾನ ತಿಳಿಯಾದ ತಕ್ಷಣವೇ ಚಾಟೆನ್‌ನಲ್ಲಿ ಸಿಲುಕಿದವರನ್ನು ಎರಡು ಎಂಐ–17ವಿ5 ಹೆಲಿಕಾಪ್ಟರ್‌ಗಳ ಮೂಲಕ ಗ್ಯಾಂಗ್ಟಕ್‌ನ ಪಾಕ್ಯೊಂಗ್ ವಿಮಾನ ನಿಲ್ದಾಣಕ್ಕೆ ಕರೆತರಲಾಯಿತು. ರಕ್ಷಿಸಿದವರ ಪೈಕಿ ಇಬ್ಬರು ವಿದೇಶಿಯರು ಸೇರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಛತ್ತೀಸಗಢ: ನಕ್ಸಲರ ಹಿರಿಯ ನಾಯಕ ಹತ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲರ ಹಿರಿಯ ನಾಯಕ ಸುಧಾಕರ್ ಹತರಾಗಿದ್ದಾರೆ ಎಂದು ಉನ್ನತ ಮೂಲಗಳು ಗುರುವಾರ ತಿಳಿಸಿವೆ.

ಸುಧಾಕರ್ ಅವರ ಸಾವನ್ನು ಅಧಿಕೃತವಾಗಿ ಇಲ್ಲಿಯವರೆಗೆ ಘೋಷಿಸಲಾಗಿಲ್ಲ.

6 ನಿಮಿಷ ತಡ: ಪರಿಹಾರ ನೀಡಲು ಕೋರ್ಟ್ ನಕಾರ

ನವದೆಹಲಿ(ಪಿಟಿಐ): ಮೇ 13ರಂದು ನಡೆದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ) ಆರು ನಿಮಿಷ ತಡವಾಗಿ ತೆರಳಿದ್ದ ತನಗೆ ಪರಿಹಾರ ನೀಡುವಂತೆ ಕೋರಿ ವಿದ್ಯಾರ್ಥಿನಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಿರಸ್ಕರಿಸಿದೆ.

'ಪ್ರತಿ ಪರೀಕ್ಷೆಗೂ ತನ್ನದೇ ಆದ ಪಾವಿತ್ರ್ಯ ಹಾಗೂ ಶಿಸ್ತು ಇರುತ್ತದೆ' ಎಂದು ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಹಾಗೂ ರಜನೀಶ ಕುಮಾರ್ ಗುಪ್ತಾ ಅವರಿದ್ದ ಪೀಠ ಹೇಳಿದೆ.

'ಪರೀಕ್ಷಾ ಕೇಂದ್ರವನ್ನು ಬೆಳಿಗ್ಗೆ 8.36ಕ್ಕೆ ತಲುಪಿದೆ. ನಿಗದಿತ ಸಮಯಕ್ಕಿಂತ 6 ನಿಮಿಷ ತಡವಾಗಿದ್ದರಿಂದ ನನಗೆ ಪ್ರವೇಶ ನಿರಾಕರಿಸಲಾಯಿತು' ಎಂದು ವಿದ್ಯಾರ್ಥಿನಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ, ಆಕೆ ದ್ವಿಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.

ಚೆನಾಬ್ ಸೇತುವೆ: ಐಐಎಸ್‌ಸಿ ಪ್ರಾಧ್ಯಾಪಕಿ ಮಾರ್ಗದರ್ಶನ

• ಕಲ್ಯಾಣ ರೇ

ಮಾಧವಿ ಲತಾ

ನವದೆಹಲಿ: ವಿಶ್ವದ ಅತ್ಯಂತ ಎತ್ತರದ ಚೆನಾಬ್ ಸೇತುವೆ ಎಂಜಿನಿಯರಿಂಗ್ ವಿಸ್ಮಯಕ್ಕೆ ನಿದರ್ಶನವಾಗಿದೆ. ಕಾಶ್ಮೀರಕ್ಕೆ ದೇಶದ ಇತರ ಭಾಗದೊಂದಿಗೆ ರೈಲು ಸಂಪರ್ಕ ಸಾಧ್ಯವಾಗಿಸುವ ಈ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸುವರು.

ದೇಶದ ಗಮನವನ್ನು ಸೆಳೆದಿರುವ ಈ ಸೇತುವೆ ನಿರ್ಮಾಣದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪ್ರಾಧ್ಯಾಪಕಿ ಜಿ.ಮಾಧವಿ ಲತಾ ಅವರು ಮಹತ್ವದ ಪಾತ್ರ ವಹಿಸಿದ್ದಾರೆ ಎಂಬುದು ಅಷ್ಟೇ ಗಮನಾರ್ಹ.

ಕಳೆದ 17 ವರ್ಷಗಳಿಂದ ಈ ಯೋಜನೆಗೆ ಅವರು ಮಾರ್ಗದರ್ಶನ ನೀಡುತ್ತಿದ್ದಾರೆ. ₹1,486 ಕೋಟಿ ವೆಚ್ಚದ ಈ ಸೇತುವೆ ನೂರು ವರ್ಷಗಳಿಗೂ ಹೆಚ್ಚು ಕಾಲ ಸದೃಢವಾಗಿ ನಿಲ್ಲುವುದನ್ನು ಖಾತ್ರಿಪಡಿಸುವ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ್ದಾರೆ.

ಐಐಎಸ್‌ಸಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿರುವ ಮಾಧವಿ ಲತಾ ಅವರು, 'ರಾಕ್ ಎಂಜಿನಿಯರಿಂಗ್' ತಜ್ಞೆ.

ಉತ್ತರ ರೈಲ್ವೆ ಹಾಗೂ ಸೇತುವೆ ನಿರ್ಮಾಣದ ಗುತ್ತಿಗೆ ಪಡೆದ ಸಂಸ್ಥೆ ಅಫ್ಕಾನ್ಸ್, ಮಾಧವಿ ಲತಾ ಅವರನ್ನು ತಮ್ಮ ಯೋಜನೆಗೆ ಮಾರ್ಗದರ್ಶನ ನೀಡುವುದಕ್ಕೆ ನೇಮಕ ಮಾಡಿಕೊಂಡಿವೆ.

'ಕಣಿವೆಯಲ್ಲಿ ಈ ಸೇತುವೆ ನಿರ್ಮಾಣ ಸಾಕಷ್ಟು ಸವಾಲಿನಿಂದ ಕೂಡಿತ್ತು. ಇಳಿಜಾರಿನಲ್ಲಿ ನಿರ್ಮಾಣ ಹಾಗೂ ಭದ್ರ ತಳಪಾಯ ಹಾಕುವ ಕಾರ್ಯಕ್ಕೆ ಐಐಎಸ್‌ಸಿ ಕನ್ಸಲ್ಟಂಟ್ ಆಗಿತ್ತು. ವಿದೇಶಿ ಕಂಪನಿಗಳು ಉಕ್ಕಿನ ಕಮಾನು ನಿರ್ಮಾಣ ಮಾಡಿವೆ' ಎಂದು ಮಾಧವಿ ಲತಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಭಾರತ ಮಾತೆ ಚಿತ್ರ: ಕಾರ್ಯಕ್ರಮ ಸ್ಥಳಾಂತರ

ತಿರುವನಂತಪುರ (ಪಿಟಿಐ): ಆರ್‌ಎಸ್‌ಎಸ್ ಶಾಖೆಗಳಲ್ಲಿ ಬಳಸಲಾಗುವ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದನ್ನು ಕಾರ್ಯಕ್ರಮಗಳ ಪಟ್ಟಿಗೆ ಸೇರಿಸಲು ರಾಜಭವನದ ಅಧಿಕಾರಿಗಳು ಒತ್ತಾಯಿಸಿದ್ದರಿಂದ ಅಲ್ಲಿ ನಡೆಯಬೇಕಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ರಾಜ್ಯ ಕೃಷಿ ಇಲಾಖೆಯು ಬೇರೆಡೆಗೆ ಸ್ಥಳಾಂತರಿಸಿತು.

ಬಳಿಕ ಸಚಿವಾಲಯಗಳ ಕಟ್ಟಡದ 'ದರ್ಬಾರ್' ಸಭಾಂಗಣದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. 'ರಾಜ್ಯ ಸರ್ಕಾರವು ಭಾರತ ಮಾತೆಯನ್ನು ಗೌರವಿಸುತ್ತದೆ. ಆದರೆ, ಆರ್‌ಎಸ್‌ಎಸ್ ಶಾಖೆಗಳಲ್ಲಿ ಬಳಸಲಾಗುವ ಭಾವಚಿತ್ರವನ್ನು ರಾಜಭವನದಲ್ಲಿ ನಡೆಯುವ ಸರ್ಕಾರದ ಅಧಿಕೃತ ಕಾರ್ಯಕ್ರಮದಲ್ಲಿ ಬಳಸುವುದು ಅಸಾಂವಿಧಾನಿಕ' ಎಂದು ಕೃಷಿ ಸಚಿವ ಪಿ. ಪ್ರಸಾದ್ ಪ್ರತಿಕ್ರಿಯಿಸಿದರು. ಈ ಬಗ್ಗೆ ರಾಜಭವನ ಪ್ರತಿಕ್ರಿಯಿಸಿಲ್ಲ.

ಸಲಿಂಗ ಜೋಡಿ ಕುಟುಂಬ ಕಟ್ಟಿಕೊಳ್ಳಬಹುದು: ಹೈಕೋರ್ಟ್

ಚೆನ್ನೈ (ಪಿಟಿಐ): ಸಲಿಂಗ ಜೋಡಿಯ ವಿವಾಹವನ್ನು ಸುಪ್ರೀಂ ಕೋರ್ಟ್ ಕಾನೂನುಬದ್ಧಗೊಳಿಸದಿದ್ದರೂ, ಅವರು ಕುಟುಂಬವೊಂದನ್ನು ಕಟ್ಟಿಕೊಳ್ಳಬಹುದು ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ.

ಮಹಿಳೆಯೊಬ್ಬರಿಗೆ ಸಲಿಂಗ ಸಂಗಾತಿ ಜತೆ ಜೀವಿಸಲು ಅವಕಾಶ ಮಾಡಿಕೊಟ್ಟಿರುವ ಹೈಕೋರ್ಟ್, ಇಬ್ಬರು ಮಹಿಳೆಯರು ಕುಟುಂಬವನ್ನು ಕಟ್ಟಬಹುದು ಎಂದಿದೆ.

ಕುಟುಂಬದವರು ಬಲವಂತವಾಗಿ ತಮ್ಮ ಜತೆ ಇಟ್ಟುಕೊಂಡಿರುವ 25 ವರ್ಷದ ಮಹಿಳೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಕೋರಿ ಅವರ ಸಲಿಂಗ ಸಂಗಾತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜಿ.ಆರ್.ಸ್ವಾಮಿನಾಥನ್ ಮತ್ತು ವಿ.ಲಕ್ಷ್ಮೀನಾರಾಯಣ ಅವರನ್ನೊಳಗೊಂಡ ಪೀಠವು ನಡೆಸಿತು.

'ಕುಟುಂಬ'ದ ವ್ಯಾಖ್ಯಾನವನ್ನು ವಿಸ್ತೃತವಾಗಿ ಅರ್ಥೈಸಬೇಕು ಎಂದು ಹೇಳಿದ ಪೀಠ, ಕುಟುಂಬದ ಬಂಧನದಲ್ಲಿರುವ ಅವರು (25 ವರ್ಷದ ಮಹಿಳೆ) ತಾನು ಸಲಿಂಗಿ ಮತ್ತು ಅರ್ಜಿದಾರರ ಜತೆ ಸಂಬಂಧದಲ್ಲಿ ಇದ್ದೇನೆ ಎಂದಿರುವುದಾಗಿ ತಿಳಿಸಿತು.

ತಾನು ಅರ್ಜಿದಾರರೊಂದಿಗೆ ಹೋಗಲು ಬಯಸುವುದಾಗಿ ಮಹಿಳೆಯು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದರು. ಕುಟುಂಬದವರು ತಮ್ಮ ಇಚ್ಛೆಗೆ ವಿರುದ್ಧವಾಗಿ ಬಂಧನದಲ್ಲಿ ಇರಿಸಿದ್ದಾರೆ ಎಂಬ ಆರೋಪವನ್ನೂ ಅವರು ದೃಢಪಡಿಸಿದರು.

'ಸುಪ್ರಿಯಾ ಚಕ್ರವರ್ತಿ ವರ್ಸಸ್ ಭಾರತ ಸರ್ಕಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಲಿಂಗ ಜೋಡಿಯ ವಿವಾಹವನ್ನು ಕಾನೂನುಬದ್ಧಗೊಳಿಸದೇ ಇದ್ದರೂ ಅವರು ಕುಟುಂಬವನ್ನು ಕಟ್ಟಿಕೊಳ್ಳಬಹುದು. ಮದುವೆಯು ಕುಟುಂಬವನ್ನು ಕಟ್ಟಿಕೊಳ್ಳುವ ಏಕೈಕ ವಿಧಾನವಲ್ಲ' ಎಂದು ಪೀಠ ಸ್ಪಷ್ಟಪಡಿಸಿತು.

ಈ ಅರ್ಜಿ ಪುರಸ್ಕರಿಸಿರುವುದಾಗಿ ಹೇಳಿದ ಪೀಠ, ಅರ್ಜಿದಾರರ ಜತೆ ಸೇರಿಕೊಳ್ಳಲು ಬಯಸುವ ಮಹಿಳೆಯನ್ನು ಅವರ ಕುಟುಂಬದವರು ಬಂಧನದಲ್ಲಿ ಇರಿಸಬಾರದು ಎಂದಿತು.

ಪಿನಾಕಿ ವರಿಸಿದ ಮಹುವಾ

ಶುಭಾಶಯ ಕೋರಿ ಟಿಎಂಸಿ ಸಂಸದೆ ಸಯೋನಿ ಘೋಷ್ (ಎಡ) 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಪೋಸ್ಟ್. ಮಹುವಾ ಮೊಯಿತ್ರಾ ಹಾಗೂ ಪಿನಾಕಿ ಮಿಶ್ರಾ ಚಿತ್ರದಲ್ಲಿದ್ದಾರೆ

ನವದೆಹಲಿ (ಪಿಟಿಐ): ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ, ಬಿಜೆಡಿ ಪಕ್ಷದ ಮಾಜಿ ಸಂಸದ ಪಿನಾಕಿ ಮಿಶ್ರಾ ಅವರನ್ನು ಮೇ 30ರಂದು ಜರ್ಮನಿಯಲ್ಲಿ ವರಿಸಿದ್ದಾರೆ.

50 ವರ್ಷದ ಮೊಯಿತ್ರಾ ಹಾಗೂ 65 ವರ್ಷದ ಮಿಶ್ರಾ ಅವರು ತಮ್ಮ ಮದುವೆ ಬಗ್ಗೆ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಮದುವೆ ವಸ್ತ್ರದಲ್ಲಿ ಜೋಡಿಯು ರಸ್ತೆಯೊಂದರಲ್ಲಿ ನಡೆದು ಹೋಗುತ್ತಿರುವ ಫೋಟೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮಿಶ್ರಾ ಅವರು ಪುರಿ ಲೋಕಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಮೊಹುವಾ ಅವರು ಡೆನ್ಮಾರ್ಕ್‌ನ ಲಾರ್ಸ್ ಬ್ರಾಸನ್ ಅವರನ್ನು ಮದುವೆಯಾಗಿದ್ದರು. ಮಿಶ್ರಾ ಅವರು ಸಂಗೀತಾ ಮಿಶ್ರಾ ಅವರನ್ನು ಮದುವೆಯಾಗಿದ್ದರು.

ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್: ಸಿಂಧುಗೆ ಮತ್ತೆ ನಿರಾಸೆ

ಎಂಟರ ಘಟ್ಟಕ್ಕೆ ಸಾತ್ವಿಕ್– ಚಿರಾಗ್

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ

ಜಕಾರ್ತಾ (ಪಿಟಿಐ): ಭಾರತದ ಅಗ್ರ ಪುರುಷರ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಆದರೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಅವರು ಎರಡನೇ ಸುತ್ತಿನಲ್ಲೇ ನಿರ್ಗಮಿಸಿದರು.

2023ರಲ್ಲಿ ಈ ಟೂರ್ನಿಯ ಚಾಂಪಿಯನ್ನರಾಗಿದ್ದ ಸಾತ್ವಿಕ್– ಚಿರಾಗ್ ಜೋಡಿ ಎರಡನೇ ಸುತ್ತಿನ ಪಂದ್ಯದಲ್ಲಿ ಡೆನ್ಮಾರ್ಕ್‌ನ ರಾಸ್ಮಸ್ ಕ್ಯೇರ್– ಫ್ರೆಡರಿಕ್ ಸೊಗಾರ್ಡ್ ಜೋಡಿಯ ವಿರುದ್ಧ ಒತ್ತಡದ ಸನ್ನಿವೇಶದಲ್ಲೂ ಸಂಯಮದಿಂದ ಆಡಿತು. 68 ನಿಮಿಷಗಳ ತೀವ್ರ ಹೋರಾಟದ ಪಂದ್ಯವನ್ನು 16–21, 21–18, 22–20ರಲ್ಲಿ ಗೆದ್ದರು. ಡೆನ್ಮಾರ್ಕ್‌ನ ಜೋಡಿ ವಿಶ್ವ ಕ್ರಮಾಂಕದಲ್ಲಿ 16ನೇ ಸ್ಥಾನ ಪಡೆದಿದೆ.

ಹೋದ ವಾರವಷ್ಟೇ ಸಿಂಗಪುರ ಓಪನ್ 750 ಟೂರ್ನಿಯ ಸೆಮಿಫೈನಲ್ಸ್ ತಲುಪಿದ್ದ ವಿಶ್ವದ ಮಾಜಿ ಅಗ್ರಮಾನ್ಯ ಜೋಡಿ ಕ್ವಾರ್ಟರ್‌ಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಮಾನ್ ವೀ ಚೊಂಗ್– ಕೈ ವುನ್ ಟೀ ಜೋಡಿಯನ್ನು ಎದುರಿಸಲಿದೆ.

ಸಿಂಧು ನಿರ್ಗಮನ: ಇದಕ್ಕೆ ಮೊದಲು ಭಾರತದ ಪಿ.ವಿ.ಸಿಂಧು ಅವರು ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ವಿಶ್ವದ ಎಂಟನೇ ಕ್ರಮಾಂಕದ ಆಟಗಾರ್ತಿ ಪೋರ್ನ್‌ಪವೀ ಚೊಚುವಾಂಗ್ ಅವರಿಗೆ ಮಣಿದರು. ಸಿಂಧು ನಿರ್ಣಾಯಕ ಗೇಮ್‌ನ ಒಂದು ಹಂತದಲ್ಲಿ 15–11ರಲ್ಲಿ ಮುನ್ನಡೆ ಪಡೆದಿದ್ದರೂ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಥಾಯ್ಲೆಂಡ್‌ನ ಆಟಗಾರ್ತಿ 78 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ 20–22, 21–10, 21–18 ರಿಂದ ಜಯಗಳಿಸಿದರು.

ಭಾರತದ ಉಳಿದ ಸ್ಪರ್ಧಿಗಳಿಗೂ ನಿರಾಶೆ ಕಾದಿತ್ತು. ಮಿಶ್ರ ಡಬಲ್ಸ್ ಎರಡನೇ ಸುತ್ತಿನಲ್ಲಿ ಸತೀಶ್ ಕರುಣಾಕರನ್ ಮತ್ತು ಆದ್ಯಾ ವರಿಯತ್ ಜೋಡಿ ಕೇವಲ 25 ನಿಮಿಷಗಳಲ್ಲಿ 7–21, 12–21 ರಲ್ಲಿ ನೇರ ಗೇಮ್‌ಗಳಿಂದ ಆರನೇ ಶ್ರೇಯಾಂಕದ ದೇಚೊಪೋಲ್ ಪುವಾರನುಕ್ರೊ–ಸುಪಿಸ್ಸರಾ ಪೇವಸಂಪ್ರನ್ (ಥಾಯ್ಲೆಂಡ್) ಜೋಡಿಗೆ ಮಣಿಯಿತು.

ಮಹಿಳೆಯರ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್– ಟ್ರಿಸಾ ಜೋಳಿ ಜೋಡಿ 13–21, 22–24ರಲ್ಲಿ ಜಪಾನಿನ ಯುಕಿ ಫುಕುಶಿಮಾ– ಮಯು ಮಾತ್ಸುಮೋಟೊ ಜೋಡಿಗೆ ಶರಣಾಯಿತು. ಭಾರತದ ಜೋಡಿ, ಗಾಯಾಳಾಗಿ ಪುನರಾಗಮನ ಮಾಡಿದ ನಂತರ ಆಡುತ್ತಿರುವ ಎರಡನೇ ಟೂರ್ನಿ ಇದಾಗಿತ್ತು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಉಪಸ್ಥಿತಿ

'ರಾಜಾ ರಾಮ' ಮೂರ್ತಿ ಪ್ರತಿಷ್ಠಾಪನೆ

ಶ್ರೀರಾಮ ಮಂದಿರ ಸಂಕೀರ್ಣದಲ್ಲಿ ಗುರುವಾರ ನೆರವೇರಿದ 'ಶ್ರೀರಾಮ ದರ್ಬಾರ' ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ದೇವತಾ ಮೂರ್ತಿಗಳಿಗೆ ಪೂಜೆ ನೆರವೇರಿಸಿದರು – ಪಿಟಿಐ ಚಿತ್ರ

ಅಯೋಧ್ಯೆ(ಪಿಟಿಐ): ರಾಮ ದೇವರ ರಾಜನ ಸ್ವರೂಪದ 'ರಾಜಾ ರಾಮ' ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯ ಇಲ್ಲಿ ಗುರುವಾರ ವಿಧ್ಯುಕ್ತವಾಗಿ ನೆರವೇರಿತು. ಶ್ರೀರಾಮ ಮಂದಿರ ದೇಗುಲ ಸಂಕೀರ್ಣದಲ್ಲಿ, ಅತ್ಯಂತ ಮಂಗಳಕರ ಎಂದು ಭಾವಿಸಲಾದ ಅಭಿಜಿನ್ ಮುಹೂರ್ತದಲ್ಲಿ ಪ್ರಾಣ ಪ್ರತಿಷ್ಠಾಪನೆ ಕಾರ್ಯ ನೆರವೇರಿತು.

ಇದೇ ಸಂಕೀರ್ಣದಲ್ಲಿರುವ ಎಂಟು ದೇವಸ್ಥಾನಗಳಲ್ಲಿ ಕೂಡ ವಿವಿಧ ದೇವತಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕೂಡ ಇದೇ ಸಂದರ್ಭದಲ್ಲಿ ನೆರವೇರಿತು.

ಕಳೆದ ವರ್ಷ ಜನವರಿ 22ರಂದು, ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನಡೆದಿತ್ತು. ಇಂದು ಎರಡನೇ ಪ್ರಮುಖ ಪ್ರಾಣ ಪ್ರತಿಷ್ಠಾಪನೆಗೆ ರಾಮ ಮಂದಿರ ಸಂಕೀರ್ಣ ಸಾಕ್ಷಿಯಾಯಿತು.

ಧಾರ್ಮಿಕ ವಿಧಿಗಳು: 'ಯಜ್ಞ ಮಂಟಪ'ದಲ್ಲಿ ಬೆಳಿಗ್ಗೆ 6.30ಕ್ಕೆ ಪ್ರಾರ್ಥನೆಗಳೊಂದಿಗೆ ವಿವಿಧ ದೇವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ಕೆ ಚಾಲನೆ ದೊರೆಯಿತು. 9.30ಕ್ಕೆ ಹವನ, ನಂತರ ಏಕಕಾಲಕ್ಕೆ ಎಲ್ಲ ದೇವಸ್ಥಾನಗಳಲ್ಲಿ ಧಾರ್ಮಿಕ ವಿಧಿಗಳು ನಡೆದವು. ನೇರ ಪ್ರಸಾರದಲ್ಲಿ ದೊಡ್ಡ ಪರದೆಗಳಲ್ಲಿ ಮೂಡಿಬಂದ ಪೂಜಾ ಕಾರ್ಯಕ್ರಮಗಳನ್ನು ಜನರು ಕಣ್ತುಂಬಿಕೊಂಡರು.

'ರಾಮ ದೇವರು ಜನಿಸಿದ ಈ ಪವಿತ್ರಭೂಮಿಯಲ್ಲಿ ವಿವಿಧ ದೇವತಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆಗೆ ಸಾಕ್ಷಿಯಾಗುವ ಪುಣ್ಯ ಲಭಿಸಿದೆ' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ಮಂಗಳಕರ ಸಂದರ್ಭವು 'ಏಕ್ ಭಾರತ್, ಶ್ರೇಷ್ಠ ಭಾರತ್' ಹಾಗೂ ಸಿಯಾವರ್ ಶ್ರೀರಾಮಚಂದ್ರನ ವಿಜಯದ ಅಭಿವ್ಯಕ್ತಿಯಾಗಿದೆ' ಎಂದೂ ಹೇಳಿದ್ದಾರೆ.

ಬಿಜೆಪಿ ಕೂಡ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, 'ಇಂದು ಎರಡನೇ ಪ್ರಾಣ ಪ್ರತಿಷ್ಠಾಪನೆ ಮುಕ್ತಾಯಗೊಂಡಿದ್ದು, ರಾಮ ರಾಜ್ಯ ನಿರ್ಮಾಣದತ್ತ ಒಂದು ಹೆಜ್ಜೆ ಇಟ್ಟಂತಾಗಿದೆ' ಎಂದಿದೆ.

ಈ ವರ್ಷದ ಗಂಗಾ ದಶಹರವು ಪವಿತ್ರವಷ್ಟೇ ಅಲ್ಲ, ಐತಿಹಾಸಿಕ ಮಹತ್ವವನ್ನೂ ಹೊಂದಿದೆ. 500 ವರ್ಷಗಳ ಸುದೀರ್ಘ ಹೋರಾಟದ ನಂತರ 'ರಾಜಾ ರಾಮ' ಸ್ವರೂಪದ ರಾಮ ದೇವರ ಪ್ರಾಣ ಪ್ರತಿಷ್ಠಾಪನೆಯನ್ನು ಅಯೋಧ್ಯೆಯ ಭವ್ಯ ಮಂದಿರದಲ್ಲಿ ನೆರವೇರಿಸಲಾಗಿದೆ

ಮಹಂತ ರಘುವರ ಶರಣ, ರಸಿಕ ನಿವಾಸ ದೇವಸ್ಥಾನದ ಮುಖ್ಯ ಅರ್ಚಕ

ಗಂಗಾ ದಶಹರದಂದು ನೆರವೇರಿಸಲಾಗುವ ಯಾವುದೇ ಕಾರ್ಯದಿಂದ ಹಲವು ಪಟ್ಟು ಪ್ರತಿಫಲ ಲಭಿಸುತ್ತದೆ ಎಂಬ ನಂಬಿಕೆ ಇದೆ. ಇದೇ ಕಾರಣಕ್ಕೆ, ಈ ದಿನವೇ 'ರಾಜಾ ರಾಮ' ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ಟ್ರಸ್ಟ್ ನಿರ್ಧರಿಸಿರಬಹುದು

ಪಂಡಿತ ಕಲ್ಕಿ ರಾಮ, ಅಯೋಧ್ಯೆ ಮೂಲದ ವಿದ್ವಾಂಸ

ದೇವತಾ ಮೂರ್ತಿಗಳ ಪ್ರತಿಷ್ಠಾಪನೆ

ರಾಜಾಂಗಣದಲ್ಲಿ ಶ್ರೀರಾಮ ದೇವರ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಿತು. ಈಶಾನ್ಯ ಮೂಲೆಯಲ್ಲಿ ಶೇಷಾವತಾರ ಹಾಗೂ ಶಿವನ ಮೂರ್ತಿಗಳು, ಆಗ್ನೇಯ ಮೂಲೆಯಲ್ಲಿ ಗಣೇಶ, ದಕ್ಷಿಣದಲ್ಲಿ ಹನುಮಾನ್, ನೈರುತ್ಯದಲ್ಲಿ ಸೂರ್ಯದೇವರು, ವಾಯವ್ಯ ಮೂಲೆಯಲ್ಲಿ ಭಗವತಿ ದೇವಿ ಹಾಗೂ ಉತ್ತರದಲ್ಲಿ ದೇವಿ ಅನ್ನಪೂರ್ಣಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮಾಡಲಾಗಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ತಿಳಿಸಿದೆ.



ಕುಲದೀಪ್ ಯಾದವ್ ಜೊತೆ ವಂಶಿಕಾ

ಬಾಲ್ಯದ ಗೆಳತಿ ಜತೆ ಕುಲದೀಪ್ ನಿಶ್ಚಿತಾರ್ಥ

ಪ್ರಜಾವಾಣಿ ವಾರ್ತೆ

ಲಖನೌ: ಭಾರತ ಕ್ರಿಕೆಟ್ ತಂಡದ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಬಾಲ್ಯದ ಗೆಳತಿ ವಂಶಿಕಾ ಜೊತೆಗೆ ಬುಧವಾರ ನಿಶ್ಚಿತಾರ್ಥ ಮಾಡಿಕೊಂಡರು.

ಬ್ಯಾಟರ್ ರಿಂಕು ಸಿಂಗ್ ಸೇರಿ ಉತ್ತರ ಪ್ರದೇಶದ ಹಲವು ಕ್ರಿಕೆಟಿಗರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ವಂಶಿಕಾ ಅವರು ಎಲ್‌ಐಸಿಯಲ್ಲಿ ಉದ್ಯೋಗದಲ್ಲಿದ್ದು, ಕಾನ್ಪುರದಲ್ಲಿ ನೆಲಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕುಲದೀಪ್ ಮತ್ತು ವಂಶಿಕಾ ಅವರು ಪರಸ್ಪರ ಉಂಗುರ ಬದಲಾಯಿಸಿಕೊಳ್ಳುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಭಾರತ ಪರ 13 ಟೆಸ್ಟ್ ಪಂದ್ಯಗಳನ್ನು ಆಡಿರುವ ಕುಲದೀಪ್, 56 ವಿಕೆಟ್‌ಗಳನ್ನು ಪಡೆದಿದ್ದಾರೆ.

ಭಾರತ ವಿರುದ್ಧ ಸರಣಿಗೆ 14 ಸದಸ್ಯರ ತಂಡ ಪ್ರಕಟ

ಮೊದಲ ಟೆಸ್ಟ್‌ಗೆ ಕ್ರಿಸ್ ವೋಕ್ಸ್

ಕ್ರಿಸ್ ವೋಕ್ಸ್

ಲಂಡನ್ (ಪಿಟಿಐ): ವೇಗದ ಬೌಲರ್ ಕ್ರಿಸ್ ವೋಕ್ಸ್ ಅವರನ್ನು ಭಾರತ ವಿರುದ್ಧ ಜೂನ್ 20ರಂದು ಲೀಡ್ಸ್‌ನಲ್ಲಿ ಆರಂಭವಾಗುವ ಐದು ಟೆಸ್ಟ್‌ಗಳ ಸರಣಿಯ ಮೊದಲ ಟೆಸ್ಟ್‌ನಲ್ಲಿ ಆಡುವ ಇಂಗ್ಲೆಂಡ್ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. 14 ಆಟಗಾರರ ತಂಡವನ್ನು ಗುರುವಾರ ಪ್ರಕಟಿಸಲಾಗಿದೆ.

36 ವರ್ಷ ವಯಸ್ಸಿನ ವೋಕ್ಸ್ 57 ಟೆಸ್ಟ್ ಪಂದ್ಯಗಳನ್ನು ಆಡಿದ್ದು 181 ವಿಕೆಟ್ ಮತ್ತು 1970 ರನ್ ಗಳಿಸಿದ್ದಾರೆ. ಭಾರತ ವಿರುದ್ಧದ 2018ರ ಟೆಸ್ಟ್ ಸರಣಿಯಲ್ಲಿ ಇಂಗ್ಲೆಂಡ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ವೋಕ್ಸ್ ಆ ಪಂದ್ಯದಲ್ಲಿ ಅಜೇಯ 137 ರನ್ ಬಾರಿಸಿದ್ದರು, ಮಾತ್ರವಲ್ಲ, ನಾಲ್ಕು ವಿಕೆಟ್‌ಗಳನ್ನು ಪಡೆದ್ದರು. ಲಾರ್ಡ್ಸ್‌ನಲ್ಲಿ ನಡೆದ ಆ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಇನಿಂಗ್ಸ್ ಮತ್ತು 159 ರನ್‌ಗಳಿಂದ ಜಯಗಳಿಸಿತ್ತು.

ವೋಕ್ಸ್ ಮತ್ತು ಇನ್ನೊಬ್ಬ ವೇಗಿ ಜೋಶ್ ಟಂಗ್ ಅವರು ಭಾರತ 'ಎ' ವಿರುದ್ಧ ಶುಕ್ರವಾರ ನಾರ್ತಾಂಪ್ಟನ್‌ನಲ್ಲಿ ಆರಂಭವಾಗುವ ಎರಡನೇ 'ಟೆಸ್ಟ್'ನಲ್ಲಿ ಇಂಗ್ಲೆಂಡ್ ಲಯನ್ಸ್ ತಂಡದಲ್ಲಿ ಸ್ಥಾನ ಪಡೆಯುವ ಮೂಲಕ ಟೆಸ್ಟ್ ಸರಣಿಗೆ ಸಜ್ಜಾಗುತ್ತಿದ್ದಾರೆ.

31 ವರ್ಷ ವಯಸ್ಸಿನ ಜೇಮಿ ಓವರ್ಟನ್ ಅವರು 2022ರ ನಂತರ ಮೊದಲ ಬಾರಿ ಟೆಸ್ಟ್ ತಂಡಕ್ಕೆ ಮರಳಿದ್ದಾರೆ. ಮೇ 29ರಂದು ಬರ್ಮಿಂಗಮ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಪಂದ್ಯದಲ್ಲಿ ಅವರ ಬಲಗೈ ಕಿರುಬೆರಳಿಗೆ ಗಾಯವಾಗಿದ್ದರೂ ಅವರು ಅವಕಾಶ ಪಡೆದಿದ್ದಾರೆ. ಓವರ್ಟನ್, ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಆಡಿದ್ದರು.

ಬೆನ್ ಸ್ಟೋಕ್ಸ್ ನೇತೃತ್ವದ ತಂಡದಲ್ಲಿ ಶೋಯೆಬ್ ಬಶೀರ್ ಅವರು ಏಕೈಕ ಸ್ಪಿನ್ನರ್ ಆಗಿ ಅವಕಾಶ ಪಡೆದಿದ್ದಾರೆ.

ತಂಡ ಹೀಗಿದೆ: ಬೆನ್ ಸ್ಟೋಕ್ಸ್ (ನಾಯಕ), ಶೋಯೆಬ್ ಬಶೀರ್, ಜೇಕಬ್ ಬೆಥೆಲ್, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸ್, ಸ್ಯಾಮ್ ಕುಕ್, ಝಾಕ್ ಕ್ರಾಲಿ, ಬೆನ್ ಡಕೆಟ್, ಜೇಮಿ ಓವರ್ಟನ್, ಓಲಿ ಪೋಪ್, ಜೋ ರೂಟ್, ಜೇಮಿ ಸ್ಮಿತ್ (ವಿಕೆಟ್ ಕೀಪರ್), ಜೋಶ್ ಟಂಗ್ ಮತ್ತು ಕ್ರಿಸ್ ವೋಕ್ಸ್.

ಟೆಸ್ಟ್ ಪಂದ್ಯಗಳು

ಜೂ. 20ರಿಂದ 24	1ನೇ ಟೆಸ್ಟ್	ಹೆಡಿಂಗ್ಲೆ
ಜು 2ರಿಂದ 6	2ನೇ ಟೆಸ್ಟ್	ಎಜ್ಬಾಸ್ಟನ್
ಜು 10 ರಿಂದ 14	3ನೇ ಟೆಸ್ಟ್	ಲಾರ್ಡ್ಸ್
ಜು 23 ರಿಂದ 26	4ನೇ ಟೆಸ್ಟ್	ಓಲ್ಡ್ ಟ್ರಾಫರ್ಡ್
ಜು 31 ರಿಂದ ಆ 4	5ನೇ ಟೆಸ್ಟ್	ಓವಲ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಡುಗಟ್ಟಿದ ಮೌನ • ಪೊಲೀಸ್ ಭದ್ರತೆ

ಕ್ರಿಕೆಟ್ ಅಂಗಳದಲ್ಲಿ ಸೂತಕದ ಛಾಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಚಟುವಟಿಕೆಗಳ ತಾಣವಾಗಿರುತ್ತಿದ್ದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚಿನ್ನಸ್ವಾಮಿ ಕ್ರೀಡಾಂಗಣದ ಆವರಣ ಗುರುವಾರ ಅಕ್ಷರಶಃ ಸೂತಕದ ಮನೆ ಯಂತಾಗಿತ್ತು. ಎಲ್ಲೆಲ್ಲೂ ನೀರವ ಮೌನ.

ಆಡಳಿತ ಕಚೇರಿಯಲ್ಲಿದ್ದ ಬೆರಳೆಣಿಕೆ ಯಷ್ಟು ಸಿಬ್ಬಂದಿಯ ಮುಖಗಳಲ್ಲಿ ಆತಂಕದ ಛಾಯೆ. ಕ್ಯಾಂಟಿನ್, ಜ್ಯೂಸ್ ಕಾರ್ನರ್, ಕ್ಲಬ್ ಹೌಸ್, ಈಜುಕೊಳ, ರೆಸ್ಟೋರೆಂಟ್‌ಗಳು ಭಣಗುಡುತ್ತಿದ್ದವು. ಸಂಸ್ಥೆಯ ಪದಾಧಿಕಾರಿಗಳು ಮಾಧ್ಯಮ ಪ್ರತಿನಿಧಿಗಳಿಂದ ದೂರ ದೂರ ಹೋಗುವ ಪ್ರಯತ್ನದಲ್ಲಿದ್ದರು.

ಕ್ರೀಡಾಂಗಣದ ಸುತ್ತಮುತ್ತ ಹರಿದು ಬಿದ್ದ ಬ್ಯಾನರ್‌ಗಳು, ಚೆಲ್ಲಾಪಿಲ್ಲಿಯಾಗಿದ್ದ ಬಟ್ಟೆಗಳು, ಚಪ್ಪಲಿ, ಬೂಟುಗಳ ರಾಶಿ ಯನ್ನು ವಿಲೇವಾರಿ ಮಾಡುವ ಕೆಲಸವೂ ನಡೆಯುತ್ತಿತ್ತು. ಮೈದಾನದ ಹೊರಗೆ ಮೀಸಲು ಪೊಲೀಸ್ ಪಡೆಯ ಬಸ್‌ಗಳು ಸಾಲುಗಟ್ಟಿದ್ದವು. ಒಳಗೂ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಭದ್ರತೆ ಒದಗಿಸಿದ್ದರು. ಕ್ಯಾಂಟಿನ್‌ಗಳ ಕಾರ್ಮಿಕರು, ಭದ್ರತಾ ಸಿಬ್ಬಂದಿ ಅಲ್ಲಲ್ಲಿ ಗುಂಪು ಕಟ್ಟಿಕೊಂಡು ನಿಂತು ಬುಧವಾರ ಸಂಜೆ ಸಂಭವಿಸಿದ ಕಾಲ್ತುಳಿತಕ್ಕೆ 11 ಜನರು ಮೃತರಾದ ಘಟನೆಯ 'ಭಯಾನಕ ದೃಶ್ಯಾವಳಿ'ಗಳ ಬಗ್ಗೆ ಮಾತನಾಡುತ್ತಿದ್ದರು.

'ಮೂರ್ನಾಲ್ಕು ಸಾವಿರ ಜನ ಗೇಟ್ ಕಿತ್ತುಹಾಕಲು ಪ್ರಯತ್ನಿಸುತ್ತಿದ್ದರು. ಅವ ರನ್ನು ತಡೆಯಲು ಅಲ್ಲಿ ಇದ್ದದ್ದು ಕೇವಲ 40–50 ಜನ ಭದ್ರತಾ ಸಿಬ್ಬಂದಿ ಮಾತ್ರ. ಮೈಕ್‌ನಲ್ಲಿ ಎಷ್ಟೇ ಕೂಗಿದರೂ ಜನರ ಕಿವಿಗೆ ಬೀಳುತ್ತಿರಲಿಲ್ಲ. ಕ್ರೀಡಾಂಗಣದ ಎದುರಿನ ರಸ್ತೆ ತುಂಬ ಮತ್ತು ಇಕ್ಕೆಲಗಳಲ್ಲಿ ಜನವೋ ಜನ. ಕಾಂಪೌಂಡ್, ಬ್ಯಾರಿಕೇಡ್‌ಗಳನ್ನೂ ದಾಟಿ ಬರಲು ಯತ್ನಿಸುತ್ತಿದ್ದರು. ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಪಕ್ಕದ ಗೇಟ್ ಸಮೀಪ ವಿಪರೀತ ಜನದಟ್ಟಣೆ ಇತ್ತು. ಅಲ್ಲಿ ಕಾಲ್ತುಳಿತದಲ್ಲಿ ಗಾಯಗೊಂಡವ ರನ್ನು ಹೊರತರುವುದೂ ಕಷ್ಟವಾಗಿತ್ತು. ಪೊಲೀಸ್ ಸಿಬ್ಬಂದಿ ಗಾಯಾಳುಗಳನ್ನು ಹೊತ್ತುಕೊಂಡು ಕ್ರೀಡಾಂಗಣದೊಳಗಿನ ಕಟ್ಟಡದ ಮೂಲಕ 12ನೇ ಗೇಟ್ ಸಮೀಪ ದಲ್ಲಿದ್ದ ಅಂಬುಲೆನ್ಸ್, ವಾಹನಗಳಿಗೆ ಹಾಕಿದರು' ಎಂದು ಘಟನೆಯ ಪ್ರತ್ಯಕ್ಷ ದರ್ಶಿಯಾಗಿದ್ದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ವಿವರಿಸಿದರು.

'ಹಲವು ವರ್ಷಗಳಿಂದ ಇಲ್ಲಿ ಇದ್ದೇನೆ. ಹಲವಾರು ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳು ಇಲ್ಲಿ ನಡೆದಿವೆ. ಆಗಲೂ ಸಾವಿರಾರು ಇಲ್ಲಿ ಸೇರುತ್ತಾರೆ. ಆದರೆ ಇಂಥ ದುರ್ಘಟನೆಗಳಾಗಿರಲಿಲ್ಲ. ನಿನ್ನೆಯ (ಬುಧವಾರ) ಘಟನೆ ಈಗಲೂ ನನಗೆ ಭಯ ಮೂಡಿಸುತ್ತಿದೆ' ಎಂದೂ ಅವರು ಹೇಳಿದರು.

ಕೆಎಸ್‌ಸಿಎ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಇತರ ಪದಾಧಿಕಾರಿಗಳಿಂದ ಮಾಹಿತಿ ಪಡೆಯಲು ಪ್ರಯತ್ನಿಸಿದರೂ, ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಬೆಂಗಳೂರಿನಲ್ಲಿ ಬುಧವಾರ ಐಪಿಎಲ್ ಚಾಂಪಿಯನ್ ತಂಡವಾದ ಆರ್‌ಸಿಬಿ ಆಟಗಾರರ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ದುರ್ಘಟನೆಯ ಹಿನ್ನೆಲೆಯಲ್ಲಿ ಗುರುವಾರವೂ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು (ಎಡಚಿತ್ರ) ಕ್ರೀಡಾಂಗಣದ ಕಾಂಪೌಂಡ್ ಗ್ರಿಲ್ ಮೇಲೆ ನೇತಾಡುತ್ತಿರುವ ಬಟ್ಟೆಗಳು

ಚಿತ್ರಗಳು: ರಂಜು ಪಿ/ವಿ. ಪುಷ್ಕರ್

ಆರ್‌ಸಿಬಿಯಿಂದ ₹10 ಲಕ್ಷ ಪರಿಹಾರ

ಕ್ರೀಡಾಂಗಣದ ಬಳಿ ಬುಧವಾರ ಸಂಭವಿಸಿದ ಕಾಲ್ತುಳಿತದಲ್ಲಿ ಮೃತರಾದವರ ಕುಟುಂಬಳಿಗೆ ತಲಾ ₹10 ಲಕ್ಷ ಪರಿಹಾರ ನೀಡುವುದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿ ಘೋಷಿಸಿದೆ.

'ಗಾಯಾಳುಗಳ ಚಿಕಿತ್ಸಾ ವೆಚ್ಚ ಭರಿಸಲು ಆರ್‌ಸಿಬಿ ಕೇರ್ಸ್ ಕೂಡ ಆರಂಭಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಫೈನಲ್‌ಗೆ ಅರಿನಾ ಸಬಲೆಂಕಾ ಲಗ್ಗೆ

ಸತತ ನಾಲ್ಕನೇ ಪ್ರಶಸ್ತಿ ಗೆಲ್ಲುವ ಇಗಾ ಶ್ವಾಂಟೆಕ್ ಕನಸು ಭಗ್ನ

ಪ್ಯಾರಿಸ್ (ಎಎಫ್‌ಪಿ): ಸತತ ನಾಲ್ಕನೇ ಬಾರಿ ಫ್ರೆಂಚ್ ಓಪನ್ ಕಿರೀಟ ಧರಿಸುವ ಇಗಾ ಶ್ವಾಂಟೆಕ್ ಪ್ರಯತ್ನಕ್ಕೆ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅಡ್ಡಗಾಲು ಹಾಕಿದರು. ಗುರುವಾರ ನಡೆದ ಈ ಟೂರ್ನಿಯ ಸೆಮಿ ಫೈನಲ್ ಪಂದ್ಯವನ್ನು ಮೂರು ಸೆಟ್‌ಗಳಲ್ಲಿ ಗೆದ್ದ ಬೆಲರೂಸ್‌ನ ಆಟಗಾರ್ತಿ ಮೊದಲ ಬಾರಿ ರೋಲೆಂಡ್ ಗ್ಯಾರೋಸ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು.

ಸಬಲೆಂಕಾ 7–6 (7–1), 4–6, 6–0 ಯಿಂದ ಜಯಗಳಿಸಿದರು. ಇದರೊಂದಿಗೆ ಪೋಲೆಂಡ್ ಆಟಗಾರ್ತಿಯ ಸತತ 26 ಗೆಲುವುಗಳ ಸರಪಣಿ ಮುರಿಯಿತು. ಸಬಲೆಂಕಾ ಶನಿವಾರ ನಡೆಯುವ ಫೈನಲ್‌ನಲ್ಲಿ, ಎರಡನೇ ಶ್ರೇಯಾಂಕದ ಕೊಕೊ ಗಾಫ್ ಮತ್ತು ಅನಿರೀಕ್ಷಿತ ಯಶಸ್ಸು ಕಾಣುತ್ತಿರುವ ಆತಿಥೇಯ ತಾರೆ ಲೋಯಿಸ್ ವಸ್ಸೂನ್ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

'ಇದು ಅಪೂರ್ವ ಅನುಭವ. ಆದರೆ ನನ್ನ ಕೆಲಸ ಇನ್ನೂ ಮುಗಿದಿಲ್ಲ. ಇಂದಿನ ಆಟದ ಪ್ರದರ್ಶನದಿಂದ ರೋಮಾಂಚನ ಗೊಂಡಿದ್ದೇನೆ' ಎಂದು 27 ವರ್ಷದ ಸಬಲೆಂಕಾ ಸಂಭ್ರಮದಿಂದ ಪ್ರತಿಕ್ರಿಯಿಸಿದರು. 'ನಾನೇನು ಹೇಳಲಿ, 6–0 ಇದಕ್ಕಿಂತ ಪರಿಪೂರ್ಣವಾದುದು ಇಲ್ಲ' ಎಂದರು.

ಸಬಲೆಂಕಾ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ. 2024ರಲ್ಲಿ ಅಮೆರಿಕ ಓಪನ್ ಗೆದ್ದುಕೊಂಡ ಅವರು, 2023 ಮತ್ತು 2024ರಲ್ಲಿ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲೂ ಚಾಂಪಿಯನ್ ಆಗಿದ್ದರು. ಶ್ವಾಂಟೆಕ್, ವರ್ಷದ ಹಿಂದೆ ಇಲ್ಲಿ ಪ್ರಶಸ್ತಿ ಗೆದ್ದ ನಂತರ ಯಾವುದೇ ಡಬ್ಲ್ಯುಟಿಎ ಟೂರ್ನಿಯ ಫೈನಲ್ ತಲುಪಿರಲಿಲ್ಲ.

ಅರಿನಾ ಸಬಲೆಂಕಾ — ಎಎಫ್‌ಪಿ ಸಂಗ್ರಹ ಚಿತ್ರ

ಜೊಕೊವಿಚ್‌ಗೆ ಮಣಿದ ಜ್ವರೇವ್

ಸರ್ಬಿಯಾದ ಹಳೆಹುಲಿ ನೊವಾಕ್ ಜೊಕೊವಿಚ್ ಬುಧವಾರ ರಾತ್ರಿ ಫಿಲಿಪ್ ಶಾಟ್ರಿಯೆ ಅಂಕಣದಲ್ಲಿ 4–6, 6–3, 6–2, 6–4 ರಿಂದ ಮೂರನೇ ಶ್ರೇಯಾಂಕದ ಜರ್ಮನಿಯ ಆಟಗಾರ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಸೋಲಿಸಿ ರೋಲೆಂಡ್ ಗ್ಯಾರೋಸ್‌ನಲ್ಲಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

ಮೂರೂಕಾಲು ಗಂಟೆಗಳ ದೀರ್ಘ ಸೆಣಸಾಟದಲ್ಲಿ ಗೆದ್ದು, 38 ವರ್ಷ ವಯಸ್ಸಿನ ಜೊಕೊವಿಚ್ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗೆ ಇನ್ನಷ್ಟು ಸನಿಹವಾದರು. ಜೊಕೊವಿಚ್ ಅವರಿಗೆ ಫ್ರೆಂಚ್ ಓಪನ್‌ನಲ್ಲಿ 101ನೇ ಪಂದ್ಯದ ಗೆಲುವು ಇದಾಗಿದೆ.

ಮೂರು ಬಾರಿಯ ಚಾಂಪಿಯನ್ ಜೊಕೊವಿಚ್ ಶುಕ್ರವಾರ ನಡೆಯ ಲಿರುವ ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಇಟಲಿಯ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ. ಹಾಲಿ ಚಾಂಪಿಯನ್, ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಇನ್ನೊಂದು ಸೆಮಿಫೈನಲ್ ನಲ್ಲಿ ಲೊರೆಂಜೊ ಮುಸೆಟ್ಟಿ (ಇಟಲಿ) ಅವರನ್ನು ಎದುರಿಸಲಿದ್ದಾರೆ.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಪ್ರಶ್ನೆ

'ರೋಡ್ ಶೋ ಅವಶ್ಯಕತೆ ಇದೆಯೇ'

ಮುಂಬೈ(ಪಿಟಿಐ): ಯಾವುದೇ ಕ್ರೀಡೆ ಯಲ್ಲಿ ಕಪ್ ಗೆದ್ದ ಮೇಲೆ ವಿಜಯೋತ್ಸವ ಕ್ಕಾಗಿ ರೋಡ್ ಶೋ ಮಾಡುವ ಅವಶ್ಯಕತೆ ಇದೆಯೇ ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಪ್ರಶ್ನಿಸಿದ್ದಾರೆ.

ಬುಧವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ದುರಂತದ ಕುರಿತು ಪ್ರತಿಕ್ರಿಯಿಸಿರುವ ಗಂಭೀರ್, 'ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಈ ರೋಡ್ ಶೋಗಳ ಬಗ್ಗೆ ನನಗೆ ಒಲವಿಲ್ಲ. 2007ರಲ್ಲಿ ಟಿ20 ವಿಶ್ವಕಪ್ ಗೆದ್ದಾಗಲೂ ನಾನು ಇದೇ ಹೇಳಿಕೆ ನೀಡಿದ್ದೆ' ಎಂದರು.

ಗುರುವಾರ ಇಂಗ್ಲೆಂಡ್ ಪ್ರವಾಸಕ್ಕೆ ತೆರಳುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಗಂಭೀರ್ 2007ರ ಟಿ20 ವಿಶ್ವಕಪ್ ಮತ್ತು 2011ರ ಏಕದಿನ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿ ಆಡಿದ್ದರು. ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಎರಡು ಬಾರಿ ಐಪಿಎಲ್ ಪ್ರಶಸ್ತಿ ಗೆದ್ದಾಗ ನಾಯಕತ್ವ ವಹಿಸಿದ್ದರು.

2012 ಮತ್ತು 2014ರಲ್ಲಿ ಈಡನ್ ಗಾರ್ಡನ್‌ನಲ್ಲಿ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸರ್ಕಾರವು ಏರ್ಪಡಿಸಿದ್ದ ಸನ್ಮಾನ ಸಮಾರಂಭಗಳಲ್ಲಿ ಗೌತಮ್ ಭಾಗವಹಿಸಿದ್ದರು. ಆದರೆ ಆ ಸಂದರ್ಭದಲ್ಲಿ ರೋಡ್ ಶೋ ಇರಲಿಲ್ಲ.

'ಜನರ ಜೀವವು ಎಲ್ಲಕ್ಕಿಂತ ಬಹುಮುಖ್ಯ. ಈ ಮಾತನ್ನು ನಾನು ಸದಾ ಹೇಳುತ್ತಿರುತ್ತೇನೆ. ಭವಿಷ್ಯದಲ್ಲಿ ರೋಡ್ ಶೋ ಆಯೋಜನೆಗೆ ಮುನ್ನ ಜಾಗರೂಕರಾಗಿರಬೇಕು. ಬುಧವಾರದ ದುರ್ಘಟನೆಯು ಬಹಳ ಆಘಾತ ಮೂಡಿಸಿದೆ. ಈ ಘಟನೆಗೆ ಜವಾಬ್ದಾರಿ ಯುತ ನಾಗರಿಕರಾಗಿ ನಾವೆಲ್ಲರೂ ಹೊಣೆ' ಎಂದು ಗಂಭೀರ್ ಹೇಳಿದರು.

ಇದು ಕ್ರಿಕೆಟ್‌ನಲ್ಲಿ ದುಃಖದ ದಿನವಾಗಿದೆ. ಆರ್‌ಸಿಬಿ ವಿಜಯೋತ್ಸವದಲ್ಲಿ ಜೀವ ಕಳೆದುಕೊಂಡವರ ಕುಟುಂಬದವರಿಗಾಗಿ ನನ್ನ ಮನ ಮಿಡಿಯುತ್ತಿದೆ

ಅನಿಲ್ ಕುಂಬ್ಳೆ
ಭಾರತ ತಂಡದ ಮಾಜಿ ನಾಯಕ

'ಚಾಂಪಿಯನ್ನರಿಗೆ ಡೆಡ್ಲಿ ವೆಲ್‌ಕಮ್'



ಸಯ್ಯದ್ ಕಿರ್ಮಾನಿ

'ಇದು ಚಾಂಪಿಯನ್ನರಿಗೆ ಲಭಿಸಿದ ಡೆಡ್ಲಿ ವೆಲ್‌ಕಮ್ (ಮಾರಣಾಂತಿಕ ಸ್ವಾಗತ) ಆಗಿದೆ' ಎಂದು ಮಾಜಿ ಕ್ರಿಕೆಟಿಗ ಸಯ್ಯದ್ ಕಿರ್ಮಾನಿ ಕಿಡಿಕಾರಿದ್ದಾರೆ.

'ಆರ್‌ಸಿಬಿ ಸಂಭ್ರಮಾಚರಣೆ' ವೇಳೆ ನಡೆದ ಕಾಲ್ತುಳಿತ ಘಟನೆಯ ಕುರಿತು 'ಇಂಡಿಯಾ ಟುಡೆ' ಜಾಲತಾಣಕ್ಕೆ ಪ್ರತಿಕ್ರಿಯಿಸಿರುವ ಅವರು, 'ಆರ್‌ಸಿಬಿಯು ಮೊದಲ ಪ್ರಶಸ್ತಿ ಗೆಲ್ಲಲು 17 ವರ್ಷದಿಂದ ಪ್ರಯತ್ನಿಸಿತ್ತು. ಇಷ್ಟು ವರ್ಷ ಕಾದ ಮೇಲೆ ಇನ್ನು ಕೆಲವು ದಿನಗಳವರೆಗೆ ತಡೆದು ವಿಜಯೋತ್ಸವ ನಡೆಸುವ ಸಂಯಮವನ್ನು ಆಯೋಜಕರು ತೋರಬೇಕಿತ್ತು. ಸಮಯೋಜಿತ ಕಾರ್ಯಕ್ರಮದಲ್ಲಿ ಆರ್‌ಸಿಬಿ ಹೀರೋಗಳನ್ನು ಸನ್ಮಾನಿಸಿದ್ದರೆ ಅರ್ಥಪೂರ್ಣವಾಗಿರುತ್ತಿತ್ತು'ಎಂದು ಕಿರ್ಮಾನಿ ಅಭಿಪ್ರಾಯಪಟ್ಟಿದ್ದಾರೆ.

'ನಮ್ಮ ಕಾಲದಲ್ಲಿ ಅಭಿಮಾನಿಗಳು ಈಗಿನವರಷ್ಟು ಉತ್ಕಟ ಭಾವನೆ ಉಳ್ಳವರಾಗಿರಲಿಲ್ಲ. ಅದರಲ್ಲೂ ಐಪಿಎಲ್ ಅಭಿಮಾನಿಗಳಂತೂ ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದಾರೆ. ನಮ್ಮ ಸಂದರ್ಭದಲ್ಲಿ ಮಾಧ್ಯಮಗಳು ಹೆಚ್ಚಿರಲಿಲ್ಲ. ಟಿ.ವಿ.ಗಳ ಅತಿ ಪ್ರಚಾರದ ಭರಾಟೆಯೂ ಇರಲಿಲ್ಲ' ಎಂದೂ ಹೇಳಿದರು.

ವಿಜಯೋತ್ಸವಕ್ಕಿಂತ ಪ್ರಾಣ ಮುಖ್ಯ: ಕಪಿಲ್ ದೇವ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ ಮುಂಭಾಗದಲ್ಲಿ ಸಂಭವಿಸಿದ ಕಾಲ್ತುಳಿತದ ದುರ್ಘಟನೆಯ ಕುರಿತು ದಿಗ್ಗಜ ಆಟಗಾರ ಕಪಿಲ್ ದೇವ್ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ.



'ಈ ದುರ್ಘಟನೆಯ ಬಗ್ಗೆ ಬಹಳ ಬೇಸರವಾಗಿದೆ. ನಾವು ಪ್ರತಿಯೊಂದರ ಬಗ್ಗೆಯೂ ಪಾಠ ಕಲಿಯಬೇಕು. ಮುಂದಿನ ಸಲ ಇಂತಹ ಕಾರ್ಯಕ್ರಮ ಗಳು (ವಿಕ್ಟರಿ ಪರೇಡ್) ನಡೆಯುವಾಗ ಎಲ್ಲರೂ ಬಹಳಷ್ಟು ಜಾಗರೂಕರಾಗಿರ ಬೇಕು. ದುರ್ಘಟನೆಗಳು ಮರುಕಳಿಸ ದಂತೆ ನೋಡಿಕೊಳ್ಳಬೇಕು' ಎಂದು ಕಪಿಲ್ ದೇವ್ ಸಲಹೆ ನೀಡಿದರು.

ಅವರು ಬೆಂಗಳೂರಿನಲ್ಲಿ ಆರ್ಚ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅವರು ಪಿಟಿಐ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದರು.

ಸಾರಾ–ವಾವಸೋರಿ ಜೋಡಿಗೆ ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಇಟಲಿಯ ಸಾರಾ ಇರ್ರಾನಿ- ಆಂಡ್ರೆ ವಾವಸೋರಿ ಜೋಡಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು.

ಇದು ಈ ಜೋಡಿಗೆ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ.

ಗುರುವಾರ ನಡೆದ ಫೈನಲ್‌ನಲ್ಲಿ ಇಟಲಿಯ ಜೋಡಿ 6–4, 6–2 ರಿಂದ ಅಮೆರಿಕದ ಟೇಲರ್ ಟೌನ್ಸೆಂಡ್– ಇವಾನ್ ಕಿಂಗ್ ಜೋಡಿಯನ್ನು ಸೋಲಿಸಿತು. 2024ರಲ್ಲಿ ಸಾರಾ- ವಾವಸೋರಿ ಜೋಡಿ ಅಮೆರಿಕ ಓಪನ್ ಟೂರ್ನಿಯಲ್ಲೂ ಮಿಶ್ರ ಡಬಲ್ಸ್ ಪ್ರಶಸ್ತಿ ಜಯಿಸಿತ್ತು.

38 ವರ್ಷ ವಯಸ್ಸಿನ ಸಾರಾ 2012ರಲ್ಲಿ ರೋಲಂಡ್ ಗ್ಯಾರೋಸ್‌ನಲ್ಲಿ ಮಹಿಳಾ ಸಿಂಗಲ್ಸ್ ಫೈನಲ್ ತಲುಪಿದ್ದರು.

ಚಿಕ್ಕಮಗಳೂರು ಜಿಲ್ಲಾ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲಾ ತಂಡವು, ಡಿ.ಎನ್. ರಾಜಣ್ಣ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದಲ್ಲಿ ವೈಎಂಎಂಎ ತಂಡವನ್ನು 63–34ರಿಂದ ಸುಲಭವಾಗಿ ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಗುರುವಾರ ನಡೆದ ಲೀಗ್ ಪಂದ್ಯದಲ್ಲಿ ಚಿಕ್ಕಮಗಳೂರು ತಂಡದ ಪರ ನೆಟ್ಟ ಚಾಣಕ್ಯ 24, ರಿಷಭ್‌ಕುಮಾರ್ 12 ಅಂಕ ಗಳಿಸಿದರು. ವೈಎಂಎಂಎ ಪರ ಅಗಸ್ಟಿನ್ 17 ಅಂಕ ಕಲೆ ಹಾಕಿದರು.

ಬಾಲಕಿಯರ ವಿಭಾಗದಲ್ಲಿ ದಾವಣಗೆರೆ ಜಿಲ್ಲಾ ತಂಡವು ತನ್ವಿ ಅವರ ಆಕರ್ಷಕ ಆಟದ (30 ಅಂಕ) ಬಲದಿಂದ ಸಿನ್ಸಿನಾಟಿಸ್ ಬಿ.ಸಿ. ತಂಡವನ್ನು 53–25ರಿಂದ ಸೋಲಿಸಿತು.

ಫಲಿತಾಂಶಗಳು: ಬಾಲಕರು: ಎಮ್‌ಎನ್‌ಕೆ ರಾವ್ ಪಾರ್ಕ್ ಬಿ.ಸಿ. 77–52ರಿಂದ ಧಾರವಾಡ ಬಿ ಜಿಲ್ಲೆ ವಿರುದ್ಧ; ಬೆಂಗಳೂರು ಸ್ಪೋರ್ಟಿಂಗ್ ತಂಡವು 72–35ರಿಂದ ರಾಮನಗರ ಜಿಲ್ಲೆ ವಿರುದ್ಧ; ಬೀಗಲ್ಸ್ ಬಿ.ಸಿ. ತಂಡವು 78–50ರಿಂದ ದಕ್ಷಿಣ ಕನ್ನಡ ಜಿಲ್ಲೆ ವಿರುದ್ಧ; ಪಿಪಿಸಿ ತಂಡವು 79–66ರಿಂದ ರಾಜ್‌ಮಹಲ್ ಬಿ.ಸಿ. ವಿರುದ್ಧ; ಹೂಪ್ಸ್ 7 ಬಿ.ಸಿ. ತಂಡ 92–24ರಿಂದ ರಾಮನಗರ ಜಿಲ್ಲೆ ವಿರುದ್ಧ ಹಾಗೂ ಚಿಕ್ಕಮಗಳೂರು ಜಿಲ್ಲಾ ತಂಡ 63–34ರಿಂದ ವೈಎಂಎಂಎ ವಿರುದ್ಧ ಗೆಲುವು ಸಾಧಿಸಿದವು. **ಬಾಲಕಿಯರು:** ದಾವಣಗೆರೆ ಜಿಲ್ಲಾ ತಂಡ 53–25ರಿಂದ ಸಿನ್ಸಿನಾಟಿಸ್ ಬಿ.ಸಿ. ಎದುರು; ಮೈಸೂರು ಜಿಲ್ಲೆ ಎ ತಂಡ 60–34ರಿಂದ ಎಮ್‌ಎನ್‌ಕೆ ರಾವ್ ಪಾರ್ಕ್ ಬಿ.ಸಿ. ತಂಡದ ಎದುರು; ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡ 49–47ರಿಂದ ಸದರ್ನ್ ಬ್ಲೂಸ್ ಎದುರು ಹಾಗೂ ವಿವೇಕ್ ಎಸ್.ಸಿ. ತಂಡ 52–7ರಿಂದ ಸಿನ್ಸಿನಾಟಿಸ್ ಬಿ.ಸಿ. ಎದುರು ಜಯ ಸಾಧಿಸಿದವು.

*ಕೊಡುಗೆಗಳು 2025 ಜೂನ್ 30ರ ವರೆಗೆ ಮಾತ್ರ. Hy - CNG Duo Hyundai EXTER ಮತ್ತು Grand i10 NIOSನಲ್ಲಿ ಲಭ್ಯವಿದೆ. ಸ್ಥಳಾವಕಾಶ ಇದೆ. ಮೈಲೇಜ್ ಇದೆ.
##ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ನೀಡಿದರೆ ಹೆಚ್ಚುವರಿ ಸ್ಕ್ರಾಪೇಜ್ ಬೋನಸ್ ಸಿಗಲಿದೆ. #CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು.

HYUNDAI

Hyundai Click to Buy Scan here
3 YEAR Unlimited** Kilometer Warranty — Up to 7 years extended warranty^
3 YEAR Road Side Assistance(RSA)***
UP TO 5 YEAR Shield of Trust Service Packages~
Hy - CNG Duo

For Information Contact: Toll Free:1800114645 Bangalore: Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, ...

my Hyundai app | Hyundai Promise Certified Pre-Owned Car | Scan to chat with us or give a missed call at 9555295868

INNOCEAN-030/25 KAN